ಶಾಲಾ ಪತ್ರಿಕೆ

ಕೆಳದಿ
ಶಾಲಾ ಪತ್ರಿಕೆ

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ।
ಜಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಪಾಡ್ರಿಸಿ ॥
ಪಯಬೀರಿತ್ತಪಪ್ರೋದುವರ್ಗಸುಗುಣಂ ತೋರಲ್ಕೆಕೈಕೊಂಡುದೈ।
ಜಯಮಿಂಪೋಷಪತಿದ್ದವೇಳ್ವುದುಬುಧರಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೯] ಜಾನ್ಯೂಆರಿ ೧೯೦೩. [ಸಂಚಿಕೆ ೧.

EMPEROR EDWARD VII.

ಇನೇ ಎಡ್ವರ್ಡ ಬಾದಶಹರು.

ರಾಮನ ಶಾಂತಿಯಂ ಮನುಮಹೀಶನ ವರ್ಣವಿಚಾರಮಂ ಮಹಾ!
ಭೀಮನ ಶೌರ್ಯಮುಂ ಕ್ಷಿತಿಪಭೋಜನ ಸತ್ಕಲೆಯೇಳ್ಗೆಯನ್ನು ಸು॥
ತ್ಕಾಮನ ಭಾಗ್ಯಮಂ ರವಿಯ ತೇಜವ ಧರ್ಮನ ನೀತಿಮಾರ್ಗಮಂ!
ನೇಮದೆ ಗೆಲ್ದು ಪಾಲಿಸುಗೆ ಭಾರತವರ್ಷವ ದೀರ್ಘಕಾಲಮಂ॥೧॥

ಶ್ರೀಮನ್ಮಹೀಮಂಡಲದ ಪಂಚಖಂಡಗಳ ಭಿನ್ನ ಭಿನ್ನ ದೇಶಗಳಲ್ಲಿ ಆಳುತ್ತಿರುವ ಅನೇಕ ರಾಜಾಧಿರಾಜರುಗಳ ಮಾರ್ತಾಂಡನಂತೆ ಪ್ರಜ್ವಲಿಸುತ್ತ, ವಂಶಪರಂಪರಾಗತ ಪ್ರಭುತೆಯಿಂದ ಗ್ರೇತಬ್ರಿತನ್ ಐರ್ಲಾಂದನೆಂಬ ಸಂಯುಕ್ತ ಸಾಮ್ರಾಜ್ಯದ ಸಿಂಹಾಸನಾರೂಢರಾಗಿ ಮೆರೆಯುತ್ತ, ಭರತ

ಸ್ಥಾಪನೆ : ೧೮೬೫

1903

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೯೯

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೭೯ ರಿಂದ)

ವರ್ಷ 1903

ಬಿ. ಚೆನ್ನಬಸಪ್ಪನವರು

(೧೮೭೩–೧೯೪೧)

ನೆಯ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಕರಪೀಠ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾ ಕಾಲಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದೀದಿತ್ತಪಪ್ರೋಪಮರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯದಿಂಪೋಷಿಸತಿದ್ದವೇಳ್ವುದುಬುಧರಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೯] ಜಾನ್ಯುಆರಿ ೧೯೦೩. [ಸಂಚಿಕೆ ೧.

EMPEROR EDWARD VII.

ಒನೇ ಎಡ್ವರ್ಡ ಬಾದಶಹರು.

ರಾಮನ ಶಾಂತಿಯಂ ಮನುಮಹೀಶನ ವರ್ಣವಿಚಾರಮಂ ಮುಜಾ !
ಭೀಮನ ಸೌರ್ಯಮುಂ ಕ್ಷಿತಿಪಭೋಜನ ಸತ್ಕಲೆಯೋಳ್ಗಿಯನ್ನಸು ॥
ತ್ಪ್ರಮನ ಭಾಗ್ಯಮುಂ ಕವಿಯ ತೇಜವ ಧರ್ಮನ ನೀತಿಮಾರ್ಗಮುಂ।
ನೇಮದೆ ಗೆಲ್ದು ಪಾಲಿಸುಗೆ ಭಾರತವರ್ಷವ ದೀರ್ಘಕಾಲಮುಂ ॥ ೧ ॥

ಶ್ರೀಮನ್ಮಹೀಮಂಡಲದ ಪಂಚಖಂಡಗಳ ಭಿನ್ನ ಭಿನ್ನ ಪ್ರದೇಶಗಳಲ್ಲಿ ಆಳುತ್ತಿರುವ ಅನೇಕ ರಾಜಾಧಿರಾಜರುಗಳಲ್ಲಿ ಮಾರ್ತಾಂಡನಂತೆ ಪ್ರಜ್ವಲಿಸುತ್ತ, ವಂಶಪರಂಪರಾಗತ ಬಾಧ್ಯತೆಯಿಂದ ಗ್ರೇತಬ್ರಿತನ್ ಐರ್ಲಂದವೆಂಬ ಸಂಯುಕ್ತ ಸಂಸ್ಥಾನದ ಸಿಂಹಾಸನಾರೂಢರಾಗಿ ಮೆರೆಯುತ್ತ, ಭರತ

ಬೆಂಡವೇ ಮೊದಲಾದ ಅಂಕಿತ ದೇಶಪ್ರದೇಶಗಳ ಸಾರ್ವ
ಭೌಮತ್ವವನ್ನು ಸ್ವೀಕರಿಸಿ ಶೋಭಿಸುತ್ತಿರುವ ವಿಳನೇ
ಎಡ್ವರ್ಡ ಭೂಪಾಲರು ಕ್ರಿ.ಸ್ತಾಬ್ದ ೧೯೦೫ನೇ ಇಸವಿಯ
ಜಾನೇವರಿ ಮೊದಲನೇ ತಾರೀಖಿನ ದಿವಸ ಭರತ ವರ್ಷದ
ಸಾಮ್ರಾಜ್ಯಸೂತ್ರವನ್ನು ಕೈಕೊಂಡ ಅತ್ಯಾನಂದಕರವಾದ
ಸಂಗತಿಯನ್ನು ಪ್ರತಿನಿಧಿಗಳ ಮುಖಾಂತರವಾಗಿ ದಿಲ್ಲಿಯಲ್ಲಿ
ದರಬಾರವನ್ನು ನೆರಿಸಿ ಪ್ರಸಿದ್ಧ ಪಡಿಸಿರುವರು. ಇವರ
ಪೂರ್ವದಲ್ಲಿ ಇವರ ಮಾತೋಶ್ರೀಗಳಾದ ಪರಮಭಾಗ್ಯಶಾಲಿ
ನೀ ವಿಕ್ಟೋರಿಯಾ ಮಹಾರಾಣಿಯವರು ನಮ್ಮ ಚಕ್ರವ
ರ್ತಿನಿಗಳಾಗಿದ್ದರು. ಇವರು ಪುತ್ರವಾತ್ಸಲ್ಯದಿಂದ ನಮ್ಮ
ನ್ನು ಪರಿಪಾಲಿಸುತ್ತ ಸೈಪ್ರಿಯಮಾನುಸಾರವಾಗಿ ಕ್ರಿಸ್ತಾ
ಬ್ದ ೧೯೦೧ನೇ ಜಾನೇವರಿ ೨೨ನೇ ತಾರೀಖಿನ ದಿವಸ ಪರ
ಲೋಕವನ್ನು ಕುರಿತು ತೆರಳಿದರೆಂಬದು ಸರ್ವಶ್ರುತವು.
ಈ ಪುಣ್ಯಶಾಲಿನಿಯ ಕಾಲದಲ್ಲಿ ಭರತ ವರ್ಷವು ಸುಖಸ
ಮಾಧಾನಗಳ ತವರಮನೆಯಿನಿಸಿಕೊಂಡಿದ್ದಲ್ಲದೆ ಅನೇಕ ಭೌ
ತಿಕ ಸುಧಾರಣೆಗಳಲ್ಲಿ ಮುಂದಡಿಯನಿಕ್ಕುತ್ತ ನಡೆಯಿತು.
ಇವರ ಪತಿಗಳಾದರೂ ಲೋಕಕಲ್ಯಾಣದಲ್ಲಿ ತತ್ಪರರೂ
ಉದ್ಯೋಗಪ್ರಿಯರೂ ಮಾನವನಿಗೆ ಇಹಸುಖಕ್ಕೆ ಸಾಧನ
ವಾದ ಕಲಾಕೌಶಲ್ಯದ ಅಭಿವರ್ಧನದಲ್ಲಿ ಉತ್ಕಟೇಚ್ಛುಗ
ಳೂ ಇದ್ದದರಿಂದ ಮಹಾರಾಣಿಯವರ ಸುಖಕರವಾದ ಸಾ
ರಭಾರದ ಕಾಲವು ಇವ್ವುಡಿ ಸುಖಪ್ರದವಾಗಿ ಸಾಗಿತು.
ಈ ಬಗೆಯ ತಂದೆತಾಯಿಗಳ ಪುಣ್ಯಗರ್ಭಸಂಜಾತರಾದಂ
ಥ, ಸುಶಿಕ್ಷಣಪ್ರಭಾವದಿಂದ ಬೆಳೆದಂಥ, ದೇಶಪರ್ಯಟ
ನಾದಿಸ್ವಾನುಭವಸಂಗತಿಗಳಿಂದ ಸಂಸ್ಕೃತಮನರಾದಂಥ
ನಮ್ಮ ಪ್ರಸ್ತುತದ ಬಾದಶಹರ ಕಾರಭಾರವು ಪ್ರಜಾಕ್ಷೇ
ಮವನ್ನು ಹೆಚ್ಚಿಸುವದೆಂಬದಕ್ಕೆ ಏನೂ ಸಂದೇಹವಿಲ್ಲ. ಅ
ದರೆ ಈ ಚಕ್ರವರ್ತಿಗಳ ಜೀವನಚರಿತ್ರವು ಎಲ್ಲ ತರದ
ಉದ್ಯೋಗವನ್ನು ಮಾಡುವಂಥ ಯಾವತ್ತೂ ಆಬಾಲವೃದ್ಧರಿ
ಗೆ ಪ್ರೇಮಾನಂದ ಭಕ್ತಿಗಳನ್ನು ಉಂಟು ಮಾಡುವಂಥಾದ್ದೂ
ಅನುಕರಣೀಯವಾದಂಥಾದ್ದೂ ಇರುವದರಿಂದ ವಾಚಕರಿ

ಕೋಸ್ಕರ ಅದನ್ನು ಸಂಕ್ಷೇಪವಾಗಿ ಬರೆಯಲುಪಕ್ರಮಿಸು
ತ್ತೇವೆ.

ಜನನ—ಇವರು ಸರ್ ೧೪೫೩ನೇ ಇಸವಿಯ ನವೆಂಬರ
ನೇ ತಾರೀಖಿನ ದಿವಸ ಹುಟ್ಟಿದರು. ಇವರು ಮಹಾರಾ
ಜಯವರಿಗೆ ಮರುಚಿಲ ಮಕ್ಕಳು. ಚೊಚ್ಚಿಲ ಹೆಣ್ಣುಮಗ
ಳು ಹುಟ್ಟಿದ್ದರಿಂದ ಮಹಾರಾಣಿಯವರಿಗೂ ಅವರ ಪತಿಗಳಿ
ಗೂ ಸಂಯುಕ್ತ ಸಂಸ್ಥಾನಗಳ ಪ್ರಜೆಗಳಿಗೂ ಗಂಡು ಹುಟ್ಟಿ
ದಿಲ್ಲವೆಂದು ಅಸಮಾಧಾನವಾಗಿತ್ತು. ಇವರು ಹುಟ್ಟುವ ದಿವ
ಸ ಡ್ಯೂಕ ಆಫ್ ವೆಲಿಂಗಟನ್ನ್‌ಮೊದಲಾದ ಅನೇಕ ಮಂತ್ರಿ
ಗಳೂ ಘನವಂತರೂ ಅರಮನೆಯಲ್ಲಿ ಕೂಡಿ ಸೂತಿಕಾಗೃ
ಹದಿಂದ ಸೂಲಗಿತ್ತಿಯು ಎಂಥ ಸುದ್ದಿಯನ್ನು ಹೊರಗೆ ತರು
ತ್ತಾಳೋ ಎಂದು ಎದುರು ನೋಡುತ್ತ ಕುಳಿತುಕೊಂಡಿದ್ದ
ರು. ಅಷ್ಟರಲ್ಲಿ ಒಬ್ಬಳು ಸೂತಿಕಾಗೃಹದಿಂದ ಹೊರಗೆ
ಬರಲು, ಯುವರಾಜ ಮುಖಾವಲೋಕನೋತ್ಸಂಗಿಗಳಾದ
ಡ್ಯೂಕ ಆಫ್ ವೆಲಿಂಗಟನ್ನರು ಗಂಡು ಶಿಶುವೋ? ಎಂದು
ಪ್ರಶ್ನ ಮಾಡಲು, ಆ ಸೂಲಗಿತ್ತಿಯು ಕೋಪಿಸಿಕೊಂಡು, ಬ
ರೀ ಗಂಡು ಶಿಶುವಲ್ಲ; ರಾಜಪುತ್ರನೆಂದು ಹೇಳಿದಳು. ಇ
ದೊಂದೇ ಸಣ್ಣ ಮಾತಿನಿಂದ ಅರಮನೆಯ ಕಿಂಬಹುನಾ
ಯಾವತ್ತು ಸಂಯುಕ್ತ ಸಂಸ್ಥಾನದ ಜನರಲ್ಲಿ ಪಟ್ಟಾಧಿಕಾರಿ
ಯಾದ ಗಂಡು ಶಿಶುವು ಹುಟ್ಟಬೇಕೆಂಬ ಕಾಂಕ್ಷೆಯು ಎಷ್ಟು
ಪ್ರಬಲವಾಗಿತ್ತೆಂಬದು ಸ್ಪಷ್ಟವಾಗುತ್ತದೆ. ಈ ಅತ್ಯಾನಂ
ದಕರವಾದ ಸಂಗತಿಯು ಕ್ಷಣಮಾತ್ರದಲ್ಲಿ ಭೂಮಂಡಲ
ವೆಂಬ ಹಬ್ಬಿರುವ ಯಾವತ್ತು ಬ್ರಿತಿಶ ಪ್ರದೇಶಗಳಿಗೆ ತಿಳಿ
ಯಲು, ಆ ದೇಶಗಳ ಪ್ರಜೆಗಳಿಂದ ಆನಂದಸೂಚಕ ಪತ್ರಗ
ಳೂ ತಾರುಗಳೂ ಹೇರಳವಾಗಿ ಬಂದವು. ಇಂಗ್ಲೆಂಡದ
ಯುವರಾಜನಿಗೆ, ಹುಟ್ಟಿದ ಕೂಡಲೆ ಹಲವು ಬಿರುದುಗಳೂ
ಪಟನಗಳೂ ದೊರೆಯುವ ಸಾಂಪ್ರದಾಯವುಂಟು. ಅದ
ರಂತೆ ಇವರಿಗೆ ೧ ಡ್ಯೂಕ ಆಫ್ ಕಾರ್ನವಾಲ ೨ ಡ್ಯೂಕ
ಆಫ್ ಸಾಕ್ಸನೀ ೩ ಲಾರ್ಡ ಆಫ್ ಆಯಿಲ್ಸ ೪ ಗ್ರೇಟ ಸ್ಟೂವಾ
ರ್ಡ ಆಫ್ ಸ್ಕಾಟಲಂಡ ೫ ಬ್ಯಾರನ್‌ರೇನ್ ಫ್ಯೂ ಎಂಬ

ಈ ಬಿರುದುಗಳಲ್ಲದೆ ಪ್ರಿನ್ಸ ಆಫ್ ವೇಲ್ಸ ಎಂಬ ಜೇರೊಂದು ಪದವಿಯು ಪ್ರಾಪ್ತವಾಯಿತು. ನಾಡಿಕೆಯಾಗಿ ಯುವರಾಜರಿಗೆ ಈ ಪಡೆಯ ಬಿರುದಿನಿಂದಲೇ ಕರೆಯುವ ಸಾಂಪ್ರದಾಯವುಂಟು. ತಂದೆಯು ಜರ್ಮನ್ ದೇಶದ ರಾಜಪುತ್ರನು. ತಾಯಿಯು ಇಂಗ್ಲಂಡದ ಅರಸಿಯು. ಇವೆರಡೂ ಮನೆತನಗಳ ಹೆಸರನ್ನು ಇವರು ನಡಿಸಬೇಕಾದರಿಂದ ಇವರಿಗೆ ಆಲ್ಬರ್ಟ್ ಎಡ್ವರ್ಡ್ ಎಂಬ ಉಭಯವಂಶಸೂಚಕ ಸಂಯುಕ್ತ ನಾಮವನ್ನು ಇಟ್ಟರು. ಪುರುವರ್ಷ ಅಂದರೆ ೧೮೪೦ನೇ ಇಸವಿಯ ಜನವರಿ ೯ನೇ ತಾರೀಖಿನ ದಿವಸ ಇವರಿಗೆ ಸೆಂತಜಾರ್ಜ ದೇವಾಲಯದಲ್ಲಿ ಕ್ರೈಸ್ತ ಜನರಿಂದ ಪವಿತ್ರನದಿಯಿನಿಸಿಕೊಂಡ ಜಾರ್ಡನ್ ಹೊಳೆಯ ಉದಕದಿಂದ ಕ್ರೈಸ್ತಮತದ ದೀಕ್ಷಾಸ್ನಾನವನ್ನು ಮಾಡಿಸುವ ಮಹೋತ್ಸವವು ಯಥಾಸಾಂಗ ನೆರವೇರಿತು. ಅರು ವರ್ಷದವರಾಗುವವರೆಗೆ ಲೇಡೀ ಲಿಟಲ್‌ಟನ್ ಎಂಬ ಹೆಣ್ಣುಮಗಳು ಇವರ ಸಂಗೋಪನೆ ಮಾಡುತ್ತಿದ್ದಳು.

ಬಾಲ್ಯದ ಶಿಕ್ಷಣ—ಪ್ರತಿಪದೆಯ ಚಂದ್ರನಂತೆ ದಿನದಿನಕ್ಕೆ ಬೆಳೆಯುತ್ತಿರುವ ರಾಜಕುಮಾರರು ಶೈಶವಾವಸ್ಥೆಯನ್ನು ಕಳೆದು ವಿದ್ಯಾಭ್ಯಾಸಕ್ಕೆ ತಕ್ಕಷ್ಟು ದೊಡ್ಡವರಾದರು. ಆಗ ಇವರನ್ನು ಯಾವ ಗುರುವಿನ ಬಳಿಯಲ್ಲಿ ವಿದ್ಯಾರ್ಜನೆಗಿಡಬೇಕೆಂಬ ಆಲೋಚನೆಯು ತಾಯಿತಂದೆಗಳ ಮನದಲ್ಲಷ್ಟೇ ಅಲ್ಲ. ಬಹುಮತ್ತೂ ಬ್ರಿತಿಶಜನರ ಮನದಲ್ಲಿ ಉಚ್ಚವಿಸಿತು. ರಾಜನೀತಿ ಅನೀತಿಗಳ ಪರಿಣಾಮವು ಅವನ ಸ್ವಂತಕ್ಕಷ್ಟೇ ಸಂಬಂಧಿಸಿದರೆ ಇಡೀ ರಾಷ್ಟ್ರಕ್ಕೆ ಸಂಬಂಧಿಸಿರುವದು. ಕೋಟ್ಯಾನುಕೋಟಿ ಜನರ ಕಲ್ಯಾಣಾಕಲ್ಯಾಣವು ಇವನೊಬ್ಬನ ಕೈಯಲ್ಲಿರುವದು. ಆದ್ದರಿಂದ ಅರಸನು ವಿದ್ಯಾವಂತನೂ ನೀತಿವಂತನೂ ಇರುವದು ಅತ್ಯವಶ್ಯವು ವಿಕ್ಟೋರಿಯಾ ಮಹಾರಾಣಿಯವರ ಪತಿಗಳಾದ ಪ್ರಿನ್ಸ ಆಲ್ಬರ್ಟರವರು ರಾಜ್ಯಕಾರಭಾರದ ಕೆಲಸದಲ್ಲಿ ಕೈ ಹಾಕಕೂಡದೆಂದು ನಿರ್ಬಂಧವಿತ್ತು. ಇಂಗ್ಲಂಡದ ಜನರ ಮನಸು ಆ ಕಾಲಕ್ಕೆ ಸ್ವಚ್ಛವಿದ್ದಿಲ್ಲ. ಇಂಥ ಇಕ್ಕಟ್ಟಿನಲ್ಲಿ ರಾಜಪುತ್ರರ ಶಿಕ್ಷಣದ ಹೊಣೆ ಹ್ಯಾಗೆ ನಿಬಿಡ

ಕವಾಗಿ ನಿರ್ಣಯವಾಗುವದೆಂದು ಬಹು ಜನರು ಆಲೋಚಿಸುತ್ತಿದ್ದರು. ಕಡೆಗೆ ಅನೇಕ ಜನ ವಿದ್ವಾಂಸರನ್ನು ಲಂಡನ ಪಲ್ಲಿ ಕೂಡಿಸಿ ಅವರೊಡನೆ ವಿಚಾರ ಮಾಡಿ ಪ್ರಖ್ಯಾತವಾದ ಈಟನ್‌ವೆಂಬ ಶಾಲಾಗುರುಗಳಾದ ಮಿ. ಹೆನ್ರಿಬರ್ಕ್ ಎಂಬ ಪಂಡಿತರ ಕೈಯಲ್ಲಿ ರಾಜಕುಮಾರನನ್ನು ಒಪ್ಪಿಸಿದರು. ಈ ಸದ್ಗುರುಗಳು ಐದು ವರ್ಷಗಳ ವರೆಗೆ ಇವರಿಗೆ ಸುಶಿಕ್ಷಣವನ್ನು ಕೊಟ್ಟು ಬಳಿಕ ವಾರ್ಧಿಕ್ಯದ ಮೂಲಕವಾಗಿ ಹಿಡಿದ ಕೆಲಸವನ್ನು ಬಿಟ್ಟರು. ಇದರಿಂದ ರಾಜಕುಮಾರರಿಗೆ ಅತಿಶಯ ವಿಷಾದವಾಯಿತು. ಕಡೆಗೆ ರಾಜಕುಮಾರರು ನಿರುಪಾಯರಾಗಿ ಗುರುಗಳ ಬಳಿಗೆ ಬಂದು ತಮ್ಮ ಭಕ್ತಿಯನ್ನೂ ಪ್ರೇಮವನ್ನೂ ತೋರಿಸಿ ಗುರುದಕ್ಷಿಣೆಯನ್ನು ಅರ್ಪಿಸಿ ಆಶೀರ್ವಚನವನ್ನು ಸಂಪಾದಿಸಿಕೊಂಡು ಮನೆಗೆ ಬಂದರು. ಮಗನ ಈ ಬಗೆಯ ವರ್ತನದಿಂದ ತಾಯಿತಂದೆಗಳ ಹರ್ಷವು ಮಿತಿಮೀರಿತು. ಮುಂದೆ ಏಳು ವರ್ಷಗಳ ವರೆಗೆ ಈ ರಾಜಕುಮಾರರು ಮಿ. ಗಿಬ್ಬ ಎಂಬವರ ಬಳಿದುಲ್ಲಿ ವಿದ್ಯಾಭ್ಯಾಸ ಮಾಡಿದರು.

ಈ ರಾಜಪುತ್ರರ ಬಲವು ಶಾಸ್ತ್ರೀಯ ಸಂಗತಿಗಳ ಕಡೆಗೆ ವಿಶೇಷವಿತ್ತು. ಇವರು ಡಾಕ್ಟರ ಸ್ಲೆಫರ್‌ನೆಂಬ ವಿದ್ವಾಂಸನ ಬಳಿಯಲ್ಲಿ ಕಲಿಯುವಾಗ ಅವನೊಬ್ಬನಿಯದಲ್ಲಿ ಕೈ ಮುಳಿಗಿಸಿಕೊಂಡು ಕುದಿಯುವ ಸೀಸಿನಲ್ಲಿ ಎದ್ದಿದರೂ ಸುಡುವದಿಲ್ಲೆಂಬ ಸಂಗತಿಯನ್ನು ಕೇಳಿದ ಕೂಡಲೆ ಅಂಜದೆ ಸ್ವತಃ ಪ್ರಯೋಗವನ್ನು ಮಾಡಿನೋಡಿದರು.

ಈ ಮೇರೆಗೆ ವಿದ್ಯಾಭ್ಯಾಸವನ್ನು ನಡಿಸಿರುವ ರಾಜಕುಮಾರರು ಪೌಗಂಡಾವಸ್ಥೆಯನ್ನು ಕಳೆದು ಹದಿನೆಂಟು ವರ್ಷದವರಾದರು. ಆ ದೇಶದ ಸಾಂಪ್ರದಾಯಾನುಸಾರವಾಗಿ ರಾಜಪುತ್ರರು ಇನ್ನು ತಾಯಿತಂದೆಗಳನ್ನು ಬಿಟ್ಟು ವಿಂಗಡವಾಗಿರಬೇಕಾಯಿತು. ಆಗ ಇವರ ತಾಯಿಯಾದ ವಿಕ್ಟೋರಿಯಾ ಮಹಾರಾಣಿಯವರು ರಾಜಕುಮಾರರಿಗೆ ಬರೆದ ಪತ್ರವು, ಮಕ್ಕಳನ್ನು ಸಾಕಿದ ಎಲ್ಲ ಸ್ತ್ರೀಪುರುಷರು ಓದುವಂಥದಾಗಿರುವದು. ಅದರ ಸಾರಾಂಶವು—

" ಮಗುವೇ, ನೀನು, ಇನ್ನು ಕೇವಲ ತಾಯಿತಂದೆಗಳಅಧಿಕಾರಕ್ಕೂ ನಿ---ಗಳಿಗೂ ಒಳಗಾಗಿ ನಡಕೊಳ್ಳುವ ಕಾರಣವಿಲ್ಲ; ನಿನ್ನ ಸ್ವಂತ ವಿಚಾರವು ತಕ್ಕಷ್ಟು ಪಕ್ವದೆಶೆಯನ್ನು ಪಡೆದಿರುವದು. ನೀನು ಅದರ ಸಹಾಯದಿಂದ ಸಾರಾಸಾರ ವಿಚಾರ ಮಾಡಿ ವರ್ತಿಸು. ಆದರೂ ಕಾಲಕಾಲಕ್ಕೆ ಒದಗುವ ತೊಂದರೆಗಳನ್ನು ನೀಗಲಿಕ್ಕೆ ನಿನಗೆ ಪೂಜ್ಯರಾದ ನಮ್ಮ ಹಿತವಚನಗಳು ತಪ್ಪದೇ ದೊರೆಯುವವು. ಇದುವರೆಗೆ ನಾವು ನಿನ್ನ ವಿದ್ಯಾಭ್ಯಾಸಕ್ಕೂ ಆರೋಗ್ಯಕ್ಕೂ ಅನುಕೂಲವಾದ ಹಲವು ಕಠಿಣ ನಿರ್ಬಂಧಗಳನ್ನು ಮಾಡಿದ್ದೆವು. ಅವೆಲ್ಲ ನಿನ್ನ ಹಿತಕ್ಕಾಗಿಯೇ ಎಂದು ಒಡಿದು ಹೇಳುವ ಕಾರಣವಿಲ್ಲ. ಬಾಲಬುಡಿಕರ ಬಲೆಗೆ ಸಿಗದೆ ಸ್ವಂತ ವಿಚಾರದಿಂದ ನೀನು ವರ್ತಿಸು. ನಾವು ಇನ್ನು ನಿನ್ನ ಕೆಲಸದಲ್ಲಿ ಅಡ್ಡ ಬರುವದಿಲ್ಲ."

ಈ ಸರಳವಾದಂಥ ನಿಜವಾದ ಪ್ರೇಮವನ್ನು ವ್ಯಕ್ತಗೊಳಿಸುವಂಥ ಪತ್ರದಿಂದ ರಾಜಕುಮಾರರ ಅಂತಃಕರಣವು ದ್ರವಿಸಿತು. ಅದು ಮೊದಲ್ಗೊಂಡು ಯುವರಾಜರು ರಿಚಮಂಡದೊಳಗಿನ ಪ್ಲಾಯಿಟಲಾಜವೆಂಬ ಅರಮನೆಯಲ್ಲಿ ವಾಸ ಮಾಡಲಾರಂಭಿಸಿದರು.

ದೇಶಾಟನ—ವಿದ್ಯಾಭ್ಯಾಸವನ್ನು ಮುಗಿಸಿದ ರಾಜಪುತ್ರರು ದಿಗ್ವಿಜಯಕ್ಕೆ ತೆರಳುವ ಸಾಂಪ್ರದಾಯವು ನಮ್ಮಲ್ಲಿ ವಿಶೇಷವಿತ್ತು. ಆದರೆ ಈ ಶತಕವು ಅಂಥ ಕಾರ್ಯಕ್ಕೆ ಅನುಕೂಲ ಕಾಲವಲ್ಲದ್ದರಿಂದಲೂ ಕೇವಲ ಸುಧಾರಣಾ ಯುಗವೆನಿಸಿರುವದರಿಂದಲೂ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ ಅಲ್ಲಲ್ಲಿಯ ವಿದ್ಯಾಕಲಾಕೌಶಲ್ಯಾದಿಗಳನ್ನೂ ಸೃಷ್ಟಿಚಮತ್ಕೃತಿಗಳನ್ನೂ ಜನರ ನಡೆನುಡಿಗಳನ್ನೂ ಅವಲೋಕಿಸಿಕೊಂಡು ಜ್ಞಾನಸಂಪನ್ನರಾಗಿ ಪ್ರಜೆಗಳ ಕ್ಷೇಮವರ್ಧನದ ಕಾರ್ಯಗಳನ್ನು ಕೈಕೊಳ್ಳುವದೇ ಪ್ರಸ್ತುತದ ರಾಜಪುತ್ರರ ದೇಶಾಟನದ ಪ್ರಧಾನ ಉದ್ದೇಶವಾಗಿರುವದು. ಅದರಂತೆ ಇವರು ಅಮೇರಿಕಾ ಖಂಡಕ್ಕೆ ಪಯಣ ಮಾಡಿದರು. ಆದರೆ ಈ ಪಯಣಕ್ಕೆ ಬಂದು ವಿಶೇಷ ಕಾರಣವಿತ್ತು. ಇಗ್ಲಂಡಲ್ಲಿ

ಇಂಗ್ಲಿಷರಿಗೂ ರಸಿಯನ್ನರಿಗೂ ಯುದ್ಧವಾಯಿತು. ಇದಕ್ಕೆ ಕ್ರಿಮಿಯಾದ ಯುದ್ಧವೆನ್ನುವರು. ಈ ಕಾಳಗದಲ್ಲಿ ಕಾನಡಾ (ಅಮೇರಿಕಾ) ದೇಶದಲ್ಲಿ ಒಕ್ಕಲಾಗಿದ್ದ ಬ್ರಿತಿಶ ಜನರು ಬಾಂಧವ್ಯದಿಂದ ಇಂಗ್ಲಂಡಕ್ಕೆ ನೆರವಾಗಿದ್ದರು. ಈ ಕಾಳಗದಲ್ಲಿ ಜಯವಾದ ಬಳಿಕ ಮಹಾರಾಣಿಯವರು ಆ ದಂಡಾಳುಗಳಿಗೆ ವಿಶೇಷ ಮನ್ನಣೆಯನ್ನು ಮಾಡಿದ್ದರಿಂದ ಇಂಥ ಸದಯಾಂತಃಕರುಣಿಯಾದ ಅರಸಿಯು ತನ್ನ ಪಾದಧೂಳಿಯಿಂದ ತಮ್ಮ ದೇಶವನ್ನು ಅಲಂಕರಿಸಬೇಕೆಂಬ ಕುತೂಹಲವು ಅವರಲ್ಲಿ ಮೊಳೆದೋರಿತು ಅದರಿಂದ ಅವರು ಮಹಾರಾಣಿಯವರಿಗೆ ತಮ್ಮ ಕೋರಿಕೆಯನ್ನು ಶ್ರುತಪಡಿಸಿದರು. ಆದರೆ ಕೆಲವು ರಾಜಕೀಯ ಕಾರಣಗಳಿಂದ ಮಹಾರಾಣಿಯವರೆಗೆ ಹೋಗಲಸುವಾಗದ್ದರಿಂದ ಯುವರಾಜರೇ ತಮ್ಮ ಪ್ರತಿನಿಧಿಯಾಗಿ ಆ ಕೆಲಸವನ್ನು ಸಾಗಿಸಬೇಕೆಂದು ಗೊತ್ತಾಯಿತು. ಕಾನಡಾ ಪ್ರಾಂತಕ್ಕೆ ಯುವರಾಜರು ಬರುತ್ತಾರೆಂಬ ವರ್ತಮಾನವು ಅಮೇರಿಕೆಯ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಿಗೆ ತಿಳಿದ ಕೂಡಲೆ, ಅವರು .ಸಹ ಯುವರಾಜರು ತಮ್ಮ ನಾಡಿಗೂ ಬರಬೇಕೆಂದು ಇಚ್ಛೈಸಿದರು. ಇವೆರಡು ಪ್ರಾಂತಗಳಲ್ಲಿ ವಾಸಿಸುವ ಜನರು ವಸ್ತುತಃ ಬ್ರಿತಿಶ ರಕ್ತಸಂಭೂತರೇ ಇದ್ದಾಗ್ಯೂ ಕಾನಡಾ ಪ್ರಾಂತವು ಬ್ರಿತಿಶ ಸಾರ್ವಭೌಮತ್ವಕ್ಕೆ ಅಂಕಿತವಾಗಿರುವದು; ಯುನಾಯಿಟೆಡ್ ಸ್ಟೇಟ್ಸ ಪ್ರಾಂತವು ಸ್ವತಂತ್ರವಾದ ಪ್ರಜಾಸತ್ತಾತ್ಮಕವಾಗಿರುವದು. ಆದ್ದರಿಂದ ರಾಜಪುತ್ರರು ಮೊದಲನೇ ಪ್ರಾಂತದಲ್ಲಿ ರಾಣಿಯವರ ಪ್ರತಿನಿಧಿಯಾಗಿಯೂ ಎರಡನೇ ಪ್ರಾಂತದಲ್ಲಿ ಸ್ವತಂತ್ರ ರಾಜಪುತ್ರರಾಗಿಯೂ ವರ್ತಿಸಬೇಕಾಯಿತು! ಇವರ ತಂದೆಯು, ಮಗನು ಪರಾಣಕ್ಕೆ ಅಣಿಯಾಗುತ್ತಲೆ, ಎಲ್ಲೆಲ್ಲಿ ಹ್ಯಾಗೆ ಹ್ಯಾಗೆ ವರ್ತಿಸಬೇಕು; ಹ್ಯಾಗೆ ಹ್ಯಾಗೆ ಭಾಷಣ ಮಾಡಬೇಕು; ಮುಂತಾದ ಸಂಗತಿಗಳನ್ನೆಲ್ಲ ಕೆನ್ನಾಗಿ ತಿಳಿಸಿದ್ದನು. ಬಳಿಕ ರಾಜಪುತ್ರರು ಸುಮುಹೂರ್ತದಿಂದ 'ಹೀರೋ' ಎಂಬ ಹಡಗದಲ್ಲಿ ಕುಳಿತು ಅಮೇರಿಕೆಗೆ ಪಯಣ ಮಾಡಿದರು

ಹಾಡಿಯಲ್ಲಿ ಏನೊಂದು ಅಪಾಯ ತಟ್ಟದೆ ಸುರಕ್ಷಿತವಾಗಿ ಕಾನಡಾ ದೇಶಕ್ಕೆ ಬಂದು ಮುಟ್ಟಲು, ಮೊದಲು ನ್ಯೂಫೌಂಡಲಂಡದ ಗವರ್ನರರು ರಾಜಪ್ರತ್ರರನ್ನು ಎದುರ್ಗೊಂಡು ಅರಮನೆಗೆ ಕರೆದೊಯ್ದು ರಾಜೋಪಚಾರದಿಂದ ಆದರಿಸಿದರು. ಬಳಿಕ ಮಾಂತ್ರಿಯಾಲ ಪಟ್ಟಣಕ್ಕೆ ಬಂದು ಸೆಂಟ ಲಾರೆನ್ಸ ನದಿಯ ಸೇತುವಿನ ಕಡೆಯ ಕಲ್ಲನ್ನು ಸ್ಥಾಪಿಸಿ, ಪ್ರಸಿದ್ಧವಾದ ನಾಯಗರಾ ತಡಸಲವನ್ನು ನೋಡಿಕೊಂಡು ಕಡೆಯಲ್ಲಿ ಹ್ಯಾಮಿಲ್ಟನ್ ಪಟ್ಟಣಕ್ಕೆ ಬಂದರು. ಅಲ್ಲಿಯೂ ಆದರಾತಿಥ್ಯಗಳು ಯಥೋಚಿತವಾಗಿ ನಡೆದ ಬಳಿಕ ಸಮಾರಂಭದ ಅಂತ್ಯದಲ್ಲಿ ಯುವರಾಜರು—ನಾವು ರಾಣಿಯವರ ಪ್ರತಿನಿಧಿಯಾಗಿ ಬಂದ ಕೆಲಸವು ಇಂದಿಗೆ ಪೂರ್ಣವಾಯಿತು. ಪ್ರತಿ ಒಬ್ಬ ಬಿ ತಿಶ ಮನುಷ್ಯನು ಪರಸ್ಪರರ ಹಿತವನ್ನು ಬಯಸತಕ್ಕದ್ದು ಎಂಬ ಆಶಯದ ಭಾಷಣ ಮಾಡಿ ಅದೇ ರಾತ್ರಿ 'ಬ್ಯಾರನ್ ರೇನ ಫ್ರೂ' ಎಂಬ ಹೆಸರಿನಿಂದ ಯುನಾಯಿಟೆಟ್ ಸ್ಟೇಟಕ್ಕೆ ಹೊರಟರು.

ಈ ಸಂಯುಕ್ತ ಸಂಸ್ಥಾನಗಳ ನಿವಾಸಿಗಳು ಕಾನಡಾದೇಶದ ಜನರಿಗಿಂತ ಯುವರಾಜರಿಗೆ ಹೆಚ್ಚು ಸತ್ಕಾರವನ್ನು ಮಾಡಿದರು. ರಾಜಧಾನಿಯಾದ ವಾಶಿಂಗ್ಟನ್ ಪಟ್ಟಣದಲ್ಲಿ ೪-೫ ದಿವಸಗಳನ್ನು ಕಳೆದ ಬಳಿಕ ಈ ಪ್ರಜಾಸತ್ತಾತ್ಮಕ ರಾಜ್ಯದ ಸ್ಥಾಪಕನಾದ ಜಾರ್ಜ ವಾಶಿಂಗ್ಟನ್‌ನ ಸಮಾಧಿಯನ್ನು ನೋಡಿ ಆ ಸ್ಥಳದಲ್ಲಿ ಒಂದು ಗಿಡವನ್ನು ಹಚ್ಚಿದರು. ಬಳಿಕ ಫಿಲಾಡೆಲ್ಫಿಯಾ ನ್ಯೂಯಾರ್ಕ ಮುಂತಾದ ನಗರಗಳನ್ನು ನೋಡಿಕೊಂಡು ನಾಲ್ಕು ತಿಂಗಳ ನಂತರ ಸ್ವದೇಶವನ್ನು ಸೇರಿದರು.

ಉಚ್ಚಶಿಕ್ಷಣ—ಈ ರಾಜಕೀಯ ಪ್ರವಾಸದಿಂದ ಮರಳಿ ಬಂದಬಳಿಕ ಯುವರಾಜರು 'ಟ್ರಿನಿಟಿ' ಎಂಬ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿ ಸೇರಿದರು. ಆದರೆ ಇವರು ವರ್ಗದೊಳಗಿನ ಯಾವತ್ತೂ ಅಭ್ಯಾಸವನ್ನು ಕಲಿತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪದವಿಯನ್ನು ಪಡೆದು ನೌಕರಿ ಮಾಡಬೇಕೆಂದು ಕಲಿಯುತ್ತಿರಲಿಲ್ಲ. ಆದ್ದರಿಂದ ಇವರು

ಸ್ಟೆರ್ನ್‌ಲ್‌ಬ್ರೂಸ ಎಂಬ ಗುರುವಿನೊಡನೆ ಪದಧಾರಿಯಾದ ವಿದ್ಯಾರ್ಥಿಯಂತೆ ವರ್ತಿಸುತ್ತ ವ್ಯಾಸಂಗ ನಡಿಸಿದರು. ಈ ಸೇ ಕಾಲದಲ್ಲಿ ಅಂದರೆ ೧೪೬೧ ರಲ್ಲಿ ಇವರು ಅಯರ್ಲಂಡ ಜರ್ಮನಿಗಳಿಗೆ ಹೋಗಿಬಂದರು. ಮರುವರ್ಷ ಪಾಲೆಸ್ತಾ ನಿನದ ಯಾತ್ರೆಗೆ ಹೋಗಬೇಕೆಂದು ಮಾಡಿದ್ದರು; ಅಪ ಳಿಗೆ ಇವರ ಪರಮಶ್ರೇಷ್ಠವಾದ ತಂದೆಯವರು ಮಡಿದು ಹೋದರು. ಅದರಿಂದ ಇವರಿಗೂ ಮಹಾರಾಣಿಯವರಿಗೂ ಅಪಾರವಾದ ರಾಜಕೀಯ ಕುಟುಂಬಕ್ಕೂ ಬಹು ದುಃಖವಾ ಯಿತು. ಇವರು ಮಾದರಿ ತೆಗೆದುಕೊಳ್ಳತಕ್ಕ ಮಹಾಪುರು ಷರಿದ್ದರೆಂದು ನಿರ್ವಿವಾದವಾಗಿ ಹೇಳಬಹುದು. ಯುವರಾ ಜರು ಈ ದುಃಸಹದುಃಖವನಾರ್ಥವಾಗಿಯೇ ಕ್ರಿಸ್ತೀ ಧರ್ಮದ ಪುಣ್ಯಭೂಮಿಯಾದ ಪಾಲೆಸ್ತಾಯಿನದ ಯಾತ್ರೆಗೆ ಹೊರಟರು. ತೆಪ್ಪರೆಂಡ ಅರ್ಥರ ಕೆನರಿನ್ ಸ್ಟ್ಯಾನಲ್ ಎಂ ಬ ಧರ್ಮೋಪದೇಶಕನನ್ನು ಒಡಗೊಂಡು ಜೋಪಾ ಪಟ್ಟ ಣಕ್ಕೆ ಮುಟ್ಟಿದರು. ಕಳೆದ ೫೦೦ ವರ್ಷಗಳಲ್ಲಿ ಪಾಲೆಸ್ತಾ ನಿನಕ್ಕೆ ಬಂದ ಯುರೋಪದ ಅರಸರು ಇವರೊಬ್ಬರೇ ನುಂದೆ ಹೆಬ್ರಿನ್ ಪಟ್ಟಣಕ್ಕೆ ಹೋಗಿ ಅಲ್ಲಿಯದೊಂದು ಗುಹೆಯೊಳಗಿರುವ ಅಬ್ರಾಹಿಮ, ಸಾರಾ, ಆಯರೂಕ್ ಮುಂತಾದ ಸಾಧು ಪುರುಷರ ಸಮಾಧಿಗಳನ್ನು ನೋಡಿಕೊಂ ಡು ಸೈದನ್‌ತಾಯರಗಳ ಮೇಲಿಂದ ಸ್ವದೇಶಕ್ಕೆ ಸುಖರೂಪ ವಾಗಿ ಮರಳಿ ಬಂದರು.

ಲಗ್ನ—ರಾಜಕುಮಾರರು ಜರ್ಮನಿಗೆ ಹೋದಾಗ ಡೇ ನ್ಮಾರ್ಕ್ ರಾಜಪುತ್ರಿಯು* ಭೂವಪತವನ್ನು ನೋಡಿ ಅವಳ ಸೌಂದರ್ಯಕ್ಕೆ ಮೋಹಗೊಂಡು ಯಥಾರ್ಥವಾಗಿ ಅವಳು ಹೀಗೆಯೇ ಇರುವಳೋ ಇಲ್ಲವೋ ಎಂಬುದನ್ನು ಮನಗಾ ಣುವದಕ್ಕಾಗಿ ತಮ್ಮ ಗೆಳೆಯನನ್ನೊಬ್ಬನನ್ನು ಕಳಿಸಿದರು. ಆ ರಾಜಪುತ್ರಿಯು ಬರೇ ರೂಪದಿಂದ ಮಾತ್ರವಲ್ಲ, ಸರ್ವಾ

---

* ಇವರು ೧೫೪೪ ರಲ್ಲಿ ಜನಿಸಿದರು. ಇವರ ಹೆಸರು ಅಲೇ ಕ್ಸಾಂದ್ರಾ ಇವರೇ ಈಗಿನ ನಮ್ಮ ಬಾದಶಹರ ಧರ್ಮಪತ್ನಿಗಳು.

ಶದಿಂದಲೂ ತಮಗೆ ಅನುರೂಪಳಾಗಿರುವಳೆಂದು ಮನಗಂ
ಡು ಹಿರಿಯರ ಅನುಮತಿಯಿಂದಲೂ ಪ್ರಜರ ಒಪ್ಪಿಗೆಯಿಂದ
ಲೂ ಅವರನ್ನು ಮದುವೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ
ದರು.

ಈ ಕಲ್ಯಾಣಕಾರ್ಯವು ಜರಗುವ ಮೊದಲು ಯುವ
ರಾಜರ ಗೌರವಕ್ಕೆ ತಕ್ಕಂತೆ ವರ್ಷಕ್ಕೆ ಎಷ್ಟು ಹಣವನ್ನು
ಗೊತ್ತುಪಡಿಸಬೇಕೆಂದು ಪಾರ್ಲಮೆಂಟಿನವರು ಚರ್ಚಿಸಿ,
ಕಡೆಗೆ ಯುವರಾಜರಿಗೆ ವರ್ಷಕ್ಕೆ ೪೦ ಸಾವಿರ ಪೌಂಡುಗ
ಳನ್ನು, ಇವರ ಪ್ರಿಯಪತ್ನಿಗೆ ೧೦ ಸಾವಿರ ಪೌಂಡುಗಳನ್ನು
ಕೊಡುವದೆಂದು ನಿರ್ಣಯಿಸಿದರು.

ಪರಸ್ಪರಪ್ರೇಮದಿಂದ ಘಟನೆಯಾದ ಈ ವಿವಾಹವು
ಇಂಗ್ಲಂಡ ದೇಶದ ಯಾವತ್ತು ಜನರ ಚಿತ್ತಾಕರ್ಷಣವನ್ನು
ಮಾಡಿತು. ಕೇವಲ ಅರಸುಮನೆತನದ ಸಂಬಂಧವು ಇದ
ರೊಳಗಿದ್ದಿಲ್ಲ ಅದರಿಂದ ಲಂಡನದ ನಿವಾಸಿಗಳು ಯುವರಾ
ಜರ ಭಾವೀ ಪತ್ನಿಯನ್ನು ಬಹು ಆದರದಿಂದ ಸತ್ಕರಿಸಬೇ
ಕೆಂದು ನಿಶ್ಚಯಿಸಿದ್ದರು. ಮೊದಲೇ ಮಾನವಪ್ರಾಣಿಯು
ಉತ್ಸವಪ್ರಿಯನು. ಕಳೆದ ೫೦ ವರ್ಷಗಳಲ್ಲಿ ಈ ಬಗೆ
ಯ ಸಮಾರಂಭವು ಇಂಗ್ಲಂಡದಲ್ಲಿ ನಡೆದಿದ್ದಿಲ್ಲ. ಇದು
ಹೊತ್ತಾಗಿ, ರಾಜಕುವರಿಯು ವಿದುಷಿಯೂ ಸೌಂದರ್ಯ
ಶಾಲಿನಿಯೂ ಇರುವಳೆಂಬದನ್ನು ಕೇಳಿದ ಬಳಿಕಂತೂ ಹೇಳು
ವದೇನು? ಪ್ರತಿಯೊಬ್ಬರು ತಮ್ಮ ತಮ್ಮ ಯೋಗ್ಯತೆಯುಂ
ತೆ ಮನೆಗಳನ್ನೂ ಬೀದಿಗಳನ್ನೂ ಸಿಂಗರಿಸತೊಡಗಿದರು.
ಹಲವರು ಯುವರಾಜದಂಪತಿಗಳಿಗೆ ಕೊಡಬೇಕಾದ ಉ
ಡುಗೊರೆ ಕಾಣಿಕೆಗಳನ್ನು ಸಿದ್ಧಪಡಿಸುವದರಲ್ಲಿ ಮಗ್ನರಾದ
ರು. ಕೆಲವರು ತರತರದ ಕವನಗಳನ್ನು ರಚಿಸುವದರಲ್ಲಿ
ಆಸಕ್ತರಾದರು.

ಈ ಮೇರೆಗೆ ಲಂಡನ ಪಟ್ಟಣದಲ್ಲಿ ಪರಿಣಯದ ಸಿದ್ಧತೆ
ಯು ಒತ್ತರದಿಂದ ನಡೆದಿರಲು, ಅಲೆಕ್‌ಝಾಂಡ್ರಾ ರಾಜಪ್ರ
ತ್ರಿಯು 'ವಿಕ್ಟೋರಿಯಾ ಆಂಡ ಆಲ್ಬರ್ಟ' ಎಂಬ ಹಡಗದೊ
ಳಗೆ ಕುಳಿತು, ದೇನ್ಮಾರ್ಕದಿಂದ ಹೊರಟು, ಇಂಗ್ಲಂಡದ

'ಗ್ರೇಷ್ಟ್ ಎಂಡ್' ಎಂಬ ಬಂಡರಕ್ಕೆ ತಲ್ಪಿದರು. ರಾಜಪುತ್ರರೂ ಹಡಗದ ವರೆಗೆ ಹೋಗಿ, ತಮ್ಮ ಭಾವೀ ಪತ್ನಿಯನ್ನು ಮರ್ಯಾದೆಯಿಂದ ಕರೆದುಕೊಂಡು, ನೆರೆದ ಜನರ ಜಯಘೋಷದೊಡನೆ ರಥಾರೂಢರಾಗಿ, ಮಹೋತ್ಸವದಿಂದ ಲಂಡನದ ರಾಜವೀದಿಗಳಲ್ಲಿ ಮೆರೆಯುತ್ತ ಗೃಹಪ್ರವೇಶ ಮಾಡಿದರು. ಮೊದಲೇ ಗೊತ್ತಾದಂತೆ ಮಾರ್ಚ್ ತಿಂಗಳ ೧೦ನೇ ತಾರೀಖಿನ ದಿವಸ ಸೆಂಟ್‌ಜಾರ್ಜ್ ದೇವಾಲಯದಲ್ಲಿ ಈ ಕಲ್ಯಾಣ ಮಹೋತ್ಸವವು ಕಡು ಸಡಗರದಿಂದ ನೆರವೇರಿತು. ಕಾಣಿಕೆ ಉಡುಗೊರೆಗಳ ಬೆಲೆಯು ೫೦ ಲಕ್ಷ ಪೌಂಡುಗಳಿಗೆ ಮಿಕ್ಕಿತೆಂದು ಹೇಳುವರು ಲಂಡನದ ನಾಗರಿಕರೊಬ್ಬರೇ ಒಂದೂವರೆ ಲಕ್ಷ ಬೆಲೆ ಬಾಳುವ ರತ್ನಜಾತವನ್ನು ಕಾಣಿಕೆಯಾಗಿ ಕೊಟ್ಟರು. ವಿವಾಹಕಾರ್ಯವು ಮುಗಿದ ಬಳಿಕ ದಂಪತಿಗಳು ಮಹಾರಾಣಿಯವರ ದರ್ಶನ ತೆಗೆದುಕೊಂಡು, ಅವರ ಆಶೀರ್ವಾದದೊಂದಿಗೆ ಅಸ್ಥಾನದಲ್ಲಿ ಹೋಗಿ ನಿಂತುಕೊಂಡರು.

ಸಂತತಿ:—ಸನ್ ೧೮೬೪ನೇ ಜನವರಿ ೮ನೇ ತಾರೀಖಿನ ದಿವಸ ಯುವರಾಜರಿಗೆ ಪ್ರಥಮೋತ್ಸವವಾಯಿತು. ಮುಂದೆ ಮಾರ್ಚ್ ತಿಂಗಳಲ್ಲಿ ಆ ಕೂಸಿಗೆ ಪ್ರಿನ್ಸಪ್ಹಿಕ್ಟರ ಎಂದು ಹೆಸರಿಟ್ಟರು. ರಾಜಪದ್ಧತಿಗೆ ಸರಿಯಾಗಿ, ಈ ಕೂಸಿಗೆ ಬ್ಯಾರನ್ ಎಂಬ ಪದವಿಯೂ ೫೦ ಪೌಂಡಿನ ನೇಮಣುಕೂ ದೊರೆದವು. ಮರುವರ್ಷ ಜೂನ ತಿಂಗಳಿನಲ್ಲಿ ಇನ್ನೊಬ್ಬ ಮಗನು ಹುಟ್ಟಿದನು. ಇವನಿಗೆ ಜಾರ್ಜ್‌ಫ್ರೆಡರಿಕ್ ಎಂಬ ಹೆಸರು ಇಟ್ಟರು. ಬಳಿಕ ಜುಲೈ ತಿಂಗಳಿನಲ್ಲಿ ಅರಮನೆಗೆ ಬೆಂಕಿ ಹತ್ತಿತು. ಆಗ ಈ ರಾಜಪುತ್ರರು ಹೊದಲು ಹುಡುಗರನ್ನು ತೆಗೆದು, ಹೊರಗಿರಿಸಿ ಸ್ವತಃ ಬೆಂಕಿಯನ್ನು ನೊಂದಿಸಹತ್ತಿದರು. ಬಳಿಕ ನಾಲ್ಕೂ ಕಡೆಯಿಂದ ಜನರು ನೆತೆವಿಗೆ ಓಡಿಬಂದು, ಬೆಂಕಿಯನ್ನಾರಿಸಿದರು. ಇದರಿಂದ ಯುವರಾಜರ ಪ್ರಸಂಗಾವಧಾನವು ಸರಸಾಗಿ ವ್ಯಕ್ತವಾಗುತ್ತದೆ.

ಮುಂದೆ ಈ ದಂಪತಿಗಳಿಗೆ ಮೂರು ವರ್ಷಗಳಾದ ಬಳಿಕ ಈ ಪ್ರಿನ್ಸೆಸ್‌ಲುಯಿಸ ಎಂಬ ಹೆಸರಿನ ಕನ್ಯಾ ರತ್ನವನ್ನೂ ೧೮೬೯ರಲ್ಲಿ ಪ್ರಿನ್ಸೆಸ್ ವಿಕ್ಟೋರಿಯಾ ಎಂಬ ಹೆಣ್ಮಣಿಯನ್ನೂ ಹಡೆದರು. ಈ ಅವಧಿಯಲ್ಲಿ ಇವರು ಫ್ರಾನ್ಸ, ಅಯರ್ಲಂಡ, ಕ್ರಿಮಿಯಾ ಮುಂತಾದ ಪ್ರದೇಶಗಳಲ್ಲಿ ಸಂಚರಿಸಿ ಬಂದರು. ಇವರಿಗೆ ಒಟ್ಟು ಇಬ್ಬರು ಗಂಡು ಮಕ್ಕಳು ಮೂವರು ಹೆಣ್ಣುಮಕ್ಕಳು ಜನಿಸಿದ್ದರು. ಅವರಲ್ಲಿ ಪ್ರಿನ್ಸ್‌ವಿಕ್ಟರನೆಂಬ ಜೇಷ್ಠ ಪುತ್ರನು ಸನ್ ೧೮೭೨ರಲ್ಲಿ ಮರಣ ಹೊಂದಿದನು.

ಚೀನಿ ಬೇಸರಿಕೆಗಳು :—ಸನ್ ೧೮೭೩ನೇ ಇಸವಿಯಲ್ಲಿ ಸ್ಕಾರಬರೋ ಪಟ್ಟಣದಿಂದ ಮರಳಿ ಬಂದ ಬಳಿಕ ಇವರಿಗೆ ಸ್ವಲ್ಪ ಜ್ವರಾಂಶವಾಯಿತು. ಅದು ದಿನದಿನಕ್ಕೆ ಪ್ರಬಲವಾಗುತ್ತ ವಿಷಮಕ್ಕೆ ಹಾಕಿತು. ದಿಶಂಬರ ತಿಂಗಳಿನ ೧೦ನೇ ತಾರೀಖಿನ ದಿವಸ ಇವರು ತೀರ ಮೃತ್ಯುದೀಪತೆಯ ಅಂಗಳದ ಬಳಿಯ ತುತ್ತಿನಂತೆ ತೋರುತ್ತಿದ್ದರು. ಬಹುತರವಾಗಿ ಎಲ್ಲರೂ ಬೆಳಗಾಗುವದರೊಳಗಾಗಿ ದುಷ್ಟ ವೃತ್ತಾಂತವನ್ನೇ ಕೇಳುವ ಪ್ರಸಂಗ ಬರುವದೆಂದು ನೆನಸಿದ್ದರು. ಬ್ರಿಟಿಶ ರಾಷ್ಟ್ರಕ್ಕೆ ಸ್ನೇಹಿತರಾಗಿರುವ ಹಾಗೂ ಅಂಕಿತರಾಗಿರುವ ಎಲ್ಲ ಪ್ರದೇಶದ ಜನರು ಚಿಂತೆಯಲ್ಲಿ ಮುಳುಗಿದ್ದರು. ೧೪ನೇ ತಾರೀಖಿನ ದಿವಸ ಪ್ರಿನ್ಸ್ ಅಲ್ಬರ್ಟರವರ ಹತ್ತನೇ ಪುಣ್ಯತಿಥಿಯಾದದರಿಂದ ಬಹುಶಃ ಈ ಹೊತ್ತು ಯುವರಾಜರು ತಮ್ಮ ಕೈಬಿಡುವರೆಂದು ನಿಶ್ಚಯಿಸಿದ್ದರು. ಆದರೆ ಈಶ್ವರನ ಲೀಲೆಯು ಅಗಾಧವಾದದ್ದು. ಆದಿನ ಮೊದಲೊಂಡು ಅವರ ಪ್ರಕೃತಿಯು ಸುಧಾರಿಸುತ್ತ ನಡೆಯಿತು. ಪೂರ್ಣ ಗುಣ ಹೊಂದಿದ ಬಳಿಕ ಫೇಬ್ರುವರಿ ೨೭ನೇ ತಾರೀಖಿನ ದಿವಸ ಸೇಂಟಪಾಲ ದೇವಾಲಯದಲ್ಲಿ ಇವರು ಎಲ್ಲ ಬಳಗದವರನ್ನು ಹಾಗೂ ಪ್ರಜೆಗಳನ್ನೂ ಕೂಡಿಕೊಂಡು ಗಂಡದೊಳಗಿಂದ ಪಾರಮಾಡಿದ ಪರಮೇಶ್ವರನನ್ನು ಪ್ರಾರ್ಥಿಸಿದರು. ಬಳಿಕ ಫ್ರಾನ್ಸ ಇಟಲಿ ದೇಶಗಳಲ್ಲಿ ಹೋಗಿಸಿಂತು ಆ ದೇಶಗಳ ಹವೆ, ನೀರುಗಳ ಯೋಗದಿಂದ ಪೂರ್ಣ ಆರೋಗ್ಯ

ವನ್ನು ಪಡೆದು ಬಂದು 'ಬಿಥನಾಲಗ್ರೀನ' ವೆಂಬ ವಸ್ತು ಸಂಗ್ರಹಾಲಯದ ಪ್ರಾರಂಭ ಸಮಾರಂಭವನ್ನು ನೆರವೇರಿಸಿದರು ಮುಂದೆ ಸನ್ನ ೧೮೭೩ ರಲ್ಲಿ ವಿಯನಾ ಪಟ್ಟಣದಲ್ಲಿ ಆದ ಸಾರ್ವರಾಷ್ಟ್ರೀಯ ಪ್ರದರ್ಶನಕ್ಕೆ ಇವರು ಬ್ರಿಟಿಷ ಸಾಮ್ರಾಜ್ಯದ ಪ್ರತಿನಿಧಿಯಾಗಿ ಹೋಗಿದ್ದರು.

ಹಿಂದೂದೇಶಕ್ಕೆ ಬಂದದ್ದು :— ಬ್ರಿಟಿಶ ಸಾಮ್ರಾಜ್ಯದಲ್ಲೆಲ್ಲ ಸಂಪತ್ತಿಯಿಂದಲೂ, ವಿಸ್ತಾರದಿಂದಲೂ, ವಿಭವದಿಂದಲೂ ಮೇಲಾಗಿದ್ದ ಭರತ ಖಂಡವನ್ನು ನೋಡಬೇಕೆಂಬ ಯುವರಾಜರ ಕುತೂಹಲವು ಸನ್ನ ೧೮೭೫ ರಲ್ಲಿ ಪರಿಪೂರ್ಣವಾಯಿತು. ಹಿಂದುಸ್ಥಾನದಲ್ಲಿ ಬಂದು ಯಾನ ಯಾವ ಸ್ಥಳಗಳನ್ನು ನೋಡಬೇಕು! ಎಲ್ಲೆಲ್ಲಿ ಉಳಕೊಳ್ಳಬೇಕು! ಮುಂತಾದ ಯಾವತ್ತು ಕಾರ್ಯಕ್ರಮಗಳು ಮೊದಲೇ ಗೊತ್ತಾಗಿದ್ದವು. ಅಕ್ಟೋಬರ ಒಂದನೇ ತಾರೀಖಿನ ದಿವಸ 'ಸೇರಾಪಿಸ' ಎಂಬ ಹಡಗದಲ್ಲಿ ಕುಳಿತು ಎಂಟನೇ ನವಂಬರ ದಿವಸ ಸುರಕ್ಷಿತವಾಗಿ ಮುಂಬೈಗೆ ಮುಟ್ಟಿದರು. ಆ ಕಾಲಕ್ಕೆ ಹಿಂದುಸ್ಥಾನದ ಗವರ್ನರ ಜನರಲ್ಲರಾಗಿದ್ದ ಲಾರ್ಡ ನಾರ್ಥ ಬ್ರೂಕ ದೊರೆಗಳು ಸ್ವತಃ ಯುವರಾಜರನ್ನು ಸತ್ಕರಿಸಲಿಕ್ಕೆಂದು ಮುಂಬೈಗೆ ಬಂದಿದ್ದರು. ಮರುದಿವಸ ಇವರ ವರ್ಧಂತಿಯಾದ್ದರಿಂದ ಗವರ್ನರ್ಮೆಂಟ ಹೌಸಿನಲ್ಲಿ ದರಬಾರವನ್ನು ನೆರಿಸಿ ಮಹೋತ್ಸವವನ್ನು ಮಾಡಿದರು. ಯುವರಾಜರು ಬೆಳ್ಳಿಯ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದರು. ದರಬಾರಕ್ಕೆ ಬಿಜಯಂಗೈದ ಮಾಂಡಲಿಕ ನರಪತಿಗಳಲ್ಲಿ ಯುವರಾಜರು ಮೊದಲು ಕೊಲಾಪುರದ ಛತ್ರಪತಿ ಮಹಾರಾಜರನ್ನು ಕೈಗೊಟ್ಟು, ಕರತಂದು ಬದಿಯ ಬೆಳ್ಳಿಯ ಖುರ್ಚಿಯ ಮೇಲೆ ಕುಳ್ಳಿರಿಸಿ ಸತ್ಕರಿಸಿದರು. ಬಳಿಕ ಮೈಸೂರ, ಗಾಯಕವಾಡ ಮುಂತಾದ ಚಿಕ್ಕ ದೊಡ್ಡ ಸಂಸ್ಥಾನಿಕರನ್ನು ಸನ್ಮಾನಿಸಿದ ಬಳಿಕ ಮುಂಬೈ ಮ್ಯುನಿಸಿಪಾಲಟಿಯವರ ಮಾನಪತ್ರವು ಓದಲ್ಪಟ್ಟಿತು. ಆ ದಿನ ಭೋಜನಸಮಾರಂಭವು ಪೂರ್ಣವಾದ ಬಳಿಕ ಯುವರಾಜರು ಮಾಡಿದ ಭಾಷಣದ ಸಾರಾಂಶವು.

"ಬಹು ದಿವಸದಿಂದ ನಾವು ಹಿಂದುಸ್ಥಾನಕ್ಕೆ ಬರಬೇ
ಕೆಂದು ಆಲೋಚಿಸುತ್ತಿದ್ದೆವು. ಅಪರಿಹಾರ್ಯವಾದ ಹಲ
ಕಾರಣಗಳಿಂದ ಆಯೋಗವು ಇದು ವರೆಗೆ ಕೂಡಿ ಬರ
ಲ್ಲ; ಆದರೆ ಈ ಸಾರೆ ಈ ಸುಯೋಗವು ಒದಗಿ ಬಂ
ದ್ದಕ್ಕಾಗಿ ನಮಗೆ ಪರಮಾವಧಿ ಆನಂದವಾಗಿರುವದು. ನೀ
ವು ಮಾಡಿದ ಆದರಾತಿಥ್ಯವು ಚಿರಕಾಲ ನಮ್ಮ ಸ್ಮರಣದ
ಉಳಿಯುವದು. ಈ ಪ್ರಥಮ ಸತ್ಕಾರವು ಭಾವೀ ಸತ್ಕಾ
ರ ಬೆಲೆಯ ಕುರುಹಾಗಿರುತ್ತದೆ."

ಬಳಿಕ ಯುವರಾಜರು ಮುಂಬೈಯಿಂದ ಪುಣೆಗೆ ಬಂ
ರು. ಆ ಪಟ್ಟಣದಲ್ಲಿ ಗಾಯಕವಾಡ ಮಹಾರಾಜರು ಮಾ
ರ ಸತ್ಕಾರವನ್ನು ಸ್ವೀಕರಿಸಿ ಮರಳಿ ಮುಂಬೈಯಿಂದ ಸಿಂಹ
ಲದ್ವೀಪಕ್ಕೆ ಹೋದರು. ಅಲ್ಲಿಂದ ಮದ್ರಾಸದ ಮೇಲಿಂದ ಹಾ
ಯ್ದು ಕಲಕತ್ತೆಗೆ ತೆರಳಿದರು. ಆ ಊರಲ್ಲಿ ಕ್ರಿಸ್ತಮಸ
ಹಬ್ಬವನ್ನು ಮಾಡಿಕೊಂಡು ೧೯೧೬ನೇ ಜನವರಿ ೧೯ನೇ
ತಾರೀಖಿನ ದಿವಸ 'ಸ್ವಾರ ಆಫ್ ಇಂಡಿಯಾ' ಎಂಬ ಪದ
ವಿಯನ್ನು ಧರಿಸಿದ ಸಮಾರಂಭವನ್ನು ನೆರವೇರಿಸಿ ಕಾಶಿ,
ಲಖನ್ಹೌ, ದಿಲ್ಲಿ, ಕಾನಪುರ ಮುಂತಾದ ಪಟ್ಟಣಗಳನ್ನು ನೋ
ಡಿಕೊಂಡು ಆಗ್ರಾನಗರಿಗೆ ತಲಪಿದರು. ಅಲ್ಲಿ ಮೊಗಲ ಬಾ
ದಶಹನಾದ ಶಹಜಹಾನನು ಕಟ್ಟಿಸಿದ್ದ ತಾಜಮಾಹಾಲಿನ
ಅತ್ಯಂತ ಸೌಂದರ್ಯವನ್ನು ನೋಡಿ ಬೆರಗಾದರು. ಈ
ಊರಲ್ಲಿರುವಾಗ ಆನೆಯ ಮೇಲೆ ಕುಳಿತು, ತೆರಾಯಿ ಅಡವಿ
ಯಲ್ಲಿ ಬೇಟೆಗೆ ಹೋಗಿರಲು, ಒಂದು ಹೆಬ್ಬುಲಿಯು ಮೈ
ಮೇಲೆ ಏರಿಬಂತು. ರಾಜಪುತ್ರರು ಎದೆಗುಂದದೆ ಕೂಡಲೆ
ಅದನ್ನು ಗುಂಡಿನಿಂದ ಹೊಡೆದುಕೊಂದರು. ಇದು ಅವರ
ಶೌರ್ಯವನ್ನು ವ್ಯಕ್ತಗೊಳಿಸುವ ಉದಾಹರಣೆಯು. ಮುಂ
ದೆ ಜಯಪುರದ ಮೇಲಿಂದ ಹಾಯ್ದು ಬರುವಾಗ ಮಾಂಡಲಿ
ಕ ರಾಜರು ಅಲ್ಲಲ್ಲಿ ಮಾಡಿದ ಆದರಾತಿಥ್ಯವನ್ನು ಸ್ವೀಕರಿಸು
ತ್ತ ಅವರ ದರ್ಶನವನ್ನು ತೆಗೆದುಕೊಳ್ಳುತ್ತ ಸುರಕ್ಷಿತವಾಗಿ
ಮುಂಬೈನಗರಕ್ಕೆ ಬಂದು ಮುಟ್ಟಿದರು. ಮುಂದೆ ಮಾರ್ಚ್

ತಿಂಗಳಿನ ೧೩ನೇ ತಾರೀಖಿನ ದಿವಸ ಇಂಗ್ಲಂಡಕ್ಕೆ ತೆರಳಿದರು.

ಉದ್ಯೋಗಶೀಲತೆ:—ಒಪ್ಪೊತ್ತಿನ ಗ್ರಾಸವು ಸಂಗ್ರಹವಿದ್ದರೆ, ಉದ್ಯೋಗಕ್ಕೆ ಹಪಹಪಿಸದ ಮಾನವರು ಬಹು ಮಂದಿ. ರಾಜಪುತ್ರರ ಮಾತಂತೂ ಹೇಳಲಿಕ್ಕೇ ಬೇಡ; ಆದರೆ ಇವರು ಅತಿ ವಿಸ್ತಾರವಾದ ಭೂಪ್ರದೇಶದ ಸಾರ್ವಭೌಮರ ಪುಕ್ಕಳು, ಮೇಲಾಗಿ ಯುವರಾಜರು. ಇಂತಿದ್ದರೂ ಇವರು ಆಲಸ್ಯವಲ್ಲಿ ಎಂದೂ ವೇಳೆ ಕಳೆಯಲಿಲ್ಲ; ಬಹುತರವಾಗಿ ಯಾವತ್ತೂ ಭೂಮಂಡಲದಲ್ಲಿ ಸಂಚರಿಸಿದ್ದಾರೆ; ಫ್ರೆಂಚ, ಜರ್ಮನ್, ರಸಿಯನ್, ಇಟಾಲಿಯನ್ ಈ ನಾಲ್ಕು ಭಾಷೆಗಳಲ್ಲಿ ನಿಪುಣರಿರುತ್ತಾರೆ. ಅನೇಕ ಭೌತಿಕ ಸುಧಾರಣಾ ಸಂಗತಿಗಳಿಗೆ ಪ್ರತ್ಯಕ್ಷ ಪ್ರತ್ಯಕ್ಷವೆ ರೀತಿಯಿಂದ ನೆರವು ಗೊಟ್ಟಿದ್ದಾರೆ; ದಿನವೊಂದಕ್ಕೆ ಬರುವ ಸಾವಿರ ಪತ್ರಗಳ ಉತ್ತರಗಳನ್ನು ತಪ್ಪದೆ ಬರೆಯುತ್ತಾರೆ. ಬೇಟೆಯಲ್ಲಿ ಕುಶಲರಿದ್ದಾರೆ. ಸಾರಾಂಶ ಇವರು ತಮ್ಮ ವೇಳೆಯನ್ನೂ, ಶಕ್ತಿಯನ್ನೂ, ಧನವನ್ನೂ ತಕ್ಕ ಕೆಲಸಗಳಲ್ಲಿ ತಕ್ಕಂತೆ ಉಪಯೋಗಿಸುತ್ತಾರೆಂದು ನಿರಾತಂಕವಾಗಿ ಹೇಳಬಹುದು.

ಸನ್ನ ೧೮೮೮ ರಲ್ಲಿ ಯುವರಾಜರು ತಮ್ಮ ೪೦ನೇ ವರ್ಷದ ಶಾಂತಿಯನ್ನು ಮಾಡಿಕೊಂಡರು. ಇವರು ಸ್ಥಾಪನೆ ಮಾಡಿದ 'ಇಂಪೀರಿಯಲ್ ಇನ್‌ಸ್ಟಿಸ್ಟ್ಯೂಟ್' ಎಂಬ ಸಂಸ್ಥೆಯ ಪ್ರವೇಶ ಸಮಾರಂಭವು ೧೮೯೩ನೇ ಇಸವಿಯಲ್ಲಿ ಮಹಾರಾಣಿಯವರಿಂದ ನೆರವೇರಿತು ಅದೇ ವರ್ಷ ಸೆಂಟ ಜೇಮ್ಸ್ ಎಂಬ ದೇವಾಲಯದಲ್ಲಿ ಇವರ ಎರಡನೇ ಮಗನಾದ ಡ್ಯೂಕ ಆಫ್ ಯಾರ್ಕರ ವಿವಾಹ ಸಮಾರಂಭವು ಸಾಂಗವಾಯಿತು. ೧೮೯೭ರಲ್ಲಿ ವಿಕ್ಟೋರಿಯಾ ಮಹಾರಾಣಿಯವರ 'ಡಾಯಮಂಡ ಜುಬಿಲಿ' ಎಂಬ ಮಹಾ ಸಮಾರಂಭದಲ್ಲಿ ಇವರು ಪ್ರಧಾನ ಪ್ರವರ್ತಕರಾಗಿದ್ದರು. ೧೯೦೦ರಲ್ಲಿ ಇವರು ದೇನ್ಮಾರ್ಕಕ್ಕೆ ಹೋಗುವಾಗ ಸಿಪಿಡೋ ಎಂಬ ಮತಿಗೇಡಿ ಹುಡುಗನು ಗಾಡಿಯೊಳಗೆ ಕೂತ ಯುವರಾಜರ ಮೇಲೆ ಗುಂಡು ಹಾರಿಸಿದನು. ಈ ಕೃತ್ಯದಿಂದ ಗುಂ

ಡು ಬಡೆಯಲಿಲ್ಲ; ಮುರುವರ್ಷ ೧೯೦೧ ನೇ ಜನವರಿ ೨೨ ನೇ ತಾರೀಖಿನ ದಿವಸ ಯುವರಾಜರ ಜನನಿಯು, ಕಿಂಬಹುನಾ ಬ್ರಿಟಿಶ ಸಾಮ್ರಾಜ್ಯದ ಜನನಿಯು, ಆದ ವಿಕ್ಟೋರಿಯಾ ಮಹಾರಾಣಿಯವರು ಪರಲೋಕವನ್ನು ಐದಿದರು; ಅಂದಿನಿಂದ ಇವರು ಬಾಧ್ಯತೆಯಿಂದಲೂ, ಪ್ರಜಾಸಮ್ಮತಿಯಿಂದಲೂ, ಬ್ರಿತಿಶ ಸಾಮ್ರಾಜ್ಯಕ್ಕೆ ಸಾರ್ವಭೌಮರಾಗಿದ್ದಾರೆ. ಕಿರೀಟಧಾರಣ ಮಹೋತ್ಸವವು ೧೯೦೨ ನೇ ಇಸವಿಯ ಜೂನ ೨೬ ನೇ ತಾರೀಖಿನ ದಿವಸ ನಡೆಯುತಕ್ಕದ್ದಿತ್ತು; ಮಹಾರಾಜರವರ ಪ್ರಕೃತಿಯ ಅಸ್ವಸ್ಥತೆಯ ಮೂಲಕ ಅದು ಅಗಷ್ಟ ೯ ನೇ ತಾರೀಖಿನ ದಿವಸ ಸಾಂಗವಾಯಿತು. ಹಿಂದುಸ್ಥಾನದ ಸಾರ್ವಭೌಮತ್ವವನ್ನು ವಹಿಸಿದ ದರಬಾರವು ಸನ್ನ ೧೯೦೩ ನೇ ಜನವರಿ ೧ ನೇ ತಾರೀಖಿನಲ್ಲಿ ನಡೆದದ್ದು ಲೋಕಪ್ರಸಿದ್ಧವಾಗಿದೆ.

ಸಾರ್ವಭೌಮರಾದ ಈ ಏಳನೇ ಎಡ್ವರ್ಡ ಭೂಪಾಲರು ರಾಜ್ಯಸೂತ್ರವನ್ನು ಕೈಕೊಳ್ಳುವಾಗ ನುಡಿದಂತೆ ತಮ್ಮ ಮಾತೋಶ್ರೀಗಳ ರಾಜ್ಯಕಾರಭಾರದ ಧೋರಣವನ್ನು ಅನುಸರಿಸಿ ಪ್ರಜಾಕ್ಷೇಮವನ್ನು ಬೆಳಿಸಿ ಬಹು ದಿವಸ ಬಾಳಲೆಂದು ನಾವು ಪರಮೇಶ್ವರನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ.

ಜಯಜಯತು ಸಾರ್ವಭೌಮ.

ಮುಲಿಕ್ ಮೊಅಝುಮ್ ಕೈಸರೇ ಹಿಂದರವರ ಜಾಹೀರುನಾಮೆ.

ಮುಲಿಕ್ ಮೊಅಝುಮ್‌ರವರ ರಾಜ್ಯಾರೋಹಣ ಸಂಬಂಧವಾದ ಮಹೋತ್ಸವವನ್ನು ಮುಲಿಕ್ ಮೊಅಝುಮ್‌ರವರ ಹಿಂದೀ ಸಾಮ್ರಾಜ್ಯದಲ್ಲಿ ನಡೆಯಿಸುವದಕ್ಕಾಗಿ ಒಂದು ದಿನವನ್ನು ನಿರ್ಣಯಿಸುವ ಬಗ್ಗೆ.

ಎಡ್ವರ್ಡ್, ಆರ್. ಆಯ್. ೯.

ಸ್ಮರಣೀಯರಾದ ನಮ್ಮ ಸಾರ್ವಭೌಮ ವಿಕ್ಟೋರಿಯಾ ಮಹಾರಾಣಿಯವರು ಸನ್ ಸಾವಿರದ ಒಂಬಯ್ನೂರ ಒಂದನೆಯ ಇಸವಿಯ ಜನವರಿ ತಿಂಗಳ ಇಪ್ಪತ್ತೆರಡನೆಯ ತಾರೀಖಿನ ದಿನ ಸ್ವರ್ಗಸ್ಥರಾದ ಕಾರಣ, ನಾವು, "ಏಳನೆಯ ಎಡ್ವರ್ಡ್, ಈಶ್ವರಕೃಪೆಯಿಂದ ಗ್ರೇಟ್‌ಬ್ರಿಟನ್ ಮತ್ತು ಆಯರ್ಲಾಂಡ್ ಎಂಬ ಸಂಯುಕ್ತ ರಾಜ್ಯದ ಮಲಿಕ್ ಮೊಅಜ್ಜಮ್, ಧರ್ಮಸಂರಕ್ಷಕ, ಮತ್ತು ಕೈಸರೇ ಹಿಂದ್" ಎಂಬ ಹೆಸರು ಮತ್ತು ಬಿರುದನ್ನು ಧರಿಸಿ ಸಿಂಹಾಸನಾರೂಢರಾದೆವು;

ಮತ್ತು ನಮ್ಮ ರಾಜ್ಯಭಾರದ ಮೊದಲನೆಯ ವರ್ಷದಲ್ಲಿ ಮತ್ತು ಸನ್ ಸಾವಿರದ ಒಂಬಯ್ನೂರೊಂದನೆಯ ಇಸವಿಯ ಜೂನ್ ತಿಂಗಳ ಇಪ್ಪತ್ತಾರನೆಯ ಮತ್ತು ಡಿಸೆಂಬರ್ ತಿಂಗಳ ಹತ್ತನೆಯ ತಾರೀಖುಗಳಲ್ಲಿ ಕೊಟ್ಟ ನಮ್ಮ ಬಾದಶಹೀ ಜಾಹೀರುನಾಮೆಗಳ ಮೂಲಕವಾಗಿ, ನಾವು, ಸರ್ವಶಕ್ತನಾದ ಪರಮಾತ್ಮನ ಅನುಗ್ರಹ ಮತ್ತು ಕೃಪೆಯಿಂದ, ಸನ್ ಸಾವಿರದ ಒಂಬಯ್ನೂರ ಎರಡನೆಯ ಇಸವಿಯ ಜೂನ್ ತಿಂಗಳ ಇಪ್ಪತ್ತಾರನೆಯ ದಿನ ನಮ್ಮ ರಾಜ್ಯಾರೋಹಣ ಸಮಾರಂಭವನ್ನು ನಡೆಯಿಸಬೇಕೆಂಬ ನಮ್ಮ ಇರಾದೆಯನ್ನು ಪ್ರಕಟಗೊಳಿಸಿದೆವು;

ಮತ್ತು ಸರ್ವಶಕ್ತನಾದ] ಪರಮಾತ್ಮನ ಅನುಗ್ರಹ ಮತ್ತು ಕೃಪೆಯಿಂದ ಮೇಲೆ ಹೇಳಿದ ಮಹೋತ್ಸವವನ್ನು ಕಳೆದ ಆಗಸ್ಟ್ ಒಂಭತ್ತನೆಯ ಶನಿವಾರದ ದಿನ ನಡೆಯಿಸಲು ನಾವು ಸಮರ್ಥರಾದೆವು;

ಮತ್ತು ಮೇಲೆ ಹೇಳಿದ ಮಹೋತ್ಸವವನ್ನು ನಡೆಯಿಸಿದ ಸಂಗತಿಯನ್ನು ನಮ್ಮ ಹಿಂದೀ ಸಾಮ್ರಾಜ್ಯದೊಳಗಣ ನಮ್ಮ ಎಲ್ಲಾ ಪ್ರಿಯ ಪ್ರಜೆಗಳಿಗೆ ಪ್ರಸಿದ್ಧವಾಗಿ ಜಾಹೀರು ಮಾಡಬೇಕೆಂಬುದು, ಮತ್ತು ನಮ್ಮ ಗವರ್ನರ್, ಲೆಫ್ಟನೆಂಟ್‌ಗವರ್ನರ್ ಮತ್ತು ಎಡ್‌ಮಿನಿಸ್ಟ್ರೇಶನ್ನಿನ ಮುಖ್ಯಾಧಿಕಾರಿಗಳಿಗೂ, ನಮ್ಮ ಸಂರಕ್ಷಣೆಯ ಕೆಳಗಣ ದೇಶೀಯ ಸಂಸ್ಥಾನಗಳ ರಾಜರು, ಸಂಸ್ಥಾನಿಕರು, ಸರದಾರರುಗಳಿ

ಗೊ, ನಮ್ಮ ಹಿಂದೀ ಸಾಮ್ರಾಜ್ಯದ ಎಲ್ಲಾ ಪ್ರಾಂತಗಳ ಪ್ರತಿನಿಧಿಗಳಿಗೂ ಈ ಮಹೋತ್ಸವದಲ್ಲಿ ಭಾಗಿಗಳಾಗಲಿಕ್ಕೆ ಸಂಧಿ ಕೊಡಬೇಕೆಂಬುದು ನಮ್ಮ ಇಚ್ಛೆಯೂ ಅಪೇಕ್ಷೆಯೂ ಆಗಿದೆ;

ಆದ ಕಾರಣ ಈಗ ನಾವು ಈ ನಮ್ಮ ಬಾದಶಾಹೀ ಜಾಹೀರನಾಮೆಯು ಮೂಲಕವಾಗಿ ಸದರಿ ಇಚ್ಛೆಯನ್ನೂ ಅಪೇಕ್ಷೆಯನ್ನೂ ಕುರಿತು ಜಾಹೀರು ಮಾಡುತ್ತೇವೆ. ಮತ್ತು ನಮ್ಮ ನೇಕ, ವಿಶ್ವಾಸದ ಮತ್ತು ಪ್ರೀತಿಪಾತ್ರ ಕೌನ್ಸಿಲರರಾದ ಜಾರ್ಜ್ ನಥಾನಿಯಲ್ ಲಾರ್ಡ್ ಕರ್ಜನ್ ಆಫ್ ಕೆಡಲ್‌ಸ್ಟನ್, ನಮ್ಮ ಹಿಂದುಸ್ಥಾನದ ವೈಸರಾಯ್ ಮತ್ತು ಗವರ್ನರ್ ಜನರಲ್‌ರವರಿಗೆ, ಸನ್ ಸಾವಿರದ ಒಂಬಯ್ನೂರ ಮೂರನೆಯ ಇಸವಿಯ ಜನವರಿ ತಿಂಗಳ ಮೊದಲನೆಯ ತಾರೀಖಿನಲ್ಲಿ, ಮೇಲೆ ಹೇಳಿದ ನಮ್ಮ ರಾಜ್ಯಾರೋಹಣ ಸಮಾರಂಭವು ಪೂರ್ಣವಾದದ್ದನ್ನು ಜಾಹೀರು ಮಾಡುವ ಬಗ್ಗೆ ದಿಲ್ಲಿಯಲ್ಲಿ ಬಂದು ಬಾದಶಾಹೀ ದರಬಾರನ್ನು ನೆರೆಯಿಸಬೇಕೆಂದು ಮತ್ತು ಆ ದರ್ಬಾರಿನಲ್ಲಿ ಈ ಜಾಹೀರು ನಾಮೆಯನ್ನು, ಸಂಬಂಧವಿರುವ ಎಲ್ಲರ ತಿಳುವಳಿಕೆಯ ಸಲುವಾಗಿ, ಓದಬೇಕೆಂದು ನಾವು ಅಪ್ಪಣೆ ಮಾಡುತ್ತೇವೆ.

ನಮ್ಮ ರಾಜ್ಯಭಾರದ ಎರಡನೆಯ ವರ್ಷದಲ್ಲಿ ಸನ್ ೧೯೦೨ನೇ ಇಸವಿ ೯ನೇ ಅಕ್ಟೋಬರಿನ ದಿನ ನಮ್ಮ ಸೆಂಟ್‌ಜೇಮ್ಸ್ ಕೋರ್ಟಿನಲ್ಲಿ ಕೊಡಲ್ಪಟ್ಟಿತು.

ಈಶ್ವರನು ಮಲಿಕ್ ಮೊಅಜಮ್‌ರವರನ್ನು ಸಂರಕ್ಷಿಸಲಿ.

M. A. BAIG,
Oriental Translator to Government.

ದಿಲ್ಲೀ ದರ್ಬಾರವು.

ಭರತಖಂಡದ ಪ್ರಸ್ತುತದ ಗವರ್ನರ ಜನರಲ್ಲರೂ ಚಕ್ರವರ್ತಿಗಳ ಪ್ರತಿನಿಧಿಗಳೂ ಆದ ಲಾರ್ಡ ಕರ್ಜನ್ ಫೊಬೆಗಳು ಸಾರ್ವಭೌಮರ ಅಪ್ಪಣೆಯಿಂದ ದಿಲ್ಲೀ ಪಟ್ಟಣದಲ್ಲಿ

ಹಿಂದುಸ್ಥಾನದ ಮಾಂಡಲಿಕ ರಾಜಮಂಡಲದಿಂದಲೂ, ಚಿಕ್ಕ ದೊಡ್ಡ ಸರಕಾರದ ಅಧಿಕಾರಿಗಳಿಂದಲೂ ಇತರ ಸಭ್ಯ ಗೃಹಸ್ಥರಿಂದಲೂ ಒಡಗೂಡಿದ ಮಹಾ ರಾಜಕೀಯ ಸಭೆಯನ್ನು ನೆರಿಸಿ, ಬಾದಶಹರು ಸಾರ್ವಭೌಮಾಧಿಕಾರದ ಸೂತ್ರವನ್ನು ಕೈಕೊಂಡರೆಂಬ ಬಹು ಗೌಗವದ ಸಂಗತಿಯನ್ನು ಇದೇ ಜನವರಿಯ ಮೊದಲನೇ ತಾರೀಖಿನ ದಿವಸ ಪ್ರಸಿದ್ಧ ಪಡಿಸಿದರು. ಕುರುಕುಲಚೂಡಾಮಣಿಯಾದ ಯುಧಿಷ್ಠಿರನೇ ಮೊದಲಾದ ಭಾರತೀಯ ಚಕ್ರವರ್ತಿಗಳು ಬಹು ಕಾಲದಿಂದ ಹಿಂದುಸ್ಥಾನದ ಸಾರ್ವಭೌಮಾಧಿಕಾರವನ್ನು ಕೈಕೊಂಡು ಆಳಿದ ಹಸ್ತಿನಾಪುರವು, ಬಹಳ ಸಾರಿ ಹಾಳಾಗುತ್ತಾ ತುಂಬುತ್ತಾ ಕಡೆಯಲ್ಲಿ ದಿಲ್ಲೀ ಪಟ್ಟಣವಾಗಿರುವದು. ಬ್ರಿತಿಶರು ಬಂದಾಗ ಆಳುತ್ತಿದ್ದ ಮೊಗಲ ಬಾದಶಹರು ಸಹ ಇದೇ ಪಟ್ಟಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಬ್ರಿತಿಶರು ಈ ಮೊಗಲ ಬಾದಶಹರಿಂದಲೇ ಪ್ರತ್ಯಕ್ಷವಾಗಿ ಅಥವಾ ಪರ್ಯಾಯದಿಂದ ಸಾರ್ವಭೌಮತ್ವವನ್ನು ಸಂಪಾದಿಸಿದರು. ಇವೆರಡು ಕಾರಣಗಳಿಂದ ದಿಲ್ಲೀ ಪಟ್ಟಣವೇ ಹಿಂದುಸ್ಥಾನದ ಪ್ರಸ್ತುತದ ಸಾರ್ವಭೌಮರ ರಾಜಧಾನಿಯೆನಿಸುವದು. ಆದ್ದರಿಂದ ದರಬಾರವನ್ನು ಇದೇ ನಗರದಲ್ಲಿ ಸರ್ ೧೪೭೭ನೇ ಇಸವಿಯಲ್ಲಿಯೂ ಈ ಸಾರೆಯೂ ನೆರಿಸಿದರು.

ಈ ಪಟ್ಟಣವು ಯಮುನಾ ನದಿಯ ಪೂರ್ವದಂಡೆಯಲ್ಲಿ ಇರುವದು. ಕ್ರಿಸ್ತೀಶಕದ ಮುಂಚೆ ೧೦೦ ವರ್ಷಗಳ ಪೂರ್ವದಲ್ಲಿ ಈ ಪಟ್ಟಣದ ಹೆಸರು ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಆ ಕಾಲದ ಇತಿಹಾಸವು « ಧಾವ » ಕುಲದ ರಾಜನ ಲೋಹದ ವಿಜಯಸ್ತಂಭದ* ಹೊರ್ತು ಹೆಚ್ಚಿಗೆ ಏನೂ ತಿಳಿಯುವದಿಲ್ಲ; ಮುಂದೆ ಎಂಟನೇ ಹನ್ನೊಂದನೇ ಶತಕಗಳಲ್ಲಿ ತುವಾರ ಚವ್ಹಾಣ ಕುಲದ ರಜಪೂತರು ಇಲ್ಲಿ ಆಳಿದ್ದು ಇತಿಹಾಸಪ್ರಸಿದ್ಧವದೆ. ಮುಂದೆ ಮುಸಲ್ಮಾನರ ಬೇರೆ ಬೇರೆ ಕುಲಗಳೂ, ಮೊಗಲ ಚಕ್ರವರ್ತಿಗಳೂ ಕೆಲಕಾಲ

* ಈ ಹೊಯ್ದ ಕಬ್ಬಿಣದ ಕಂಬವು ೬೦ ಫೂಟು ಉದ್ದವದೆ.

ಆಳಿದ ಬಳಿಕ ಈ ನಗರವು ಬ್ರಿತಿಶ ಜನರ ಕೈಸೇರಿತು. ಈ ಮೊಗಲರ ಆಳಿಕೆಯಲ್ಲಿ ಬೇರೆ ಬೇರೆ ಚಕ್ರವರ್ತಿಗಳು ಕಟ್ಟಿಸಿದ ಪಟ್ಟಣದ ಭಾಗಗಳೂ, ಇಮಾರತುಗಳೂ, ಬಹು ತರವಾಗಿ ಹಾಳಾಗಿರುತ್ತವೆ. ಈ ಪಟ್ಟಣದ ಸುತ್ತುಮುತ್ತು ಬಹು ದೂರದವರೆಗೆ ಇರುವ ನೆಲದಲ್ಲೆಯೂ ಇಮಾರತಿಪು ಕುರುಹುಗಳು ಇನ್ನೂ ದೃಷ್ಟಿಗೋಚರವಾಗುತ್ತವೆ. ಸಾಂ ಪ್ರತಕ್ಕೆ ಈ ಊರಲ್ಲಿ ಎರಡು ಲಕ್ಷ ಜನರ ವಸ್ತಿಯುಂಟು. ಮುತ್ತು ರತ್ನಗಳ ವ್ಯಾಪಾರವು ಬಹಳ ನಡೆಯುತ್ತದೆ. ಮ್ಯುನಿಸಿಪಾಲಟಿಯ ಉತ್ಪನ್ನವು ಸುಮಾರು ನಾಲ್ಕು ಲಕ್ಷ ಉಂಟು. ಹವೆಯು ಹೆಚ್ಚು ಸೀತವಾದದ್ದು.

ದರಬಾರದ ಮಂಟಪವನ್ನು ನಗರದ ಉತ್ತರದಲ್ಲಿ ಇರುವ ವಿಸ್ತೀರ್ಣವಾದ ಬೈಲಲ್ಲಿ ಹಾಕಿದ್ದರು. ಮಂಟಪದ ಆಕಾರವು ಕುದುರೆಯ ನಾಲಿನಂತೆ ಇತ್ತು. ನಾಲನ್ನು ನೆಲದ ಮೇಲೆ ಇಟ್ಟರೆ ಎರಡೂ ತುದಿಗಳ ನಡುವೆ ಉಳಿಯುವ ಭಾಗವೇ ಮಹಾದ್ವಾರವೆಂದೂ ನಡುವಿನ ಬೈಲು ಮಧ್ಯರಂಗವೆಂದೂ ಮಹಾದ್ವಾರದ ಎದುರಿರುವ ನಾಲಿನ ಪ್ರದೇಶವು ಪ್ರತಿನಿಧಿಗಳು ಕೂಡುವ ಜಗುಲಿಯು ಸ್ಥಳವೆಂದೂ ಎಡಬಲದ ನಾಲಿನ ಭಾಗಗಳು ದರಬಾರದ ಜನರು ಕೂಡುವ ಸ್ಥಳವೆಂದೂ ವಾಚಕರು ತಿಳಿದುಕೊಳ್ಳಬೇಕು. ಪ್ರಸಂಗಕ್ಕೆ ತಕ್ಕಂತೆ ಪಂದರವು ಸಿಂಗರಿಸಲ್ಪಟ್ಟಿತ್ತು. ಜಗುಲಿಯ ಮೇಲೆ ಪ್ರತಿನಿಧಿಗಳಿಗಾಗಿ ಒಂದು, ರಾಜಸಹೋದರಿಗಾಗಿ ಮತ್ತೊಂದು ಹೀಗೆ ಎರಡು ಗದ್ದುಗೆಗಳನ್ನು ಮಂಡಿಸಿದ್ದರು. ಇವೆರಡು ಗದ್ದುಗೆಗಳು ಬೆಳ್ಳಿ ಒಂಗಾರಗಳಿಂದ ಒಳಿತಾಗಿ ಅಲಂಕರಿಸಲ್ಪಟ್ಟಿದ್ದವು. ಇವುಗಳ ಹಿಂದೆ ಇವರಿವರ ಪತ್ನಿಯರಿಗಾಗಿ ಬೆಳ್ಳಿಯ ಕುರ್ಚಿಗಳು ಇಡಲ್ಪಟ್ಟಿದ್ದವು. ನೆಲಕ್ಕೆ ಚೆಲೆಯುಳ್ಳ ಅರಿವೆಯನ್ನು ಹಾಸಿದ್ದರು. ಉಳಿದ ಜನರು ಕೂಡುವದಕ್ಕೂ ಅವರವರ ಯೋಗ್ಯತೆಯ ಮೇರೆಗೆ ಗ್ಯಾಲರಿಯಂತೆ ಆಸನಗಳು ಗೊತ್ತು ಮಾಡಲ್ಪಟ್ಟಿದ್ದವು. ಮಧ್ಯರಂಗದಲ್ಲಿ ಸುಮಾರು ಎರಡು ಸಾವಿರ ಬ್ಯಾಂಡ ಬಾರಿ

ಸುವ ಜನರು ನಿಂತಿದ್ದರು. ಅಲ್ಲಿಯೇ ಸಾರ್ವಭೌಮತೆ ಮುದ್ರಾಪತಾಕೆಯು ನಿಲ್ಲಿಸಲ್ಪಟ್ಟಿತ್ತು. ಈ ನಾಲಿನಾಕಾರದ ಕೂಡುವ ಸ್ಥಳದಲ್ಲಿ ೭ ಭಾಗಗಳನ್ನು ಮಾಡಿ ಇಂಥಿಂಥ ಭಾಗಗಳಲ್ಲಿ ಇಂಥಇಂಥವರೇ ಕೂಡತಕ್ಕದ್ದೆಂದು ಮೊದಲೇ ನಿರ್ಣಯವಾಗಿತ್ತು; ಮಂಟಪದ ಮೇಲೆ ನೀಲವರ್ಣದ ಗುಮ್ಮಟವನ್ನು ಮಾಡಿದ್ದರು. ಹೊರಬದಿಯಲ್ಲಿ ಕಾಲಾಳೂ, ರಾಹುತರೂ, ತೋಪುಖಾನೆಯವರೂ, ಕೂಡಿ ಸುಮಾರು ನಾಲ್ಕತ್ತು ಸಾವಿರ ಪಂಡಾಳುಗಳು ನಿಂತುಕೊಂಡಿದ್ದರು.

ದಶಂಬರ ತಿಂಗಳ ೭ನೇ ತಾರೀಖಿನ ದಿವಸ ಪ್ರತಿನಿಧಿಗಳೂ ರಾಜಸಹೋದರರೂ ದಿಲ್ಲೀ ಪಟ್ಟಣಕ್ಕೆ ಬಂದರು. ಇವರ ಸ್ವಾಗತ ಮಾಡುವದಕ್ಕಾಗಿ ಮೊದಲೇ ಬಂದು ಉಳುಕೊಂಡಿದ್ದ ಸಂಸ್ಥಾನಿಕರೂ ಇತರ ದೊಡ್ಡ ದೊಡ್ಡ ಅಧಿಕಾರಿಗಳೂ ಸ್ಟೇಶನಕ್ಕೆ ಬಂದಿದ್ದರು. ಅಲ್ಲಿಂದ ಪೂರ್ವ ಸಂಕೇತದಂತೆ ಸಂಸ್ಥಾನಿಕರೂ, ಪ್ರತಿನಿಧಿಗಳೂ, ರಾಜಸಹೋದರರೆಲ್ಲರೂ ಸಿಂಗರಿಸಿದ ಗಜಗಳನ್ನೇರೋಹಿಸಿಕೊಂಡು ದಿಲ್ಲೀ ಪಟ್ಟಣದ ರಾಜವೀಥಿಯಲ್ಲಿ ಮೆರೆಯುತ್ತ ತಮ್ಮ ತಮ್ಮ ವಸತಿಸ್ಥಳಕ್ಕೆ ಹೋಗಿ ಉಳುಕೊಂಡರು. ಈ ವಸತಿಸ್ಥಳಗಳು ಸುಮಾರು ನಾಲ್ವತ್ತೈದು ಚಚ್ಚೌಕು ಮೈಲು ಪ್ರದೇಶವನ್ನು ವ್ಯಾಪಿಸಿದ್ದವು.

ಮರುದಿವಸ ಅಂದರೆ ತಾರೀಖು ೫ನೇ ದಶಂಬರ ದಿನವು ಪ್ರದರ್ಶನದ ಪ್ರವೇಶ ಸಮಾರಂಭಕಾರ್ಯವು ಪ್ರತಿನಿಧಿಗಳಿಂದ ನೆರವೇರಿಸಲ್ಪಟ್ಟಿತು. ಈ ಪ್ರದರ್ಶನದಲ್ಲಿ ಇಟ್ಟ ಪದಾರ್ಥಗಳಲ್ಲಿ ಗಾಯಕವಾಡ ಮಹಾರಾಜರಿಂದ ಕಳುಹಿಸಲ್ಪಟ್ಟ ರತ್ನಖಚಿತವಾದ ರತ್ನಗಂಬಳಿಯೂ ಜಯಪ್ರದ ಮಹಾರಾಜರಿಂದ ಬಂದ ಶಾಲೂ, ತೊಂಬತ್ತು ಸಾವಿರ ರೂಪಾಯಿ ಬೆಲೆ ಬಾಳುವ ಕಾಶ್ಮೀರ ದೇಶದ ಶಾಲುಗಳೂ ಫರ್ದೂಸೀಕವಿಯ ಹಸ್ತಲಿಖಿತ ಕಾವ್ಯವೂ ದರಭಂಗದ ಮಹಾರಾಜರಿಂದ ಬಂದ ಹುಲಿಮುಖದ ಹಾಸಿಗೆಯೂ ನೋ

ಪತಕ್ಕಂಥವು. ಈ ಸಮಾರಂಭ ಸಮಯದಲ್ಲಿ ಪ್ರತಿನಿಧಿಗಳು—ಹಿಂದುಸ್ಥಾನದ ಜಾಣತನವು ನಷ್ಟವಾಗಿಲ್ಲೆಂಬದನು ಸಿದ್ಧ ಮಾಡಲಿಕ್ಕೆ ಈ ಪ್ರದರ್ಶನವೇ ಸಾಕ್ಷಿಯಾಗಿರುತ್ತದೆ. ಸಂಸ್ಥಾನಿಕರು ಈ ಬಗೆಯ ಕಲೆಗಳಿಗೆ ಉತ್ತೇಜನ ಕೊಟ್ಟು ತಮ್ಮ ನಾಡಲ್ಲಿ ಕಲಾಕೌಶಲ್ಯವನ್ನು ಬೆಳಿಸಬೇಕು ಎಂಬ ಆಶಯದ ಭಾಷಣವನ್ನು ಮಾಡಿದರು.

ಮುಖ್ಯ ದಿವಸವಾದ ಜನವರೀ ಮೊದಲನೇ ತಾರೀಖಿನ ದಿವಸ ಸುಮಾರು ಹತ್ತುವರಿ ಘಂಟೆಯೊಳಗೇ ಮಾವಳ್ಳಿ ಚಿಕ್ಕ ದೊಡ್ಡ ಜನರು ಸಭಾ ಗೃಹವನ್ನು ಅಲಂಕರಿಸಿದರು. ದರ್ಬಾರಕ್ಕೆ ಬಂದ ಸಂಸ್ಥಾನಿಕರು ಉತ್ತಮವಾದ ವಸ್ತ್ರ ಭರಣಗಳಿಂದ ಭೂಷಿತರಾಗಿದ್ದರು. ಬಲೂಚಿ, ಪಠಾಣ, ಒಪ್ಪಿಗಿ, ಸಯಾಮೀ, ಶೀಕ, ರಜಪೂತ, ಮುರಕಾತಾ, ಬ್ರಾಹ್ಮಣ ಮೊದಲಾದ ಭಿನ್ನ ಭಿನ್ನ ಜಾತಿಯ ಸಂಸ್ಥಾನಿಕರು ಧರಿಸಿದ ತರತರದ ವೇಷಾಕುಗಳನ್ನೂ ಆಭರಣಗಳನ್ನೂ ಶಸ್ತ್ರಗಳನ್ನೂ ವರ್ಣಿಸುವದು ಅಸಾಧ್ಯ. ಕೆಲವರ ಕಿರೀಟಗಳು ರತ್ನಖಚಿತವಾಗಿದ್ದವು; ಹಲವರ ಕೊರಳಲ್ಲಿ ಮುತ್ತು ಮಾಣಿಕಗಳ ಸರಗಳು ಕಂಗೊಳಿಸುತ್ತಿದ್ದವು; ಕೆಲವು ವಸ್ತ್ರಗಳ ಹಿಡಿಕೆಗಳು ಬೆಳ್ಳಿ ಶೃಂಗಾರ ರತ್ನಗಳಿಂದ ಅಲಂಕರಿಸಲ್ಪಟ್ಟಿದ್ದವು. ಇವರಿಂದ ಈ ಭವ್ಯ ಸಿಂಹಾಸನವು ಪ್ರೇಕ್ಷಕನ ಮನಸ್ಸಲ್ಲಿ ಅನೇಕ ವಿಸ್ಮಯಗಳನ್ನು ಉಂಟುಮಾಡುತ್ತಿತ್ತು. ಸುಮಾರು ೧೧ ಬಡಿದ ಬಳಿಕ ಸನ್ ೧೮೫೩ನೇ ವರ್ಷದ ಬಿಂತಾಯುದಲ್ಲಿ ಬ್ರಿಟಿಶ ಸರಕಾರದ ಪಕ್ಷವನ್ನು ವಹಿಸಿ ಕಾಳಗವನ್ನು ಮಾಡಿದ ಸುಮಾರು ೬೦೦ ಜನ ಯೋಧರು ಸಭೆಯನ್ನು ಪ್ರವೇಶಿಸಿದರು. ನಂತರ ಸಾರ್ವಭೌಮ ಸರ್ಜೋದರರಾದ ಡ್ಯೂಕ ಆಫ್ ಕ್ಯಾನಾಟ ಧೊರೆಗಳು ಸಪತ್ನೀಕರಾಗಿ, ರಥದೊಳಗಿಂದ ಮಧ್ಯರಂಗದಲ್ಲಿ ಇಳಿದರು ಆಗ ಸರ್ವರು ಎದ್ದುನಿಂತು, ಇವರ ಜಯಜಯಕಾರ ಮಾಡಿದರು. ಇವರು ಗಾಡಿಯಿಂದ ಇಳಿದ ಬಳಿಕ ಸರ್ ಹ್ಯೂ ಬಾಚೆಸ್ ಎಂಬವರು ಕೈಗೊಟ್ಟು ಜಗುಲಿಯ ಮೇಲೆ ಹತ್ತಿಸಿ ಇವರಿಗಾಗಿ ಮಂಡಿಸಿದ ಸಿಂಹಾಸನದ ಮೇಲೆ ಕುಳ್ಳಿರಿಸಿದ

ಕ್ಕೆ. ತರುವಾಯ ರಾಜಕೀಯ ಸರ್ಕಾರದ ಪೋಷಾಕು
ಳಿಂದ ಒಪ್ಪುತ್ತಿರುವ ಪ್ರತಿನಿಧಿಗಳು ಎಡದಲ್ಲಿ ಸನ್ಮಾನಿತ
ರ್ನಲ್ಲನಾದ ಸರಪ್ರತಾಪಸಿಂಗನೆಂಬ ಈದರದ ಮಹಾರ
ಜರು, ಬಲದಲ್ಲಿ ಮೇಜರಗ್ರಿಮುಸ್ಟನ್‌ರೂ ಮುಂಭಾಗದ
ರಾಜಕುಮಾರ ವರ್ಗದ ಸೇನೆಯೂ ನಡೆಯುತ್ತಿರಲು, ವ
ಹಾವೈಭವದೊಂದಿಗೆ ಪತ್ನಿ ಸಹಿತರಾಗಿ ಸಭೆಯನ್ನು ಪ್ರವೆ
ಶಿಸ್ಯೆದರು. ಆ ಸಮಯದಲ್ಲಿ ಬ್ಯಾಂಡಿನಿಂದ ರಾಷ್ಟ್ರೀಯ
ಗೀತವನ್ನು ಹಾಡುತ್ತಿದ್ದರು. ಅದರಿಂದ ಎಲ್ಲರೂ ನಿಂತೇ ಇ
ದ್ದರು. ಪ್ರತಿನಿಧಿಗಳು ಅರ್ಧದಾರಿಯಲ್ಲಿ ಬರಲು, ಬಹ
ಮಾನದ ತೋಪುಗಳು ಪ್ರಾರಂಭವಾದವು. ಮೆಟ್ಟಿನ ಬಳಿಗೆ
ಬಂದ ಕೂಡಲೆ ಸರಹ್ಯೂಬಾರ್ನೆಸ್, ಸರವಾಲ್ಟರಲಾರೆನ್ಸ್
ಎಂಬವರು ಪ್ರತಿನಿಧಿಗಳಿಗೆ ಹಸ್ತಲಾಘವವನ್ನು ಕೊಟ್ಟು ಜ
ಗುಲಿಯ ಮೇಲೆ ಕರೆದೊಯ್ದರು. ಆಗ ಪ್ರತಿನಿಧಿಗಳು ನಿಂ
ತುಕೊಂಡಿದ್ದ ಬಾದಶಹ ಸಹೋದರರಿಗೆ ಮಣಿದು ಎಡಬಲ
ದಲ್ಲಿರುವ ಯಾವತ್ತು ಸಭಿಕರಿಗೂ ತುಸುಬಾಗಿ ಸಿಂಹಾಸನ
ವನ್ನು ಅಲಂಕರಿಸಿದರು. ರಾಜ ಸಹೋದರರು ಸಹ ಪ್ರತಿ
ಯಾಗಿ ಪ್ರತಿನಿಧಿಗಳಿಗೆ ಮಣಿದು ಸ್ವಸ್ಥಳವನ್ನು ಅಲಂಕರಿಸಿ
ದರು. ಉಭಯರ ಪತ್ನಿಗಳು ತಮ್ಮ ತಮ್ಮ ಆಸನಗಳ ಮೇ
ಲೆ ಕುಳಿತುಕೊಂಡರು. ಬಳಿಕ ಸರಹ್ಯೂಬಾರ್ನೆಸ್ ಎಂಬ
ವರು ಪ್ರತಿನಿಧಿಗಳ ಎಮುರಿನಲ್ಲಿ ಬಂದು ಸಭಾಕಾರ್ಯಕ್ಕೆ ಅ
ಪ್ಪಣೆ ಕೊಡಬೇಕೆಂದು ತಲೆ ಬಾಗಿಸಿ ವಿನಯದಿಂದ ಕೇಳಿ
ಕೊಂಡರು. ರಂಗಮಂಟಪದಲ್ಲಿ ಬೆಟ್ಟದಂಥಾ ಕರೆ ಕುದುರೆಗ
ಳ ಮೇಲೆ ಕುಳಿತ ಅನು ಮಂದಿ ನೇಟವರೂ ಅರುಮಂದಿ
ಮುರೋಪಿಯನ್‌ರೂ ಬೆಳ್ಳಿಯ ನಪೂರಿಗಳೊಂದಿಗೆ ನಿಂತಿದ್ದ
ರು ಇವರ ಮುಖ್ಯಸ್ಥನು ಮೇಜರ ಮೊಕ್ಸ್‌ವೇಲನು. ಮೇ
ಲೆ ಹೇಳಿದಂತೆ ಸಭೆಯ ಕಾರ್ಯಾರಂಭಕ್ಕೆ ಅನುಮತಿ ದೊರೆ
ತ ಕೂಡಲೆ ನಪೂರಿಯವರು ನಪೂರಿಯನ್ನು ಊದಿದರು.
ಕೂಡಲೆ ಬ್ಯಾಂಡಿನ ಘನಸ್ವನವು ಆಕಾಶವನ್ನು ತುಂಬಿತು.
ಬಳಿಕ ಮೇಜರ ಮ್ಯಾಕ್ಸ್‌ವೆಲ್ ಸಾಹೇಬರು ಬಾದಶಹರ
ಸಾಹೀರನಾಮೆಯನ್ನು ಉಚ್ಚಸ್ವರದಿಂದ ಓದಿದರು. ನಂತರ

ಮಧ್ಯ ಭಾಗದಲ್ಲಿ ಬಾದಶಹರವರ ಪತಾಕೆಯನ್ನು ನಿಲ್ಲಿಸಿದರು. ಮತ್ತೆ ಬ್ಯಾಂಡಿನಲ್ಲಿ ರಾಷ್ಟ್ರೀಯಗೀತವು ಹಾಡಲ್ಪಟ್ಟಿತು, ಸಾರ್ವಭೌಮರ ಬಹು ಮಾನಾರ್ಥವಾಗಿ ೧೦೧ ತೋಪುಗಳು ಹಾರಿಸಲ್ಪಟ್ಟವು. ದಂಡಾಳುಗಳೂ ತುಬಾಕಿಯನ್ನು ಹಾರಿಸಿದರು. ಎಲ್ಲ ಕಪ್ಪಲಗಳಿಂದ ದಿಕ್ಕಾಟವು ತುಂಬಿ ಹೋಯಿತು ತರುವಾಯ ಪ್ರತಿನಿಧಿಗಳು ಎದ್ದು ಭಾಷಣಮಾಡಿದರು. ಅದರ ಸಾರಾಂಶವು,—

"ಇಂದಿಗೆ ಐದು ತಿಂಗಳ ಮೊಬಲು ಹಿಂದುಸ್ಥಾನದ ಬಾದಶಹರಾದ ಪಳನೇ ಎಡ್ವರ್ಡ ಧೊರೆಗಳು ಲಂಡನ ನಗರದಲ್ಲಿ ಇಂಗ್ಲಂಡಿನ ರಾಜಪಿಂಡವನ್ನೂ ರಾಜಮುಕುಟವನ್ನೂ ಧಾರಣ ಮಾಡಿದರು, ಆ ಸಮಾರಂಭವನ್ನು ನೋಡುವ ಭಾಗ್ಯವು ಹಿಂದುಸ್ಥಾನದ ಬಹು ಸ್ವಲ್ಪ ಜನರಿಗೆ ಮಾತ್ರ ದೊರೆಯಿತು. ಅದನ್ನು ಬಾದಶಹರು ತಮ್ಮ ಹಿಂದೂ ಸಾಮ್ರಾಜ್ಯದ ಎಲ್ಲ ಮಾಂಡಲಿಕರಿಗೂ ಪ್ರಜೆರಿಗೂ ಈ ಅಲಭ್ಯ ಲಾಭವು ದೊರೆಯಲಿಲ್ಲವಾದ್ದರಿಂದ ಅವರ ಮನೋರಥವನ್ನು ಪೂರ್ಣಗೊಳಿಸುವದಕ್ಕೆ ಹಿಂದುಸ್ತಾನದಲ್ಲಿಯೇ ಒಂದು ದೊಡ್ಡ ವೈಭವದ ದರಬಾರವನ್ನು ನೆರಿಸಬೇಕೆಂದು ನಮಗೆ ಅಪ್ಪಣೆಮಾಡಿದ್ದರು. ಆ ರಾಜಾಜ್ಞೆಯಂತೆ ನಾವು ಈ ದರಬಾರವನ್ನು ನೆರೆಸಿದ್ದೇವೆ. ಬಾದಶಹರ ಸಿಂಹಾಸನಕ್ಕೆ ಆಧಾರಸ್ತಂಭರಾದಂಥ ಮಾಂಡಲಿಕ ಭೂಪರೂ ಜಾಹಾಗೀರದಾರರೂ ರಾಜ್ಯ ಕಾರಭಾರದಲ್ಲಿ ಅನುಪಮ ಪ್ರಮಾಣಿಕತನದಿಂದಲೂ, ನಿಷ್ಠೆಯಿಂದಲೂ, ವರ್ತಿಸುತ್ತಿರುವ ಇಂಗ್ಲಿಷ ಹಾಗೂ ನೇಟೀವ್ಹ ಅಧಿಕಾರಿಗಳೂ ಸಾಮ್ರಾಜ್ಯವನ್ನು ರಕ್ಷಿಸುವಲ್ಲಿ ಅತುಲಶೌರ್ಯವನ್ನೂ ತೋರಿಸಿದ ಹಾಗೂ ತೋರಿಸಲಿಕ್ಕೆ ಉತ್ಕಂಠರಾಗಿರುವ ದಂಡಾಳುಗಳೂ ಆಚಾರ ವಿಚಾರಗಳಿಂದ ಭಿನ್ನ ಭಿನ್ನ ಪ್ರಕಾರದಿಂದಿದ್ದರೂ ಬಾದಶಹರ ಸಿಂಹಾಸನದ ಅಭಿಮಾನವನ್ನು ಧರಿಸುವ ಮಹತ್ಕಾರ್ಯದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ಇದ್ದ ಹಾಗೂ ಈ ದೇಶದ ಮಿಕ್ಕ ಯಾವತ್ತು ಚಿಕ್ಕ ದೊಡ್ಡ ನಗರಗಳಲ್ಲಿ ಕೂಡಿದ ರಾಜನಿಷ್ಠ ಪ್ರಜೆಗಳಿಂದ ವ್ಯಕ್ತವಾಗುತ್ತದೆ

ಮತ್ತೆ ಈ ಸಮಾರಂಭಕ್ಕೆ ಬಾದಶಹರು ತಮ್ಮ ಪೂರ್ಣ ಅನುಮತಿಯುಂಟೆಂಬದನ್ನು ಅರುಹಲಿಕ್ಕೆ ಬಂಧುಗಳಾದ ರಾಜಪುತ್ರ ಡ್ಯೂಕ್ ಆಫ್ ಕ್ಯಾಸಾಟಶನ್ನು ಕಳಿಸಿರುವರು. ಇಂದಿಗೆ ಎಂಟು ವರ್ಷಗಳ ಪೂರ್ವದಲ್ಲಿ ಇದೇ ನಗರದ ಇದೇ ಸ್ಥಳದಲ್ಲಿ ಇದೇ ಮಾದರಿಯ ಉತ್ಸವವು ಸಾಂಗವಾಗಿತ್ತೆಂಬುವದು ನಿಮ್ಮೆಲ್ಲರಿಗೂ ಗೊತ್ತುಂಟು. ಆ ಕಾಲದಲ್ಲಿ ಪರಮಭಾಗ್ಯಶಾಲಿನಿಯಾದ ವಿಕ್ಟೋರಿಯಾ ಮಹಾರಾಣಿಯವರು ಚಕ್ರವರ್ತಿನಿಯೆಂಬ ಬಿರುದನ್ನು ಧರಿಸಿದರು. ಅವರು ಪ್ರಜೆಗಳಾದ ನಿಮ್ಮನ್ನು ಬಹು ಮಮತೆಯಿಂದ ನಡಿಸಿಕೊಂಡರೆಂಬದು ಪ್ರಸಿದ್ಧವದೆ. ಈ ಬಾದಶಹರಾದರೂ ತಮ್ಮ ಹಿಂದೂ ಪ್ರಜೆಗಳ ಬಗ್ಗೆ ಪರಮಾವಧಿ ಪ್ರೇಮವುಳ್ಳವರಿದ್ದಾರೆ. ಇವರು ಯುವರಾಜರಾಗಿದ್ದಾಗ ಈ ದೇಶಕ್ಕೆ ಬಿಜಯಂಗೈಸಿದ್ದರು. ಆ ಸಂಧಿಯಲ್ಲಿ ಅನೇಕರು ಇವರನ್ನು ನೋಡಿರುವರು; ಅನೇಕರು ಇವರೊಡನೆ ಸಂಭಾಷಣೆ ಮಾಡಿರುವರು; ಅನೇಕರು ಹಲವು ಬಗೆಯಿಂದ ಇವರನ್ನು ಸತ್ಕರಿಸಿರುವರು. ಒಟ್ಟಿಗೆ ಸಾರ್ವಭೌಮನನ್ನು ಹಿಂದೂ ಪ್ರಜೆಗಳು ಒಳಿತಾಗಿ ಬಲ್ಲರೆಂಬದು ಸ್ಪಷ್ಟವು. ಮಹಾರಾಣಿಯವರು ಚಕ್ರವರ್ತಿನಿಯೆಂಬ ಬಿರುದನ್ನು ಧರಿಸಿದಂದಿನಿಂದ ಈ ದೇಶದ ಪ್ರಜೆಗಳಲ್ಲಿ ಐಕ್ಯವು ಹೆಚ್ಚಿಗೆ ವರ್ಧಿಸವಾಗಿದೆ. ಸಾರ್ವಭೌಮರ ಸಿಂಹಾಸನದ ಸ್ಥಿರತ್ವವು ಕೇವಲ ಹಿಂದೂ ಪ್ರಜೆಗಳ ರಾಜನಿಷ್ಠೆಯನ್ನೂ ತತ್ಪರತೆಯನ್ನೂ ಅವಲಂಬಿಸಿರುತ್ತದೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಈ ಸಿದ್ಧಾಂತವನ್ನು ಅಲ್ಲಗಳೆಯುವ ಪುರುಷನು ಅಜ್ಞಾನಿಯೆಂದು ಸಾರಿ ಹೇಳಬಹುದು. ಅನೇಕ ಶತಕಗಳಿಂದ ಭರತ ಭೂದೇವಿಯ ಪಾಣಿಗ್ರಹಣಕ್ಕಾಗಿ ಹಲವು ರಾಜವಂಶಸಂಜಾತರು ಬಗೆಯು ಬಗೆಯು ಉಪಾಯಗಳನ್ನು ಯೋಜಿಸಿದರು. ಆದರೂ ಈ ಭೂದೇವಿಯು ಕಡೆಯಲ್ಲಿ ತನ್ನ ವಿಶ್ವಾಸವನ್ನು ಸಂಪಾದಿಸಿದ ಬ್ರಿತಿಶ ಭೂಪನನ್ನೇ ವರಿಸಿದಳು. ಭೂತಲಗ ಆರು ರೇಖಾಂಶಗಳ ವಿಸ್ತಾರದಷ್ಟು ಪಸರಿಸಿವ, ಆರು ಕೋಟಿ ಪ್ರಜಗಳುಳ್ಳ ಸುಮಾರು ನೂರು

ಮೆಂದಿ ಸಂಸ್ಥಾನಿಕರು ತಮ್ಮ ಬಾದಶಹನಿಗ ನಮಿಸುವದ
ಕ್ಕಾಗಿ ಇಲ್ಲಿ ಕೂಡಿರುವರು. ಇವರು ಇಷ್ಟು ಶ್ರಮದಿಂದ ಇ
ಷ್ಟು ದೂರ ಬಂದಿರುವ ಉದ್ದೇಶವೇನಿರಬಹುದು? ಅದು
ಕೇವಲ ಅವರ ಮನೋವೃತ್ತಿಯಲ್ಲಿ ಉಂಟಾದ ರಾಜನಿಷ್ಠೆಯು
ಲ್ಲದೆ ಮತ್ತೊಂದಲ್ಲ; ಬಾದಶಹರ ದಂಡಾಳುಗಳೆಂದೆನ್ನಿಸಿ
ಕೊಳ್ಳುವದರಲ್ಲಿಯೇ ಬಹು ಮಾನ್ಯತೆ ಉಂಟೆಂದು ಗ್ರಹಿಸಿ
ಕೊಳ್ಳುವ ಎರಡುಲಕ್ಷ ಮೂವತ್ತ ಸಾವಿರ ದಂಡಾಳುಗಳಲ್ಲಿ
ಸುಮಾರು ೫೦ ಸಾವಿರ ಸೈನಿಕರು ಇಲ್ಲಿ ಕೂಡಿರುವರು.
೬೫ ಕೋಟಿ ಸಂಖ್ಯೆಯ ಹಿಂದೂ ಸಮಾಜದ ಮುಂದಾಳು
ಗಳೆನಿಸಿಕೊಳ್ಳುವ ಪ್ರಮುಖ ಜನರು ಈಗ ಈ ಸಭೆಯಲ್ಲಿ
ರುವರು. ಇವರೆಲ್ಲರ ಮನೋವೃತ್ತಿಯು ಒಂದೇ ತರದ್ದಿದು
ಒಂದೇ ಗಾದಿಗೆ ತಮ್ಮ ತಲೆಯನ್ನು ಬಾಗಿಸುತ್ತಿರುವರು.
ಇಂಥಾ ಪ್ರಚಂಡವಾದ ಭಿನ್ನ ಭಿನ್ನ ಕುಲಾಚಾರದ ಜನಸ
ಮೂಹವು ಇದೊಂದೇ ಮನೋವೃತ್ತಿಯಿಂದ ಒಕ್ಕಟ್ಟಾದ
ದ್ದು ಬಹು ಆಶ್ಚರ್ಯವೆಂದು ಬಹು ಜನರು ನೆನಿಸ
ಬಹುದು. ಇದಕ್ಕೆ ಸಮಾಧಾನವೇನೆಂದರೆ—ನ್ಯಾಯವೃತ್ತಿ
ಯೂ, ಸಮದೃಷ್ಟಿಯೂ, ದಯಾಲುತ್ವವೂ ರಾಜನಿಷ್ಠೆಯ
ನ್ನು ಹುಟ್ಟಿಸುವ ಪ್ರಧಾನಸಾಧನಗಳಾಗಿರುವವು. ಇದೇ
ತತ್ವದಿಂದಲೇ ಈ ಪ್ರಚಂಡ ಹಿಂದೂ ಸಮಾಜವು ವಿಕ್ಟೋರಿಯ
ಣವನ್ನು ಹೊಂದಿದೆ. ಈ ಬ್ರಿಟಿಶ ರಾಜ್ಯದಿಂದ ಈ ಸಮಾ
ಜಕ್ಕೆ ಪರಶತ್ರುಗಳ ಭಯವು ತಪ್ಪಿದೆ; ಅಂತಃಕಲಹಗಳ
ನೀಡಿವೆ; ಎಲ್ಲರ ಹಕ್ಕುಗಳೂ ಮಾನ್ಯಮಾನ್ಯತೆಗಳೂ ಸ್ಥಿರ
ವಾಗಿವೆ. ಸನ್ಮಾನದ ಅಧಿಕಾರಗಳು ಹೆಚ್ಚು ಹೆಚ್ಚು ದೊ
ರೆಯಹತ್ತಿವೆ; ಸಂಕಟಸಮಯದಲ್ಲಿ ಬಡವರಿಗೆ ತಕ್ಕ
ಸಹಾಯ ದೊರೆಯುತ್ತಲಿದೆ; ಶಾಂತತೆಯೂ ವಿದ್ಯಾಭಿವೃ
ದ್ಧಿಯೂ ವರ್ಧಿಸುತ್ತಲಿವೆ. ಇವೇ ಸಾಮ್ರಾಜ್ಯವನ್ನು ದೃಢ
ಪಡಿಸುವ ಮುಖ್ಯ ಉಪಾಯೆಗಳೆಂದು ಇವುಗಳನ್ನು ನಾವು
ನೆರೆನಂಬಿ ವರ್ತಿಸುತ್ತೇವೆ."

ಇಷ್ಟು ಭಾಷಣ ಮಾಡಿ, ಬಾದಶಹರು ಕೈಯಿಂದ ಹಿ

ದೊ ನಿವಾಸಿಗಳಿಗೆ : ...ಹಿದ ನಿರೋಪವನ್ನು ಪ್ರತಿನಿಧಿಗಳ ಮುಖಾಂತರ ತೋರಿಸಿದರು ಅದನ್ನು ಕೆಳಗೆ ಬರೆದಿದ್ದೇವೆ.

" ಈ ರಾಜ್ಯಾರೋಹಣೋತ್ಸವದ ಮಂಗಲಪ್ರಸಂಗದಲ್ಲಿ ನಮ್ಮ ಭಾರತೀಯ ಪ್ರಜೆಗಳಿಗೆ ಅಭಿನಂದನೀಯ ನಿರೋಪವನ್ನು ಕಳುಹಿಸಲು, ನಮಗೆ ಪರಮಾವಧಿ ಆನಂದವಾಗುತ್ತದೆ. "

" ಲಂಡನ್ನಿನಲ್ಲಿ ಆದ ಸಮಾರಂಭಕ್ಕೆ ತೀರ ಸ್ವಲ್ಪ ಜನ ಸಂಸ್ಥಾನಿಕರೂ, ಪ್ರತಿನಿಧಿಗಳೂ ಬಂದಿದ್ದರು. ಕೆಲವು ಅಪರಿಹಾರ್ಯಕಾರಣಗಳಿಂದ ಸರ್ವರಿಗೂ ಬರಲಿಕ್ಕೆ ಅನುಕೂಲವಾಗಲಿಲ್ಲ. ಆದ್ದರಿಂದ ಯಾವತ್ತು ರಾಜೋಪರಾಜರಿಗೂ, ಪ್ರಜೆಗಳಿಗೂ ಈ ಮಂಗಲಪ್ರಸಂಗದ ಉತ್ಸವವನ್ನು ನೆರವೇರಿಸುವ ಸುಯೋಗವನ್ನು ಒದಗಿಸಿಕೊಡುವದಕ್ಕಾಗಿ, ದಿಲ್ಲೀ ನಗರದಲ್ಲಿ ದೊಡ್ಡ ದರಬಾರವನ್ನು ನೆರಿಸತಕ್ಕದ್ದೆಂದು, ನಾವು ನಮ್ಮ ಹಿಂದುಸ್ತಾನದ ಪ್ರತಿನಿಧಿಗಳಿಗೆ ಅಜ್ಞಾಪಿಸಿರುತ್ತೇವೆ. "

" ಸರ್ ೧೪೫೫ನೇ ವರ್ಷ ನಾವು ಹಿಂದುಸ್ತಾನಕ್ಕೆ ಬಂದಿದ್ದೆವು. ಅಂದಿನಿಂದ ಹಿಂದುಸ್ತಾನದ ಹಾಗೂ ಹಿಂದೂ ಜನರ ವಿಷಯವಾಗಿ ನಮ್ಮ ಮನದೊಳಗೆ ದೃಢವಾದ ಪ್ರೇಮವು ವಾಸಮಾಡಿರುತ್ತದೆ. ನಮ್ಮ ಮನೆತನಕ್ಕೂ ಸಿಂಹಾಸನಕ್ಕೂ, ಭಾರತೀಯ ಪ್ರಜೆಗಳು ತಮ್ಮ ಉತ್ಕಟವಾದ ನಿಷ್ಠೆಯನ್ನೂ ಭಕ್ತಿಯನ್ನೂ ವ್ಯಕ್ತಗೊಳಿಸುತ್ತಾರೆಂಬದು ನನಗೆ ಪೂರಾ ಗೊತ್ತುಂಟು. ಈ ನಿಷ್ಠಾಭಕ್ತಿಗಳನ್ನು ವ್ಯಕ್ತಗೊಳಿಸುವ ಅನೇಕ ಉದಾಹರಣೆಗಳನ್ನು ನಾವು ಬಲ್ಲೆವು. ಸಾಮ್ರಾಜ್ಯದ ಸುರಕ್ಷೆ[illegible] ಒದಗಿದ ಯುದ್ಧಗಳಲ್ಲಿಯೂ ವಿಜಯಗಳಲ್ಲಿಯೂ ನಮ್ಮ ಹಿಂದೂ ಸಾಮ್ರಾಜ್ಯದ ಸೈನಿಕರು ಅತ್ಯುತ್ತಮವು ಕರ್ತವ್ಯವನ್ನು ನೆರವೇರಿಸಿರುತ್ತಾರೆ. "

" ನಮ್ಮ ಪ್ರಿಯ ರಾಜಪುತ್ರರಾದ ಪ್ರಿನ್ಸ್ ಆಫ್ ವೆಲ್ಸರವರು ಸಪತ್ನೀಕರಾಗಿ, ಹಿಂದುಸ್ತಾನವನ್ನು ಪ್ರತ್ಯಕ್ಷ ನೋಡಿ ಬರಬೇಕೆಂಬ ಉತ್ಕಟೇಚ್ಛೆಯು ನಮ್ಮ ಮನಸಿನಲ್ಲುಂಟು,

ರೊಜಪುತ್ರರಾದರೂ ಹಿಂದುಸ್ತಾನಕ್ಕೆ ಹೋಗಬೇಕೆಂದು ಉತ್ಸುಕರಾಗಿರುವರು. ಅದರಿಂದ ಅವರು ತೀವ್ರವೇ ಹಿಂದೂ ಸಾಮ್ರಾಜ್ಯಕ್ಕೆ ಹೋಗಿ, ಹಿಂದೂ ಪ್ರಜೆಗಳ ಪರಿಚಯವನ್ನು ಸಂಪಾದಿಸುವರೆಂದು ನಾವು ತುಂಬಾ ನಂಬುತ್ತೇವೆ.''

''ಈ ಮಂಗಲಪ್ರಸಂಗದಲ್ಲಿ ನಾವು ಸ್ವತಃ ಹಿಂದುಸ್ತಾನಕ್ಕೆ ಅತ್ಯಾನಂದದಿಂದ ಬರುತ್ತಿದ್ದೆವು. ಆದರೆ ಈ ಮಾತು ಸಾಧಿಸುವಂತೆ ಇಲ್ಲ. ಆದರೂ ಈ ಮಂಗಲಸಮಾರಂಭ ಕಾಲದಲ್ಲಿ ಅರಸುಮನೆತನದವರು ಒಬ್ಬರಾದರೂ ಇರುವದು ಅವಶ್ಯವೆಂದು, ನಮ್ಮ ಪ್ರಿಯ ಬಂಧುಗಳೂ, ಹಿಂದೂ ಪ್ರಜೆಗಳ ವಿಶೇಷ ಪರಿಚಯವುಳ್ಳವರೂ ಆದ ಡ್ಯೂಕ ಆಫ್ ಕ್ಯಾನಾಟ ಎಂಬ ರಾಜಪುತ್ರರನ್ನು ಕಳುಹಿಸಿರುವೆವು.''

''ದಯಾಳುಗಳೂ, ನ್ಯಾಯಪಕ್ಷಪಾತಿಗಳೂ ಆದ ನಮ್ಮ ಪರಮಪೂಜ್ಯರಾದ ಮಾತೋಶ್ರೀ ಕ್ವೀನ ವಿಕ್ಟೋರಿಯಾ ಚಕ್ರವರ್ತಿನಿಯವರು ತಮ್ಮ ನ್ಯಾಯವಾದ ರಾಜ್ಯಧೋರಣದಿಂದ ಹಿಂದೂ ದೇಶದ ಪ್ರಜೆಗಳ ಭಕ್ತಿಯನ್ನೂ ಪ್ರೇಮವನ್ನೂ ಸಂಪಾದಿಸಿದರು. ನಾವಾದರೂ ಸಿಂಹಾಸನಾರೂಢರಾದಂದಿನಿಂದ ಅದೇ ಧೋರಣವನ್ನೇ ಹಿಂಬಾಲಿಸಿ ವರ್ತಿಸಬೇಕೆಂದು ಸಂಕಲ್ಪ ಮಾಡಿದ್ದೇವೆ. ಹಿಂದುಸ್ತಾನದೊಳಗಿರುವ ಯಾವತ್ತು ಮಾಂಡಲಿಕ ರಾಜರ ಹಾಗೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಹಾನಿ ಬಾರದಂತೆಯೂ ಮಾನಮಾನ್ಯತೆಗಳಿಗೂ ಹಕ್ಕುಗಳಿಗೂ ವ್ಯತ್ಯಯ ಬಾರದಂತೆಯೂ, ಪ್ರಜಾಕ್ಷೇಮವನ್ನು ವರ್ಧಿಸುವದರಲ್ಲಿ ಅಲಸಿಕೆಯು ಮೈದೋರದಂತೆಯೂ, ಜಾಗ್ರತರಾಗಿ ವರ್ತಿಸುವ ನಿಷ್ಠೆಯುಳ್ಳವರಾಗಿದ್ದೇವೆಂದು ಪುನಃ ಆಶ್ವಾಸನ ಕೊಡುತ್ತೇವೆ. ಪ್ರಜಾಕ್ಷೇಮವೇ ನಮ್ಮ ರಾಜ್ಯಕಾರಭಾರದ ಮುಖ್ಯೋದ್ದೇಶವೂ ನಮ್ಮ ಪ್ರಧಾನಾಪೇಕ್ಷೆಯೂ ಇರುವದರಿಂದ ಈ ಕಾರ್ಯವನ್ನು ಸಾಧಿಸುವದರಲ್ಲಿ ನಾವು ತತ್ಪರರಾಗಿರುವೆವು. ಸರ್ವಶಕ್ತಿವಂತನಾದ ಪರಮೇಶ್ವರನ ಆಶೀರ್ವಾದದಿಂದ ನಮ್ಮ ಸಾಮ್ರಾಜ್ಯದಲ್ಲಿ ಶ್ರೇಷ್ಠವಾದ ಹಿಂದೂ ಸಾಮ್ರಾಜ್ಯವು ಉ

ತ್ತರೋತ್ತರಾಭಿವೃದ್ಧಿಯನ್ನೂ ಪ್ರಜೆಗಳು ಅಧಿಕಾಧಿಕ ಸೌಖ್ಯವನ್ನೂ ಪಡೆಯುವರೆಂದು ನಾವು ತುಂಬಾ ಆಶಿಸುತ್ತೇವೆ"

"ಸಂಸ್ಥಾನಿಕರೇ ಪ್ರಜಾಜನರೇ ನಾವೆಲ್ಲರು ಯಾವ ಸಾರ್ವಭೌಮರ ಸಂಬಂಧದಿಂದ ಉತ್ಸವವನ್ನು ನಡಿಸಿರುತ್ತೇವ್ರೋ ಆ ಮಹಾರಾಜರವರ ಈ ಉದ್ಗಾರಗಳನ್ನು ಕಿವಿಗೊಟ್ಟು ಆಲಿಸಿ ನಿಮ್ಮ ಹೃತ್‌ಪಟಲದಲ್ಲಿ ಚಿರಕಾಲ ನಿಲ್ಲುವಂತೆ ಬರೆದಿಡಿರಿ. ಈ ಉದ್ಗಾರದಲ್ಲಿ ಸರ್ವರ ವಿಷಯವಾಗಿ ಔದಾರ್ಯವೂ ಸದ್ಬುದ್ಧಿಯೂ ತುಂಬಿಕೊಂಡಿವೆ. ಸಾಮ್ರಾಜ್ಯ ಸೂತ್ರದ ಚಾಲಕರಿಗೆ ಇದು ಮಾರ್ಗದರ್ಶಕವಾಗಿರುತ್ತದೆ. ಮುಂಚಿಗಿಂತ ಹೆಚ್ಚು ಔದಾರ್ಯವನ್ನೂ ಹೆಚ್ಚು ಸೌಮ್ಯವನ್ನೂ ವ್ಯಕ್ತಗೊಳಿಸುವ ರಾಜ್ಯಧೋರಣವನ್ನು ಕಾಯ್ದುಕೊಳ್ಳಲಿಕ್ಕೆ ನಾವು ಹೆಚ್ಚು ತತ್ಪರರಾಗಿದ್ದೇವೆ. ಹೆಚ್ಚು ಕಪ್ಪವನ್ನು ಹೆಚ್ಚು ದಯೆಗೆ ಪಾತ್ರನು. ಕರ್ತವ್ಯವನ್ನು ಸರಸಾಗಿ ಮಾಡಿದವನು ಉತ್ತಮ ಉಚಿತಕ್ಕೆ ಯೋಗ್ಯನು. ಬಳಗಡೆಯಲ್ಲಿ ಆದ ಸಾಮ್ರಾಜ್ಯದ ಸಂಬಂಧದ ಕಾಳಗಗಳಲ್ಲಿ ಹಿಂದೂ ಮಾಂಡಲಿಕ ರಾಜರು ಸ್ವತಃ ತಾವೂ ತಮ್ಮ ಸೈನ್ಯವೂ ಸಾರ್ವಭೌಮರ ವತಿಯಿಂದ ಹೋರಾಡಲಿಕ್ಕೆ ಸಿದ್ಧರಿದ್ದೇವೆಂಬ ತಮ್ಮ ಉತ್ಕಟೇಚ್ಛೆಯನ್ನು ಅರಿಕೆ ಮಾಡಿದ್ದರು. ಇದೇ ಮೇರೆಗೆ ಬರ ಪಿಡುಗುಗಳ ಹಾವಳಿಯಲ್ಲಿಯೂ ತಮ್ಮ ಉದಾರತನವನ್ನು ವ್ಯಕ್ತಗೊಳಿಸಿರುವರು. ಈ ಮಾಂಡಲಿಕರು ಪ್ರಸ್ತುತಕ್ಕೆ ಸಂಪೂರ್ಣ ಸುಖವನ್ನೂ, ಹಕ್ಕುಗಳನ್ನೂ ಉಪಭೋಗಿಸುತ್ತಿರುವರು. ಇದಕ್ಕೂ ಹೆಚ್ಚಿನ ಸುಖವೂ ಹಕ್ಕುಗಳೂ. ದೊರೆಯುವದು ಅಶಕ್ಯ. ತಿದರೂ ಹಿಂದಿನ ದುಷ್ಕಾಳದಲ್ಲಿ ಸಂಸ್ಥಾನಿಕರಿಗೆ ಸಾರ್ವಭೌಮರಿಂದ ಕೊಡಲ್ಪಟ್ಟ ಸಾಲದ ಮೂರು ವರ್ಷದ ಬಡ್ಡಿದನ್ನು ಕೇಳಲಾಗದು. ಈ ಕೊಡುವಿಕೆಯನ್ನು ಸಂಸ್ಥಾನಿಕರು ಆನಂದದಿಂದ ಸ್ವೀಕರಿಸುವರೆಂದು ನಂಬುತ್ತೇವೆ. ಈ ದೇಶದೊಳಗಿನ ಇತರ ವರ್ಗದ ಜನರಾದ ಒಕ್ಕಲಿಗರ ಸಲೆಹೊರೆಯನ್ನು ಕಡಿಮೆ ಮಾಡುವ ಸುಯೋಗವು ಬೇಗನೆ

ಬರಬಹುದೆಂದು ನಂಬುತ್ತೇವೆ. ಪ್ರಸ್ತುತದಲ್ಲಿ ಈ ಕಾ
ರ್ಯದ ವಿಚಾರವು ನಡೆದಿರುವದರಿಂದ ಯಾವದೊಂದು ಖಂ
ಡಿತವಾದ ವಿಧಾನವನ್ನು ಈಗಲೇ ಒಡನುಡಿಯಲಿಕ್ಕೆ ಅಸ
ಮರ್ಥರಾಗಿರುವೆವು. ಹಿಂದಿನ ದುರ್ದಿವಸಗಳು ಹೋಗಿ
ಮಳೆಬೆಳೆಗಳು ಸಮೃದ್ಧಿಯಾಗಿರುವದರಿಂದ ಸಾರ್ವಭೌಮ
ರ ಆಳಿಕೆಯ ಮೊದಲನೇ ವರ್ಷವೇ ಹಿಂದೂ ಪ್ರಜಗಳ ತಲೆ
ಹೊರೆಯನ್ನು ಕಡಿಮೆ ಮಾಡಿ ಪ್ರಜಾಕ್ಷೇಮಕ್ಕೋಸುಗ
ಚಕ್ರವರ್ತಿಗಳು ತೋರಿಸುವ ಸಹಾನುಭೂತಿಯನ್ನೂ ಕರು
ಣೆಯನ್ನೂ ವ್ಯಕ್ತಪಡಿಸುವ ಸುಸಮಯವು ತೀವ್ರವೇ ಬರು
ವದೆಂದು ಆಶಿಸುತ್ತೇನೆ."

"ಸಂಸ್ಥಾನಿಕರೇ ಪ್ರಜಾಜನರೇ ಇನ್ನು ನಾವು ಭವಿಷ್ಯಕಾ
ಲದಲ್ಲಿ ವರ್ತಿಸಬಹುದಾದ ಸಂಗತಿಗಳನ್ನು ಕುರಿತು ಸ್ವಲ್ಪ
ವಿಚಾರಿಸುವ. ಸಾಂಪ್ರತಕ್ಕೆ ನಡೆದ ಕಾರಭಾರದ ಧೋರ
ಣಿಯಿಂದ ಈ ದೇಶವು ನಿಶ್ಚಯವಾಗಿ, ಭರಭರಾಟಿಗೆ ಬರುವ
ದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಈ ದೇಶದೊಳಗಿನ
ಲೋಕಸಂಖ್ಯೆ, ಶಿಕ್ಷಣ, ಉದ್ಯೋಗಾಭಿವೃದ್ಧಿ, ನಿರ್ವಾಹ
ಮುಂತಾದ ಅನೇಕ ಬಿಕ್ಕಟ್ಟಿನ ವಿಷಯಗಳನ್ನು ಅರೆದಾಡಿ
ನಿರ್ಣೈಸುವದು ಅಸಾಧ್ಯವಲ್ಲ. ಹಿಂದುಸ್ತಾನದ ಉಕ್ಕಡದ
ಲ್ಲಿ ಇಂಗ್ಲಂಡ ಹಾಗೂ ಹಿಂದುಸ್ತಾನಗಳ ಮಿಶ್ರಸೈನ್ಯದಿಂ
ತಾಂತತೆಯನ್ನು ಕಾಯ್ದುಕೊಳ್ಳಲಿಕ್ಕೆ ಅನುವಾಗಿರುತ್ತದೆ
ಸಂಸ್ಥಾನಿಕರು ಸಾಮಾನ್ಯಜನರು, ಯುರೋಪಿಯನ್‌ರು
ನೇಟಿವರು, ರಾಜ್ಯಕರ್ತರು ಪ್ರಜೆಗಳು, ಈ ಜೋಡಿಗಳ
ಐಕ್ಯಭಾವವು ನೆಲೆಗೊಳ್ಳಲು, ಮೇಘರಾಜನು ಕಾಲಕಾ
ಕ್ಕೆ ಸಾಕಷ್ಟು ಮಳೆಗರೆಯಲು, ದೇಶವು ಊರ್ಜಿತಾವಸೆ
ಯನ್ನು ಪಡಿಯುವದೇನಾಶ್ಚರ್ಯವು? ದೇವರ ದಯೆದಿಂ
ದೇಶದಲ್ಲಿ ಕ್ಷಾಮಡಾಮರಗಳು ಉದ್ಭವಿಸದೆ, ಸಕಾರಣ
ಅಸಂತೋಷಗಳು ಹುಟ್ಟದೆ ಇದ್ದರೆ ನಮ್ಮ ಭಾವೀ ಸುಖವ
ನಿಜವಾಗಿ ದೊರೆಯುವದು. ಉದ್ಯೋಗಗಳು ಬೆಳೆಯುವ
ವು. ಶಿಕ್ಷಣವು ವರ್ಧಿಸುವದು. ಸುಖಸಂಪತ್ತಿಗಳು ಹೆಚ್ಚ
ವು. ಈ ದೇಶದವರ ಅಮರ್ಯಾದವಾದ ಬುದ್ಧಿಶಾಮ

ಧೈರ್ಯಕ್ಕೂ ವಿವೇಕಬುದ್ಧಿಗೂ ನಾವು ಹಲೆದೂಗುತ್ತೇವೆ. ಭೂವ್ಯವಸ್ಥಿತಿಯು ಬ್ರಿತಿಶ ಸಾಮ್ರಾಜ್ಯದ ಯೋಗದಿಂದಲೇ ಲಭಿಸುವದಲ್ಲದೆ, ಮಿಕ್ಕ ಯಾವ ಸಾಮ್ರಾಜ್ಯಾಧಿಕಾರದಿಂದಲೂ ದುರ್ಲಭವೆಂದು ನಾವು ಸಾರಿ ಹೇಳುತ್ತೇವೆ. ಈ ಮಂಗಲಪ್ರದ ಸಮಾರಂಭದ ಪರಿಣಾಮವು ಪ್ರಜೆಗಳ ಮನದಲ್ಲಿ ಚೆನ್ನಾಗಿ ಪರಿಣಮಿಸುವದೆಂದು ನಾವು ಬಯಸುತ್ತೇವೆ. ಸುಮುಹೂರ್ತದಿಂದ ಆರಂಭವಾದ ಎಡ್ವರ್ಡ ಬಾದಶಹರ ಆಡಳಿತೆಯು ಇತಿಹಾಸದಲ್ಲಿಯೂ, ಪ್ರಜೆಗಳ ಹೃದಯಮಂದಿರದಲ್ಲಿಯೂ ಚಿರಕಾಲ ನಿಲ್ಲುವದೆಂದು ಇಚ್ಛಿಸುತ್ತೇವೆ. ಜಗಚ್ಚಾಲಕನಾದ ಪರಮೇಶ್ವರನು ಈ ಸಾರ್ವಭೌಮರ ಆಳಿಕೆಯನ್ನು ಬಹು ದಿವಸ ಸಾಗಿಸಲಿ, ಪ್ರಜಾಕಲ್ಯಾಣವನ್ನು ಹೆಚ್ಚಿಸಲಿ, ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಂಬಿಗೆಯಿಂದ ನಡಿಸುವಂತೆ ಅವರಿಗೆ ಸದ್ಬುದ್ಧಿಯನ್ನು ಕೊಡಲಿ, ಸಾರ್ವಭೌಮರ ಸಾಮ್ರಾಜ್ಯವನ್ನು ಸುರಕ್ಷಿತವಾಗಿ, ನಡಿಸಲಿ ಎಂದು ಆ ವಿಶ್ವಪಾಲಕನಾದ ಪರಮಾತ್ಮನನ್ನು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ."

ಭರತಖಂಡದ ಸಾರ್ವಭೌಮನು ದೀರ್ಘಾಯುವಾಗಲಿ.—

ಈ ಮೇರೆಗೆ ಸರ್ವಾಧಿಪತಿಗಳ ಭಾಷಣವಾದ ಬಳಿಕ ಸೈತಾಳಿಕನು ಸಾರ್ವಭೌಮರ ಹೆಸರಿನಿಂದ ಮೂರು ಸಾರೆ ಜಯಘೋಷವನ್ನು ಮಾಡಬೇಕೆಂದು ಸೂಚಿಸಿದನು. ಅದರಂತೆ ಎಲ್ಲರೂ ಜಯಘೋಷವನ್ನು ಮಾಡಿದರು. ತರುವಾಯ ಮಾಂಡಲಿಕ ಭೂಪಾಲರಲ್ಲಿ ನಿರುತಾಮ ಸಾಹೇಬರು ಮೊದಲು ಸಿಂಹಾಸನದ ಬಳಿಗೆ ಬಂದು ಪ್ರತಿನಿಧಿಗಳಿಗೂ, ರಾಜಸಹೋದರರಿಗೂ ಸಲಾಮು ಮಾಡಿ ತಮ್ಮ ಅತ್ಯಾನಂದಯುಕ್ತವಾದ ವಿನಂತಿಯನ್ನು ಬಾದಶಹರಿಗೆ ಮುಟ್ಟಿಸಬೇಕೆಂದು ಹೇಳಿಕೊಂಡರು. ಇದೇ ಮೇರೆಗೆ ಎಲ್ಲ ಮಾಂಡಲಿಕರೂ ಕ್ರಮದಿಂದ ಸಿಂಹಾಸನಕ್ಕೆ ನಮಸ್ಕರಿಸಿದರು. ಇವರೆಲ್ಲರಿಗೂ ಪ್ರತಿನಿಧಿಗಳೂ ರಾಜಸಹೋದರರೂ ಹಸ್ತಲಾಘವವನ್ನು ಕೊಟ್ಟರು. ತರುವಾಯ ಸಿಂಹಾಸನದ ಹಿಂದೆ ಇದ್ದ ರಾಜಕುಮಾರಸ್ನೇವು ಸಿಂಹಾಸನದ ಎದುರಿಗೆ ಬಂದು

ತಮ್ಮ ಶಸ್ತ್ರವನ್ನೆ ಮುಂದೆಮಾಡಿ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಇಷ್ಟಾದನಂತರ ಬ್ಯಾಂಡಿನ ರವವೂ, ತೋಪಿನ ಸಪ್ಪಳವೂ ಆಕಾಶವನ್ನು ವ್ಯಾಪಿಸಿರಲು, ಪ್ರತಿನಿಧಿಗಳೂ, ರಾಜಪಹೋದರೂ ರಥಾರೂಢರಾಗಿ ಮುನ್ನಿನಂತೆ ಪರಿವಾರಸಮೇತರಾಗಿ ಹೊರಟುಹೋದರು. ಬಳಿಕ ಎಲ್ಲರೂ ತಮ್ಮ ತಮ್ಮ ಪರಿವಾರದೊಂದಿಗೆ ಸ್ವಸ್ಥಾನಕ್ಕೆ ತೆರಳಿದರು. ಈ ಪ್ರಕಾರ ಈ ಪ್ರಚಂಡ ದರ್ಬಾರವು ಈಶಕೃಪೆಯಿಂದ ಯಥಾಸಾಂಗವಾಗಿ ಪೂರ್ಣವಾಯಿತು.

ಕ್ರಿಸ್ತಾಬ್ದ ೧೯೦೫ನೇ ಇಸವಿಯ ಜನವರಿ ೧೬ನೇ ತಾರೀಖಿನ ಶುಭದಿವಸವು ಸೂಪತ್ತೂ ಭಾರತೀಯರಿಗೆ ಮಂಗಲವಾಸರವೆಂದು ನಿರ್ವಿವಾದವಾಗಿ ಹೇಳಬಹುದು. ಭರತಖಂಡದ ಯಾನತ್ತೂ ಚಿಕ್ಕದೊಡ್ಡ ನಗರಗಳಲ್ಲಿಯೂ, ಹಳ್ಳಿಗಳಲ್ಲಿಯೂ ಬಾದಶಹರ ಪಟ್ಟಾಭಿಷೇಕೋತ್ಸವವು ಸಾಂಗವಾಯಿತು. ಜಿಲ್ಲೆಯಲ್ಲಿ ಕಲೆಕ್ಟರದೊರೆಗಳೂ, ತಾಲೂಕುಗಳಲ್ಲಿ ಮಾಮಲೇದಾರ ಸಾ. ರೂ. ಕೇತೆಗಳಲ್ಲಿ ಮಹಾಲಕರೀ ಸಾ. ರೂ. ಶಾಲೆಯಿದ್ದ ಊರಲ್ಲಿ ಅಧ್ಯಾಪಕರೂ, ಇತರ ಊರಲ್ಲಿ ಪ್ರಮುಖ ಗೃಹಸ್ಥರೂ, ಈ ಉತ್ಸವದ ಸಮಾರಂಭವನ್ನು ಮಾಡಿದರು. ಧಾರವಾಡದಲ್ಲಿ ಕಲೆಕ್ಟರ ದೊರೆಗಳು ಜಜ್ಜಕೋರ್ಟಿನ ಬೈಲಲ್ಲಿ ಹಂದರಹಾಕಿಸಿ, ದರಬಾರ ಕನೆರಿಸಿ ಸಾರ್ವಭೌಮರ ಜಾಹೀರನಾಮೆಯನ್ನು ಓದಿದರು. ನಂತರ ಹುಡುಗರಿಗೆ ಮಿಠಾಯಿ ಪದಕಗಳನ್ನೂ ಕೊಟ್ಟರು. ತಾರೀಖು ೮ನೇ ಅಗಷ್ಟ ದಿವಸ ವಿಸೆಸ್‌ಗಿಬ್ಬ ದೊರೆಸಾನಿಯವರಿಂದ ಬಾದಶಹರ ರಾಜ್ಯಾರೋಹಣದ ಸ್ಮರಣಾರ್ಥವಾಗಿ ಕಾಲೇಜದ ಪ್ರಿನ್ಸಿಪಾಲರು ಹಚ್ಚಿಸಿದ ಅಶ್ವತ್ಥ ವೃಕ್ಷಕ್ಕೆ ಕಟ್ಟೆಯನ್ನು ಕಟ್ಟಿಸಿ ಆ ಕಟ್ಟೆಯ ಕಲ್ಲಮೇಲೆ 'ಈ ವೃಕ್ಷವನ್ನು ರಾ. ಸಾ. ರೊದ್ದ ಶ್ರೀನಿವಾಸರಾಯರು ವಿಸೆಸ್‌ಗಿಬ್ಬ ದೊರೆಸಾನಿಯವರಿಂದ ರಾಜ್ಯಾರೋಹಣಸ್ಮರಣಾರ್ಥವಾಗಿ ಹಚ್ಚಿಸಿದರೆಂಬ' ಲೇಖವನ್ನು ಬರಿಸಿ ಅದನ್ನು

ಅದೇ ದೊರೆಸಾನಿಯವರಿಂದ ನೆಲೆಗೊಳಿಸುವ ಸಮಾರಂಭ ವಾಯಿತು. ಅದೇ ರಾತ್ರಿ ಮದ್ದುಹಾರಿಸಿದರು. ಮರುದಿವ ಸದಿಂದ ಹುಡುಗರ ಆಟ, ಕುಸ್ತಿ ಆಡಿಸೋಣ ಮುಂತಾದ ಸಮಾತಂಭಗಳಾಗಿ ೫ನೇ ತಾರೀಖಿನ ದಿವಸ ಸಮಾತಂಭವು ಸಮಾಪ್ತವಾಯಿತು. ಯಾವತ್ತು ಚಿಕ್ಕದೊಡ್ಡ ಗ್ರಾಮುಗಳಲ್ಲಿ ಇದೇ ಮಾದರಿಯ ಉತ್ಸವಗಳು ಚಿಕ್ಕದೊಡ್ಡ ಪ್ರಮಾಣದಿಂದ ನಡೆದವು. ಈ ಸಮಾರಂಭದಲ್ಲಿ ಅಧ್ಯಾಪಕರು ಹೆಚ್ಚು ಶ್ರಮವಾಡಿ ಊರವರಿಗೆ ಕಾರ್ಯದ ಗೌರವವನ್ನು ತಿಳಿಸಿ ಅವರ ನೆರವಿನಿಂದ ಉತ್ಸವಮಾಡಿದ್ದು ಅವರಿಗೆ ಬಹು ಭೂಷಣದ ಕಾರ್ಯವಾಗಿರುವದು. ಅಧ್ಯಾಪಕರಿಂದ ಬಂದ ಪತ್ರಗಳ ಸಾರಾಂಶವನ್ನು ಇದರಡಿಯಲ್ಲಿ ಕೊಡುತ್ತೇವೆ.

ಬೆಟಗೇರಿ.(ಗದಗ)—ರಾಜೀವಪ್ಪ ಡಂಬಳ, ರಾವಸಾಹೇಬ ಮಲ್ಲೇಶಪ್ಪ ಮಾನ್ವಿ, ಮ. ರಾ. ಬಾಬಸಾ ಕಬಾಡಿ ಶಾಂತಾರಾಮರಾವ ವಕೀಲ, ಅಂದಾನೆಪ್ಪ, ವಾಸುದೇವದಾಸ ಸಾವುಕಾರ, ಭಾವನಸಾ ಕಬಾಡಿ ಮುಂತಾದ ದೊಡ್ಡ ಜನರು ಅನ್ನದಾನ, ವಸ್ತ್ರದಾನ, ಹುಡುಗರಿಗೆ ಮಿಠಾಯಿಕೊಡೋಣ ಕುಸ್ತಿ ಆಡಿಸೋಣ ಮುಂತಾದ ಉತ್ಸವಗಳನ್ನು ಮಾಡಿಸಿದರು. ಮಾಮುಲೇದಾರ ಸಾಹೇಬರು ಜಾಹೀರನಾಮೆಯನ್ನು ಓದಿದರು.

ಕೊಣ್ಣೂರ. (ನವಲಗುಂದ)—ಶಾಲೆಯನ್ನು ಸಿಂಗರಿಸಿ ಸಿಂಹಾಸನದ ಮೇಲೆ ಬಾದಶಹರ ಚಿತ್ರವನ್ನಿಟ್ಟು, ಮ. ರಾ. ವ್ಯಾಸರಾವ ಕುಲಕರಣಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯನ್ನು ನೆರಿಸಿದ್ದರು. ರಾ. ಹಣಮಂತಪ್ಪ ಕಲ್ಲಾಳ ಪಾಟೀಲ ಕುಲಕರಣಿಯರು, ಚೆನ್ನಪ್ಪ ಎಲಿಗಾರ ಇವರು ಉತ್ಸವನ್ನು ಮಾಡುವದರಲ್ಲಿ ಪ್ರಮುಖರಾಗಿದ್ದರು.

ಮೊರಬ-ಶಾಲಾಮಂದಿರದಲ್ಲಿ ಮ. ರಾ. ಸರ್ಕಲ್ ಇನ್ಸ್ಪೇಕ್ಟರರೂ ಗ್ರಾಮಸ್ತರೂಕೂಡಿ ಉತ್ಸವಮಾಡಿದರು. ಅನ್ನದಾನ ದೀಪೋತ್ಸವ ಮುಂತಾದವುಗಳು ಸರಿಯಾಗಿ ನಡೆದವು.

ಅಸುಂಡಿ (ಗದಗ)---ಊರು ಸಿಂಗರಿಸಿ ಶಾಲಾಗ್ರಹದಲ್ಲಿ

ಬಾದಶಹರ ಪಟ್ಟಾಭಿಷೇಕೋತ್ಸವದ ಬಗ್ಗೆ ಸಭೆಯನ್ನೆ ನೆರಿಸಿದ್ದರು. ರಾ. ತಮ್ಮಾಜಿ ರಂಗೋ, ವೆಂಕಟೇಶ ರಾಮ ಚಂದ್ರ, ಮುಂತಾದವರು ಸಮಾರಂಭಕ್ಕೆ ಬಹಳ ಸಹಾ ಯ ಮಾಡಿದರು.

ಹಳದೀಪೂರ (ಹೊನ್ನಾವರ)—ಊರು ಸಿಂಗರಿಸಿದ್ದರು. ಲೋಕಲ್‌ಬೋರ್ಡ ಚೇರಮನ್ ರಾವಸಾಹೇಬ ವಿಷ್ಣು ಸಭಾಹಿತ, ಇವರು ತಮ್ಮ ಅಗ್ರಹಾರದ ಗಣಪತಿ ದೇ ವಸ್ಥಾನದಿಂದ ಬಾದಶಹರ ಭಾವಪಟವನ್ನು ಮೆರಿಸು ತ್ತಾ ಶಾಲೆಗೆ ತೆಗೆದುಕೊಂಡು ಬಂದು ಸಭೆ ನೆರಿಸಿ ಹುಡು ಗರಿಗೆ ಮಿಠಾಯಿ ಮೊದಲಾದವುಗಳನ್ನು ಕೊಟ್ಟು ಉತ್ಸಾಹ ಮಾಡಿದರು.

ಇಂಡಿ—ರಾ. ಸಾ. ಮಾಮಲೇದಾರರು, ಸಿರಸ್ತೇದಾರರು, ಫೌಜದಾರರು ತಾಲೂಕ ಕಚೇರಿಯ ಮುಂದೆ ಪ್ರಸಿದ್ಧವಾದ ಮಂಟಪವನ್ನು ಹಾಕಿಸಿ, ಅಲ್ಲಿ ಸಭೆ ನೆರಿಸಿ ಬಾದಶಹರವರ ಜಾಹೀರನಾಮೆಯನ್ನು ಓದಿದರು. ಶಾಲೆ, ಲಾಯಬ್ರರಿ, ಚಾವಡಿ, ದವಾಖಾನೆ ಮುಂತಾದ ಸ್ಥಳಗಳೂ ಸಿಂಗರಿಸಲ್ಪ ಟ್ಟಿದ್ದವು. ಆಟ ನೋಟಗಳು ನಡಿದವು. (ಇವರು ಕವಿತೆ ಯನ್ನು ಮಾಡಿ ಕಳಿಸಿರುವರು.)

ಹಿರೇಕೆರೂರ—ಶಾಲೆಯಮುಂದೆ ಹಂದರವನ್ನು ಹಾಕಿಸಿ ಮಾಮಲೇದಾರ ಸಾಸೇಬರು ಊರೊಳಗಿನ ಎಲ್ಲ ಸದ್ಗೃಹ ಸ್ಥರೊಡನೆ ದರಬಾರವನ್ನು ಕೂಡಿಸಿ ಜಾಹೀರನಾಮೆಯನ್ನು ಓದಿದರು. ವಿದ್ಯಾರ್ಥಿಗಳು ಸಮಯೋಚಿತವಾಗಿ ಹಾಡಿದರು. ಮು. ರಾ. ಹಣಮಂತರಾವ ಕುಲಕರಣಿ ಮು. ರಾ. ಬಳವಂತರಾವ ಓಯಿ ಮುಂತಾದವರು ವಿಶೇಷ ಉತ್ಸುಕತೆಯನ್ನು ತೋರಿಸಿದರು. ಮಿಠಾಯಿಕೊಡೋಣ, ಅನ್ನದಾನ, ವಸ್ತ್ರದಾನ, ದೀಪೋತ್ಸವ, ಕುಸ್ತಿ ಮುಂತಾದ ಕೆಲಸಗಳು ನಡೆದವು.

ನಿಡಸೋಸಿ (ಹುಕ್ಕೇರಿ)—ಇಲ್ಲಿ ಇನಾಮದಾರ ಸಾಹೇಬರವಾಡೆಯಲ್ಲಿ ಅನ್ನದಾನ, ದೀಪೋತ್ಸವ ಮೊದಲಾದ ಉತ್ಸವ

ಗಳನ್ನು ನಡಿದವು. ಗ್ರಾಮಸ್ಥರೂ ಸ್ಕೂಲಕಮಿಟಿದಾರರೂ ಮಿಠಾಯಿ ಮುಂತಾದವುಗಳನ್ನು ಹುಡುಗರಿಗೆ ಹಂಚಿದರು.

ಬೆಳವಿ, (ಹುಕ್ಕೇರಿ)—ಮಾಸ್ತರರು ಗ್ರಾಮಸ್ತರ ನೆರವಿನಿಂದ ಸಭೆಯನ್ನು ಕೂಡಿಸಿ ಉತ್ಸವ ಮಾಡಿದರು.

ಬೆಳವಡಿ, (ಸಂಪಗಾವ)—ಹೂಲಿಕೇರಿಯ ಇನಾಮದಾರರಾದ ದುಂಡಪ್ಪಾ ಅಣ್ಣಾ ಇವರ ಅಧ್ಯಕ್ಷತೆಯಲ್ಲಿ ಸಮಾರಂಭವು ಸಾಂಗವಾಯಿತು.

ಸತ್ತಿ, (ತಾಲೂಕ)—ಅಥಣಿ ಮು. ರಾ. ಬಾಳಪ್ಪಾ ನಾಯಿಕ, ಅಣ್ಣಪ್ಪಾ ನಾಯಿಕ, ವೆಂಕಟರಾವ, ರಾಮರಾವ, ಶ್ರೀನಿವಾಸರಾವ ಮುಂತಾದ ಸಾವುಕಾರರ ನೆರವಿನಿಂದ ಸಮಾರಂಭವು ಸಾಂಗವಾಯಿತು.

ಹಾವನೂರ—ಶಾಲಾಗೃಹವನ್ನು ಸಿಂಗರಿಸಿ ಅದರ ಮಧ್ಯದಲ್ಲಿ ಸಂಹಾಸನದ ಮೇಲೆ ಸಾರ್ವಭೌಮದಂಪತಿಗಳ ಭಾವಪಠವನ್ನಿಟ್ಟು ಸಭೆ ನೆರಿಸಿ ಉತ್ಸವಮಾಡಿದರು.

ಮುಂಡರಿಗಿ—ಗ್ರಾಮವೆಲ್ಲಾ ಸಿಂಗರಿಸಲ್ಪಟ್ಟಿತ್ತು ರಾವಸಾಹೇಬ ಮಹಾಲ್ಕರಿಯವರೂ ಸರದಾರ ವೆಂಕಟರಾಯರವರೂ ಮು. ರಾ. ರಂಗಾಪೂರ ವಿಠಲಾಪೂರ ಸೀನರ್ಹಳ್ಳಿಗಳ ಇನಾಮದಾರರೂ ರುದ್ರಪ್ಪಸೆಟ್ಟರೂ ಪ್ರಮುಖರಾಗಿ ಸಮಾರಂಭವನ್ನು ಸಡಗರದಿಂದ ನೆರವೇರಿಸಿದರು. ಶಾಲೆ ಮುಂತಾದವುಗಳಲ್ಲಿ ದೀಪೋತ್ಸವವಾಯಿತು.

ಗಜೇಂದ್ರಗಡ—ಇನಾಮದಾರರ ವಾಡೆಯಲ್ಲಿ, ಸರಕಾರ ಶಾಲೆಯಲ್ಲಿ, ಬಾವಡಿಯಲ್ಲಿ ಉತ್ಸವಗಳು ಯಥಾಸಾಂಗವಾಗಿ ನೆರವೇರಿದವು.

ಆಲೂರ (ಹಾನಗಲ್ಲ)—ಶಾಲೆಯನ್ನು ಸಿಂಗರಿಸಿ ಊರೊಳಗಿನ ಸದ್ಗೃಹಸ್ಥರೊಡನೆ ಸಭೆ ನೆರಿಸಿ ಉತ್ಸವಮಾಡಿದರು. ಶ್ರೀಮಂತ ದೇಸಾಯಿ ವೆಂಕಟರಾಯರು ಹುಡುಗರಿಗೆ ಮಿಠಾಯಿ ಹಂಚಿದರು. ಬಾವಡಿಯಲ್ಲಿ ಗ್ರಾಮಸ್ಥರು ಸಭೆಯನ್ನು ನೆರಿಸಿ ಜಾಹೀರನಾಮೆಯನ್ನು ಓದಿದರು.

ಅಹೇರಸಂಗ (ಇಂಡಿ)—ಗೌಡಶಾನಭೋಗರ ನೆರವಿನಿಂದ ಶಾಲೆಯಲ್ಲಿ ಸಭೆಯನ್ನು ನೆರಿಸಿ ಉತ್ಸವವನ್ನು ಮಾಡಿದರು.

ಹೊಟನಾಳ. (ನವಲಗುಂದ)—ಊರ ಸಿಂಗರಿಸಿ ಶಾಲೆಯಲ್ಲಿ ಸಭೆ ನೆರಿಸಿ ಉತ್ಸವವನ್ನು ಮಾಡಿದರು.

ಮುಕ್ಕಲ್ಲ. (ಕಲಘಟಗಿ)—ಯಾವತ್ತು ದೇವರಿಗೆ ಪಂಚಾಮೃತ ಅಭಿಷೇಕ ಮಾಡಿಸಿದರು. ಚಿಕ್ಕ ಮಠದ ಚೆರಂತೆ ಮ್ಯಾನವರ ಅಧ್ಯಕ್ಷತೆಯಿಂದ ಉತ್ಸವ ಯಥಾಸಾಂಗ ನೆರವೇರಿತು.

ಹಮ್ಮಿಗಿ. (ಗದಗ)—ಮು. ರಾ. ಗೋಪಾಳ ವೆಂಕಟೇಶ ಪ್ರೋಲೀಸಪಾಟೆಲರವರ ಅಧ್ಯಕ್ಷತೆಯಿಂದ ಶಾಲೆಯಲ್ಲಿ ಸಭೆ ನೆರಿಸಿ ಉತ್ಸವಮಾಡಿದರು.

ಕಲಘಟಗಿ—ತಾಲೂಕ ಕಚೇರಿಯ ಮುಂದೆ ಹಂದರದಲ್ಲಿ ಬಹು ಸಮಾಜದೊಡನೆ ಸಭೆನೆರಿಸಿ ಹಾವಮಲೇದಾರಸಾಹೇಬರವರಿಂದ ಜಾಹೀರನಾಮೆ ಓದಲ್ಪಟ್ಟತು ದೀಪೋತ್ಸವ ಮಿಠಾಯಿ ಹಂಚೋಣ ಮುಂತಾದವುಗಳು ನಡೆದವು.

ನಾಗಾವಿ. (ಗದಗ)—ಮು. ರಾ. ಅನಂತರಾವ ಜಾಹಗೀರದಾರ, ಸಂಕನಗೌಡ ರಾಚನಗೌಡ ಪಾಟೀಲ, ಕೃಷ್ಣರಾವ ವಿಂಗೋ ಕುಲಕರಣಿ, ಶಿವಮ್ಮಣ್ಣ ರಡ್ಡಿ ಮುಂತಾದವರು ನಂತಿಗೆಯಿಂದ ಹಣ ಕೂಡಿಸಿ ಉತ್ಸವಮಾಡಿದರು.

ಲಕ್ಕುಂಡಿ—ವಿದ್ಯಾರ್ಥಿಗಳೂ ಗ್ರಾಮಸ್ಥರೂ ಶೆಟ್ಟರೂ ಮುಂತಾದವರು ಕೂಡಿಕೊಂಡು ಬಾದಶಹರವರ ಭಾವಪಠವನ್ನು ಮೆರಿಸುತ್ತ ಶಾಲೆಗೆ ಬಂದು ಸಭೆನೆರಿಸಿ ಉತ್ಸವಮಾಡಿದರು. ಪ್ರಭುಮಠದ ಪಟ್ಟದ್ದೇವರೂ ಹಂಚಿನಾಳಕರ ಮಾಸ್ತರರೂ ಸ್ವಂತ ಖರ್ಚಿನಿಂದ ಮಿಠಾಯಿ ಮುಂತಾದವುಗಳನ್ನು ಹಂಚಿದರು.

ಅವರ್ಸಿ (ಕಾರವಾರ)—ಮಾಸ್ತರರು ಊರವರ ನೆರಿವಿನಿಂದ ಬಾದಶಹರ ಭಾವಪಠವನ್ನು ಊರಲ್ಲಿ ಮೆರಿಸುತ್ತ ಬಂದು ಸಭೆನೆರಿಸಿ ಉತ್ಸವಮಾಡಿದರು. ದೀಪೋತ್ಸವಮಾಡಿದರು.

ತಿಗಡಿ-ರಾ. ರಾ. ಚನಬಸಪ್ಪ ಜಕಾತಿ ಶಿದಬಸಪ್ಪ ಗೌಡರ ಗಣಪತರಾವ ಕುಲಕರ್ಣಿ ಮುಂತಾದವರ ನೆರಿವಿನಿಂದ ಶಾಲೆಯಲ್ಲಿ ಸಭೆಗೂಡಿ ಉತ್ಸವವನ್ನು ಸಾಂಗವಮಾಡಿದರು.

ಮುಡಿಗೇರಿ. (ಕಾರವಾರ)—ಪಂಚರೂ ಸದ್ಗೃಹಸ್ಥರೂ ಮಾಸ್ತರರೂ ಕೂಡಿ ಉತ್ಸವಮಾಡಿದರು.

ಚಂಡಿ. (ಕಾರವಾರ)—ಮೇಲಿನಂತೆ ದೀಪೋತ್ಸವ ಮೊದಲಾದವುಗಳು ನಡಿದವು.

ತಡಸ. (ಬಂಕಾಪೂರ)—ಶಾಲೆಯಲ್ಲಿ ಸಭೆನೆರಿಸಿ ಮು. ರಾ. ದುಂಡಪ್ಪ ಸಾವುಕಾರ ಇವರು ಮಿಠಾಯಿಯನ್ನು ಕೊಟ್ಟರು.

ಹಿರೇಮುಲ್ಲೂರ. (ಬಂಕಾಪೂರ)—ಶಾಲೆಯಲ್ಲಿ ಸಭೆನೆರಿಸಿ ಸಾರ್ವಭೌಮರ ಜಯಜಯಕಾರಮಾಡಿದರು.

ಕಲಿಕೇರಿ (ಗದಗ)—ವೀ. ರಾ. ರಂಗಾಚಾರ್ಯ ಕೊರ್ಲಳ್ಳಿ ಇವರು ಅನ್ನದಾನಮಾಡಿದರು. ಉಳಿದ ಉತ್ಸವಗಳೆಲ್ಲ ಮಾಡಿಕೆಯಂತೆ ಜರುಗಿದವು.

ಕಾಡರಕೊಪ್ಪ. (ಬಾದಾಮಿ)—ಬಾಲಪ್ಪಗೌಡರೂ ಇತರ ಊರ ಗೃಹಸ್ಥರೂ ಕೂಡಿ ಶಾಲೆಯಲ್ಲಿ ಸಭೆನೆರಿಸಿ ಉತ್ಸವ ಮಾಡಿದರು.

ಎಲಗಚ್ಚ್. (ಕಲ್ಬರ್ಗಿ)—ಮೇಲಿನಂತೆ.

ಮಲ್ಲೂರ. (ಕಲ್ಬರ್ಗಿ)—ಮು. ರಾ. ಗುದ್ಲೆಪ್ಪಯ್ಯಾ ಕೆಸರಹಳ್ಳಿ ಇವರು ಪುಸ್ತಕಗಳನ್ನು ಇನಾಮುಕೊಟ್ಟರು. ಮು. ರಾ. ಚನಬಸನಗೌಡರೂ ಪೀರಸಾಹೇಬರೂ ಅನ್ನದಾನಮಾಡಿದರು. ರಾ. ಸಣ್ಣತಮಪ್ಪಾ ಕುಲಕರಣಿ ಇವರು ವಸ್ತ್ರದಾನ ಮಾಡಿದರು. ಇದಲ್ಲದೆ ಸಣ್ಣವೀರನಗೌಡ ರುದ್ರಪ್ಪಾ ಕುಲಕರಣಿ ಶ್ರೀನಿವಾಸ ಕುಲಕರ್ಣಿ ಮುಂತಾದವರು ಈ ಮಂಗಲಕಾರ್ಯದಲ್ಲಿ ಪ್ರಮುಖರಾಗಿದ್ದರು.

ಯಕ್ಕುಂಡಿ—ಊರಲ್ಲಿ ಪ್ಲೇಗವಿದ್ದರೂ ಉತ್ಸವಮಾಡಿದರು.

ಸರಕುಳಿ. (ಕಾರವಾರ)—ಊರವರ ನೆರಿವಿನಿಂದ ಶಾಲೆಯಲ್ಲಿ ಸಭೆನೆರಿಸಿದ್ದರು. ಉಳಿದ ಉತ್ಸವಗಳು ಯಥಾಸಾಂಗವಾದವು.

ಅರಳೀಕಟ್ಟಿ. (ಬೆಳಗಾವಿ)—ಗ್ರಾಮಸ್ಥರೂ ಪಂಚರೂ ನೆರವಾಗಿ ದೀಪೋತ್ಸವ, ಮಿಠಾಯಿ ಹಂಚೋಣ ಮುಂತಾದ ಸಮಾರಂಭಗಳು ಸಾಂಗವಾಗಿ ನಡಿದವು.

ಬುಡರಗಟ್ಟಿ. (ಸಂಪಗಾವ)—ಮೇಲಿನಂತೆ.

ಬಗಳಿ—ಮೋಲಿನಂತೆ ಉತ್ಸವಗಳು ನಡಿದವು.

ಮಳಿವಿ (ಮುಂಡಗೋಡ)—ಮೇಲಿನಂತೆ ಯಥಾಸಾಂಗ ಉತ್ಸವಗಳು ನಡೆದವು.

ಮಾಳವಾಡ (ತಾಲೂಕ ರೋಣ)—ಗ್ರಾಮಸ್ಥರ ನೆರವಿನಿಂದ ಉತ್ಸವಕಾರ್ಯವು ಸಾಂಗವಾಯಿತು. (ಇವರು ಕವಿತೆಗಳನ್ನು ಕಳಿಸಿರುವರು.)

ಲಕ್ಷ್ಮೇಶ್ವರ (ನಿಂದಿಗಿ)—ಮಾಸ್ತರರು ಗ್ರಾಮಸ್ಥರ ನೆರವಿನಿಂದ ಸಭೆ ನೆರಿಸಿದ್ದರು.

ಶತಗುಣಕಿ (ಇಂಡಿ)—ಜಾಹಗಿರದಾರ, ಪಂಚೆ, ಗೌಡಕುಲಕರ್ಣಿ ಮುಂತಾದ ಸದ್ಗೃಹಸ್ಥರ ನೆರವಿನಿಂದ ಶಾಲೆಯನ್ನು ಸಿಂಗರಿಸಿ ಸಭೆ ನೆರಿಸಿ ಶ್ರೀಮಂತ ಆಬಾಸಾಹೇಬರನ್ನು ಅಧ್ಯಕ್ಷರನ್ನಾಗಿ ಮಾಡಿ ಉತ್ಸವ ಸಾಂಗಗೊಳಿಸಿದರು.

ಕೌಜಲಗಿ (ಗೋಕಾಕ)—ಶ್ರೀಮಂತ ದೇಸಾಯರು ಮು. ರಾ. ಮುತಾಲಿಕ ರಾಘವೇಂದ್ರರಾಯರು ಇತರ ಗೃಹಸ್ಥರೂ ಸೇರಿ ಶಾಲೆಯಲ್ಲಿ ಉತ್ಸವ ಮಾಡಿದರು.

ನಿಡಗುಂದಿ (ಬಾಗೇವಾಡಿ)-ಮು. ರಾ. ವೆಂಕಟರಾವ ವಕೀಲ ಇವರ ಅಧ್ಯಕ್ಷತೆಯಿಂದಲೂ ಊರವರ ನೆರವಿನಿಂದಲೂ ಉತ್ಸವ ಸಾಂಗವಾಯಿತು.

ಕಾಮನಕಟ್ಟಿ (ಗೋಕಾಕ)—ಊರವರ ನೆರವಿನಿಂದ ಶಾಲೆಯಲ್ಲಿ ಉತ್ಸವ ಮಾಡಲ್ಪಟ್ಟಿತು.

ಬೀರವಳ್ಳಿ (ಕಲಘಟಗಿ)—ಊರವರು ಈ ದಿನವನ್ನು ಪರ್ವದಂತೆ ಕಳಿದರು. ಶಾಲೆಯಲ್ಲಿ ಉತ್ಸವವಾಯಿತು.

ಶಲವಡಿ (ನವಲಗುಂದ)-ರಾ. ರಾ. ಲಿಂಗನಗೌಡಾ ಪಾಟೀಲ, ರುದ್ರಪ್ಪಣ್ಣಾ ಕುಲಕರಣಿ, ಮಲಕಾರ್ಜುನಪ್ಪಾ ಹಸಿಬಿ ಸಿಂದರಾವ ಪೋಲಿಸನಾಯಿಕ, ಇವರು ವಸ್ತ್ರದಾನ ಮಾಡಿದರು. ಓಲೇಕಾರ ಕೃಷ್ಣಪ್ಪನು ಅನ್ನದಾನ ಮಾಡಿದನು. ಈ ಉತ್ಸವಗಳು ಶಾಲೆಯಲ್ಲಿ ಯಥಾಪ್ರಕಾರ ನಡಿದವು.

ತೊರಿಕೆ (ಕಾರವಾರ)-ಊರವರ ನೆರವಿನಿಂದ ಶಾಲೆಯಲ್ಲಿ ಸಂಗಲಕಾರ್ಯವು ನೆರವೇರಿತು.

ಹುಬ್ಬಳ್ಳಿ-ಹಿರೇಮಠದ ಪಟ್ಟದೇವರಾದ ಬಸಲಿಂಗಸಾ

ಮಿಯವರೂ ಶಾಲೆಯಲ್ಲಿ ಮಾಡಿದ ಉತ್ಸವಕ್ಕೆ ಬಂದು ಹುಡು
ಗರಿಗೆ ಮಿಠಾಯಿ ಹಂಚಿದರು.

ಅರ್ಕೆ (ಕಾರವಾರ)—ಶಾಲೆಯ ಪಂಚರಾದ ವಾಸುದೇವ
ಮಹಾದೇವ ಹಬ್ಬು ಇವರ ನೆರವಿನಿಂದ ಉತ್ಸವ ಸಾಂಗ
ವಾಯಿತು.

ಕೋಳಿವಾಡ (ಹುಬ್ಬಳ್ಳಿ)—ಊರವರ ನೆರವಿನಿಂದ ಶಾಲೆ
ಯಲ್ಲಿ ಉತ್ಸವ ಸಾಂಗವಾಯಿತು.

ಬೇಡ್ತಿಹಾಳ (ಚಿಕ್ಕೋಡಿ)–ಇನಾಮುದಾರರಾದ ಶ್ರೀಮಂತ
ಮಾಧವರಾವ ಅಪ್ಪಾಸಾಹೇಬ ಇವರು ಸಹಾಯ ಮಾಡಿ ಶಾ
ಲೆಯಲ್ಲಿ ಉತ್ಸವ ಸಾಂಗವಾಯಿತು.

ಚತ್ತರಿಗಿ (ಹುನಗುಂದ)—ಮು. ರಾ. ಭೀಮಾಜೀ ಕುಲಕ
ರ್ಣಿ, ಸಣ್ಣಬಸನಗೌಡ, ಹಿರೇಬಸನಗೌಡ ಮುಂತಾದವರ
ನೆರವಿನಿಂದ ಉತ್ಸವ ಸಾಂಗವಾಯಿತು.

ಸಾಸಿವೀಹಳ್ಳಿ (ನವಲಗುಂದ)—ಊರವರು ಒಟ್ಟುಗೂಡಿ
ದೇವಸ್ಥಾನಗಳ ಜೀರ್ಣೋದ್ಧಾರವನ್ನು ಮಾಡುವದಕ್ಕೆ ಹಣ
ಕೂಡಿಸಿದರು. ಶಾಲೆಯಲ್ಲಿ ಸಭೆ ನೆರಿಸಿ ಸಮಾರಂಭವನ್ನು
ಸಾಂಗಗೊಳಿಸಿದರು.

ಸವಸಿ (ಕುಂದಗೋಳ)—ಎಲ್ಲ ಗುಡಿಗಳಲ್ಲಿ ದೀಪೋತ್ಸವ
ಮಾಡಿದರು.

ಗೋಕಾಕ—ಮಾಮಲೇದಾರ ಸಾಹೇಬರಿಂದ ಉತ್ಸವ
ಸಾಂಗವಾಯಿತು.

ಬುಜರೂಖಕಂಚಿನಹಳ್ಳಿ (ಕಾನಡಾ)–ರಾ ರಾ. ಚಂದ್ರಪ್ಪ
ಗೌಡರೂ ಇತರ ಕವಿಮಾಟಯರರೂ ನೆರವಾಗಿ ಶಾಲೆಯಲ್ಲಿ
ಉತ್ಸವವನ್ನು ಸಾಂಗಗೊಳಿಸಿದರು.

ಬನ್ನೂರ (ಬಂಕಾಪೂರ)—ಪಂಚರೂ ಗ್ರಾಮಸ್ಥರೂ ನೆರ
ವಾಗಿ ಶಾಲೆಯಲ್ಲಿ ಸಮಾರಂಭವನ್ನು ಮಾಡಿದರು.

ಮೋರಟಗಿ (ಸಿಂದಿಗಿ)—ಮೇಲಿನಂತೆ. ೨೫ ಸ್ತ್ರೀಯರಿಗೆ
ಸೀರಿ ಕುಪ್ಪಸಗಳನ್ನೂ ೩೦ ಮಂದಿ ಗಂಡಸರಿಗೆ ೧೫ ಹುಡು
ಗರಿಗೆ ಅಂಗಿ, ಧೋತರ, ರುಮಾಲಗಳನ್ನು ಕೊಟ್ಟರು.

ಚಾಂದಕವಠೆ (ಸಿಂದಿಗಿ)–ಮು. ರಾ. ರಾಮರಾವ ದೇಶಪಾಂ

ಡೆ ಇವರ ಅಧ್ಯಕ್ಷತೆಯಿಂದಲೂ ಬಾಳಾಜೀರಾವ, ಗೋವಿಂದರಾವ, ಬಸಪ್ಪ ಪಾಟೀಲ ಇವರ ನೆರವಿನಿಂದ ಶಾಲೆಯಲ್ಲಿ ಸಭಾಕಾರ್ಯವು ಸಾಂಗವಾಯಿತು.

ಮುಶೀಗೇರಿ (ರೋಣ ---ಕುಲಕರಣಿ ಮಾರ್ತಾಂಡರಾಯರ ನೆರವಿನಿಂದ ೧೪ ರೂಪಾಯಿ ಕೂಡಿಸಿ ಉತ್ಸವ ಸಾಂಗಗೊಳಿಸಿದರು. (ಇವರೂ ಕವಿತೆಯನ್ನು ಮಾಡಿ ಕಳಿಸಿರುವರು.)

ಗರ್ಲಸ್ಕೂಲ ಬೆಳಗಾಂವ—ಮು. ರಾ. ಅಣ್ಣಾ ಭಾತಖಂಡೆ ಇವರ ಪತ್ನಿಯವರು ಹೆಣ್ಣುಮಕ್ಕಳಿಗೆ ಕುಸ್ಪಸವನ್ನು, ಮಿಠಾಯಿಯನ್ನು ಕೊಟ್ಟು ಉತ್ಸವ ಸಾಂಗಗೊಳಿಸಿದರು.

ಕಡವಾಡ (ಕಾರವಾರ)—ಗ್ರಾಮಸ್ಥರ ನೆರವಿನಿಂದ ಉತ್ಸವ ಸಾಂಗವಾಯಿತು.

ಉಗರಗೊಳ್ಳ —ಮೇಲಿನಂತೆ.

ಹಂದಿಗನೂರ—ಶ್ರೀಮಂತ ಬಸವಂತರಾವ ಬಾಬಾಸಾಹೇಬ ಬಸಲಿಂಗಪ್ಪಾ ದೇಸಾಯಿ ಇವರೂ ಊರ ಇತರ ಗೃಹಸ್ಥರೂ ನೆರವಾಗಿ ಮಂಗಲಕಾರ್ಯವನ್ನು ನೆರವೇರಿಸಿದರು. ವಸ್ತ್ರದಾನ ಅನ್ನದಾನಗಳು ಸಾಗಿದವು.

ಹುನಗುಂದ—ಮಾಮಲೇದಾರ ಸಾಹೇಬರು ಉತ್ಸವವನ್ನು ಬಹು ವಿಜೃಂಭಣೆಯಿಂದ ಮಾಡಿದರು. ಆ ಕಾಲಕ್ಕೆ ಶಾಲಾಮಾತ್ತರರಿಂದ ಒಂದು ನಿಬಂಧವು ಓದಲ್ಪಟ್ಟಿತು.

ನೆಗಳೂರ (ಕರ್ಜಗಿ)—ವಿರೂಪಾಕ್ಷಗೌಡರು ಚಾವಡಿಯಲ್ಲಿ ಉತ್ಸವ ಮಾಡಿದ್ದಲ್ಲದೆ ಶಾಲೆಯ ಉತ್ಸವಕ್ಕೂ ನೆರವಾದರು. ಅನ್ನದಾನಾದಿಗಳು ಯಥಾಸಾಂಗ ನೆರವೇರಿದವು.

ನೀಲಗುಂದ (ಗದಗ)–ಚಿಂಚಲಿ (ಮುಳಗುಂದ) ಶಾಲೆಯ ಮಾಸ್ತರರೂ ಮು. ರಾ. ಕತ್ತಿ ಬಸಪ್ಪನವರೂ ವೇ. ರಾ. ರಾ. ಬಾಳದೀಕ್ಷಿತರೂ ಒಟ್ಟಾಗಿ ಶಾಲೆಯಲ್ಲಿ ಉತ್ಸವವನ್ನು ಸಾಂಗಗೊಳಿಸಿದರು. (ಇವರೂ ಕವಿತೆಗಳನ್ನು ಕಳಿಸಿರುವರು.)

ಬಮ್ಮನಹಳ್ಳಿ—ಗ್ರಾಮಸ್ಥರ ನೆರವಿನಿಂದ ಶಾಲೆಯಲ್ಲಿಯೂ ಚಾವಡಿಯಲ್ಲಿಯೂ ಸಭೆನೆರಿಸಿ ಉತ್ಸವವನ್ನು ಯಥಾಸಾಂಗವಾಗಿ ನೆರವೇರಿಸಿದರು.

ಕೋಡ—ಗ್ರಾಮಸ್ಥರ ನೆರವಿನಿಂದ ಉತ್ಸವ ಸಾಂಗವಾಯಿತು.

ಹುಣಸೀಹಾಳ (ಬಾಗೇವಾಡಿ)—ಗ್ರಾಮಸ್ಥರ ನೆರವಿನಿಂದ ಉತ್ಸವ ಸಾಂಗವಾಯಿತು.

ಹುಬ್ಬೀಹಳ್ಳಿ—ಗ್ರಾಮಸ್ಥರೂ ಊರವರೂ ವರ್ಗಣಿ ಕೂಡಿಸಿ ಶಾಲೆಯಲ್ಲಿ ಉತ್ಸವ ಮಾಡಿದರು.

ಬೆಂಡಿಗೇರಿ (ಬಂಕಾಪೂರ)—ಗ್ರಾಮಸ್ಥರ ನೆರವಿನಿಂದ ಉತ್ಸವ ಸಾಂಗವಾಯಿತು.

ಮಂಕಿ (ಹೊನ್ನಾವರ)—ಮೆ. ಸಹುದಾ ಹುಸೇನಸಾಹೇಬರೂ ಗ್ರಾಮಸ್ಥರೂ ನೆರವಾಗಿ ಶಾಲೆಯಲ್ಲಿ ಉತ್ಸವವನ್ನು ಸಾಂಗವಮಾಡಿದರು

ಡಂಬಳ (ಗದಗ)—ಶ್ರೀತೋಂಟದ ಸ್ವಾಮಿಗಳವರ ಸಹಾಯದಿಂದ ೬೦೦ ರೂ. ಗಳು ಕೂಡಿಸಿ ಅನ್ನದಾನ ಮೊದಲಾದ ಉತ್ಸವಗಳನ್ನು ಯಥಾಪ್ರಕಾರ ಸಾಂಗವಮಾಡಿದರು. ಶಾಲೆಯಲ್ಲಿಯೂ ಚಾವಡಿಯಲ್ಲಿಯೂ ಉತ್ಸವವಾಯಿತು.

ಹೆಸರೂರ (ಗದಗ)—ಊರವರ ಸಹಾಯದಿಂದ ಶಾಲೆಯಲ್ಲಿ ಉತ್ಸವ ಸಾಂಗವಾಯಿತು.

ಹಾರೋಬೀಡಿ—ಮೇಲಿನಂತೆ

ಶಿರೋಳ (ನವಲಗುಂದ)—ಗ್ರಾಮಸ್ಥರ ನೆರವಿನಿಂದ ಮಂಗಲಕಾರ್ಯವು ನೆರವೇರಿತು

ಸುಪಾ—ರಾವಸಾಹೇಬ ಮಾಲಕರಿಯವರಿಂದ ಶಾಲೆಯಲ್ಲಿ ಉತ್ಸವ ಸಾಂಗವಾಯಿತು.

ಲಕ್ಷ್ಮೇಶ್ವರ-ಶಾಲೆಯಲ್ಲಿಯೂ ಉತ್ಸವ ಸಾಂಗವಾಯಿತು.

ತಡಕೋಡ—ಊರವರ ಸಾಹಾಯದಿಂದಲೂ ಶ್ರೀಮಂತ ಹಂಗರಕೀ ದೇಸಾಯರ ಸಹಾಯದಿಂದಲೂ ಮಂಗಲಕಾರ್ಯವು ಸಾಂಗವಾಯಿತು.

ಹಳ್ಳೀಗುಡಿ (ಗದಗ)—ಗ್ರಾಮಸ್ಥರ ಸಹಾಯದಿಂದ ಶಾಲೆಯಲ್ಲಿ ಉತ್ಸವ ಸಾಂಗವಾಯಿತು.

ಹಳ್ಯೂರ (ಕೋಡ)—ಮೇಲಿನಂತೆ.

ಅಸನೂಟಿ (ಕಾನಡಾ)—ಮೇಲಿನಂತೆ.

ಆರೆಕುರಹಟ್ಟಿ. (ನವಲಗುಂದ)—ಮೇಲಿನಂತೆ.

ತಿಲವಳ್ಳಿ. (ನವಲಗುಂದ)—ಮೇಲಿನಂತೆ.

ಕೊರ್ಲಳ್ಳಿ--ಶ್ರೀಮತ್ ಪೂಜ್ಯ ಅಪ್ಪಯ್ಯಾಚಾರ್ಯ ಕೊರ್ಲಳ್ಳಿ ಇವರ ಅಧ್ಯಕ್ಷತೆಯ ಕೆಳಗೆ ಊರವರ ನೆರವಿನಿಂದ ಶಾಲೆಯಲ್ಲಿ ಸಮಾರಂಭವು ಯಥಾಸಾಂಗವಾಗಿ ನಡಿಯಿತು

ಕುರ್ತಕೋಟಿ (ಗದಗ,—ಊರವರ ನೆರವಿನಿಂದಲೂ ಗೌಡಶಾನ ಭೋಗರ ಸಹಾಯದಿಂದಲೂ ಶಾಲೆಯಲ್ಲಿ ಸಮಾರಂಭ ಸಾಂಗವಾಯಿತು. (ಇವರು ಕವಿತೆಗಳನ್ನು ಕಳಿಸಿರುವರು.)

ರೋಣ—ಮಾಮಲೇದಾರ ಸಾಹೇಬರವರಿಂದ ಉತ್ಸವ ಕಡುಸಡಗರದಿಂದ ಸಾಂಗವಾಯಿತು.

ಗೋವನಕೊಪ್ಪ (ಬಾಗಲಕೋಟೆ)—ಮು. ರಾ. ಸಣ್ಣಪರಪ್ಪಗೌಡರೂ ಶಾನಭೋಗ ಶಂಭೂರಾಯರೂ ಮುಂತಾದವರ ನೆರವಿನಿಂದ ಶಾಲೆಯಲ್ಲಿ ಸಮಾರಂಭ ಸಾಂಗವಾಯಿತು.

ಐರಣಿ (ರಾಣೆಬಿನ್ನೂರ)--ಮೇ ಹುಸ್ಸೇನಖಾನ ಸಾಹೇಬರವರ ಅಧ್ಯಕ್ಷತೆಯಿಂದಲೂ ಗ್ರಾಮಸ್ಥರ ನೆರವಿನಿಂದಲೂ ಸಮಾರಂಭವು ಸಾಂಗವಾಯಿತು.

ಬ್ಯಾಪಟ್ಟಿ (ಹುಬ್ಬಳ್ಳಿ)—ಗ್ರಾಮಸ್ಥರ ಸಹಾಯದಿಂದ ಸಮಾರಂಭ ಸಾಂಗವಾಯಿತು. (ಇವರ ಕವಿತೆಗಳು ಮುದ್ರಿಸಿವೆ)

ಹನವಳ್ಳಿ (ಕಲ್ಗಿ)—ಮೇಲಿನಂತೆ.

ಗುರ್ಲಹೊಸೂರ—ಹಣಮಂತರಾವ ಕುಲಕರ್ಣಿ, ಫಕೀರಪ್ಪ ಸಾವುಕಾರ ಇವರ ಸಹಾಯದಿಂದಲೂ ಊರವರ ನೆರವಿನಿಂದಲೂ ಶಾಲೆಯಲ್ಲಿ ಸಮಾರಂಭವು ಬಹು ವಿಜೃಂಭಣೆಯಿಂದ ಸಾಂಗವಾಯಿತು.

ಗಂಜೀಹಾಳ (ಹುನಗುಂದ)—ಇನಾಮದಾರರ ನೆರವಿನಿಂದಲೂ ಊರವರ ನೆರವಿನಿಂದಲೂ ಉತ್ಸವ ಸಾಂಗವಾಯಿತು.

ಹುನಗುಂದ. (ಗೆಲ್ಲ)—ಉತ್ಸವವು ಯಥಾಸ್ಥಾಂಗವಾಗಿ ನಡಿಯಿತು.

ಬಂಕಾಪೂರ—ಈ ಊರ ಮಾಸ್ತರರು ಊರವರಿಂದ ಸುಮಾರು ೫೦ ರೂಪಾಯಿಗಳನ್ನು ಕೂಡಿಸಿ ಶಾಲೆಯಲ್ಲಿ

ಸಭೆನೆರಿಸಿ ಮಹೋತ್ಸವವನ್ನು ಸಾಂಗಗೊಳಿಸಿದರು ವರ್ಗಣೆ ಕೊಟ್ಟು ಸಹಾಯವಾಡಿದ ಜನರವಿವರವು —

ಮಿ. ಗುರುಶಾಂತಪ್ಪ ಹಾನಗಲ್ಲ ಸಂಗಪ್ಪ ಗಾಣಿಗೆಗೌಡರ, ಮಿ ಗುರಪ್ಪ ಅಂಕಲಕೋಟಿ, ಬಸವಣ್ಣೆಪ್ಪ ಶೆಟ್ಟರ, ಮಿ. ಚಿಕ್ಕೇರಿ ಮುರಿಗೆಪ್ಪನವರು, ಮಿ. ಚನ್ನಪ್ಪ ಅಂಕಲಕೋಟಿ, ಮಿ ಹಣಮಂತರಾವ ಕುಲಕರ್ಣಿ, ಮೆ. ಅಬುಲ್‌ಗಫಾರ ಲಾಲಾನವರ, ಮೆ. ಮಹಮ್ಮದಯುಸೂಫ ಸಾ॥ ಖತೀಬ, ಮೆ. ಇಸಾಸಾನೋದಿನಸಾ॥ ಚರ್ದ್ರಿ, ಮೆ. ನಬಿಸಾ॥ ಮೆಳ್ಳಹಳ್ಳಿ ಮೆ॥ ಪೀರಸಾಬ ಸೊಲ್ಲಾಪುರ, ಮೆ. ಅಮೀರಸಾ॥ ಅಣ್ಣಿಗೇರಿ, ಮೆ. ಅಬ್ದುಲ್‌ಪಾಯದಸಾ॥ ಮುನಿಯಾರ ಮುಂತಾದವರು.

ನಂದಗಡ:—ಮ. ರಾ. ವಿಠಲರಾವ ಇವರ ಅಧ್ಯಕ್ಷತೆಯಿಂದ ಸಾಲಿಮುಲ್ಲಿ ಸಮಾರಂಭವು ಗ್ರಾಮಸ್ತರ ನೆರವಿನಿಂದ ಸಾಂಗವಾಯಿತು. ಮೆ ಖುದಾಯವಂದ, ಆದಮ ಸಾ ಪಾಟೀಲರು ಬಹಳ ಸಹಾಯಮಾಡಿದರು.

ರಟ್ಟೀಹಳ್ಳಿ—ಮ. ರಾ. ನಾಗನಗೌಡ ಪಾಟೀಲ, ಮಿ. ರಾಮಪ್ಪ ಕುಲಕರ್ಣಿ, ಮಿ. ಸಿದ್ದಪ್ಪಣ್ಣಾ ಗಾಂಜಿ ಮುಂತಾದವರ ಸಹಾಯದಿಂದ ಸಮಾರಂಭವು ಸಾಂಗವಾಯಿತು.

ಭೋಜ:—ಮಿ ಚಿಪ್ಪೀಸ (ಸ್ಕೂಲಮಾಸ್ತರರು. ರು ಗ್ರಾಮಸ್ತರ ನೆರವಿನಿಂದ ಸಮಾಂಭವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು.

ಕಿತ್ತೂರ (ಸಂಪಗಾವ)—ಮ. ರಾ. ಜಿಗ್ಗಜಜ್ಜರ (ಮೆ. ಮಾಸ್ತರ) ವೆ ರಾ. ರಾ. ನರಸಿಂಹಾಚಾರ್ಯ ಮ. ರಾ ಅಡಿವೆಪ್ಪ ವಳಸಂಗ ಮೊದಲಾದ ಗ್ರಾಮಸ್ತರ ನೆರವಿನಿಂದ ಶಾಲೆಯಲ್ಲಿ ಸಮಾರಂಭವಾಯಿತು.

ಹೊನ್ನಾವರ—ರಾ. ಸಾ. ಸಬ್ಬಜಜ್ಜರ ಅಧ್ಯಕ್ಷತೆಯಿಂದ ಸಮಾರಂಭ ಸಾಂಗವಾಯಿತು.

ಬಳಗಾನೂರ (ಗದಗ)—ಗ್ರಾಮಸ್ತರ ಸಹಾಯದಿಂದ ಸಮಾರಂಭವು ಸಾಂಗವಾಯಿತು.

ಪುಂಜರಿ. (ಚಿಕ್ಕೋಡಿ)—ಗ್ರಾಮಸರ ಸಹಾಯದಿಂದ ಉತ್ಸವವಾಯಿತು.

ಅಳಗವಾಡಿ (ನವಲಗುಂದ)–ರಾ. ರಾ. ಭದಮಗೌಡ, ದೇವನಗೌಡ, ತಿಮ್ಮನಗೌಡ, ಅಂಣಾರಾವ, ರಘುನಾಥರಾವ, ಶಿವಪ್ಪಾ, ಅಂಕಲಪ್ಪಾ ಮುಂತಾದ ಪ್ರಮುಖರ ನೆರವಿನಿಂದ ಸಮಾರಂಭವು ಸಾಂಗವಾಯಿತು.

ಶಾನವಾಡ (ನವಲಗುಂದ)–ರಾ. ರಾ, ಗೌಡಪ್ಪಗೌಡ, ಚನಬಸಪ್ಪಾ ಅಂಗಡಿ ಮುಂತಾದ ಜನರ ಸಹಾಯದಿಂದ ಸಮಾರಂಭವು ಸಾಂಗವಾಯಿತು.

ಶ್ರೀ

ಅಧ್ಯಕ್ಷರ ಲಿಪಿಕಾಪ್ಯಕಂ.

ಕಂದ.

ಶ್ರೀ ಸಕಲಲೋಕ ಪೂಜಿತ । ಭಾಸುರ ಜಗದೇಕ ಪಾಲ
ಕಂ ಗುಣವೃಂದಂ ॥ ಈ ಸಕಲ ಭರತರಾಜ್ಯ । ಶ್ರೀಕರ
ನೆಡ್ವರ್ಡ ಭೂಪರಂ ಪಾಲಿಸುಗೆ ॥ ೧ ॥

ಹರಿಣೀವೃತ್ತ.

ಮನುಜಪತಿ ತಾನೆಡ್ವರ್ಡಾಖ್ಯಂ ನೃಪೋತ್ತಮ ಪುಂಗವಂ ।
ಘನಸುಚರಿತಂ ಪ್ರಣ್ಯೋತ್ಕೃಷ್ಟಂ ಪ್ರಜಾಹಿತ ತತ್ಪರಂ ॥
ಜನತತಿನತಂ ಸೌಖ್ಯೋಕೇತಂ । ಗುಣಾವಳಿಗಾಶ್ರಯಂ ।
ಮನುಜಪತಿ ತಾನಾಗಲ್ಲೀಗಳ್ ಮುಪಂ ಪಡೆದತ್ತಿಳೆ ॥ ೨ ॥

ದೇದೀಪ್ಯಮಾನ ಗಜಪುರ । ವಾದಿಯೊಳ್ಪೈತಿಹ್ಯದಿಂ ಪ್ರಸಿದ್ಧ
ಮಿರಲ್ಕೇ ॥ ಭೂಧವಪುಂಗನನದರೊಳ್ । ಭೂಧವನೆನಿ
ಸಲ್ಕೆ ಹೇರ್ಮೆ ವೃದ್ಧಿವಡೆಯದೆ ॥ ೩ ॥

ದಯದರಾಶಿಯಿ ಸುಪ್ರತಾಪಿಯಿ ತಮ್ಮ ರಾಜ್ಯದೊಳಾವಗಂ ।
ನಯದೊಳರ್ಕನಿರುಳ್ ಪಗಲ್ ಶ್ರಮವೆನ್ನದಂಜುತ ರಂ
ಜಿಪಂ ॥ ಜಯಿಸೆ ವಾರಿಧಿಯಂಜೆ ದಾರಿಯ ಕೊಟ್ಟು ಸೇವೆ
ಯ ಮಾಳ್ಪುದಯ್ । ಭಯದೆ ಕಂಪಿಸಿ ಪಂಚಭೂತಗಳಾ
ಜ್ಞೆಯಂ ಸಲೆವಿಾರವಯ್ ॥ ೪ ॥

ವರಧಿಸುತಿರ್ಪುದು ರಾಜ್ಯಂ । ಪೆರ್ದನಿದೆಗೆದೆಳಉತಿರ್ಪರರ್ಥಿ

ಗೆಳ ಕೊಂಡಿರ್ ॥ ಬರ್ದಿಲಸೊಗವಮು ಭುವಿಯೊಳ್ । ಸಾ
ರ್ದಿಟೆ ಪ್ರಜೆಯುದವನಾಳ್ವ ದೇನಚ್ಚರಿಯೀ ॥ ೫ ॥

ವರೆಗಧೀಶ್ವರನಾಂಗ್ಲಭಾರತ ರಾಜ್ಯಪ್ರತಿಯರೀರ್ವರಂ ।
ಪರಮಮಂಗಲದೇವನರ್ಪಿಸಿದಂ ಭವತ್ಕರಕಳ್ಕರಿಂ ॥
ಧೊರೆತನಿ ಪೊಲಿಸು ಪ್ರೀತಿಯಿಂ ಸಮದೃಷ್ಟಿಯಿಂದಿವರೀ
ರ್ವರಂ । ಪರಮತಾಂಗನೆಯೆಂದು ಭಾವತೆಯನ್ನುದಾಸಿ
ಸದಿರ್ಪುದಯ್ ॥ ೬ ॥

ವಿಭುವಿಗೆ ಜನನಿಯು ತೆರದಿಂ । ದಿಭಪುರ ಚಕ್ರಾಧಿಪತ್ಯಗೆ
ಯ್ಯುವ ಮತಿತಾಂ ॥ ಪ್ರಭವಿಸುಗೆವಮಾತೃವಚನ । ಕ್ಕಭ
ಯಂಗೊಡಂ ತಿಳಿಯನೊಲ್ಮೆಯಿಂ ಪೊಲಿಸುಗೆ ॥ ೭ ॥

ವಿಜಯವಾಗಲಿ ಭೂಧವೇಂದ್ರನ ರಾಜಕಾರ್ಯಕೆ ಸಂತ
ತಂ । ಗಜಪ್ರರಾಧಿಪನಾವಗಂ ಶುಭಸೌಖ್ಯದಿಂ ಸಲೆ ಬಾ
ಳ್ಕೆತಾಂ ॥ ಪ್ರಜೆಗಳಂ ಸಮದೃಷ್ಟಿಯಿಂ ಶಿಶುಭಾವದಿಂ
ಪರಿಪೊಲಿಕೆ । ತ್ರಿಜಗದೊಳ್ ಯಶಮುರ್ವಿಪಬ್ರುಗೆ ವೈ
ಭವಮೆಂದಮದೋಡುಗೆ ॥ ೮ ॥ ಹ. ರಾ. ಕಾಲವಾಡ

ಮಹಾರಾಜರವರ ಪಟ್ಟಾಭಿಷೇಕದ ಮಂಗಲಪ್ರಸಂಗದ
ಲ್ಲಿ ಎಷ್ಟೋ ಮಂದಿ ಮಾಂಡಲಿಕ ರಾಜರಿಗೂ, ಇತರ ಸಜ್ಜನ
ಹಸ್ತರಿಗೂ, ಹಲವು ಜನ ಸರಕಾರದ ನೌಕರರಿಗೂ, ಬಹು
ಮಾನದ ಪದವಿಗಳು ಕೊಡಲ್ಪಟ್ಟವು. ಈ ಮಾದರಿಯ
ಸಿ. ಆಯ್. ಇ. ಎಂಬ ಗೌರವದ ಪದವಿಯು ನಮ್ಮ ಇಲಾ
ಖೆಯ ವಿದ್ಯಾಖಾತೆಯ ಡಾಯರೆಕ್ಟರ ಸಾಹೇಬರಾದ ಮೆಪ
ರ್ಸಾನ್ ಜಾಯಿಲ್ಸ ದೊರೆಗಳಿಗೂ ದೊರೆದಿರುವದು. ಇದು
ವಿದ್ಯಾಖಾತೆಗೆ ಭೂಷಣವಾದದ್ದೂ ನಾವೆಲ್ಲರೂ ಆನಂದ ಪಡ
ತಕ್ಕಂಥಾದ್ದೂ ಆಗಿರುವದು.

ಈ ಸಮಾರಂಭದಲ್ಲಿ ಸುಮಾರು ಹದಿನಾರು ಸಾವಿರ ಜನ
ರನ್ನು ಬಂಧಮುಕ್ತ ಮಾಡಿದರು. ನೂರು ರೂಪಾಯಿಗ
ಳೊಳಗಿನ ಸಾಲವನ್ನು ತೀರಿಸಲಿಕ್ಕಾಗದೆ ದಿವಾಣೀ ತುರುಂ

ಗದಲ್ಲಿ ಬಿದ್ದಂಥ ಎಲ್ಲ ಜನರ ಸಾಲವನ್ನು ತೀರಿಸಲು ಸರಕಾರ ದವರು ಹೊಣೆಯಾಗಿ ಸುಮಾರು ಎಂಟು ಲಂಬತ್ತು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ, ಆ ಸಾಲಗುಳಿಗಳನ್ನು ಋಣಮುಕ್ತ ಮಾಡಿದರು.

ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾದ ಮೆಹರ್ಬಾನ ಸಹಸ್ರಬುದ್ಧೀ ಸಾಹೇಬರು ಒಂದೂಮುಕ್ಕಾಲು ತಿಂಗಳ ರಜೆಯನ್ನು ತೆಗೆದುಕೊಂಡಿದ್ದರಿಂದ, ಅವರ ಸ್ಥಳಕ್ಕೆ ವಾಡಿಕೆಯಂತೆ ಬೆಳಗಾವಿಯ ಹಾಯಸ್ಕೂಲ ಹೆಡ್ಡ ಮಾಸ್ತರರಾದ ರಾವಸಾಹೇಬ ಕರಂದೀಕರ ಸಾಹೇಬರನ್ನು ನೇಮಿಸಿರುವರು.

PUBLIC SERVICE CERTIFICATE EXAMINATION SOUTHERN DIVISION

ಮುಲಖೀಪರೀಕ್ಷೆಯು.

ದಕ್ಷಿಣಭಾಗ

ನೋಟೀಸು.

ಸನ್ ೧೯೦೧ನೇ ಇಸವಿಯ ದಿಶಂಬರ ೭೦ನೇ ತಾರೀಖಿನ ಮುಂಬಯಿ ಸರಕಾರೀ ಗ್ಯಾಝಿಟೀಯರನ ೧ನೇ ಭಾಗದಲ್ಲಿ ಪ್ರಸಿದ್ಧಿಸಲ್ಪಟ್ಟ ನಿಯಮಗಳಿಗನುಸರಿಸಿ ಕೆಳಗಿನ ತರಗತಿಯ ಸರಕಾರೀ ಕೆಲಸಗಳನ್ನು ದೊರಕಿಸುವದಕ್ಕಾಗಿ ಬೇಕಾಗುವಂಥ, ೧೯೦೩-೧೯೦೪ನೇ ಇಸವಿಯಲ್ಲಿ ದಕ್ಷಿಣ ಭಾಗದಲ್ಲಿ (ಬೆಳಗಾವ, ಕಾರವಾಡ, ಧಾರವಾಡ, ಬಿಜಾಪುರ, ರತ್ನಾಗಿರಿ, ಕುಲಾಬಾ, ಕೊಲ್ಹಾಪುರ ಮತ್ತು ಬೇರೆ ಸಂಸ್ಥಾನಗಳು) ಆಗುವಂಥ ೭ನೇ ಮತ್ತು ೩ನೇ ಗ್ರೇಡ ಪಬ್ಲಿಕ್ ಸರ್ವಿಸ್ ಸರಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಬರೆದ ಪುಸ್ತಕಗಳು ಗೊತ್ತುಮಾಡಲ್ಪಟ್ಟಿವೆ.

೧. ಬೆಳಗಾವ, ಬಿಜಾಪುರ, ಕಾರವಾರ ಸೆಂಟರುಗಳಲಿ

ಪರೀಕ್ಷೆಯು ಕನ್ನಡ ಹಾಗು ಮರಾಠಿ ಭಾಷೆಯು ಮುಖಾಂತರ ಕೆವಾಗಿಯೂ ಧಾರವಾಡ ಸೆಂಟರಿನಲ್ಲಿ ಬರೇ ಕನ್ನಡ ಭಾಷೆಯ ಮುಖಾಂತರವಾಗಿಯೂ ರತ್ನಾಗಿರಿ, ಕುಲಾಬಾ, ಕೊಲ್ಹಾಪುರ ಸೆಂಟರುಗಳಲ್ಲಿ ಬರೇ ಮರಾಠಿ ಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

೩. ಮರಾಠಿಯಲ್ಲಿ ಪರೀಕ್ಷೆಯನ್ನು ಕೊಡಲಕೇಳ್ಸಿಸುವ ಧಾರವಾಡ ಜಿಲ್ಲೆಯ ಉಮೇದವಾರು ಮೆ. ಎಜ್ಯುಕೇಶನಲ್, ಇ, ಸಾ. ರವರ ಅಪ್ಪಣೆಯಿಂದ ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು.

೨ ನೇ ಗ್ರೇಡ ಸರಟಿಫಿಕೇಟ ಪರೀಕ್ಷೆಯು,

(ಶೆಡ್ಯೂಲ ಬಿ. ೨)

(೧) ಇಂಗ್ಲೀಷ (೫೫) ಶೇಕ್ಸಪೀಯರನ ಲ್ಯಾಂಬಸಟೇಲ ಬೊಳಗಿನ ಟ್ವೆಲ್ಥನಾಯಿಟ, ಅಥೆಲ್ಲೊ, ಆಲ್ ಇಜವೆಲ್ ಎಂಡಸವೆಲ್ಲ, ಟೂ ಜಂಟಲ್‌ಮನ್ ಆಫ್ ವ್ಹೆರೋನಾ ಮತ್ತು ಸಿಂಬೆಲಾಯನ (೩) ವಿಕಾರ ಆಫ್‌ವೇಕ ಪೀಲ್ಡದ ಮೊದಲಿನವು ೭೦ ಪುಟಗಳು.

ಕವಿತೆ—ಗೋಲ್ಡಸ್ಮಿಥನ ಟ್ರ್ಯಾವೆಲ್ಲರದ ಅಥವಾ ಕ್ಹೌಪೆರಟಾಸ್ಕ 'ಟಾಯಿಮ್‌ಪೀಸ' ದ ಮೊದಲಿನ ೪೦೦ ಪಂಕ್ತಿಗಳು.

೨. ಮರಾಠಿ—ಚಿಪಳೂಣಕರಕೃತ ಸಾಕ್ರೇತೀಸನ ಚರಿತ್ರ.

೩. ಕನ್ನಡ—ತೊರಮುರೀಕೃತ ಕಾದಂಬರಿ ಅಥವಾ ಶಾಲಾಖಾತೆಯ ಆರನೇ ಪುಸ್ತಕದ ಪೂರ್ವಾರ್ಧ.

೪. ಹಿಂದುಸ್ತಾನಿ—ತೌಬತೂನ ನಸೊಹ.

೩ ಗ್ರೇಡ ಸರಟೀಫಿಕೇಟ-ಶೆಡ್ಯೂಲ, ಸಿ—೨

(೧) ಅಂಕಗಣಿತ ಸಂಪೂರ್ಣ, ಜಮಾಖರ್ಚ, ಯುಕ್ಲಿಡನ ೧ ನೇ ಪುಸ್ತಕ ಪೂರಾ.

(೨) ಮರಾಠಿ—ವಾಚನಪುಸ್ತಕ, ಮರಾಠಿ ೬ನೇ ಪುಸ್ತಕ ಸಂಪೂರ್ಣ;

ಕವಿತೆ ಮೊದಲನೇ ಪಾನಿನಿಂದ ೧೨೧ ನೇ ಪಾನಿನವರೆಗಿರುವ ೩೧೦ ಪಂಕ್ತಿಗಳನ್ನು ಅರ್ಥ ಸಹಿತ ಬಾಯಿಪಾಠ ಅನ್ನುವದು.

(೩) ಕವಿತೆ-ಎರಡನೇ ಪುಸ್ತಕದ ೭೦ ರಿಂದ ೭೬ ರವರೆಗಿನ (ಎರಡೂ ಸಹಿತ) ಕವಿತೆಗಳನ್ನು ಅರ್ಥ ಸಹಿತ ಬಾಯಿಪಾಠ ಅನ್ನೋಣ.

(೪) ಹಿಂದುಸ್ತಾನಿ–ತೌಬತೂನ ನಾಸೂಹೆ.

ಧಾರವಾಡ } B. R. Sahasrabudhe,
ತಾ। ೨೦-೧೧-೧೯೦೩. } ಎ. ಇನಸ್ಪೆಕ್ಟರ ದಕ್ಷಿಣಭಾಗ.

ನೋಟೀಸು.

ಸರ್ ೧೪೭೩ ನೇ ಇಸವಿಯ ಅಕ್ಟೋಬರ ತಿಂಗಳ ಕನ್ನಡ ತಾಲಾಪತ್ರಿಕೆಯ ೧೪ ರಿಂದ ೧೬ ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಣಕ್ರೈಜ" ಎಂಬ ಇನಾಮುಗಳ ಸಲುವಾಗಿ ಪರೀಕ್ಷೆಯು ಕನ್ನಡದಲ್ಲಿ ಧಾರವಾಡ ಟ್ರೇನಿಂಗಕಾಲೇಜದೊಳಗೆ ತಾರೀಖು ೩ ನೇ ದಿಸಂಬರ ಸರ್ ೧೯೦೩ ನೇ ಇಸವಿ ಸೋಮವಾರ ದಿವಸ ಕೆಳಗೆ ಸಹಿ ಮಾಡುವನಿಂದ ತೆಗೆದುಕೊಳ್ಳಲ್ಪಡುವದು. ೪೦ ರೂ. ಗಳ ಇನಾಮು ಒಂದು ಮತ್ತು ೨೦ ರೂ. ಗಳ ಇನಾಮು ಒಂದು ಈ ಪ್ರಕಾರ ಎರಡು ಇನಾಮುಗಳು ಇರುವವು. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಾರೀಖು ೨೦ ನೇ ನವಂಬರ ೧೯೦೩ ನೇ ಇಸವಿ ಒಳಗಾಗಿ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವನ ಕಡೆಗೆ ಕಳುಹಿಸಬೇಕು. ಪರೀಕ್ಷೆಯು ಮುಂಜಾನೆ ೧೧ ಘಂಟೆಗೆ (ಮದ್ರಾಸ ಟೈಮು) ಸರಿಯಾಗಿ ಪ್ರಾರಂಭವಾಗುವದು.

ಧಾರವಾಡ, } B. R. Sahasrabudhe,
ತಾ॥ ೨೫-೧೨-೧೯೦೨ } ಎ. ಇ. ದಕ್ಷಿಣಭಾಗ.

ಶಾಲಾಪತ್ರಕ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಯಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮುಂ ಪುಟ್ಟಿಸಿ ॥
ನಯದಿಂವಿತ್ತವೆಪೋದುಪಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ಪಯೆಯಿಂದೋಷಪತಿವ್ರತೇ ವೇಳ್ವುದುಮುರ್ವೀಜಾನಿಪವೃದ್ಧಿಪ್ರಿಯರಿಂ॥

ಪುಸ್ತಕ ೩೯] ಮಾರ್ಚ ೧೯೦೩ [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆಲವು ಶಾಶ್ವತೀವಸ್ಥಲಗಳು.

ಕುರುಕ್ಷೇತ್ರ—ಕೌರವ ಪಾಂಡವರು ಕಾಳಗ ಮಾಡಿದ ಸ್ಥಲವು ವಾಡಿಕೆಪೂಗಿ ಕುರುಕ್ಷೇತ್ರವೆಂದು ಹೇಳುವದುಂಟು. ಆದರೆ ಈ ಸ್ಥಲವು ಈಗ ಎಲ್ಲಿರುವದೆಂಬದು ಬಹು ಜನರಿಗೆ ಗೊತ್ತಿಲ್ಲ. ಮಹಾಭಾರತದಲ್ಲಿ ಈ ಸ್ಥಲದ ಮರ್ಯಾದೆಯು ಹೀಗೆ ಹೇಳಿದೆ.

दक्षिणेन सरस्वत्या दृषद्वत्योत्तरेण च ।
ये वसंति कुरुक्षेत्रमुते—वसंतित्रिविष्टपे ॥ १ ॥

ವನಪರ್ವ ಅಂ ೮೩

ಸದ್ಯಕ್ಕ ಹಿಂದುಸ್ಥಾನದ ನಕಾಶದಲ್ಲಿ ಯಮುನೆಯ ಪಶ್ಚಿಮಕ್ಕೆ ಸ್ಥಾನೇಶ್ವರ ಪಟ್ಟಣವಿರುವದು. ಇದರ ಬಳಿಯಿಂದ ಲೇಸರಸ್ವತೀನದಿಯು ಹರಿಯುತ್ತ ರಾಜಸ್ಥಾನದ ಉಸುಬಿನ ಬೈಲಲ್ಲಿ ಇಂಗಿಹೋಗುವದು ದೃಷದ್ವತಿ ನದಿಯು ಸಣ್ಣದಿರುವದರಿಂದ ನಕಾಶದಲ್ಲಿ ಬರೆದಿಲ್ಲ. ಇವೆರಡರ ನಡು

ಧ್ಯದ ಪ್ರದೇಶಕ್ಕೆ ಕುರುಕ್ಷೇತ್ರವೆಂಬ ಹೆಸರು. ಇದರ ವಿಸ್ತೀರ್ಣವು ೪೦×೪೦ ಹರವಾರಿಯುಂಟು. ಈ ಕುರುಕ್ಷೇತ್ರದಲ್ಲಿ ಅನೇಕ ತೀರ್ಥಗಳುಂಟೆಂದು ಭಾರತೆದಲ್ಲಿ ಲೇಖವುಂಟು. ಅವುಗಳಲ್ಲಿ ಪೃಥೂದಕವೆಂಬದು ಹೆಸರಾದದ್ದು. ಈ ತೀರ್ಥವು ತನ್ನ ಮೊದಲಿನ ಹೆಸರಿನಿಂದ ಈ ಹೊತ್ತಿಗೂ ಸ್ಥಾನೇಶ್ವರದಿಂದ ಪಶ್ಚಿಮಕ್ಕೆ ೪ ಮೈಲು ಅಂತರದಲ್ಲಿ ನೆಲಸಿರುತ್ತದೆ. ಇದರ ನೆರೆಯಲ್ಲಿ ಪೆಹೋಆ ಎಂಬ ಪಟ್ಟಣವುಂಟು.

ಅಹಿಛತ್ರ ಅಥವಾ ಅಹಿಕ್ಷೇತ್ರ ಪಟ್ಟಣವೂ ಈ ಹೊತ್ತಿಗೂ ಪೂರ್ವನಾಮದಿಂದ ಪ್ರಸಿದ್ಧವಾಗಿರುತ್ತದೆ. ಇದು ಮೊದಲು ಉತ್ತರ ಪಾಂಚಾಲ ದೇಶದ ರಾಜಧಾನಿಯಾಗಿತ್ತು. ಈಗ ಇದು ಇರುವ ಪ್ರದೇಶವು ರೋಹಿಲಖಂಡವೆಂದು ಕರೆಯಲ್ಪಡುತ್ತದೆ. ಈ ಪಟ್ಟಣದ ಕೋಟೆಯನ್ನು ಘೋಗ್ರಾ ರಾಮಗಂಗಾ ನದಿಗಳ ಮಧ್ಯದಲ್ಲಿ ಆದಿರಾಜನೆಂಬವನು ಕಟ್ಟಿಸಿದನೆಂದು ಹೇಳುವರು. ಈ ಆದಿರಾಜನ ಮೇಲೆ ಸರ್ಪವುಹೆಡೆಯೆತ್ತಿ ಆಡಿದ ಕಾರಣ ಇದಕ್ಕೆ ಅಹಿಛತ್ರವೆಂಬ ಹೆಸರು ಬಂತೆಂದು ಹೇಳುವರು. ಈ ಪಟ್ಟಣದಲ್ಲಿ ಹನ್ನೆರಡು ವಿಹಾರಗಳೂ ನಾಲ್ಕೈದು ಸ್ತೂಪಗಳೂ ಬಂಬತ್ತು ವೈದಿಕ ಧರ್ಮದವರ ದೇವಾಲಯಗಳೂ ಇರುವವು. ಕೆಲವೆಯು ಹಾಳಾಗಿದ್ದರೂ ಉದರ ಮೂವತ್ತೆರಡು ಕೊತ್ತಳಗಳು ಇಂದಿಗೂ ನಿಂತಿರುವವು.

ಮಲಗಿದಾಗ ಹೊತ್ತು ಕೊಳ್ಳುವ ಅವಶ್ಯಕತೆಯೇನು?

ಮಲಗಿದಾಗ ಹೃದಯಸ್ಪುರಣವು ಮಂದವಾಗಿ ಸಾಗುತ್ತದೆ. ಅದು ಇತರೆ ವ್ಯಾಪಾರಗಳು ನಡೆದಿರುವ ಸಮಯಕ್ಕಿಂತ ಮಲಗಿದಾಗ ಒಂದು ಮಿನಿಟಿಗೆ ಹತ್ತುಸಾರೆ ಕಡಿಮೆ ಹಾದುತ್ತದೆಂದು ಗೊತ್ತು ಮಾಡಲ್ಪಟ್ಟಿದೆ. ಸುದೃಢ ಮನುಷ್ಯನು ಆರೋಗ್ಯಕ್ಕಾಗಿ ಎಂಟೇ ತಾಸು ನಿದ್ದೇ ಮಾಡಬೇಕೆಂದು ಬಲ್ಲವರು ಹೇಳುತ್ತಾರೆ. ಇದರಿಂದ ನಿದ್ದೆಯಲ್ಲಿ ಸುಮಾರು

ಏದು ಸಾವಿರ ಸಾರೆ ಹೃದಯಸ್ಪುರಣವು ಕಡಿಮೆ ನಡೆಯುತ್ತದೆಂದು ತಿಳಿಯುವದು. ಒಂದು ಸ್ಪುರಣವು ಸುಮಾರು ಐನ್ನೆರಡು ತೊಲಿ ರಕ್ತವನ್ನು ರಕ್ತಾಶಯದಿಂದ ಶರೀರದ ನಿಕ್ಕ ಅವಯವಗಳಿಗೆ ಕಳಿಸುತ್ತದೆ, ಇದರಿಂದ ಸುಮಾರು ೬೦೦೦ ಸಾವಿರ ತೊಲಿ ರಕ್ತದ ಅಭಿಸರಣವು ಮಲಗಿದಾಗ ನಡಿಯುವದಿಲ್ಲೆಂದು ಸಿದ್ಧವಾಗುತ್ತದೆ. ರಕ್ತವೇ ಮನುಷ್ಯ ಶರೀರದ ಉಷ್ಣತೆಯನ್ನು ಕಾಯುವ ಸಾಧನವಾಗಿದೆ. ಅದು ನಿದ್ರೆಯಲ್ಲಿ ತನ್ನ ವ್ಯಾಪಾರವನ್ನು ಕಡಿಮೆ ಮಾಡಿಸುವದರಿಂದ, ಉಷ್ಣತೆಯಾದರೂ ಕಡಿಮೆ ದೊರೆಯುತ್ತದೆ. ಅದು ಕಾರಣದಿಂದಲೆ ಕೃತ್ರಿಮ ಉಪಾಯವಾದ ಹೊದಿಕೆಯಿಂದ ಈ ಕೊರತೆಯನ್ನು ಪೂರೈಸಿಕೊಳ್ಳಬೇಕಾಗುವದು.

ಅಂಚೇಕಟ್ಟೆಗಳು:—ಜಗದೊಳಗೆ ಹೆಸರು ಹೊಂದಿ ಲಯವಾದ ಪಾರ್ಸೀಸ್ಥಾನ (ಇರಾಣ)ದಲ್ಲಿ ಸಾಯರಸನೆಂಬ ಪ್ರಸಿದ್ಧ ರಾಜನು ಆಳುತ್ತಿರುವಾಗ, ಅವನು ತನ್ನ ರಾಜ್ಯದಲ್ಲಿ ಮೊಟ್ಟ ಮೊದಲು ಅಂಚೇಕಟ್ಟೆಗಳನ್ನೂ ಸ್ಥಾಪಿಸಿದನು. ಇವನು, ರಾವುತನು ಒಂದು ದಿವಸದಲ್ಲಿ ಎಷ್ಟು ಹಾದಿಯನ್ನು ನಡೆಯುವನೆಂಬದನ್ನು ಗೊತ್ತು ಹಚ್ಚಿ, ಅಷ್ಟಷ್ಟು ಅಂತರಕ್ಕೆ ಒಂದೊಂದು ಅಂಚೇಕಟ್ಟೆಯನ್ನು ಕಟ್ಟಿಸಿದನು. ಆ ಸ್ಥಳದಲ್ಲಿ ಕೆಲವು ಕುದುರೆಗಳನ್ನು ಇಡಿಸಿ ಒಬ್ಬ ಅಧಿಕಾರಿಯನ್ನು ನೇಮಿಸಿದನು. ಆ ಅಧಿಕಾರಿಯು ಒಂದು ಕಟ್ಟೆಯಿಂದ ಬಂದ ರಾವುತನಾದ ಓಲೇಕಾರನಿಗೆ ವಿಶ್ರಾಂತಿಗಾಗಿ ತನ್ನ ಬಳಿಯಲ್ಲಿಟ್ಟುಕೊಂಡು ಬೇರೊಬ್ಬನನ್ನು ಹೊಸ ಕುದುರೆಯೊಡನೆ ಮುಂದೆ ಕಳುಹಿಸುವನು. ಈ ಬಗೆಯಾಗಿ ಈಗ ಉಗೆಬಂಡಿ ಉಗೆಹಡಗುಗಳಿಲ್ಲದ ಊರುಗಳ ನಡುವೆ ಟಪಾಲನ್ನು ಒಯ್ಯುವರನ್ನರ ಜನರಂತೆ ಅವನು ವ್ಯವಸ್ಥೆಯನ್ನಿಟ್ಟಿದ್ದನೆಂದು ತೋರುತ್ತದೆ.

ಕಾಲೇಜದ ಕಾಹೀಮು ಪ್ರಿನ್ಸಿಪಾಲರಾದ ರಾವಸಾಹೇಬ ಕೊಡ್ಡ ಶ್ರೀನಿವಾಸರಾಯರು ತಾರೀಖು ೯ನೇ ಫೆಬ್ರುವರಿ ಯಿಂದ ಮಾರ್ಚ ತಿಂಗಳ ಕೊನೆಯ ವರೆಗೆ ಮನಃ ಸ್ವಾಸ್ಥ್ಯ ಪ ಸಲುವಾಗಿ ರಜೆ ತೆಗೆದುಕೊಂಡು ಶ್ರೀಸೇತು ಬಂಧರಾ ಮೇಶ್ವರಕ್ಕೆ ಹೋದರು. ಅವರ ಕೆಲಸವನ್ನು ವೈಸಪ್ರಿನ್ಸಿ ಪಾಲರಾದ ರಾ. ಸಾ. ಕೃಷ್ಣರಾವ ಬೆಂಡಿಗೇರಿ ಇವರು ಸಾಗಿ ಸುತ್ತಾರೆ.

ಕಳೆದ ವರುಷ ಹೋಳೀಹಬ್ಬದ ಸುಟ್ಟಿಯಲ್ಲಿ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನಾಲ್ಕೂ ಜಿಲ್ಲೆಯ ಅಧ್ಯಾಪಕರ ಸಭೆಯನ್ನು ನೆರಿಸಿ, ಅವರ ಮುಂದೆ ಕೆಲವು ವಸ್ತುಪಾಠಗ ಳನ್ನು ಸಿದ್ಧಪಡಿಸಿ ಕಲಿಸಿದ್ದು ಎಲ್ಲರಿಗೂ ಗೊತ್ತೇ ಅದೆ. ಅದೇ ಮೇರೆಗೆ ಈ ವರ್ಷವಾದರೂ ಮಾರ್ಚ ತಿಂಗಳ ೧೩।೧೪ ಈ ಎರಡು ದಿವಸ ಕಾಲೇಜದಲ್ಲಿ ಶಿಕ್ಷಣ ನಡಿಸು ವದು ಗೊತ್ತಾಗಿದೆ. ನಾಲ್ಕೂ ಜಿಲ್ಲೆಯ ಅಧ್ಯಾಪಕರು ತಮ್ಮ ತಮ್ಮ ವರಿಷ್ಠಾಧಿಕಾರಿಗಳನ್ನು ಕೇಳಿಕೊಂಡು ಬರ ಖೇಕೆಂದು ಪ್ರಿನ್ಸಿಪಾಲ ಸಾಹೇಬರ ಸೂಚನೆಯುಂಟು. ಇತ್ತ ಕಡೆಗೆ ಅಧ್ಯಾಪಕರು ಲಕ್ಷ ಕೊಡತಕ್ಕದ್ದು.

ಮೈಸೂರ ಸೀಮೆಯು ಕನ್ನಡ ನುಡಿಯ ತೌರಮನೆಯೆನಿ ಸುವದು. ಅದರಿಂದ ಆ ಸರಕಾರದವರು ಈ ಭಾಷೆಗೆ ವಿಶೇಷ ಉತ್ತೇಜನ ಕೊಡುತ್ತಿರುವರು. ರಾ. ಸಾ. ಕೃಷ್ಣ ರಾವ ಬೆಂಡಿಗೇರಿಯವರು ಜೈಮಿನಿಯ ೧೦, ೧೩ನೇ ಸಂಧಿಗಳಿಗೆ ಟೀಕೆಯನ್ನು ಬರೆದಿರುವರವ್ವೇ, ಆ ಪುಸ್ತಕ ಗಳ ನೂರು ಪ್ರತಿಗಳನ್ನು ಕೊಂಡು ಕೊಂಡು ಗ್ರಂಥಕಾರ ರಿಗೆ ಉತ್ತೇಜನ ಕೊಟ್ಟದ್ದಾಗಿ ತಿಳಿಯುವದು. ಇದಲ್ಲದೆ ಈ ಇಲಾಖೆಯ ಡೈರೆಕ್ಟರ ಸಾ. ರಾದರೂ ಈ ಪುಸ್ತಕಗಳನ್ನು ಲೈಬ್ರರಿಗಾಗಿಯೂ, ಇನಾಮಿಗಾಗಿಯೂ, ಟಕ್ಷ ಬುಕ್ಕಿಗಾ ಗಿಯೂ ಮಂಜೂರವಮಾಡಿದ್ದಾರೆ.

INSTRUCTION TO TEACHERS.
ಶಿಕ್ಷಕರಿಗೋಸ್ಕರ ಸೂಚನೆಗಳು.
(ಈಗಿನೇ ಪುಟದಿಂದ ಮುಂದೆ ಸಾಗಿದ್ದು.)

ಮೊದಲನೇ ಇಯತ್ತೆ.

೧. ಈ ಇಯತ್ತೆಯಲ್ಲಿ ಕಥೆಗಳೂ ಹಾಡುಗಳೂ ಆಟಗಳೂ ಕವಾಯಿತು, ಕಿಂಡರಗಾರ್ಡನ ಪದ್ಧತಿಯ ವ್ಯವಸಾಯುಗಳೂ ಮುಂತಾದವುಗಳನ್ನು ಮುಂದೆ ಸಾಗಿಸಬೇಕು. ಮತ್ತು ಬಾಲಕರ ವರ್ಗದಲ್ಲಿ ಈ ವಿಷಯವಾಗಿ ಹೇಳಿದ ಸೂಚನೆಗಳು ಈ ಇಯತ್ತೆಗಾದರೂ ಹತ್ತುವವು. ಓದೋಣ, ಬರಿಯೋಣ, ಗಣಿತ ಮುಂತಾದ ಈ ಇಯತ್ತೆಗೆ ಗೊತ್ತು ಪಡಿಸಿದ ಬೇರೆ ಬೇರೆ ವಿಷಯುಗಳನ್ನು ಆದಷ್ಟು ಮಟ್ಟಿಗೆ ಒಂದಕ್ಕೊಂದು ಸಂಬಂಧಿಸಿ ಕಲಿಸುತ್ತಾ ಹೋಗಬೇಕು.

೨. ಮೊಗ್ಗೆಗಳೂ ಸಂಖೆಯೂ—ಹಳ್ಳೀ ಇಯತ್ತೆಗಳಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಸವ್ವಾದವರಿಗೆ ಮೊಗ್ಗೆಗಳನ್ನು ಕಲಿಯಬೇಕಾಗುತ್ತಿತ್ತು. ಆದರೆ ಅವುಗಳು ಈಗ ಬಹಳ ಮಟ್ಟಿಗೆ ಕಡಿಮೆ ಮಾಡಲ್ಪಟ್ಟವೆ. (ಉದಾಹರಣಾರ್ಥವಾಗಿ ೨೦ × ೧೦) ಅಭ್ಯಾಸದ ಪೂರ್ತಿಗಾಗಿ ಹಾಗು ಪ್ರತ್ಯಕ್ಷ ವಸ್ತುಗಳ ಉದಾಹರಣೆಗಳಿಂದ ಶಿಕ್ಷಣವು ಬೆಲೆಯುಳ್ಳದ್ದಾಗುವದಕ್ಕಾಗಿ ಮೊಗ್ಗೆಗಳು ಬಹಳ ಕಡಿಮೆ ಮಾಡಲ್ಪಟ್ಟವೆ. ಮೊಗ್ಗೆಗಳನ್ನು ಕೇವಲ ಬಾಯಿಪಾಠ ಮಾಡಿಸುವ ಪದ್ಧತಿಯು ಈಗ ಸ್ವೀಕರಿಸಲ್ಪಡಲಾಗದು.

ಬಾಲಕರ ವರ್ಗದಲ್ಲಿ ಕಲಿತ ಸಂಖ್ಯೆಗಳನ್ನು ಅದೇ ವರ್ಗದಿಂದ ಹೆಚ್ಚಿಗೆ ಕಲಿಸುತ್ತಾ ಎಕ್ಕಂ ದಹಂ ಶತಂ ಗಳ ಜ್ಞಾನವನ್ನು ಮಾಡಿಕೊಡಬೇಕು ಹತ್ತು ಪೈಸೆಯ ಮಣಿಗಳು ಒಂದು ದಹಂವನ್ನು ಇಂಥ ಹತ್ತು ದಹಮ್ಮುಗಳು ಒಟ್ಟಾಗಿ ಒಂದು ಶತಮ್ಮವನ್ನು ತೋರಿಸುವವು. ಹುಡುಗರು ಸಂಖ್ಯೆಗಳ ವಿಕೀಕರಣ ಪೃಥಕ್ಕರಣಗಳಲ್ಲಿ ಒಳಿತಾಗಿ ನುರಿಯಬೇಕು. ಅವರು ಮೊದಲು ತೋರಿಸಿದಂತೆ ಬಿಡಿಕಾಳು ಮತ್ತು ಸರಗಳಸಾಧನವಿಂದಲೂ ಬಳಿಕ ಅತ್ತ

ಗಳ ಸಹಾಯವಿಲ್ಲದೆಯೂ ಈ ಕಾರ್ಯವನ್ನು ಮಾಡುವ ರೂಢಿಯನ್ನಿಡಬೇಕು.

ಬಿಡಿಕಾಳು

ಹತ್ತು ಎಕ್ಕಂ

೧ ಹತ್ತು ಮತ್ತು ಒಂದು ಎಕ್ಕಂ=೧೧	೧೧ = ೧ + ೧
೧ ಹತ್ತು ಮತ್ತು ಎರಡು ಎಕ್ಕಂ=೧೨	೧೨ = ೧ + ೨
೨ ಹತ್ತು ಮತ್ತು ಪೂಜೆ ಎಕ್ಕಂ=೨೦	೨೦ = ೨ + ೦

ಈ ಇಯತ್ತೆಗೆ ಹೇಳಿದ ಬಾಯಿಲೆ ಮಾಡಬೇಕಾದ ಬೇರಿಜು ವಜಾಬಾಕಿಗಳನ್ನು ಬಾಲಕರ ವರ್ಗದಲ್ಲಿ ಹೇಳಿದ ಸೂಚನೆಗಳ ಮೇರೆಗೆ ಮೊದಲು ಕಾಳು, ಬೀಜ, ಬೇರೆ ಬಡವೆ ಮುಂತಾದವುಗಳ ಸಹಾಯದಿಂದಲೂ ಬಳಿಕ ಅವುಗಳ ಸಹಾಯವಿಲ್ಲದೆಯೂ ಮಾಡಲಿಕ್ಕೆ ಕಲಿಸಬೇಕು. ಪ್ರತ್ಯಕ್ಷ ವಸ್ತುಗಳ ಸಹಾಯವಿಲ್ಲದೆ ಮಾಡಿದ ಲೆಕ್ಕಗಳನ್ನು ಒಮ್ಮೊಮ್ಮೆ ಪ್ರತ್ಯಕ್ಷ ವಸ್ತುಗಳನ್ನು ಎಣಿಸಿನೋಡಿ ಮನಗಾಣಬೇಕು. ಆರಂಭದ ಮೆಟ್ಟುಗಳಲ್ಲಿ ದಶಕಗಳು ಬರುವ ಲೆಕ್ಕಿಗಳನ್ನು ಭಾಗಮಾಡಿ ಎರಡು ಮೆಟ್ಟಿನಿಂದ ಕೂಡಿಸಲಿಕ್ಕೂ ಕಳೆಯಲಿಕ್ಕೂ ಕಲಿಸತಕ್ಕದ್ದು. ಉದಾಹರಣಾರ್ಥವಾಗಿ ೯ + ೩ ಈ ಲೆಕ್ಕವನ್ನು ೯ + ೧= ೧೦. ೧೦ + ೨ = ೧೨ ಇದರಂತೆಯೂ ೧೨ — ೩ ಇದನ್ನು ೧೨ — ೨ = ೧೦ ೧೦ — ೧ = ೯ ಇದರಂತೆಯೂ ಮಾಡತಕ್ಕದ್ದು. ವಜಾಬಾಕಿಯು ಬೇರಿಜಿನ ಪೂರಕವೆಂತಲೂ ಅದರ ಸಾಮಾನ್ಯ ಸ್ವರೂಪದ ಮೇರೆಗೆ ಒಂದು ಸಂಖ್ಯೆಯೊಳಗಿಂದ ಮತ್ತೊಂದು ಸಂಖ್ಯೆಯಷ್ಟು ತೆಗೆದುಕೊಂಡರೆ ಎಷ್ಟು ಉಳಿಯುವವು ಈ ಉದಾಹರಣೆಯನ್ನು ಮಾಡಿಸಿದ ಬಳಿಕ ಒಂಭತ್ತು ಲಗಲಿಕ್ಕೆ ೫ ರಲ್ಲಿ ಎಷ್ಟು ಕೂಡಿಸಬೇಕೆಂದೂ, ಅಥವಾ ೯, ೫ ಕ್ಕಿಂತ ಎಷ್ಟರಿಂದ ದೊಡ್ಡದೆಂದು ಪ್ರಶ್ನೆಗಳನ್ನು ಕೇಳಬೇಕು. ಈ ಲೆಕ್ಕಿಗಳನ್ನು ಕ್ರಮವಾಗಿಯೂ ಸಾವಕಾಶವಾಗಿಯೂ ಮಾಡಿಸತಕ್ಕದ್ದು. ಬಾಯಿಂದ ಬೇರೀಜು ವಜಾಬಾಕಿಗಳು ಮಾಡಲಿಕ್ಕೆ ಬರುವವರೆಗೂ ಮೊಗ್ಗೆಗಳನ್ನು ಕಲಿಸಬಾರದು.

ಪ್ರತಿ ಒಂದು ಹೊಸ ಮೊಗ್ಗೆಯನ್ನು ಕಲಿಸುವದಕ್ಕಿಂತ ಮೊದಲು ಆವಾ ಮೊಗ್ಗೆಗೆ ಸಂಬಂಧಿಸಿದ ಎಲ್ಲ ಅಂಕೆಗಳ ಬೇರಿಜು ವಜಾಬಾಕಿಗಳನ್ನು ಕಾಳಜಿ ಪೂರ್ವಕವಾಗಿ ಮಾಡಿಸಿರಬೇಕು ಉದಾಹರಣಾರ್ಥವಾಗಿ ಎರಡರ ಮೊಗ್ಗೆಯನ್ನು ಕಲಿಸುವದೆಂದು ತಿಳಿಯುವಾ. ಇದನ್ನು ಬೋಧಿಸುವ ಮೊದಲು ಕೆಳಗೆ ತೋರಿಸಿದ ಲೆಖ್ಖಗಳನ್ನು ಮಾಡಿಸತಕ್ಕದ್ದು

೦ + ೦ = ೪	೨೦ — ೦ = ೧೪
೪ + ೦ = ೬	೧೪ — ೦ = ೧೬
೬ + ೦ = ೮	೧೬ — ೦ = ೧೪
೮ + ೦ = ೧೦	೧೪ — ೦ = ೧೨
೧೦ + ೦ = ೧೨	೧೨ — ೦ = ೧೦
೧೨ + ೦ = ೧೪	೧೦ — ೦ = ೮
೧೪ + ೦ = ೧೬	೮ — ೦ = ೬
೧೬ + ೦ - ೧೮	೬ -- ೦ = ೪
೧೮ + ೦ = ೨೦	೪ — ೦ = ೦
	೦ — ೦ = ೦

ಇಷ್ಟಾದ ಬಳಿಕ ಮಣೆ ಅಥವಾ ಕಾಳು ಅಥವಾ ದುಡ್ಡು ಮುಂತಾದವುಗಳಿಂದ ಎರಡೆರಡು ಗುಂಪಿಗಳನ್ನು ಕೆಳಗೆ ತೋರಿಸಿದಂತೆ ಇಡಬೇಕು.

೦	೦ ೦ ೦ ೦ ೦ ೦
೦ ೦	೦ ೦ ೦ ೦ ೦ ೦ ೦
೦ ೦ ೦	೦ ೦ ೦ ೦ ೦ ೦ ೦ ೦
೦ ೦ ೦ ೦	೦ ೦ ೦ ೦ ೦ ೦ ೦ ೦ ೦
೦ ೦ ೦ ೦ ೦	೦ ೦ ೦ ೦ ೦ ೦ ೦ ೦ ೦ ೦

ಇದನ್ನು ಹುಡುಗರು ಪ್ರತ್ಯಕ್ಷವಾಗಿ ನೋಡುತ್ತ ಎಣಿಸುತ್ತ ಒಂದೊಂದು ಗುಂಪಿನಲ್ಲಿ ಎರಡೆರಡೇ ಕಾಳುಗಳಿರುವವೆಂದು ಮನಗಾಣುವರು ಇಂಥ ಗುಂಪಿಯನ್ನು ಒಮ್ಮೆ

ತೆಗೆದುಕೊಂಡರೆ ಎರಡು ಆಗುವವೆಂತಲೂ ಎರಡು ಸಾರೆ ತೆಗೆದುಕೊಂಡರೆ ೪ ಆಗುವವೆಂತಲೂ ಇದರಂತೆ ೧೦ ಸಾರೆ ತೆಗೆದುಕೊಂಡರೆ ೨೦ ಆಗುವವೆಂತಲೂ ಸಹಜವಾಗಿ ತಿಳಿದುಕೊಳ್ಳುವರು. ಅದರೆ ಶಿಕ್ಷಕರು ಅವಸರ ಮಾಡದೆ ಹುಡುಗರು ತತ್ಪವನ್ನು ತಮ್ಮಷ್ಟಕ್ಕೆ ತಾನೇ ತಿಳಿದುಕೊಳ್ಳುವಂತೆ ಅವರ ಬುದ್ಧಿಯನ್ನು ಬಲಪಡಿಸುತ್ತ ಸಾವಕಾಶವಾಗಿಯೂ ಕ್ರಮವಾಗಿಯೂ ಮುಂದಕ್ಕೆ ಒಯ್ಯಬೇಕು ಒಂದೊಂದು ಮೊಗ್ಗೆಯಲ್ಲಿ ಆರಂಭದ ಎರಡು ಮೂರು ಮೆಟ್ಟುಗಳನ್ನು ಸರಿಯಾಗಿ ತಿಳಿಸಿಕೊಟ್ಟರೆ ಸಾಕು. ಒಂದೊಂದು ಮೆಟ್ಟನ್ನು ಚೆನ್ನಾಗಿ ತಿಳಿಸಿಕೊಟ್ಟ ಬಳಿಕ ರೂಢಿಯೊಳಗಿರುವ ಅದನ್ನು ಅನ್ನುವ ಬಗೆಯನ್ನು ಹೇಳಬೇಕು. ಅಲ್ಲಿಂಪ ಅದನ್ನು ಬರೆಯುವ ಪದ್ಧತಿಯನ್ನು ಕರೇ ಹಲಿಗೆಯ ಮೇಲೂ ಸಾಟಿಯಮೇಲೂ ಬರೆದು ತೋರಿಸಬೇಕು. ಈ ಪದ್ಧತಿಯಿಂದ ಹೊಸ ಮೊಗ್ಗೆಗಳನ್ನು ಕಟ್ಟುವ ಸಾಮರ್ಥ್ಯವು ಕ್ರಮೇಣ ವಿದ್ಯಾರ್ಥಿಗಳಲ್ಲಿ ಉಂಟಾಗುವದು. ಕೆಲವು ಪಾಠಗಳಾದ ಬಳಿಕ ಒಂದರ ಮೊಗ್ಗೆಯಲ್ಲಿ ಒಂದೊಂದು ಗುಂಪಿನಲ್ಲಿ ಒಂದೇ ಕಾಳು ಇರುತ್ತದೆಂತಲೂ ಎರಡರ ಮೊಗ್ಗೆಯಲ್ಲಿ ಪ್ರತಿ ಒಂದು ಗುಂಪಿನಲ್ಲಿ ಎರಡು ಪದಾರ್ಥಗಳಿರುತ್ತವೆಂತಲೂ, ೩ ರ ಮೊಗ್ಗೆಯಲ್ಲಿ ಒಂದೊಂದು ಗುಂಪಿನಲ್ಲಿ ಮೂರು ಮೂರು ಕಾಳು ಇರುತ್ತವೆಂತಲೂ ಇದರಂತೆ ಹತ್ತರ ವರೆಗಿನ ಮಗ್ಗಿಗಳಲ್ಲಿ ಆಯಾ ಮಗ್ಗೆಗಳ ಒಂದೊಂದು ಗುಂಪಿನಲ್ಲಿ ಅಷ್ಟಷ್ಟು ಕಾಳುಗಳಿರುತ್ತವೆಂತಲೂ ಅವರು ಸುಲಭವಾಗಿ ಅರಿತುಕೊಳ್ಳುವರು. ಮತ್ತು ಮೊಗ್ಗೆಗಳಲ್ಲಿ ಮೊದಲು ೧ ಬಳಿಕ ೨ ಆ ಮೇಲೆ ೩ ಹೀಗೆ ಕ್ರಮವಾಗಿ ಹತ್ತು ಗುಂಪಿಗಳು, ಪ್ರತಿ ಒಂದು ಮೊಗ್ಗೆಯಲ್ಲಿರುತ್ತವೆಂದು ತಿಳಿದುಕೊಳ್ಳುವರು ಇವೆರಡು ಮಾತುಗಳು ಹುಡುಗರಿಗೆ ಚೆನ್ನಾಗಿ ಗೊತ್ತಾದರೆ ಅವರು ತಮ್ಮ ಸ್ವಂತ ಶಕ್ತಿಯನ್ನು ಉಪಯೋಗಿಸಲಿಕ್ಕೆ ಹವಣಿಸುವರು. ಮತ್ತು ಶಿಕ್ಷಕನ ಸಹಾಯವಿಲ್ಲದೆ ಇದೇ ಮೇರೆಗೆ ಹೊಸ

ಮೊಗ್ಗೆಗಳನ್ನು ರಚಿಸುವವರಲ್ಲಿ ಅನೇಕ ಪಡುಪೆರು ಇವರಿಂದ ಮುಂದಿನ ಮಗ್ಗಿಗಳನ್ನು ಕಲಿಯುವದು ಸುಲಭವೂ ಉಲ್ಲಾಸಕರವೂ ಎನಿಸುವದು; ಮತ್ತು ಅವರು ಅವನ್ನು ಜಾಣತನದಿಂದ ಮಾಡುವರು. ಈ ಮೇರೆಗೆ ಒಂದೊಂದು ಮೊಗ್ಗೆಯನ್ನು ಕಲಿಸಿದ ಬಳಿಕ ಅವು ಹುಡುಗರ ನೆನಪಿನಲ್ಲಿ ನೆಲೆಗೊಳ್ಳಲಿಕ್ಕಾಗಿ ಅದನ್ನು ಮೇಲಿಂದ ಮೇಲೆ ಬರಿಸಬೇಕು. ಹಾಗು ಬಾಯಿಪಾಠಮಾಡಿಸಬೇಕು. ಮೊಗ್ಗೆಯಲ್ಲಿ ಒಂದೊಂದು ಮೆಟ್ಟು ಮುಗಿದ ಬಳಿಕ ಅದಕ್ಕೆ ಸರಿಯಾದ ಭಾಗಾಕಾರದ ಲೆಕ್ಕಕ್ಕೆ ಹೊಂದಿಸಿ ತಿಳಿಸಬೇಕು. ಹ್ಯಾಗಂದರೆ—ದುಡ್ಡಿನ ೫ ಗುಂಪಿಗಳಲ್ಲಿ ಒಂದೊಂದು ಗುಂಪಿಯಿಂದ ಎರಡೆರಡು ದುಡ್ಡುಗಳನ್ನು ಅಥವಾ ೫ ಜನರಲ್ಲಿ ಒಬ್ಬೊಬ್ಬನಿಂದ ಎರಡೆರಡು ದುಡ್ಡು ಇಸಕೊಂಡರೆ ೧೦ ಅಂದರೆ ೫ ಸಾರೆ ೨ನ್ನು ತೆಗೆದುಕೊಂಡರೆ ೧೦ ಆಗುವದು ಅಥವಾ ೧೦ ದುಡ್ಡುಗಳಲ್ಲಿ ೫ ಸರಿ ಗುಂಪಿಗಳನ್ನು ಮಾಡಲು, ಇಲ್ಲವೆ ಐದು ಮಂದಿಗೆ ಸವನಾಗಿ ಹಂಚಿಕೊಡಲು ಒಬ್ಬೊಬ್ಬನಿಗೆ ಎರಡೆರಡು ಬರುವದೆಂತಲೂ ತಿಳಿಸಿಕೊಡಬೇಕು. ಈ ಮೇರೆ ಗುಣಾಕಾರ ಭಾಗಾಕಾರಗಳನ್ನು ಒಡವೆಗಳ ಸಹಾಯದಿಂದ ಒಂದಕ್ಕೊಂಡು ಜೋಡಾಗಿ ಸಾಗಿಸಬೇಕು.

ಈ ಇಯತ್ತೆಗೆ ಗೊತ್ತು ಪಡಿಸಿದ ಯಾವತ್ತು ಮೊಗ್ಗೆಗಳನ್ನು ಕಲಿಸುವಾಗ ಬೇರಿಜ, ವಜಾಬಾಕಿ, ಗುಣಾಕಾರ, ಭಾಗಾಕಾರಗಳನ್ನು ಮೇಲೆ ಹೇಳಿದಂತೆ ಒಂದಕ್ಕೊಂದು ಸಂಬಂಧಿಸಿ ಕಲಿಸವದು ಸುಸಾಧ್ಯವು.

ಈ ಬಗೆಯಾಗಿ ಮಗ್ಗಿಗಳನ್ನು ಕಲಿಸಿದ ಬಳಿಕ ಬಾಯಿಂದ ಆಗಬಹುದಾದ ಸಣ್ಣ ಸಣ್ಣ ವ್ಯವಹಾರದ ಲೆಕ್ಕಗಳಲ್ಲಿ ಇವುಗಳನ್ನು ಉಪಯೋಗಿಸಲಿಕ್ಕೆ ಕಲಿಸಬೇಕು. ಹ್ಯಾಗಂದರೆ ಒಂದು ದುಡ್ಡಿಗೆ ೫ ಮಾವಿನ ಹಣ್ಣುಗಳಾದರೆ ೮ ದುಡ್ಡಿಗೆಷ್ಟು ಬರುವವು? ೫೬ ಬೋರೆ ಹಣ್ಣುಗಳನ್ನು ೯ ಹುಡುಗರು ಸವನಾಗಿ ತಿಂದರೆ ಒಬ್ಬೊಬ್ಬನು ಎಷ್ಟು ಹಣ್ಣುಗಳನ್ನು ತಿಂದಂತಾಯಿತು? ಈ ಮಾದರಿಯ ಹಲವು

ಲೆಖ್ಖಗಳನ್ನು ಕಲಿಸಬೇಕು. ಈ ಇಯತ್ತೆಯ ಹುಡುಗರಿಗೆ ಹೇಳುವ ಲೆಖ್ಖಗಳಲ್ಲಿ ಯಾವಾಗಲೂ ಮನಸ್ಸಿನ ಒಂದೇ ಯತ್ನದಿಂದ ಮಾಡುವಂಥ ಕೃತಿ ಇರಬೇಕು. ಜೇಬೀ ಜು ವಜಾಬಾಕಿ ಗುಣಾಕಾರ ಭಾಗಾಕಾರ ಮೊದಲಾದ ನಾಲ್ಕು ಕೃತಿಗಳು ಒಂದರಲ್ಲಿಯೇ ಸವಾವೇಶವಾಗುವಂಥ ಲೆಖ್ಖಗಳನ್ನು ಎಂದಿಗೂ ಹೇಳಕೂಡದು. ಹ್ಯಾಗಂದರೆ ನನ್ನ ತಾಯಿ ತಂದೆಗಳಲ್ಲಿ ಒಬ್ಬೊಬ್ಬರು ನನಗೆ ಐದೈದು ಹಣ್ಣುಗಳನ್ನು ಕೊಟ್ಟರು. ಅವುಗಳಲ್ಲಿ ನನ್ನ ತಮ್ಮನು ಮೂರು ಹಣ್ಣುಗಳನ್ನು ಒಯ್ದನು, ಮತ್ತು ನನ್ನ ತಂಗಿಯು ನಾಲ್ಕು ಹಣ್ಣುಗಳನ್ನು ತೆಗೆದುಕೊಂಡಳು ಆದರೆ ನನಗೆಷ್ಟು ಉಳಿಯುವವು? ಅಥವಾ ಮೂರು ದುಡ್ಡಿಗೆ ಒಂಭತ್ತು ಹಣ್ಣುಗಳಾದರೆ ಒ ದುಡ್ಡಿಗೆಷ್ಟು? ಈ ಮಾದರಿಯ ಲೆಖ್ಖಗಳು ಇನ್ನೇ ಇಯತ್ತೆಗೆ ತಕ್ಕವುಗಳಲ್ಲ. ಈ ಇಯತ್ತೆಯಲ್ಲಿ ಬಳಿಕೆಯೊಳಗಿನ ನಾಣ್ಯಗಳನ್ನು ಅರಿತುಕೊಳ್ಳೋಣ, ಅಂದರೆ ಹಣವಕೋಪ್ಪಕವು, ಎಂಬ ವಿಷಯವು ಸೇರಿಸಲ್ಪಟ್ಟಿದೆ ಈಗ ವಾಡಿಕೆಯಾಗಿ ಕಲಿಸುವಂತೆ ಬರೀ ಪಾಠವಾಡಿಸುವದು ಸರಿಯಲ್ಲ. ಹುಡುಗರು ನಾಣ್ಯಗಳನ್ನು ಪ್ರತ್ಯಕ್ಷವಾಗಿ ಕೈಯಲ್ಲಿ ತೆಗೆದುಕೊಂಡು ಅವುಗಳ ಪರಸ್ಪರ ಬೆಲೆಯ ಸಂಬಂಧವನ್ನು ತಿಳುಕೊಳ್ಳಬೇಕು. ಹಾಗು ನಾಣ್ಯಗಳ ಉಪಯೋಗವನ್ನು ಮೇಲೆ ಹೇಳಿದ ಪ್ರಕಾರ ಸಣ್ಣ ಸಣ್ಣ ವ್ಯವಹಾರಿಕ ಬಾಯಿಲೆಖ್ಖಗಳಲ್ಲಿ ಮಾಡಿಕೊಳ್ಳಬೇಕು.—

೩ ಓದೋಣವೂ ಬರಿಯೋಣವೂ—ಬಾಲಕರ ವರ್ಗದಲ್ಲಿ ಮೂಲಾಕ್ಷರಗಳನ್ನು ಕಲಿತಿರುವರು. ಇಷ್ಟೇ ಅಲ್ಲ ಅವುಗಳಿಂದ ಸಾದಾಶಬ್ದಗಳನ್ನು ರಚಿಸಲಿಕ್ಕೆ ಕಲಿತಿರುವರು. ಈ ಇಯತ್ತೆಯಲ್ಲಿ ಅವರಿಗೆ ಬಳ್ಳಿಗಳನ್ನು ಕಲಿಸಬೇಕು ಆದರೆ ಹಳೇ ಪದ್ಧತಿಯಂತೆ ಒಂದೊಂದು ಅಕ್ಷರದ ಸಂಪೂರ್ಣ ಬಳ್ಳಿಯನ್ನು ಒಮ್ಮೆಲೆ ಕಲಿಸಬಾರದು.—ವಾಚನದ ಮೊದಲನೇ ಪುಸ್ತಕದ ಪಾಠಗಳಲ್ಲಿ ಬಂದ ಬಂದ ಶಬ್ದಗಳನ್ನು ಪೃಥಕ್ಕರಣ ಮಾಡಿಸಬೇಕು. ಪ್ರತಿ ಬಂದು

ಶಬ್ದವು ಪೂರ್ಣವಾಗಿ ಓದಲಿಕ್ಕೆ ಬಂದು ಅದರ ಗುರುತು ಪೂರ್ಣವಾಗಿ ಗೊತ್ತಾದ ನಂತರ ಹಿಂದೆ ಹೋದ ಮತ್ತು ಪ್ರಥಕ್ಕರಣ ಮಾಡಿದ ಅಂಥ ಶಬ್ದಗಳಿಗೆ ಹೋಲಿಸಿ ಹೇಳತಕ್ಕದ್ದು. ಹುಡುಗರು ಸ್ವರ ಚಿಹ್ನಗಳನ್ನು ಮುಗಿಸಿದ ಬಳಿಕ ಸಮಗ್ರ ಬಳ್ಳಿಯನ್ನು ಅನ್ನಲಿಕ್ಕೆ ಹೇಳಿ ವಾಡಿಕೆಯ ಕ್ರಮದಂತೆ ಬರಿಸಬೇಕು. ಹುಡುಗರು ಒಂದು ಪಾಠವನ್ನು ಓದಿದ ಮೇಲೆ ಅದನ್ನು ಅಥವಾ ಅದರ ಭಾಗವನ್ನು ಪಾಟಿಯಮೇಲೆ ಬರಿಯಬೇಕು ಶಬ್ದಗಳ ಅರ್ಥದ ವಿಷಯವಾಗಿ ಲಕ್ಷ ಕೊಡುವ ಸಂಗತಿ ಯಾವದೆಂದರೆ ಹುಡುಗರಿಗೆ ಶಬ್ದಕ್ಕೆ ಪ್ರತಿಶಬ್ದವನ್ನು ಹೇಳಿ ಪಾಠಮಾಡಿಸಬಾರದು. ಶಬ್ದಗಳಿಂದ ವಿದಿತವಾಗುವ ಇಲ್ಲವೆ ಅರ್ಥವಾಗುವ ಒಡವೆಗಳನ್ನು ಅವರಿಗೆ ತೋರಿಸಬೇಕು ವಾಚನ ಪಾಠವು ಮುಗಿದ ಬಳಿಕ ಇಲ್ಲವೆ ನಡದಿರುವಾಗ ಹುಡುಗರಿಂದ ಶಬ್ದಗಳ ರಚನೆಯು ಪಾಠ ಎನಿಸುವ ಸಾಂಪ್ರದಾಯವುಂಟು. ಆದರೆ ಶಬ್ದ ರಚನೆಯನ್ನು ಕಲಿಯುವ ಯಾವ ಹುಡುಗರಿಗಾದರೂ ಶಬ್ದದೊಳಗಿನ ಅಕ್ಷರಗಳನ್ನು ಗಟ್ಟಿಯಾಗಿ ನುಡಿಯುವವರಿಂದ ಶಬ್ದರಚನೆಯ ಕೆಲಸವು ಕಣ್ಣಿನಿಂದಾಗತಕ್ಕಂಥಾದ್ದು. ಬರೆ ಕಿವಿ ಅಥವಾ ಶಾಬ್ದಿಕ ಸ್ಮರಣಶಕ್ತಿಯ ಕೆಲಸವಲ್ಲ. ಶಬ್ದ ರಚನೆಯನ್ನು ಬರೆಯಿಸಿ ಪರೀಕ್ಷಿಸಬೇಕು.

೪ ಎಲ್ಲ ವರ್ಗಗಳ ಬರಹದ ಎಲ್ಲ ಕೆಲಸವು ಸಾವಕಾಶವಾಗಿಯೂ ಸ್ವಚ್ಛವಾಗಿಯೂ ಮಾಡಿಸಲ್ಪಡತಕ್ಕದ್ದು. ಮುತ್ತು ಬರಿಯುವಾಗ್ಗೆ ಕೂಡ್ರುವ ಶಿಸ್ತು. ಕೈಯನ್ನು ಹಿಡಿಯುವ ಬಗೆ ಲೇಖಣಿಯನ್ನು ಹಿಡಿಯುವ ತರ ಮುಂತಾದವುಗಳ ಕಡೆಗೆ ಲಕ್ಷ ಕೊಡತಕ್ಕದ್ದು.

೫ ವಸ್ತುಪಾಠಗಳು - ವಸ್ತುಪಾಠಕ್ರಮದಲ್ಲಿಯೂ ಬಾಲಕವರ್ಗದಲ್ಲಿಯೂ (೫) ಪರಿಶಿಷ್ಟದಲ್ಲಿಯೂ ಹೇಳಿದ ಸೂಚನೆಗಳನ್ನು ಈ ಇಯತ್ತೆಯಲ್ಲಿಸಹ ಅನುಸರಿಸತಕ್ಕದ್ದು.

೬. ಚಿತ್ರ ಕಲೆಯೂ ಪ್ರತಿರೂಪಿಸೋಣವೂ (೫) ಪರಿಶಿಷ್ಟ ನೋಡಿರಿ.

೧೯ನೇ ಇಯತ್ತೆಯು.

೧. ಮಗ್ಗೆಗಳು—ಈ ಇಯತ್ತೆಯಲ್ಲಿ ಹುಡುಗರು ಮಗ್ಗೆಗಳನ್ನು ಪೂರಾ ಮುಗಿಸಿ ಕಾಲು ಅರ್ಧ ಮುಂತಾದವುಗಳನ್ನ ಕಲಿಯಲಾರಂಭಿಸುತ್ತಾರೆ. ೧೯ನೇ ಇಯತ್ತೆಯಲ್ಲಿ ಮ ಗ್ಗೆಗಳನ್ನು ಕಲಿಸುವ ಸಂಬಂಧದಿಂದ ಮಾರ್ಗ ತೋರಿಸಿದ ತೆಯೇ ಇವುಗಳನ್ನಾದರೂ ಕಲಿಸತಕ್ಕದ್ದು. ಕಾಲು, ಅರ್ಧ ಮುಂತಾದ ಅಪೂರ್ಣಾಂಕಿಗಳ ಮಗ್ಗೆಗಳನ್ನು ಕಲಿಸುವಾಗ ಮೊದಲು ಕಾಲನ್ನು ಕಲಿಸದೇ ಅರ್ಧವನ್ನೇ ಕಲಿಸಬೇಕು ಯಾಕಂದರೆ ಇದು ಸ್ವಭಾವಿಕವಾಗಿ ಶಿಕ್ಷಣ ಕ್ರಮದಲ್ಲಿ ಮೊದಲನೇಯದೆನಿಸುತ್ತದೆ ಅಪೂರ್ಣಪದಗಳನ್ನು ಸ ಮಾರ್ಥಗಳಲ್ಲಿ ಪ್ರತ್ಯಕ್ಷವಾಗಿ ಭಾಗಗಳನ್ನು ಮಾಡಿ ತಿಳಿಸಿ ಕೊಡಬೇಕು. ಉದಾಹರಣಾರ್ಥವಾಗಿ ಲಿಂಬೀಹಣ್ಣು ಕಾಗ ದ ಮುಂತಾದ ಒಡವೆಗಳಲ್ಲಿ ಬೇಕಾದಷ್ಟು . ಸಮಭಾಗಗಳ ನ್ನು ಮಾಡಿ ಹುಡುಗರಿಗೆ ಮನದಟ್ಟಾಗುವಂತೆ ತಿಳಿಸಬೇಕು ಹಾಗೂ ಈ ತುಂಡಗಳೆಲ್ಲಾ ಒಂದಕ್ಕೊಂದು ಸಮನಾಗಿರು ತ್ತವೆಂಬದನ್ನು ಹುಡುಗರ ಲಕ್ಷದಲ್ಲಿ ತಂದುಕೊಡಬೇಕು. ಈ ಅಪೂರ್ಣ ಸಂಖ್ಯೆಗಳ ಬೇರಿಜ ವಜಾಬಾಕಿಗಳನ್ನು ಹುಡುಗರಿಂದ ಮಾಡಿಸಿದ ಬಳಿಕ ಅಪೂರ್ಣಪದದ ಮಗ್ಗೆ ಗಳನ್ನು ಕಲಿಸಲಾರಂಭಿಸಬೇಕು. ಇವಾದ ಬಳಿಕ ಹಿಂದೆ ಹೇಳಿದಂತೆ ಭಾಗಾಕಾರವನ್ನಾದರೂ ಕಲಿಸಬೇಕು. ಆ ನಂ ತರ ಸಣ್ಣ ಸಣ್ಣ ಬಾಯಲೆಖ್ಖಗಳಲ್ಲಿ ಇವುಗಳನ್ನು ಉಪ ಯೋಗಿಸಲಿಕ್ಕೆ ಹಚ್ಚಬೇಕು.

(೨) ತೂಕ ಉದ್ದಳತೆಯಕೋಷ್ಟಕ:ವ್ರ—ಗೊತ್ತು ಪಡಿಸಿದ ಕೋಷ್ಟಕಗಳನ್ನು ಹುಡುಗರು ಬರೇ ಬಾಯಿಪಾಠ ಮಾಡಿ ಸ್ಮ ರಣದಲ್ಲಿಟ್ಟರೆ ಸಾಕಾದು ಅವರು ಕೈಯಲ್ಲಿ ತಕ್ಕಡಿಯನ್ನು ತ ಕ್ಕೊಂಡು ಕೇರು ಅಚ್ಚೇರು ಪಾವಕೇರು ಮುಂತಾದ ತೂಕದ ಕಲ್ಲುಗಳಿಂದ ಬೇರೆ ಬೇರೆ ಪದಾರ್ಥಗಳ ತೂಕಗಳನ್ನು ತೂಗಿ ಅರಿತುಕೊಳ್ಳಲಿಕ್ಕೆ ಶಕ್ತರಾಗಬೇಕು ಇದಲ್ಲದೆ ಒಂದು ಘಟ ಕಳು ಗೆಯುನ್ನಾಗಲಿ ಯಾರ್ಡ ಕಟ್ಟಗೆಯನ್ನಾಗಲಿ ತೆಗೆದುಕೋ

ಡುಸಾಲೇ ಮನಯನ್ನು ಆಟದ ಬೈಲನ್ನು ಹುಡುಗರ ಎತ್ತರವ
ನ್ನು ನಾಟೇ ಪುಸ್ತಕಗಳ ಉದ್ದಗಲಳತೆಯನ್ನು ಶಿಕ್ಷಕನ ಮೇ
ಜಿನ ಉದ್ದಳತೆಯನ್ನು ಅರಿವಿ ಲಾಡಿ ಮುಂತಾದ ಸಾವಮಾನ್ಯ
ವಸ್ತುಗಳ ಉದ್ದಗಲಳತೆಯನ್ನು ಹುಡುಗರು ತಾವೇ ತಮ್ಮ
ಕೈಯಿಂದ ಅಳೆಯಲಿಕ್ಕೆ ಕಲಿಯಬೇಕು ವರ್ಗದ ಒಂದು
ಬದಿಯ ಗೋಡೆಯ ಮೇಲೆ ಯಾವಾಗಲೂ ಹುಡುಗರ ದೃ
ಷ್ಟಿಗೆ ಬೀಳುವಂಥ ಸ್ಥಳದಲ್ಲಿ ಒಂದು ಯಾರ್ಡ ಉದ್ದಾದ ಬ
ಣ್ಣಾದ ಗೆರೆಯನ್ನು ಕೊರೆದಿರಬೇಕು. ಅದರಲ್ಲಿ ಮೂರು ಸರಿ
ಭಾಗಗಳನ್ನು ಮಾಡಿ ಫೂಟಿನ ಅಳತೆಯನ್ನೂ ಆ ಫೂಟಿನ
ಗೆರೆಯಲ್ಲಿ (೧೫) ಸರಿ ಭಾಗಗಳನ್ನು ಮಾಡಿ ಇಂಚಿನ ಅಳ
ತೆಯನ್ನು ತೋರಿಸಬೇಕು. ಕಲಿಸುವಾಗ ಉದ್ದಳತೆಯ ಸಂ
ಬಂಧದವು ಬರಲು, ಶಿಕ್ಷಕನು ಹುಡುಗರಿಗೆ ಈ ಗೆರೆಯ
ನ್ನು ತೋರಿಸಿ ಅದರ ಸಹಾಯದಿಂದ ಪಾಠದೊಳಗಿನ ಉ
ದ್ದವನ್ನೂ ಅಂತಂವನ್ನೂ ಅನುಮಾನ ಮಾಡಲಿಕ್ಕೆ ಹಚ್ಚ
ಬೇಕು. ತೂಕ ಉದ್ದಳತೆಗಳನ್ನು ಪ್ರತ್ಯಕ್ಷವಾಗಿ ತೂಗಿ ಅ
ಳೆದು ಹೇಳಲಿಕ್ಕೆ ಶಕ್ತರಾದ ಬಳಿಕ ಅವರು ಹಾಗೇ ಅಜಮಾ
ಸಿನಿಂದ ಇವುಗಳನ್ನು ತಕ್ಕಷ್ಟು ಸರಿಯಾಗಿ ಹೇಳಲಿಕ್ಕೆ ಕಲಿ
ಯಬೇಕು. ಹುಡುಗರ ಸ್ನಾಯು ಶಕ್ತಿಯನ್ನೂ ನೇತ್ರಶಕ್ತಿ
ಯನ್ನೂ ಬಲಪಡಿಸುವದೇ ಇದರ ಮುಖ್ಯೋದ್ದೇಶವು ವಿ
ದ್ಯಾರ್ಥಿಗಳು ಅನೇಕ ವಸ್ತುಗಳನ್ನು ಪ್ರತ್ಯಕ್ಷ ತೂಗಿ ಆ
ಕೋಷ್ಟಕವನ್ನು ಜನ್ಮಾಗಿ ಮನನ ಮಾಡಿಕೊಂಡಬಳಿಕ ಅ
ವರ ಕೈಯಲ್ಲಿ ಒಂದು ಪದಾರ್ಥವನ್ನು ಕೊಟ್ಟು ಇದರ ತೂ
ಕವೆಷ್ಟುಂಟೆಂಬದನ್ನು ಅಜಮಾಸಿನಿಂದ ನೋಡಿ ಹೇಳು ಎಂ
ದು ಕೇಳಬೇಕು ಹಾಗೆ ಮಾಡಿ ಅವರು ಹೇಳಿದ ಬಳಿಕ ಅ
ದನ್ನು ತಕ್ಕಡಿಯಲ್ಲಿಟ್ಟು ಪ್ರತ್ಯಕ್ಷವಾಗಿ ತೂಗಿ ತಮ್ಮ ತ
ರ್ಕವು ಎಷ್ಟು ಮಟ್ಟಿಗೆ ಸರಿಯಾಗಿರುತ್ತದೆಂಬದನ್ನು ಕಂಡು
ಕೊಳ್ಳಲಿಕ್ಕೆ ಹಚ್ಚಬೇಕು. ಈ ಬಗೆಯ ಅಂದಾಜಕಟ್ಟು
ವ ಅಭ್ಯಾಸವು ಬೆಳೆದ ಬಳಿಕ ಅವರು ಬಹುತರವಾಗಿ
ಸರಿಯಾದ ತೂಕವನ್ನು ಅಂದಾಜಿನಿಂದ ಹೇಳಸಮರ್ಥರಾ

ಗುವರು. ಹಾಲು ಎಣ್ಣೆ ಮುಂತಾದ ಪ್ರವಾಹಿ ವೆದಾರ್ಥಗ ನ್ನು ತಾಲೆ ತಂಬಿಗೆಗಳಿಂದ ಅಳೆಯು ಹಚ್ಚಿ ಅವುಗಳ ಪ ರಸ್ಪರ ಅವಕಾಶವನ್ನು ಅಂದಾಜು ಕಟ್ಟಲಿಕ್ಕೆ ಕಲಿಸಬೇಕು. ಇದೇ ಕ್ರಮದಿಂದಲೇ ಉದ್ದಳತೆಯ ಕೋಲ್ಪವನ್ನಾದರೂ ಕಲಿಸತಕ್ಕದ್ದು ಹುಡುಗರ ಉದ್ದಳತೆ ಅಥವಾ ಅಂತರವ ನ್ನು ಪ್ರತ್ಯಕ್ಷವಾಗಿ ಅಳೆದು ಅಳೆದು ಸಾಕಷ್ಟು ನುರಿತ ಬಳಿ ಕ ಕೋಣೆಯ ಉದ್ದಳತೆ ಹುಡುಗನ ಎತ್ತರ ಕೋಣೆಯ ಎತ್ತರ ಸಾಲೆಯ ಅಂಗಳದೊಳಗಿನ ಎರಡು ಗಿಡಗಳ ನಡು ವಿನ ಅಂತರ ಮುಂತಾದ ಅಳತೆಗಳನ್ನು ಅಂದಾಜಿನಿಂದ ಹೇಳಹಚ್ಚಬೇಕು. ಬಳಿಕ ಈ ಅಂದಾಜು ಕಟ್ಟಹೇಳಿದ ಅಳತೆಯು ಎಷ್ಟು ವಟ್ಟಿಗೆ ನಿಜವಿರುವದೆಂಬದನ್ನು ತಮ್ಮ ಕೈಯಿಂದ ಅಳೆದು ತೂಗಿ ಮನಗಾಣಲಿಕ್ಕೆ ಹಚ್ಚಬೇಕು. ರೂಢಿಯಿಂದ ಹುಡುಗರು ಕೇವಲ ಕಣ್ಣು ಮುಂದಿನ ಉದ್ದ ಳತೆ ಅಂತರಗಳನ್ನು ಅದಷ್ಟು ಸರಿಯಾಗಿ ಅಂದಾಜುಕಟ್ಟು ಲಿಕ್ಕೆ ಯೋಗ್ಯರಾಗುತ್ತಾರೆ. ಅಂಥರೆ ಅವರ ಕಣ್ಣುಗಳು ಈ ಕೆಲಸಕ್ಕೆ ತಯಾರಾಗುತ್ತವೆ. ಹುಡುಗರಿಗೆ ಉದ್ದಳ ತೆಯನ್ನು ತಮ್ಮ ಜೇಪುಗಳಿಂದಲೂ ಅಥವಾ ಮೊಳಗಳಿಂ ದಲೂ ಅಳೆಯಲಿಕ್ಕೆ ಹಚ್ಚಬೇಕು. ಬೇರೆ ಬೇರೆ ಎತ್ತರ ದ ಹುಡುಗರ ಹಾಗೂ ಶಿಕ್ಷಕನ ಜೇಪು ಮೊಳಗಳು ಬೇರೆ ಬೇರೆ ಅಳತೆಯವಿರುವದರಿಂದ ಅಳತೆಯಲ್ಲಿ ಹೆಚ್ಚು ಕಡಿಮೆ ಬರುವದು. ಈ ಪ್ರಯೋಗದಿಂದ ಶಿಕ್ಷಕನಿಗೆ ಬಂದು ನಿಯಮಿತವಾದಂಥಾ ಘಟನಂಥಾ ಅಳತೆಯ ಸಾ ಧನವು ಅವಶ್ಯವಾಗಿ ಬೇಕೆಂಬದನ್ನು ತಿಳಿಸಲಿಕ್ಕೆ ಅನುವಾ ಗುತ್ತದೆ.

(೩) ಪಾಟಿಯ ಮೇಲಿನ ಲೆಖ್ಖಗಳು—ಹುಡುಗರು ಗನೇ ಇಯತ್ತೆಯಲ್ಲಿ ಮಣಿಗಳನ್ನು ಸರಗೊಳಿಸಿ ಎಕ್ಕಂ ದಹಂ ಶತಮ್ಮುಗಳನ್ನು ಕಲಿತಿರುವರು. ಅದೇ ಮೇರೆಗೆ ಅಂದರೆ ಮೇಜಿನ ಮೇಲೆ ಪೋಣಿಸಿದ ನೂರರ ಸರಗಳನ್ನು ಹತ್ತು ಸರಗಳನ್ನು, ಬಿಡಿಕಾಳುಗಳನ್ನು ಇಡಬೇಕು.

LAKE AT MASUR.
ಮದಗಮಾಸೂರಿನ ಸರೋವರ
(ಬರೆದು ಬಂದದ್ದು.)

ಈ ಜಿಲ್ಲೆಯ ಸರೋವರವು ಮಾಸೂರಿನ ದಕ್ಷಿಣಕ್ಕೆ ಸುಮಾರು ಎರಡು ಮೈಲುಗಳ ವರೆಗೆ ಹಬ್ಬಿರುತ್ತದೆ. ಕೋಕ ಮತ್ತು ಮೈಸೂರಿನ ನಡುವೆ ಇರುವ ಶೀಮೆಯು ಈ ಸರೋವರದ ಹಳ್ಳೀಕಟ್ಟಿನ ದಂಡೆಗುಂಟ ಇರುತ್ತದೆ. ಅಂದರೆ ಸರೋವರವು ಮೈಸೂರ ಶೀಮೆಯಲ್ಲಿದ್ದು ಅದರ ನೀರಿನಿಂದ ಉಪಯೋಗಿಸುವ ಗ್ರಾಮಗಳು ಕೋಡತಾಲೂಕಿನಲ್ಲಿವೆ ಈ ಜಿಲ್ಲೆಯ ದಕ್ಷಿಣಕ್ಕೂ ಪಶ್ಚಿಮಕ್ಕೂ ಇರುವ ಬೇರೆ ನೀರು ಹಾಯಿಸುವ ಕೆಲಸಗಳಂತೆ, ಮದಗಸರೋವರವನ್ನು ವಿಜಯನಗರದ ಅರಸುಗಳ ಕಾಲದಿಂದ ಈ ಹೊತ್ತಿಗೆ ನಂಬುತ್ತಾರೆ. (೧೪೩೫-೧೫೬೦) ಇದನ್ನು ಮಾಡಿಸಿದವನು ಯಾವಗುಡ್ಡಗಳೊಳಗಿಂದ ತುಂಗಭದ್ರೆಯ ಶಾಖೆಯಾದ ಕುಮದ್ವತಿಯು ಹರಿಯುತ್ತದೋ, ಆ ಗುಡ್ಡಗಳಲ್ಲಿಯು ಸಂದು ಮುಚ್ಚಲಿಕ್ಕೆ ಎಣಿಸಿದ್ದನು. ಇದರಿಂದ ಮೈಸೂರಿನಿಂದ ಮಾಸೂರಿನ ತಗ್ಗು ಪ್ರದೇಶವನ್ನು ವಿಭಾಗಿಸುವಂಥ ಗುಡ್ಡಗಳ ಸಾಲಿನ ದಕ್ಷಿಣ ಬದಿಯಲ್ಲಿರುವ ಒಂದು ಸರೋವರದಿಂದ ಈ ನದಿಯು ಹರಿಯುತ್ತದೆ. ಈಗ ಈ ಸಂದನ್ನು ಬುಡದವರಗೆ ಸುಮಾರು ೪೦೦ ಫೂಟು ದಪ್ಪ, ೧೦೦ ಫೂಟು ಎತ್ತರವಿರುವ ಕಲ್ಲುಗಳ ಸಹಾಯದಿಂದಾದ ಒಂದು ದೊಡ್ಡ ಬಂಡೆಯಿಂದ ನೆರವೇರಿಸಿದ್ದಾರೆ. ಈ ಬಂಡೆಗಳು ಕ್ರಮವಾದ ಮೆಟ್ಟುಗಳಂತೆ ನೀರಿನ ತನಕ ಇಳಿದಿರುತ್ತವೆ ಇದರಂಥ ಬೇರೆ ಎರಡು ಬಂಡೆಗಳು ಆ ನದಿಯೊಳಗಿಂದ ನೀರು ಹೋಗದ ಹಾಗೆ ಆ ಕುಮದ್ವತೀ ಕಂದರದ ಎರಡೂ ಬದಿಗಳಲ್ಲಿ ಬಿಗಿಯಲ್ಪಟ್ಟಿದ್ದವು. ಮತ್ತು ಆ ನೀರು ಏರತಕ್ಕಗುರ್ತಿಗೆ ಉತ್ತರಕ್ಕೆ ಏರಿದಾಗ್ಗೆ, ಆ ನೀರು ಹರಿದು ಹೋಗುವ ಹಾಗೆ ಒಂದು ಕಾಲುವೆಯನ್ನು ಅಗಿದಿದ್ದರು ಇದು ತುಂಬಿದಾಗ್ಗೆ ೧೫ ಮೈಲು ಉದ್ದವೂ ಮತ್ತು ಒಂದು ದೊಡ್ಡ ಭೂಮಿಯ ಸಾಗು

ವಳಿಗೆ ಸಹಾಯವು ಮಾಡತಕ್ಕದ್ದೂ ಆಗಿರಬಹುದು. ಅದ
ಸುತ್ತಲಿರುವ ಗುಡ್ಡಗಳಲ್ಲಿ ಈಗಾದರೂ ಆ ಸರೋವರ
ಮೇಲಿರುವ ಗುರುತುಗಳಿರುತ್ತವೆ. ಈ ಗುಡ್ಡದ ಮೇ
ಈಗಿರುವ ಮಧ್ಯವು ತರದ ಕೋಟೆಯು ಕೆಲಸ ಮಾಡು
ಜನರ ರಕ್ಷಣೆಗಾಗಿ ಕಟ್ಟಿರುತ್ತದೆಂದು ಹೇಳುತ್ತಾರೆ. ಈ
ನೂರು ಬೀಡೆಗಳಲ್ಲಿ ಪ್ರತಿಯೊಂದಕ್ಕೆ ಅವರ ಕೆಳಗಿರ
ವ ಬೈಲಿನ ಸಾಗುವಳೀದೆಶೆಯಿಂದ ಕಡಿದು ಸಮಮಾಡಿದ
ದೊಡ್ಡ ಹಾಸಿಗೆಗಲ್ಲುಗಳ ತುಂಬು ಜೋಡಿಸಲ್ಪಟ್ಟವೆ. ಇವು
ಗಳಲ್ಲಿ ರಡು ಮೊದಲು ಕಟ್ಟಿದ ಹಾಗೇ ಉಳಿದಿರುತ್ತವೆ ಈ
ತುಂಬುಗಳು ಹಳೇ ಹಿಂದೂ ಜನರ ಪದ್ಧತಿಯಂತೆ ಕಟ್ಟಲ್ಪ
ಟ್ಟವೆ. ಒಂದು ಚೌಕೋನೀ ಗಚ್ಚುಕಲ್ಲಿನ ಕಾಲುವೆಯು
ಆ ಒಡ್ಡಿನೊಳಗಿಂದ ಬಾಯಿ ಹೊಡೆದು, ಆ ಕಲ್ಲಿನಿಂದ ಕೂ
ಡಿಸಲ್ಪಟ್ಟು ಆ ತೂತಿಗೆ ಕಟ್ಟಿಗೇ ಬೆಣೆಯು ಕೂಡ್ರಿಸಲ್ಪಟ್ಟ
ತ್ತು. ಆ ಬೆಣೆಯ ಮೇಲೆ ಕಟ್ಟಿದ ಕಟ್ಟಿಯು ಕೆಲಸಗಳಲ್ಲಿ
ಉಪಯೋಗಿಸುವ ಸಾಧಾರಣ ಕಂಭಗಳ ಬದಲಾಗಿ ಆ
ಸರೋವರದ ಅಳತೇ ಮಾನದ ಪ್ರಕಾರ ಸುಮಾರು ಎಂ
ಟನ್ನು ಭಾರದ ಕಲ್ಲುಗಳಿಂದ ಆ ಕಂಬಗಳು ಮಾಡಲ್ಪಟ್ಟ
ವು. ಅದರ ಮೇಲಿನ ಕಾಲುವೆಗೆ ಮಾನವೀ ಬಲಿಯನ್ನು
ಕೊಡುವ ಸಾಂಪ್ರದಾಯವಿತ್ತು, ಈ ದೊಡ್ಡ ಕೆಲಸವು ಮು
ಗಿಯುತ್ತ ಬಂದದರಿಂದ ವಿಜಯನಗರದ ಅರಸು ಮತ್ತು
ಅವನ ಸಭಾಸದರು ಒಂದೇ ಕಲ್ಲಿನಿಂದ ಮಾಡಿದ ಆ ಕಂಬ
ಗಳನ್ನು ನೋಡಲಿಕ್ಕೆ ಹೋದರು. ಕೆಲವು ದಿವಸಗಳವರೆಗೆ
ಆ ಕೆಲಸ ಮಾಡುವವರ ಪ್ರಯತ್ನಗಳೆಲ್ಲ ವ್ಯರ್ಥವಾದವು.
ಕಟ್ಟಡಿಗೆ ಅಲ್ಲಿಯ ದೇವತೆಯು ಶಿಟ್ಟಾಗಿದ್ದಾಳೆಂದೂ ಆ
ದೇವತೆಗೆ ಯಾವಳನ್ನಾದರೂ ಬಲಿಕೊಟ್ಟ ಹೊರತು ಆ
ಕಂಬಗಳ ನಿಲ್ಲಿಸೋಣವು ಅಸಾಧ್ಯವೆಂದೂ ಕಂಡುಬಂತು.
ಮುಖ್ಯ ವಡ್ಡರವನ ಮಗಳಾದ ಲಕ್ಷ್ಮಿಯೆಂಬವಳು ತನ್ನ
ನ್ನೇ ಆಹುತಿಯಾಗಿ ಕೊಡಬೇಕೆಂದು ಹೇಳಿದ್ದರಿಂದ ಅವಳ
ನ್ನು ಆ ಕಂಬದ ಬುಡದಲ್ಲಿ ಜೀವಂತ ಹುಗಿದರು. ಆಗ
ಆ ದೇವತೆಯು ತೃಪ್ತತೆಯಿಂದ ಆ ಕಂಬವು ನಿರ್ವಿಘ್ನವಾ

ಗಿ ವಿಠಲಪ್ಪಟ್ಟಿತು. ಮತ್ತು ಲಕ್ಷ್ಮಿಯು ನೆನಪಿಗೋಸ್ಕರ ಆ ಕಾಲುವೆಯನ್ನು ದೇವಾಲಯವಾಗಿ ಮಾಡಿದರು.

ಆ ಸರೋವರದ ಕಟ್ಟುವಿಕೆಯು ಮುಗಿದು ನೀರು ಪೂರಾ ನಿಂತಿತು. ಅದರೊಳಗಿಂದ ದೊಡ್ಡ ದೊಡ್ಡ ಪ್ರವಾಹಗಳು ಬರಹತ್ತಿದವು. ಅದರೂ ಅದು ಲಕ್ಷ್ಯಪೂರ್ವಕವಾಗಿ ಮಾಡಿದಂಥ ಕೊಳ್ಳದೊಳಗಿಂದ ಓಡೆದು ಹೋಗಲಿಲ್ಲ. ಆದರೆ ಅದು ಆ ಮೂರು ಒಡ್ಡುಗಳಲ್ಲಿ ಹೆಚ್ಚು ನೀರು ಇದ್ದಂಥ ಒಡ್ಡಿನಿಂದ ಓಡೆಯಿತು. ಈ ಕೋಡಿಯಿಂದ ಒಂದು ದೊಡ್ಡ ನೀರಿನ ಪ್ರವಾಹವು ೧೦೦ ಫೂಟು ಅಗಲಾಗಿ ಬೀಳುವ ಧಬಧಬೆಯಂತೆ ಒಂದು ತಗ್ಗಾದ ಕಂದರದಲ್ಲಿ ಬಾಕುವಿನಿಂದ ಸಮಾಂತರವಾಗಿ ಕೊರೆದಂತೆ, ಕೊರಕಲವಾಗಿ ಓಡೆಯಿತು. ಆ ನೀರಿನ ದಾಟು ಹಗುರಾದ್ದರಿಂದ ಮತ್ತು ಕಡಿಯುತಕ್ಕ ಕಲ್ಲಿನ ಹಾಸಿಗೆಗಳು ಹೆಚ್ಚು ಗಟ್ಟಿಯಾಗಿದ್ದರಿಂದ ಸವೆಯುವಿಕೆಯು ನಿಂತಿತು. ಮತ್ತು ಕೆಲವು ಮಟ್ಟಿಗೆ ನೀರು ಆ ಸರೋವರದ ತಲೆಯಲ್ಲಿ ಉಳಿಯಿತು. ಮತ್ತು ಉಳಿದ ನೀರು ಕಡಿಯೋಣ ನಿಂತ ಸ್ಥಳದ ಮೇಲಿರುವ ಒಂದು ಸುಂದರವಾದ. ಸಣ್ಣ ಧಬಧಬೆಯಲ್ಲಿ ಹರಿಯುತ್ತದೆ. ಈ ಅನರ್ಥವಾದ ನಂತರ ಆ ಕೆರೆಯ ನೀರನ್ನು ಉಪಯೋಗಿಸುವ ಬಗ್ಗೆ ಏನೂ ವ್ಯವಸ್ಥೆಯಾಗಲಿಲ್ಲ. ಆ ಶಿಲ್ಪಿಗಳು ಆ ಕೆಲಸವನ್ನು ಬಿಟ್ಟು ಕೊಟ್ಟರು. ಮತ್ತು ಈಗಿನ ಕಾಲದತನಕ ಆ ಅಪೂರ್ಣವಾದ ಕಾಲುವೆ ಮತ್ತು ಒಡ್ಡುಗಳ ಮೇಲೆ ಅಡವಿ ಬೆಳೆದಿತ್ತು. ಆ ಪ್ರಾಂತದ ಚಮತ್ಕಾರಗಳಲ್ಲಿ ಒಂದಾದ ಮುಖ್ಯ ಕಾಲುವೆಯ ಈ ಒಂದೇ ಕಲ್ಲನ್ನು ನೋಡುವದಕ್ಕೋಸ್ಕರ ಬಹಳ ಜನರು ಬರುತ್ತಿದ್ದರು. ಈ ಪ್ರಾಂತವು ಇಂಗ್ಲೀಷರ ಕೈಸೇರಿದ ನಂತರ ಆ ಒಡೆದ ಸರೋವರದೊಳಗಿನ ನೀರಿನ ಉಪಯೋಗವನ್ನು ಮಾಡುವ ಬಗ್ಗೆ ಎಷ್ಟು ಪ್ರಯತ್ನಗಳು ಮಾಡಲ್ಪಟ್ಟರೂ ಎರಡು ಎಡರುಗಳು ಬರಹತ್ತಿದ್ದವು. ೧ ಆ ಅತಿದಪ್ಪಾದ ಒಡ್ಡಿನೊಳಗಿಂದ ನೀರು ಹೋಗಲಿಕ್ಕೆ ಮಾಡಿದ

ಕಾಲುವೆಯು, ಆ ಹಳ್ಳೀ ಮೋರೆಯೇ ಎಂದು ಕಂಡು ಬಂದಂಥ ಕಂಡಿಯ ಉಪಯೋಗ ಮಾಡಲಿಕ್ಕೆ ಅದು ನೀರಿನ ಮೇಲ್ಭಾಗಕ್ಕಿಂತ ಬಹಳೇ ಮೇಲಿತ್ತು. ಆ ಆ ಕೊರತೆಯಲಿಗೆ ಒಡ್ಡು ಕಟ್ಟಲಿಕ್ಕೆ ಮತ್ತು ಆ ಹಳ್ಳೀ ಮೋರೆಗಳನ್ನು ಬೇಕಾದ ಹಾಗೆ ಉಪಯೋಗಿಸುವಂತ ಆ ಸರೋವರದ ಸಮಭೂಮಿಯನ್ನು ಏರಿಸಲಿಕ್ಕಾಗುವ ಖರ್ಚಿನದೆಶೆಯಿಂದಲೂ, ಮೈಸೂರ ಇಲಾಖೆಯ ಜನರ ಭೂಮಿಗಳು ಆ ಸರೋವರದ ದಂಡೆಯು ವೇಲಿದ್ದದರಿಂದ ಆ ಭೂಮಿಗಳು ಆ ನೀರಿನ ವಿರುವಿಕೆಯಿಂದ ಕೊಳಚೆ ಆಗುವದರದೆಶೆಯಿಂದಲೂ ಆ ಜನರು ಅದಕ್ಕೆ ಒಪ್ಪಲಿಲ್ಲ.

ಈ ಅಡ್ಡಿಗಳ ಸಂಬಂಧ ಸನ್ ೧೮೫೫-೫೬ ನೇ ಇಸವಿಯಲ್ಲಿ ಎಗ್ಜುಕ್ಯುಟಿವ್ ಇಂಜನೀಯರಾಗಿದ್ದ ಲೆಫ್ಟಿನೆಂಟ ಕರ್ನಲ್ ಪ್ಲೆಫೇಅರ್ ಆರ್ ಈ ಎಂಬವರು ಆ ಹಳ್ಳೀ ಮೋರೆಯ ಕೆಳಗೆ ಬಂದು ಕಲ್ಲನ್ನು ಇಟ್ಟರೆ, ಆ ಸರೋವರವು ಸಫಲವಾಗಿ ಬೆಣೆ ಹಾಕಲ್ಪಡುವದೆಂದು ಅಲೋಚಿಸುವತನಕ ಏನೊಂದು ಕೆಲಸವಾಗಲಿಲ್ಲ. ಈದು ಪ್ಲೆಫೇಅರನಂಥ ತೀಕ್ಷ್ಣಮೇಲ್ವಿಚಾರಣೆಯಿಂದ ಮಾಡಲ್ಪಟ್ಟಿತು. ಆ ಹಳ್ಳೀ ಮೋರೆಯು ಕೆಸರಿನಿಂದ ತುಂಬಲ್ಪಟ್ಟಿದ್ದರಿಂದ ಅದನ್ನು ಸ್ವಚ್ಛಮಾಡುವದಕ್ಕೋಸ್ಕರ ಆ ಮೋರೆಯು ಎರಡೂ ಬದಿಯಿಂದ ಈ ಕೆಲಸವು ಆರಂಭಿಸಲ್ಪಟ್ಟಿತು.

DEPARTENTAL NOTICE.

ನೋಟೀಸು.

ವಿಜಾಪುರ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ್‌ಮಾಸ್ತರರಿಗೆ

ಡೆಪೂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಜಿಲ್ಲಾ ವಿಜಾಪುರ ಇವರ ಕಡೆಯಿಂದ

ಈ ಜಿಲ್ಲೆಯೊಳಗಿನ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಅಕ್ಷರ ತಿದ್ದುವ ಉದ್ದೇಶದಿಂದ ಪ್ರದರ್ಶನಕ್ಕೆ ಯೋಗ್ಯ

ವಾದ ಪುಸ್ತಿಗಳನ್ನು ಕಳಿಸಿಕೊಡಬೇಕೆಂದು, ನಾವು ಹಿಂದಕ್ಕೆ ಸರಕ್ಯೂಲರಕೊಟ್ಟ ಪ್ರಕಾರ ಕಳಿದ ಸಪ್ಟಂಬರದಲ್ಲಿ ಬೇರೆ ಬೇರೆ ಶಾಲೆಗಳಿಂದ ಬೇರೆ ಬೇರೆ ಇಯತ್ತೆಗಳ ಪುಸ್ತಿಗಳು ಒಟ್ಟಿಗೆ ಸುಮಾರು ಏಳುನೂರು ಬಂದಿದ್ದವು ಅವುಗಳನು ಪರೀಕ್ಷಿಸಿ ಗುಣಗಳನ್ನು ಕೊಡುವ ಬಗ್ಗೆ ದೊಡ್ಡ ದೊಡ ವಿದ್ವಾನ ಅಧಿಕಾರಸ್ಥರೂ, ವಕೀಲರೂ ಮುಂತಾದ ಹತ್ತು ಜನ ಸಭ್ಯ ಗೃಹಸ್ಥರ ಕಮೀಟಿ ನೇಮಿಸಿತ್ತು. ಅವರ ಅಭಿ ಪ್ರಾಯದಂತೆ ಕೆಳಗೆ ನಮೂದಿಸಿದ ವಿದ್ಯಾರ್ಥಿಗಳಿಗೆ ಇನಾ ಮು ಕೊಟ್ಟಿರುತ್ತದೆ. ಪುಸ್ತಿಗಳನ್ನು ಕಳಿಸದೆ ಇದ್ದಂಥ. ಅಥವಾ ಇನಾಮು ದೊರಕಿಸದೆ ಇದ್ದಂಥ ಶಾಲೆಗಳ ಮಾಸ್ತ ರರು, ಪ್ರಯತ್ನ ಮಾಡಿ ತಮ್ಮ ತಮ್ಮ ವಿದ್ಯಾರ್ಥಿಗಳ ಅಕ್ಷ ರ ಚನ್ನಾಗಿ ಸುಧಾರಿಸಿ, ಇನಾಮು ದೊರಕಿಸಿ, ಸಿಫಾರಸು ಪ ಡೆಯತಕ್ಕದ್ದು. ತಾರೀಖು ೫ ಜಾನೇವಾರಿ ಸನ್ ೧೯೦೫ ಇಸವಿ.

S. M. Ankle.
ಡೆಂ. ಎಂ. ಇನ್‌ಸ್ಪೆಕ್ಟರ ಜಿಲ್ಹಾ ವಿಜಾಪುರ.

ನೋಟೀಸು.

ಮೈಸೂರ ಸೀಮೆಯ ಕೋಲಾರ ಹಾಯಸ್ಕೂಲ ಅ. ಮಾಸ್ತರ ಎ. ಕೃಷ್ಣಮ್ಮಾಚಾರ್ಯ ರಚಿತವಾದ ಉತ್ತರ ಹರಿಶ್ಚಂದ್ರ ಚರಿತ್ರವೆಂಬ ಕನ್ನಡ ಗದ್ಯ ಗ್ರಂಥವನ್ನು ಲಾ ಯಬ್ರರಿ ಪುಸ್ತಕವಾಗಿಯೂ ಇನಾಮು ಪುಸ್ತಕವಾಗಿಯೂ ಮಂಜೂರು ಮಾಡಿರುವದಾಗಿ ಮೇಹಬರ್ಬಾನ ಶಾಲಾಖಾತೆ ಯ ಡಾಯರೆಕ್ಟರ ಸಾಹೇಬರವರು ಸನ್ ೧೯೦೦ನೇ ಫೇ ಬ್ರವರಿ ತಾ|| ೧೬ನೇ ನಂಬರ ೪೬೦೬ನೇ ಹುಕುಮಿನಿಂದ ತಿಳಿಯಪಡಿಸಿರುವರು.

ಧಾರವಾಡ ಟ್ರೇ. ಕಾಲೇಜ,
ತಾ|| ೨೧-೨-೧೯೦೫.

K B. Bendigeri.
ಅ. ಪ್ರಿನ್ಸಿಪಾಲ.

ವಿಜಾಪುರ ಜಿಲ್ಲೆಯೊಳಗಿನ ಲೋಕಲ್ ಬೋರ್ಡ ಶಾಲೆಗಳಲ್ಲಿ ಬೇರೆ ಬೇರೆ ಇಯತ್ತೆಗಳಲ್ಲಿ ಆಕ್ಷೆರದಲ್ಲಿ ಇನಾಮು ಪಡೆದ ವಿದ್ಯಾರ್ಥಿಗಳ ಪಟ್ಟಿಯು.

ನಂಬರ	ವಿದ್ಯಾರ್ಥಿಗಳ ಹೆಸರು.	ಶಾಲೆಗಳ ಹೆಸರು	ಪಡಕೊಂಡ ಇನಾಮು.
	೨ನೇ ಇಯತ್ತೆ		
೧	ಕೃಷ್ಣಾಜಿ ಸದಾಶಿವ ಚಾಂದೊರ	ಹುನಗುಂದ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ ಜರದ
೨	ಬಸಲಿಂಗಯ್ಯಾ ಅಮರಯ್ಯಾ ಮಳದ	ಹುನಗುಂದ	ಕರ್ನಾಟಕ ಕಾದಂಬರಿ [ಉಪರಣ
	೩ನೇ ಇಯತ್ತೆ		
೧	ಭಗವಂತ ವೆಂಕಟೇಶ ಕೊಡಗಲಿ	ಬದಾಮಿ	ವಿರಾಟಪರ್ವ, ಜರದ ಉಪರಣ
೨	ಕೃಷ್ಣಾಜಿ ಗಣೇಶ ಧಟೆ	ಬದಾಮಿ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ
೩	ನಾರಾಯಣ ಭೀಮಾಚಾರ್ಯ ಕಟ್ಟಿ	ಜಾಲಿಹಾಳ	ನಿಬಂಧಮಾಲೆ, ಅಂಜನಪೋತರ
೪	ನಾರಾಯಣ ನರಸಿಂಹ ಕುಲಕರ್ಣಿ	ಜಾಲಿಹಾಳ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ
೫	ಗೋವಿಂದ ಬಾಳಾಜಿ ತಾರಕೂನ	ಕಲಾದಗಿ	ಪಂಪರಾಮಾಯಣ, ಜರದ ರುಮಾಲು

೬	ವಿಜಯನಾಥ ಶಾಳವೇಂದ್ರ ಹಬ್ಬು	ಕಲಾದಗಿ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ	
೭	ವೆಂಕಟೇಶ ಶ್ರೀಪತ್ಯಾಚಾರ್ಯ ಕರಜಗಿ	ಗಲಗಲಿ	ಹಿಂದುಸ್ಥಾನ ನಿವಾಸಿ	
೮	ದಾದಾ ತಂದಿ ಹನಮಪ್ಪಾ ಸಂಪಿ	ಸಿರೂರ	ಉದ್ಯೋಗಪರ್ವ, ಜರದ ರುಮಾಲು	
೯	ರುದ್ರಪ್ಪಾ ತಂದಿ ಸಾತಪ್ಪಾ ಕುಂಬಾರ	ಬೀಳಗಿ	ಹಿಂದುಸ್ಥಾನ ನಿವಾಸಿ	
೧೦	ರುದ್ರಪ್ಪಾ ತಂದಿ ಅಡಿವೆಪ್ಪಾ ಕನ್ನೂರ	ತಾಂಬೆ	ಆದಿಪರ್ವ	
೧೧	ಹನ್ನಪ್ಪಾ ಬಸಪ್ಪಾ ಹಡಪದ	ಮುದ್ದೇಬಿಹಾಳ	ಹಿಂದುಸ್ಥಾನ ನಿವಾಸಿ	
೧೨	ಸಂಗಪ್ಪಾ ತಂದಿ ಅಯ್ಯಪ್ಪಾ ನಾಟೇಲ	ತಾಳಿಕೋಟ್ಟಿ	ವಿರಾಟಪರ್ವ. ಜರದ ಉಪರಣಿ	
೧೩	ಗೋವಿಂದ ವೆಂಕಟೇಶ ಕುಲಕರ್ಣಿ	ಜಾಲವಾದ	ಅಂಚಿನ ಧೋತರ	
೧೪	ಮಲ್ಲಪ್ಪಾ ತಂದಿ ಸಾಂತಪ್ಪಾ ಕಗ್ಗೋಡ	ಬಬಲೇಶ್ವರ	ಶಿಕಂದರನ ಜಾತ್ರೆ	೧
೧೫	ಗುರಸಂಗಾ ತಂದಿ ಮಲ್ಲಪ್ಪಾ ಚೌದ್ರಿ	ಸಂಗಮೇಶ	ಶಿಕಂದರನ ಜಾತ್ರೆ	೧
				೧
	೫ ನೇ ಇಯತ್ತಿ			
೧	ಬಸವ್ವಾ ಸಂಗವ್ವಾ ಹಂಪನಗೌಡರ	ನಾಲತವಾಡ	ನಿಬಂಧಮಾಲೆ	
೨	ನಬಿ ಪಟೇಲ ಮೋಹದಿನ ಎಲಿಗಾರ	ಹಿಪ್ಪರಗಿ	ನಿಬಂಧಮಾಲೆ, ಅಂಚಿನಧೋತರ	
೩	ಇಮಾಮ ವಲಿ ಕಾಸೀಮ ವಿಜಾಪುರ	ಹಿಪ್ಪರಗಿ	ಜರದ ರುಮಾಲು	
೪	ರಾಮಜಿ ನರಸಿಂಗ ಭೋಸಲೆ	ಬಾಗೇವಾಡಿ	ನಿಬಂಧಮಾಲೆ	
೫	ಬಳವಂತ ಕೃಷ್ಣ ಥಾಣಕ ಸಿರೂರ	ಬದಾಮಿ	ಕರ್ನಾಟಕ ಕಾಡಂಬರಿ	
೬	ದಾನು ತಂದಿ ಮಹಮದು ಮುಚಿಗಾಥ	ಸಿಂದಿಗಿ	ನಿಬಂಧಮಾಲೆ, ಅಂಚಿನ ಧೋತರ	

೬	ಪೋಪಬೀನ ಇವಾಮುಸಾ॥	ಲೋಹಾರ	ತಾಳೀಕೋಟೆ ಗಾರ್ಡ್‌ಸಾಲೆ	ಶಾಕುಂತಲನಾಟಿಕ
೮	ಶಿವಪ್ಪ ಮಹಾಂತಪ್ಪ ನಾಗಸೋತಿ		ಮುದ್ದೇಬಿಹಾಳ	ನಿಬಂಧಮಾಲೆ
೯	ಮಲ್ಲಾರ ಜನಾರ್ದನಭಟ್ಟ ಪುರೋಹಿತ		ಚಿಕ್ಕಶಲ್ಲಿಕೇರಿ	ಅಂಚಿನಧೋತರ
	೫ನೇ ಇಯತ್ತೆ ಹೆಣ್ಣುಹುಡುಗರು.			
೧	ಕಾಸೆವ್ವ ತಂದಿ ತೇಜಪ್ಪ ಮೊಳೆ		ಹೊನವಾಡ	ಋಣ
೨	ಬಸವ್ವ ತಂದಿ ಕಲ್ಲನಗೌಡಾ ಪಾಟೀಲ		ಹೊನವಾಡ	ಋಣ
	೪ನೇ ಇಯತ್ತೆ			
೧	ತಿಪ್ಪಾ ತಂದಿ ಬಸಪ್ಪಾ ಹವಶಟ್ಟಿ		ನಾಲತವಾಡ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ
೨	ರಾಜಾರಾಮ ತುಳಜಾರಾಮ		ಇಂಡಿ	ನಿಬಂಧಮಾಲೆ
೩	ಚನ್ನಪ್ಪಾ ತಂದಿ ಈರಪ್ಪಾ ಕಠಾಣಿ		ಚಿಕ್ಕಶಲ್ಲಿಕೇರಿ	ನಿಬಂಧಮಾಲೆ
೪	ಅಣ್ಣಪ್ಪಾ ತಂದಿ ಬಸವಪ್ಪಾ ಚಟ್ಟೇರ		ಅಹೇರಸಂಗ	ಅಂಚಿನ ಉಪರಣಿ
	ಹೆಣ್ಣು ಹುಡುಗರು			
೧	ಗೌದವ್ವಾ ನಾಂಡಪ್ಪಾ ಮೊಸಳಿ		ತಾಳಿಕೋಟೆ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರವೂ ಋಣ

೨	ಸುಂದರವ್ವಾ ಚಿನ್ನವ್ವಾ ಜೋಗಾರ	ತಾಳಿಕೋಟಿ	ಋಣ
	೩ನೇ ಇಯತ್ತೆ.		
೧	ದಸ್ತಗೀರ ವ|| ಬಂದಗಿಸಾ||	ಸಿರೂರ	ಶಿಕಂದರನ ಚರಿತ್ರ
೨	ಶಂಕರೆವ್ವಾ ತಂದಿ ಬಸವ್ವಾ ನಾಗರಹಾಳ	ನಿಡಗುಂದ	ನಿಬಂಧಮಾಲೆ
೩	ಎಲ್ಲವ್ವಾ ತಂದಿ ಜಟ್ಟಿಂಗಾ ಢೋರ	ಸಿಂದಗಿ ಉರ್ದುಶಾಲೆ	ಗೃಹವ್ಯವಸೆಯೂ ಆರೋಗ್ಯಶಾಸ್ತ್ರವೂ
೪	ಮಲ್ಲ್ಯಾ ತಂದಿ ತಿಮ್ಮ್ಯಾ ಮಚಿಗಾರ	ಜೈನಾಪೂರ	ನಿಬಂಧಮಾಲೆ
	ಹೆಣ್ಣು ಹುಡುಗರ		
೧	ಮುನಸೂರವ್ವಾ ತಂದಿ ಬಾಳಾಸಾ||	ಕಲಾದಗಿ	ಋಣ
೨	ರಿಂದವ್ವಾ ಕೋಂ ಬಾಳಾಚಾರ್ಯ	ಕೆರೂರ	ಋಣ
೩	ನೀಲವ್ವಾ ಸಂಗವ್ವಾ ಗೌಡರ	ತಾಳಿಕೋಟಿ	ಋಣ
	೨ನೇ ಇಯತ್ತೆ.		
೧	ರಾಜಾ ತಾಯಿ ಅಡಿವೆವ್ವಾ	ಕೆರೂರ	ನಿಬಂಧಮಾಲೆ
೨	ಭೀಮಸ್ಸಾ ರಾಮುಸ್ಸಾ ಭೋಳಿ	ಜಾಲವಾದ	ನಿಬಂಧಮಾಲೆ

೩	ಸಬಿಸಾ॥ ವ॥ ಪೋಹದೀಸಸಾ॥	ಹುನಗುಂದ ಉರ್ದುಕ್ಲಾಸ	ಶಾಕುಂತಲ ನಾಟಕ
೪	ಕಾಳವ್ವಾ ತಂದಿ ನಾಗವ್ವಾ ಪುಜಿಗಾರ	ಸಿಂದಗಿ	ಅಂಚಿನ ಉಪರಣಾ
	ಹೆಣ್ಣು ಹುಡುಗರು.		
೧	ಸೀತಾಬಾಯಿ ತಂದಿ ವೆಂಕಾಜಿಕಾರಕೂನ	ಜೈನಾಪೂರ	ಖಣ
೨	ಶಾಶವ್ವಾ ಹುಚ್ಚವ್ವಾ ಗಿರಜಾ	ಚಿತ್ತರಗಿ	ಖಣ
	೨ನೇ ಇಯತ್ತೆ.		
೧	ಹಸನ ವ॥ ನಬಿಸಾ॥	ಸಿರೂರ	ಗೃಹವ್ಯವಸ್ಥೆಯೂ ಆರೋಗ್ಯಶಾಸ್ತ್ರ
	೧ನೇ ಇಯತ್ತೆ ಹೆಣ್ಣುಹುಡುಗಿ.		
೧	ಸೊಲಭವ್ವಾ ತಂದಿ ಬಸವ್ವಾಬಬಲೇಶ್ವರ	ತಾಳಿಕೋಟಿ	ಖಣ

S. M. Ankle
ಡೆಪುಟಿ ಎಜ್ಯುಕೇಶನಲ್, ಇನಸ್ಪೇಕ್ಟರ ವಿಜಾಪೂರ.

ಸಿದ್ಧನಾಥ ವಾಚನ ಮಂದಿರ
ಶಾಲಾಪತ್ರ. ಧಾರವಾಡ.
ಪದ್ಯಂ.

ಪ್ರಥುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಟಶೋತ್ಕರ್ಷಮುಂ।
ಜಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತವೆಪೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷಪತಿದ್ದವೇಳ್ವುದುಚಿತರ್ಜ್ಞಾನಾಭಿವೃದ್ಧಿಪ್ರಿಯರಿಂ॥

ಪುಸ್ತಕ ೩೯] ಎಪ್ರೀಲ ೧೯೦೩ [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಶತಕದಲ್ಲಿ ಪ್ರಾಥಮಿಕಶಾಲಾ ಶಿಕ್ಷಕರ ಉದ್ಯೋಗದಲ್ಲಿ ಸುಧಾರಣೆಯಾಗುವದು ಅತ್ಯವಶ್ಯವಾದದ್ದೆಂಬದು ಸ್ಪಷ್ಟವಿರುತ್ತದೆ. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಾದ ರಾ. ಸಾ. ರೊದ್ದ ಶ್ರೀನಿವಾಸರಾಯರು ಇವರು ಪ್ರತಿವರ್ಷ ಹೋಳೀ ಹಬ್ಬದ ಸೂಟಿಯಲ್ಲಿ "ಶಿಕ್ಷಕ ಸಮ್ಮೇಲನ"ವನ್ನು ಕೂಡಿಸಿ ಅವರಿಗೆ ಅವರ ಉದ್ಯೋಗ ಸಂಬಂಧದಿಂದ ಸುಧಾರಣೆಯಾಗುವಂತೆಯೂ, ಪರಸ್ಪರರಲ್ಲಿ ಪ್ರೇಮಭಾವವುಂಟಾಗುವಂತೆಯೂ ಕಳೆದ ವರ್ಷದಿಂದ ಏರ್ಪಾಟು ಮಾಡಿರುವರು. ಈ ವರ್ಷ ಕಳೆದ ತಿಂಗಳ ೧೬, ೧೭ನೇ ತಾರೀಖುಗಳಲ್ಲಿ ಪ್ರೊ॥ ಎ॥ ಇ॥ ಸಾ॥ ರವರ ಅನುಮತಿಯಿಂದ ಸಮ್ಮೇಲನದ ಕಲಸವು ಟ್ರೇನಿಂಗಕಾಲೇಜದಲ್ಲಿ ನೆರವೇರಿಸಲ್ಪಟ್ಟಿತು. ಸಮ್ಮೇಲನಕ್ಕೆ ಧಾರವಾಡ ಬೆಳಗಾವ ವಿಜಾಪೂರ ಕಾರವಾರ ಜಿಲ್ಲೆಗಳೊಳಗಿನ ಲೋಕಲ್‌ಬೋರ್ಡ ಮುನಸಿಪಾಲಿಟಿ ಹಾಗೂ ಬಾಸೆಲ್‌ಮಿಶನ್ ಶಾಲೆಗಳ ಅಧ್ಯಾಪಕರೂ ಅಧ್ಯಾಪಕಿಯರೂ ಕೂಡಿ ಸುಮಾರು ೧೦೦ ಜನರು ಬಂದಿದ್ದರು.

ಅವರನ್ನು ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳು ಸ್ವೀಕರಿಸಿ ದಿಂದ ಕರಕೊಂಡು ಬಂದು, ಕಾಲೇಜದಲ್ಲಿ ಗೊತ್ತುಮಾಡಿ ಟ್ಟ ಇವಾದತುಗಳಲ್ಲಿ ಇಳಿಸಿ, ಊಟಉಪಚಾರ ಮೊದಲಾ ದ ಆದರಾತಿಥ್ಯಗಳನ್ನು ಯೋಗ್ಯರೀತಿಯಿಂದ ಮಾಡಿದರು

ಮೇಲನದ ಮುಖ್ಯಾಂಗವಾದ ಶಿಕ್ಷಣದ ಕೆಲಸವು ಸೋಮವಾರ ತಾರೀಖು ೧೬ನೇ ದಿವಸ ಮಧ್ಯಾಹ್ನದ ೧ ಘಂಟೆಗೆ ಪ್ರಾರಂಭವಾಯಿತು. ಅಕ್ಟಿಂಗ ಪ್ರಿನ್ಸಿಪಾಲರಾದ ರಾ. ಸಾ. ಬೆಂಡಿಗೇರಿ ಬಿ. ಏ. ಯವರು ಬಂದ ಜನರ ಅಭಿನಂದನೆ ಮಾ ಡಿ ಕಾರ್ಯಕ್ರಮವನ್ನು ಪ್ರಕಟಿಸಿದರು ತರುವಾಯ ಕಾಲೇಜದ ೧ನೇ ಅಸಿಸ್ಟಾಂಟ ರಾ ರಾ. ರಾ ಶ್ರೀ. ಕುಲಕರ್ಣಿ ಎಲ್, ಸಿ, ಈ, ಇವರು ಶಿಕ್ಷಣದ ಅಮೂಲ್ಯವಾದ ಪ್ರೋ ರೆಯನ್ನು ಕೈಕೊಂಡ ನಮ್ಮೆಲ್ಲರಲ್ಲಿ ಪರಸ್ಪರ ಪ್ರೇಮದ ಬಳಿ ಕೆಯನ್ನುಂಟು ಮಾಡುವದೂ, ನಮ್ಮ ಉದ್ಯೋಗದಲ್ಲಿ ತ ಕ್ಕ ಸುಧಾರಣೆಯಾಗುವಂತೆ ವಿವರಿಸಿ ಹೇಳುವದೂ ಎ ನ್ನುವ ಅವಶ್ಯವಿರುತ್ತದೆಂಬದನ್ನು ವಿವರಿಸಿ, ಈವರ್ಷ ಹೊ ಸದಾಗಿ ಪ್ರಸಿದ್ಧವಾದ "ಶಿಕ್ಷಕರಿಗೋಸ್ಕರ ಸೂಚನೆಗಳು" (Instructions to teachers) ಎಂಬ ಶಿಕ್ಷಣದ ಹೊಸ ಪದ್ಧತಿಯ ಪುಸ್ತಕದಲ್ಲಿ ಹೇಳಿದ ನಿಯಮಗಳು ಯಾವ ತತ್ವ ಗಳ ಆಧಾರದಿಂದ ರಚಿಸಲ್ಪಟ್ಟಿರುವವೊ, ಆ ತತ್ವಗಳನ್ನು ವಿಶದವಾಗಿ ತಿಳುಹಿಸಿದರು ಈ ತತ್ವಗಳು ಲ್ಯಾಂಡನ್‌ನೆಂಬ ಫೆನವಿದ್ವಾಂಸನ ಗ್ರಂಥದಿಂದ ತೆಗೆದುಕೊಳ್ಳಲ್ಪಟ್ಟವೆ.

೧. ಶಿಕ್ಷಣ ಕೊಡುವಾಗ್ಗೆ ವಿದ್ಯಾರ್ಥಿಗಳ ಮನಸಿನ ಹಾಗೂ ಶರೀರದ ಸ್ಥಿತಿಯನ್ನು ಅನುಲಕ್ಷಿಸುವದು

ಹುಡುಗರು ಚಿಕ್ಕವರಿರುವಾಗ್ಗೆ ಅವರ ಇಂದ್ರಿಯಗಳು ತೀಕ್ಷ್ಣವಿರುವದರಿಂದ ಅವರಲ್ಲಿ ಪದಾರ್ಥಗಳನ್ನು ನೋಡುವ ಕುತೂಹಲವು ವಿಶೇಷವಿರುತ್ತದೆ. ಆದ್ದರಿಂದ ಆರಂಭದ ಶಿ ಕ್ಷಣವು ವಸ್ತುದರ್ಶನಪಾಠಗಳ ದ್ವಾರದಿಂದಲೇ ನಡಿಸಲ್ಪ ಡಬೇಕಲ್ಲದೆ, ಬರೇ ಪುಸ್ತಕಗಳ ದ್ವಾರದಿಂದ ಅಂದರೆ ವಿ ಚಾರ ಹಾಗೂ ಕಲ್ಪನಾಶಕ್ತಿಗಳ ದ್ವಾರದಿಂದ ಸಾಗಿಸುವದು

ಸರಿಯಲ್ಲ; ಆದ್ದರಿಂದ ಶಿಶುಶಿಕ್ಷಣಪದ್ಧತಿಯಲ್ಲಿ ವಸ್ತುಗಳಿಂದಲೇ ಎಲ್ಲ ವಿಧದ ಇಂದ್ರಿಯಗಳ ಮೂಲಕ ಶಿಕ್ಷಣವನ್ನು ನಡಿಸುವದು. ಮುಂದೆ ಹುಡುಗರು ದೊಡ್ಡವರಾಗುತ್ತ ಹೋದಂತೆ ಅವರ ಕಲ್ಪನಾಶಕ್ತಿಯೂ ವಿಚಾರಶಕ್ತಿಯೂ ಬೆಳೆಯುವವು. ಅವುಗಳ ಸಹಾಯದಿಂದ ಶಿಕ್ಷಣವನ್ನು ನಡಿಸಬೇಕು. ಹ್ಯಾಗಂದರೆ—ಭೂಗೋಲದ ಪ್ರಾರಂಭದ ಪಾಠಗಳನ್ನು ವಿದ್ಯಾರ್ಥಿಗಳ ಸುತ್ತುಮುತ್ತಲಿರುವ ಗುಡ್ಡ ಹಳ್ಳ ಕೆರೆ ಮುಂತಾದ ಪ್ರಾಕೃತಿಕ ಸ್ವರೂಪಗಳನ್ನೂ ಅವುಗಳ ಕಾರ್ಯಗಳನ್ನೂ ಪ್ರತ್ಯಕ್ಷ ತೋರಿಸಿ, ಅವುಗಳ ಚಿತ್ರಗಳನ್ನೂ ತೆಗಿಸಿ, ಯಥಾರ್ಥ ಜ್ಞಾನಮಾಡಿಕೊಟ್ಟ ಬಳಿಕ, ಅವರು ದೊಡ್ಡವರಾಗುತ್ತ ಹೋದಹಾಗೆ ಬರೇ ನಕಾಶೆ ಹಾಗೂ ವಿವರಣೆಗಳಿಂದ ಪರ್ವತ ನದಿ ಸಮುದ್ರ ಮುಂತಾದವುಗಳ ಜ್ಞಾನವನ್ನು ಮಾಡಿಕೊಡಬೇಕು. ಹಾಗೂ ಹುಡುಗರ ಮನಸು ತೀರ ಚಿಕ್ಕಂದಿನಲ್ಲಿ ಬಹಳ ಚಂಚಲವಾಗಿರುವದರಿಂದ ಅವರಿಗೆ ಒಂದು ಪಾಠವನ್ನು ೨೦ ಅಥವಾ ೩೫ ನಿಮಿಷಗಳಿಗಿಂತ ಹೆಚ್ಚು ಕಾಲ ಒಂದೇ ಸವನೆ ನಡಿಸಬಾರದು. ಅದನಂತೆ ಹುಡುಗರು ಸಂಜೆವರಿರುವಾಗ್ಗೆ ಆಟಕ್ಕೆ ಬಹಳ ಮೆಚ್ಚುವರು, ಅವರು ಒಂದು ಕ್ಷಣ ಸಹ ಸುಮ್ಮನಿರರು. ಆದಕಾರಣ ಶಿಶುಶಿಕ್ಷಣದ ಪದ್ಧತಿಯಿಂದ ಆಟಗಳನ್ನಾಡಿಸುತ್ತ ಶರೀರಕ್ಕೂ ಬುದ್ಧಿಗೂ ತಕ್ಕ ಬೆಳವಣಿಗೆಯಾಗುವಂತೆ ಮಾಡುವದು ಅವಶ್ಯವದೆ.

೨. ವಿದ್ಯಾರ್ಥಿಗಳ (ಅ) ಗರಜುಗಳನ್ನೂ (ಬ) ಅವರ ಧಾರಣಾಶಕ್ತಿಯನ್ನೂ, (ಕ) ಪೂರ್ವಜ್ಞಾನವನ್ನೂ (ಡ) ಶಾರೀರಕ ಮಾನಸಿಕ ಶಕ್ತಿಯ ಬೆಳವಣಿಗೆಯ ಇಯತ್ತೆಯನ್ನೂ ಅವಲಂಬಿಸಿ ಪದ್ಧತಿಯನ್ನು ಗೊತ್ತುಮಾಡುವದು ಅವಶ್ಯವದೆ

೪ ವಿದ್ಯಾರ್ಥಿಗಳ ಬುದ್ಧಿಯ ವಿಶೇಷ ಅಂಗವನ್ನು ಬೆಳಿಸುವ ಉದ್ದೇಶದಿಂದ ಯಾವದೊಂದು ವಿಷಯದ ಶಿಕ್ಷಣವನ್ನು ನಾಗಿಸುವಾಗ್ಗೆ ಬುದ್ಧಿಯ ಇತರ ಅಂಗಗಳ ಬೆಳವಣಿಗೆಯ ವಿಷಯದಲ್ಲಿ ಸಹ ತಕ್ಕ ಪ್ರಮಾಣದಿಂದ ಲಕ್ಷಕೊಡತಕ್ಕದ್ದು.

ಹ್ಯಾಗಂದರೆ—ವಸ್ತುಪಾಠಶಿಕ್ಷಣದಲ್ಲಿ ನಿರೀಕ್ಷಣ ಸಾಮರ್ಥ್ಯವನ್ನು ಬೆಳಿಸುವದೇ ಪ್ರಧಾನ ಉದ್ದೇಶವಿದ್ದಾಗ್ಯೂ ಅದರೊಡನೆ ವಿದ್ಯಾರ್ಥಿಗಳ ವಿಚಾರಶಕ್ತಿಗೆ ಚಲನೆಯುಂಟಾಗುವಂತೆ ಬೇರೆ ಬೇರೆ ವಸ್ತುಗಳ ಪಾಠಗಳನ್ನು ಕ್ರಮಗೊಳಿಸುವದು ಅವಶ್ಯವಿದೆ. ಉದಾಹರಣಾರ್ಥವಾಗಿ ಬೆಕ್ಕಿನ ಪಾಠವನ್ನು ಕಲಿಸಿದ ಬಳಿಕ ಹುಲಿ ಅಥವಾ ಸಿಂಹದ ಪಾಠವನ್ನು ಕಲಿಸುವದರಿಂದ ಆ ವರ್ಗದ ಪ್ರಾಣಿಗಳ ರಚನಾ, ಸ್ವಭಾವ, ಆಹಾರ ಮುಂತಾದವುಗಳ ಸಂಬಂಧದಿಂದ ಸಾಮಾನ್ಯ ನಿಯಮವನ್ನು ತೆಗೆಯುವದಕ್ಕೆ ಅನುವಾಗುತ್ತದೆ.

೫. ಸಣ್ಣ ಹುಡುಗರಿಗೆ ಶಿಕ್ಷಣ ಕೊಡುವಾಗ್ಗೆ ಅವರ ಇಂದ್ರಿಯಗಳಿಗೆ ಹೆಚ್ಚು ಕೆಲಸ ಹಚ್ಚುವದು ಅವಶ್ಯವದೆ. ಇಂದ್ರಿಯಗಳಲ್ಲಿ ಕಣ್ಣು ಕಿವಿ ಇವೇ ಮುಖ್ಯ.

ಇಂದ್ರಿಯಗಳನ್ನು ಕೆಲಸಕ್ಕೆ ಹಚ್ಚಿದಾಗ್ಗೆ ಆ ಇಂದ್ರಿಯಗಳ ಕೆಲಸಗಳಿಗೆ ಸಂಬಂಧಿಸಿದಂಥ ಯಾವದೊಂದು ಕೈಕೆಲಸವನ್ನು ವಿದ್ಯಾರ್ಥಿಗಳಿಂದ ಮಾಡಿಸುವದು ಉಚಿತ, ಆದದರಿಂದ ಫ್ರೊಬೆಲ್ಲನ ಕಿಂಡರ ಗಾರ್ಟನ್ ಪದ್ಧತಿಯಲ್ಲಿ ಘನದ ಅವಯವಗಳನ್ನೂ ಧರ್ಮಗಳನ್ನೂ ಕಲಿಸಿದನಂತರ, ಅಂಥ ಘನವನ್ನು ಮಣ್ಣಿನಿಂದಾಗಲಿ, ಬೆಂಡು ಕಡ್ಡಿಗಳಿಂದಾಗಲಿ ಮಾಡಿಸಬೇಕೆಂದು ಹೇಳಿಯದೆ.

೬. ಶಿಕ್ಷಣದ ಕೆಲಸವು ಬರೇ ಯಾಂತ್ರಿಕ ರೀತಿಯಿಂದ ಸಾಗುವದು ಸರಿಯಲ್ಲ. ಅದರಲ್ಲಿ ವಿಚಾರಶಕ್ತಿಯ ಸಹಾಯವನ್ನು ತಕ್ಕೊಳ್ಳುವದು ಯೋಗ್ಯ—ಹ್ಯಾಗಂದರೆ ಭೂಗೋಲದ ಪಾಠದಲ್ಲಿ ಯಾವದೊಂದು ದೇಶದ ವಿಸ್ತಾರವನ್ನು ಹೇಳತಕ್ಕದಿದ್ದಲ್ಲಿ, ಅದನ್ನು ಮುಂಚಿತವಾಗಿ ಗೊತ್ತಿದ್ದ ದೇಶಕ್ಕೆ ಸರಿಹಚ್ಚಿ ಹೇಳುವದು ಮುಂತಾದ ರೀತಿಯಿಂದ ಬಹು ದಿವಸ ನೆನಪಿನಲ್ಲಿ ಉಳಿಯುವದು.

೭. ವಿದ್ಯಾರ್ಥಿಗಳ ಸ್ವಂತ ಸಾಮರ್ಥ್ಯವನ್ನು ದುರ್ಲಕ್ಷಿಸಬಾರದು. ಅಂದರೆ ವಿದ್ಯಾರ್ಥಿಗಳು ಸ್ವಂತ ಪ್ರಯತ್ನದಿಂದ ದೊರಕಿಸಿದ ಜ್ಞಾನವು ತಪ್ಪಾದದ್ದಿದ್ದರೆ ಅವನಿಂದಲೇ ತಪ್ಪು

ನ್ನು ಹೊರಗೆಡವುವೆದು; ಇಲ್ಲವೆ ಅವನ ಜ್ಞಾನವು ಸಂದಿಗ್ಧ ಇಲ್ಲವೆ ಅರ್ಧಮರ್ಧ ಸರಿಯಾಗಿದ್ದರೆ, ಅವುಗಳನ್ನು ತಕ್ಕ ಪ್ರಶ್ನೆಗಳಿಂದ ಯೋಗ್ಯಮಾರ್ಗಕ್ಕೆ ಹಚ್ಚಿ ತಿದ್ದತಕ್ಕದ್ದು. ಆದರೆ ಶಿಕ್ಷಕನು ತಾನೇ ಹೇಳಿ ಬಿಡದೆ ಅವರು ತಮ್ಮ ಸ್ವಂತ ಪ್ರಯತ್ನದಿಂದಲೇ ಆ ಜ್ಞಾನ ದೊರಕಿಸಿದೆವೆಂಬ ಭಾವವನ್ನು ಅವರಲ್ಲಿ ಹುಟ್ಟಿಸಬೇಕು.*

೮. ಶಿಕ್ಷಣವನ್ನು ಬರೀ ಶಬ್ದಗಳ ದ್ವಾರದಿಂದ ಸಾಗಿಸದೆ ಸ್ಪಷ್ಟವಾಗಿ ತಿಳಿಯುವಂಥ ವಿಚಾರಗಳಿಂದಲೂ, ವಸ್ತುಗಳಿಂದಲೂ ನಡಿಸತಕ್ಕದ್ದು.

ಸಹ್ಯ ಪರ್ವತದಲ್ಲಿ ತ್ರಾಪ (ಹಾವಟಿಗೆಯ) ಎಂಬ ಕರೇ ಕಲ್ಲಿನ ಜಾತಿಯ ಶಿಲೆಗಳು ದೊರೆಯುತ್ತವೆ. ಅವು ಸವಿದು ಕೃಷ್ಣಾ ಮುಂತಾದ ನದಿಗುಂಟ ಹರಿದುಬಂದು ಆ ನದಿಗಳ ಸುತ್ತಲಿನ ಪ್ರದೇಶವು ಕರಿನಾಡು ಆಗಿರುತ್ತದೆಂಬ ಮಾತನ್ನು ಬರೇ ಶಬ್ದಗಳಿಂದ ತಿಳಿಸುವದರ ಬದಲು ತಮ್ಮ ಊರ ನೆರೆಯಲ್ಲಿ ಡೊರೆಯುವ ವಜ್ರದುಂಡೀ ಕಲ್ಲಿನ ೧ ತುಣಕನ್ನೂ ಎರೇಮಣ್ಣಿನ್ನು ತೋರಿಸಿ ಶಿಕ್ಷಣವನ್ನು ಸಾಗಿಸುವದು ಸರಿಯಾದದ್ದು.

೯. ವಿದ್ಯಾರ್ಥಿಗಳಿಗೆ ಸವಿೂಪದಲ್ಲಿರುವ ಸಂಗತಿಗಳ ಜ್ಞಾನವನ್ನು ಮೊದಲು ಮಾಡಿಕೊಟ್ಟು, ದೂರದ ಸಂಗತಿಗಳ ಜ್ಞಾನವನ್ನು ಕರುವಾಯ ಮಾಡಿಕೊಡುವದು.

(ಅ) ಸವಿೂಪದಿಂದ ದೂರಕ್ಕೆ (ಬ) ಪ್ರತ್ಯಕ್ಷದಿಂದ ಅಪ್ರತ್ಯಕ್ಷ ಅಥವಾ ಕಲ್ಪಿತಕ್ಕೆ, (ಕ) ರೂಢಿಯೊಳಗಿದ್ದವರಿಂದ ಕಾಲ್ಪನಿಕ ವಿಚಾರಕ್ಕೆ ಸಾಗಬೇಕು.

(ಅ) ತನ್ನ ಊರ ಸುತ್ತಲಿನ ಭೂಗೋಲದ ಜ್ಞಾನವನ್ನು

---

* ಈ ಭಾವನೆಯಿಂದ ವಿದ್ಯಾರ್ಥಿಗಳಲ್ಲಿ ಸ್ವಂತ ಶ್ರಮದಿಂದ ದೊರಕಿಸಿದ ಜ್ಞಾನದ ವಿಷಯವಾಗಿ ಅಭಿಮಾನವೂ, ಹೊಸ ಶೋಧಗಳನ್ನು ತಾವಾಗಿ ಮಾಡಬಹುದೆಂಬ ಧೈರ್ಯವೂ, ಉಂಟಾಗುವವು.

ಸಂಪಾದಿಸಿವ ಬಳಿಕ ತನ್ನ ದೇಶದ ಹಾಗೂ ಪರದೇಶದ ಜ್ಞಾನವನ್ನು ಕ್ರಮಕ್ರಮವಾದಿಂದ ಸಂಪಾದಿಸಬೇಕು.

(ಬ) ಬೆಕ್ಕಿನಪಾಠದ ಸಹಾಯದಿಂದ ಹುಲಿಯು ಪಾಠವನ್ನು ಕಲಿಯುವದು.

ಇದೇ ಪ್ರಕಾರ ಪ್ರಾಣಿಗಳ ವಿಷಯಕ್ಕೆ ಪಾಠ ಕಲಿಯುತ್ತಿದ್ದಲ್ಲಿ ಗ್ರಾಮ್ಯ ಪಶುಗಳ ಜ್ಞಾನವನ್ನು ಸಂಪಾದಿಸಿವ ಬಳಿಕ ವನ್ಯಪಶುಗಳ ಜ್ಞಾನವನ್ನು ಸಂಪಾದಿಸಬೇಕು.

(ಕ) ಬಂಧು ಪ್ರೀತಿಯ ವಿಷಯವಾಗಿ ಹೇಳುವಾಗ್ಗೆ ಅಣ್ಣತಮ್ಮಂದಿರಲ್ಲಿ ಪರಸ್ಪರ ಪ್ರೀತಿಯಿರಬೇಕೆಂಬದನ್ನು ಕಲಿಸಿದ ಬಳಿಕ, ವ್ಯವಸಾಯ ಬಾಂಧವರು, ದೇಶಬಾಂಧವರು ಎಂಬ ಸಂಬಂಧದಿಂದ ಸಹ ಪರಸ್ಪರರಲ್ಲಿ ಪ್ರೀತಿಯುಂಟಾಗುವಂತೆ ಮಾಡುವದು.

೧೦ ತಿಳಿದದ್ದರಿಂದ ತಿಳಿಯದ್ದಕ್ಕೆ, ಸುಲಭದಿಂದ ಕಠಿಣಕ್ಕೆ, ಉದಾಹರಣೆಗಳಿಂದ ನಿಯಮಕ್ಕೆ, ವಿಕ್ಷೇಪ ಸಂಗತಿಗಳಿಂದ ತತ್ವಗಳಿಗೆ ಸಾಗತಕ್ಕದ್ದು.

೧೧ ಕ್ರಮಕ್ರಮವಾಗಿ ಜ್ಞಾನಾಭಿವೃದ್ಧಿಯಾಗುವಂತೆ ಬಹಳ ಎಚ್ಚರದಿಂದ ವ್ಯವಸ್ಥೆಯನ್ನು ಮಾಡತಕ್ಕದ್ದು.

ಒಂದೇ ಕಾಲಕ್ಕೆ ಅನೇಕ ಸಂಗತಿಗಳನ್ನು ತಗೆದುಕೊಂಡು ವಿದ್ಯಾರ್ಥಿಗಳನ್ನು ಗೊಂದಲದಲ್ಲಿ ಕೆಡವಬಾರದು. ತಾನು ಬೇರೆ ಬೇರೆ ಕಾಲಗಳಲ್ಲಿ ಕಲಿಸಿದ ವಿಷಯಗಳ ಸ್ವಾಭಾವಿಕ ಕ್ರಮವನ್ನು ಪರಸ್ಪರ ಸಂಬಂಧವನ್ನು ವಿದ್ಯಾರ್ಥಿಗಳಿದುರಿಗೆ ಸ್ಪಷ್ಟವಾಗಿ ಇರಿಸಬೇಕು. ಅಂದರೆ ವಿಚಾರಸರಣಿಯು ಕ್ರಮವಾಗಿ ಬೆಳವಣಿಗೆಯನ್ನು ಹೊಂದುವಂತೆ ಮಾಡಬೇಕು.

೧೨ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಹುರುಪು ಹುಟ್ಟುವಂತೆ ಯಾವದೊಂದು ವಿಷಯವನ್ನು ವರ್ಗದ ಮುಂದೆ ಇಡಬೇಕು.

ನಿಸ್ಸಾರವಾದ ಶಿಕ್ಷಣವು ನಿಷ್ಫಲವಾದದ್ದೆಂಬದು ನಿಶ್ಚಯ.

೧೩. ಕಲಿಯುವ ವಿಷಯದ ಸಂಬಂಧದಿಂದ ವಿದ್ಯಾರ್ಥಿಗ

ಲ್ಲಿ ಅಭಿರುಚಿ ಹುಟ್ಟಿಸುವ ಪ್ರಯತ್ನ ಮಾಡುವದು ಶಿಕ್ಷಕನ ಮೊದಲನೇ ಕೆಲಸವು.

ಕಲಿಯುವ ಕೆಲಸವು ಆಸಕ್ತಿಯು ಹೊರ್ತು ಚನ್ನಾಗಿ ಸಾಗಲಾರದು.

೧೪. ಆಧಾರಗಳನ್ನು ಮೊದಲು ಹೇಳಿ, ಅವುಗಳಿಂದ ಸಿದ್ಧಾಂತವನ್ನು ತೆಗೆಯುವ ಕ್ರಮದಿಂದ ಬಾಲಕರನ್ನು ವಿಚಾರ ಮಾಡಹಚ್ಚಿಕ್ಕೆ ಹಚ್ಚಬೇಕಷ್ಟು; ಅಂದರೆ ಯಾವದೊಂದು ವಿಚಾರ ಪರಣತಿಯಲ್ಲಿ 'ಯಾಕಂದರೆ' ಎಂಬ ಶಬ್ದದ ಸಹಾಯದಿಂದ ವಿಚಾರ ಮಾಡುವ ಪದ್ಧತಿಯನ್ನನುಸರಿಸದೆ 'ಆದಕಾರಣ' ಎಂಬ ಶಬ್ದವನ್ನು ಉಪಯೋಗಿಸಿ ಸಾಗತಕ್ಕದ್ದು.

೧೫. ನಿಜವಾದ ಶಿಕ್ಷಣದಲ್ಲಿ ಶಿಕ್ಷಕ ಶಿಕ್ಷಿತರೊಳಗೆ ಪರಸ್ಪರ ಸಹಾನುಭೂತಿಯೂ ವಿಶ್ವಾಸವೂ ಇರುವದು ಅತ್ಯವಶ್ಯಕವಾಗಿದೆ.

ಶಿಕ್ಷಕನು ಅಂತಃಕರಣದ ಸ್ವಭಾವದವನಿರಬೇಕು.

೧೬. ಕಲಿಸಿದ ವಿಷಯಗಳನ್ನು ಮೇಲೆ ಮೇಲೆ ಚಿಂತನ ಮಾಡಿಸುವದೂ, ಪುನಃ ಪುನಃ ಅನ್ನಿಸುವದೂ ಅವಶ್ಯವದೆ.

೧೭. ಚಟುವಟಿಕೆಯೂ, ಜ್ಞಾನಸಂಪಾದನದ ಲವಲವಿಕೆಯೂ ಬಾಲ್ಯದ ಸ್ವಾಭಾವಿಕ ಲಕ್ಷಣಗಳಾಗಿವೆ.

ಕಲಿತ ವಿಷಯಗಳನ್ನು ಆದಷ್ಟು ಮಟ್ಟಿಗೆ ಆಗಿಂದಾಗ್ಗೆ ವ್ಯವಹಾರದಲ್ಲಿ ತರುವದಕ್ಕೆ ಯತ್ನಿಸಬೇಕು ನುಡಿಯಂತೆ ನಡೆ" ಎಂಬಂತೆ ಮನಸಿನಲ್ಲಿ ಹೋದ ವಿಚಾರಗಳನ್ನು ಕ್ರಿಯಾಮಿಂಪ ತೆರೀರಿಸುವದು.

೧೮. ವಿಷಯಗಳನ್ನು ಮೇಲೆ ಮೇಲೆ ಬದಲು ಮಾಡುವದೂ, ಹುಡುಗರನ್ನು ನಡುನಡುವೆ ಆಟಕ್ಕೆ ಬಿಡುವದೂ ಅವಶ್ಯವದೆ.

ಬುದ್ಧಿಯು ಬೇರೆ ಬೇರೆ ಅಂಗಗಳಿಗೆ ತ್ರಾಸವ್ರಂಟಾಗುವವರೆಗೆ ಶಿಕ್ಷಣವನ್ನು ನಡಿಸಬಾರದು. ಅಂದರೆ ಅವುಗಳ ಮೇಲೆ ಬಹಳ ಭಾರ ಹಾಕುವದೂ ಸರಿಯಲ್ಲ. ಕಲಿಯುವ ಕೆಲಸವು ಆನಂದಕರವಾಗುವಂತೆ ಮಾಡುವದು ಅವಶ್ಯವದೆ; ಆದರೆ ಅದಕ್ಕೆ ಬರೇ ಆಟದ ಸ್ವರೂಪವನ್ನು ಪ್ರಾಪ್ತ ಮಾಡಿಕೊಡುವದು ತಕ್ಕದ್ದಲ್ಲ.

೧೯. ಆಲಸ್ಯದಿಂದ ಅನೇಕ ದುಷ್ಪರಿಣಾಮಗಳು ಘಟಿಸುತ್ತವೆಂಬದನ್ನು ಲಕ್ಷದಲ್ಲಿಡಬೇಕು.

ಉತ್ತಮವಾದ ಪದ್ಧತಿಯಲ್ಲಿ ಪ್ರತಿಬಿಬ್ಬ ವಿದ್ಯಾರ್ಥಿಗೆ ಪೂರ್ಣ ಕೆಲಸವಿರತಕ್ಕದ್ದು.—ಈ ಹೇತುವನ್ನು, ತೀವ್ರ ಪ್ರಶ್ನೆ ಕೇಳುವದರಿಂದಲೂ, ಹೇಲೆ ಹೇಲೆ ಉದಾಹರಣೆ ಮುಂತಾದವುಗಳನ್ನು ಪ್ರತಿಬಿಬ್ಬನಿಂದ ಮಾಡಿಸುವದರಿಂದಲೂ ಸಾಧಿಸಬಹುದು.

೨೦. ವಿದ್ಯಾರ್ಥಿಗಳು ತಾವೇ ಮಾಡಬಹುದಾದ ಕೆಲಸವನ್ನು ಶಿಕ್ಷಕನೊಡನೆ ಮಾಡುವದು ಸರಿಯಲ್ಲ; ಅಂದರೆ ಹೇಲಿನ ಇಯತ್ತೆಗಳಲ್ಲಿ ಯಾವದೋಂದು ನಿಯಮವನ್ನು ಶಿಕ್ಷಕನು ವಿದ್ಯಾರ್ಥಿಗಳಿಗೆ ಸ್ಪಷ್ಟ ತಿಳಿಸಿದ ಬಳಿಕ, ಆ ನಿಯಮಕ್ಕನುಸರಿಸಿ ಬಿಡಿಸತಕ್ಕ ಉದಾಹರಣೆಗಳನ್ನು ವಿದ್ಯಾರ್ಥಿಗಳು ಮನಯಲ್ಲಿ ತಾವೇ ಮಾಡಿಕೊಂಡು ಬರಬೇಕು; ಆದರೆ ಆ ವಿಷಯಗಳನ್ನು ವರ್ಗದಲ್ಲಿ ಶಿಕ್ಷಕನೆದುರಿಗೆ ಮಾಡುತ್ತ ಕೂಡುವದರಿಂದ ಸಾಲೆಯೊಳಗಿನ ಮಹತ್ವದ ವೇಳೆಯು ವ್ಯರ್ಥ ಹೋಗುವದು. ಇದೇ ತತ್ವದ ಮೇಲಿಂದ ನಿಬಂಧಲೇಖನ ಮುಂತಾದ ಗೃಹಪಾಠದ ವಿಷಯಗಳನ್ನು ಗೊತ್ತು ಮಾಡಬೇಕು. ಆದರೆ ವರ್ಗದಲ್ಲಿ ಶಿಕ್ಷಕನು ತಿಳಿಸದೆ ಇದ್ದ ವಿಷಯವನ್ನು ಮನೆಯಲ್ಲಿ ಕಲಿತುಕೊಂಡು ಬರುವದಕ್ಕೆ ನಿಯಮಿಸಿಕೊಟ್ಟು, ಸಾಲೆಯಲ್ಲಿ ಆ ಪಾಠವನ್ನು ಪರೀಕ್ಷಿಸುವದು ಗೃಹಪಾಠದ ಪುರುಪಯೋಗವು. ಈ ಪದ್ಧತಿಯನ್ನು ಅನುಸರಿಸುವದು ಯೋಗ್ಯವಲ್ಲ.

ಮೇಲೆ ಹೇಳಿದ ತತ್ವಗಳನ್ನು ಕಾಲಾ ವಿದ್ಯಾಭ್ಯಾಸಕ್ರಮದ ಬೇರೆ ಬೇರೆ ವಿಷಯಗಳಿಗೆ ಹಚ್ಚಿ, ಆ ಆ ವಿಷಯಗಳ ಪದ್ಧತಿಗಳನ್ನು ಗೊತ್ತುಮಾಡತಕ್ಕದ್ದು. ಅದರಂತೆ ಈ ಶಿಕ್ಷಕರಿಗೋಸ್ಕರ ಸೂಚನೆಗಳು ಎಂಬ ಪುಸ್ತಕದಲ್ಲಿ ಪದ್ಧತಿಗಳು ಗೊತ್ತು ಮಾಡಲ್ಪಟ್ಟವೆ. ಆ ವಿಶೇಷ ಪದ್ಧತಿಗಳ ದಿಗ್ದರ್ಶನವು ಆಯಾ ಪಾಠಗಳು ನಡೆಯುವಕಾಲಕ್ಕೆ ಮಾಡಲ್ಪಡುವದು." ಎಂದು ಹೇಳಿದ ತರುವಾಯ

ದಿವಸದ ಕಾರ್ಯಕ್ರಮಪ್ರಕಾರ ನಡೆದ ೧ನೆ ಪಾಠವಾ ದ ಬಾಲೋದ್ಯಾನ ಶಿಕ್ಷಣ ಅಥವಾ ಶಿಶು ಶಿಕ್ಷಣದ ತತ್ವಗಳ ನ್ನು ವಿವರಿಸಿದರು.

೧. ಸೃಷ್ಟಿಯಲ್ಲಿರುವ ಬೇರೆ ಬೇರೆ ವಸ್ತುಗಳ ಸಂಬಂಧವು ಒಂದು ಸರ್ವವ್ಯಾಪಕವಾದ ವಿಶೇಷ ಪ್ರಕಾರದ ಶಕ್ತಿಯಿಂದ ಸಂಬಂಧಿಸಲ್ಪಟ್ಟಿರುತ್ತವೆ. ಆ ಶಕ್ತಿಗೆ ಸರ್ವ ವ್ಯಾಪಕನಾದ ದೇವರೇ ಕಾರಣನು.

೨ನಿಜಕೋಟಿ, ಉದ್ಭಿಜ್ಜಕೋಟಿ, ಪ್ರಾಣಿಕೋಟಿಗಳಲ್ಲಿ ಬೇರೆ ಬೇರೆ ವಿಶೇಷಶಕ್ತಿಗಳೂ ಕಟ್ಟಳೆಗಳೂ ಇರುತ್ತವೆ; ಮತ್ತು ಇವು ಪರಸ್ಪರ ಅತಿ ನಿಕಟ ಸಂಬಂಧವುಳ್ಳವುಗಳಾ ಗಿರುತ್ತವೆ. ಮನುಷ್ಯನಾದರೂ ಈ ಕೋಟಿಗಳೊಳಗಿನ ಒಂದು ಭಾಗವಾಗಿರುವದರಿಂದ ಇಂಥ ಶಕ್ತಿಯು ಬಾಲಕರ ಲ್ಲಿ ಸಹ ಇರುವದು. ಆ ಶಕ್ತಿಯನ್ನು ಹೊರಗೆಡಹುವದೇ ಶಿಶುಶಿಕ್ಷಣದ ಮುಖ್ಯ ಉದ್ದೇಶವು.

೩. ಸೃಷ್ಟಿ ನಿಯಮಗಳಿಗನುಸರಿಸಿ ಬಾಲಕರ ಶಿಕ್ಷಣವು ನಡೆಯತಕ್ಕದ್ದು; ಅಂದರೆ ಬಾಲಕರ ಸ್ಥಿತಿ ಹಾಗೂ ಬೆಳವ ಣಿಗೆಗಳು ಯಾವ ನಿಯಮಗಳಿಗೆ ಒಳಗಾಗಿರುತ್ತವೆಯೋ ಆ ನಿಯಮಗಳನ್ನನುಸರಿಸಿ ಸಾಗಿಸತಕ್ಕದ್ದು. ಬೆಳವಣಿಗೆಯು ಕ್ರಮಕ್ರಮದಿಂದ ಆಗುತ್ತದೆ. ಮತ್ತೂ ಅದರ ಪ್ರತಿಒಂದು ವೆಟ್ಟಿನಲ್ಲಿ ಅದರ ಸ್ಥಿತಿಯು ವಿಶೇಷ ಪ್ರಕಾರದ್ದಿರುತ್ತದೆ. ಆ ಸ್ಥಿತಿಗೆ ತಕ್ಕ ಉಪಾಯಗಳನ್ನು ಯೋಜಿಸಿದರೆ ಬೆಳವಣಿ ಗೆಗೆ ಅನುಕೂಲವಾಗುವದು. ಆದ್ದರಿಂದ ಶಿಕ್ಷಣದ ಕೆಲಸ ಕ್ಕೆ ಶಿಶುವಿನ ಅವಲೋಕನವು ಅವಶ್ಯವದೆ.

೪ಶಿಶುವಿನ ಸಂಬಂಧವು ದೇವರಿಗೂ, ಸಮಾಜಕ್ಕೂ ಇತ ರ ಸೃಷ್ಟಿಗೂ ಇರುತ್ತದೆ. ಆ ಸಂಬಂಧವನ್ನು ಶೈಶವದಲ್ಲಿ ಯೇ ತಕ್ಕ ರೀತಿಯಿಂದ ಜೋಡಿಸುವದು ಶಿಕ್ಷಣದ ಉದ್ದೇ ಶವಾಗಿರುತ್ತದೆ ಅಂದರೆ ದೇವರ ಸಂಬಂಧದಿಂದ ಹುಡುಗನ ಲ್ಲಿ ಆಸ್ತಿಕ್ಯವನ್ನೂ, ಸಮಾಜಸಂಬಂಧದಿಂದ ನೀತಿಯನ್ನೂ, ಇತರ ಸೃಷ್ಟಿಯ ಸಂಬಂಧದಿಂದ ವಿವೇಕವನ್ನು ಉಂಟುಮಾ ಡುವದು. ಶಿಕ್ಷಕನ ಕರ್ತವ್ಯವು—

ಶಿಶುವಿನ ಸ್ವಾಭಾವಿಕ ಬೆಳವಣಿಗೆಗೆ ವಿಶೇಷ ಅನುಕೂಲವಾಗುವಂತೆ ಪರಿಸ್ಥಿತಿ ಹಾಗೂ ಪ್ರೇರಣೆಗಳನ್ನುಂಟು ಮಾಡುವುದು ಶಿಕ್ಷಕನ ಕರ್ತವ್ಯವಾಗಿದೆ. ತೋಟಗನು ಗಿಡಗಳಲ್ಲಿ ಪೂರ್ಣ ಶಕ್ತಿಗಳನ್ನುಂಟು ಮಾಡಲಿಕ್ಕೆ ಅಸಮರ್ಥನಿರುವಂತೆ ಶಿಕ್ಷಕನು ಬಾಲಕರ ಸಂಬಂಧದಿಂದ ಆಗಿರುವನು; ಆದರೆ ಅವನು ಬಾಲಕರಲ್ಲಿರುವ ಹುಟ್ಟುಗುಣಗಳ ಬೆಳವಣಿಗೆಯನ್ನು ತಕ್ಕ ರೀತಿಯಿಂದ ಬೆಳಿಸುವ ವಿಷಯದಲ್ಲಿ ಎಚ್ಚರುಳ್ಳವನಾಗಿರತಕ್ಕದ್ದು.

೨ ಮನುಷ್ಯನ ಜೀವನಕ್ರಮದಲ್ಲಿ ನಡೆಯುವಂಥ ಬೇರೆ ಬೇರೆ ಸಂಗತಿಗಳಲ್ಲಿ ಒಂದೇ ಪ್ರಕಾರದ ಸಂಬಂಧವಿರುವಂತೆ ಶಿಶುವಿನ ಶಿಕ್ಷಣದ ಬೇರೆ ಬೇರೆ ಸಂಗತಿಗಳಲ್ಲದರೂ ಒಕ್ಕಟ್ಟು ಇರಬೇಕು.

ಉದಾ:— ಆಹಾರ, ವ್ಯಾಯಾಮ, ನಿದ್ರೆ ಮುಂತಾದ ಜೀವನಕ್ರಮದ ಎಲ್ಲ ಸಂಗತಿಗಳಲ್ಲಿ ಸಂಬಂಧವಿರುವಂತೆ ಶಾರೀರಿಕ ಮಾನಸಿಕ ನೈತಿಕ ಶಿಕ್ಷಣಗಳಲ್ಲಿ ಪರಸ್ಪರ ಸಂಬಂಧವಿರತಕ್ಕದ್ದು.

೪ ಶಿಶುವಿನ ಸ್ವಂತ ಇಚ್ಛೆಯಿಂದುಂಟಾದ ಕೃತಿಗಳ ಸಹಾಯದಿಂದಲೂ, ಅವುಗಳ ದ್ವಾರವಾಗಿಯೂ ಅವರ ಸಾಮರ್ಥ್ಯವು ಬೆಳವಣಿಗೆಯನ್ನು ಹೊಂದತಕ್ಕದ್ದು. ಹುಡುಗನಲ್ಲಿ ನಿಜವಾಗಿ ತನ್ನಿಂದಾನೇ ಹುಟ್ಟುವಂಥ ಪ್ರಯತ್ನವು ಅತ್ಯವಶ್ಯವಾಗಿದೆ. ಬರೇ ಕೇಳೋದು ಅಥವಾ ಅನುಕರಣ ಮಾಡೋದು ಇದು ಶಿಕ್ಷಣವೆನಿಸಿಸುವದಿಲ್ಲ. ಹುಡುಗರಲ್ಲಿ ಕೆಲಸ ಮಾಡುವ ಇಚ್ಛೆಯು ಆಟದ ರೂಪದಿಂದ ಇರುತ್ತದೆ. ಆದದರಿಂದ ಬಾಲಕರ ಶಿಕ್ಷಣವು ಯೋಗ್ಯ ಮಾರ್ಗಕ್ಕೆ ಹಚಿದಂಥ ಆಟದ ರೂಪದಲ್ಲಿದ್ದು, ಪರಿಣಾಮವು ಒಂದು ಕಾರ್ಯವಾಗಿರತಕ್ಕದ್ದು. ಫ್ರೊಬೆಲ್ಲನ ಶಿಕ್ಷಣಸುಧಾರಣೆಯು ಇಂಗಿತವು ಇದೇ. ಒತ್ತಾಯವಿಲ್ಲದೆ ಶಿಕ್ಷಕನ ಸೂಚನೆಯಿಂದ ಸ್ವತಂತ್ರವಾಗಿ ಕಾರ್ಯ ಮಾಡುವದರಿಂದಲೇ ಬಾಲಕನು ಸ್ವಾಭಾವಿಕವಾದ ಅಭಿವೃದ್ಧಿಯನ್ನು ಹೊಂದುವನು. ಬಾಲಕನಿಗೆ ಅಪ್ಪಣೆಗಳನ್ನು ಮಾಡದೆ, ಅವನ ಅಧಿಕಾರದ

ಲ್ಲಿ ಕೈ ಹಾಕದೆ, ನಿಷ್ಕಾರಣವಾಗಿ ಅವನಿಗೆ ಅಡ್ಡ ಬರದೆ, ಮನುಷ್ಯನ ಸ್ವಭಾವದ ಸಂಬಂಧದ ವ್ಯಾಪಕವಾದ ಕಟ್ಟಳೆಗಳಿಗನುಸಾರವಾಗಿ ಪ್ರೇಮದಿಂದಲೂ ಎಚ್ಚರಿಕೆಯಿಂದಲೂ ಶಿಕ್ಷಕನು ಹಾದೀ ತೋರಿಸತಕ್ಕದ್ದು. ಮನುಷ್ಯನಿಗೆ ಕಟ್ಟಳೆಗಳೂ ಸ್ವಾತಂತ್ರ್ಯವೂ ವಿಕಸಕಾಲಕ್ಕೆ ಇರುವದು ಹ್ಯಾಗೆ ಸಂಭವವಾದದ್ದೋ, ಹಾಗೆ ಶಿಶುವಿಗಾದರೂ ಇರುತ್ತದೆ.

೫. ಶುದ್ಧ ಆಚರಣೆಯ ಯೋಗ್ಯ ಬೆಳವಣಿಗೆ ಉಂಟಾಗಲಿಕ್ಕೆ ಕರ್ತೃಸ್ವಾತಂತ್ರ್ಯವೂ, ಸಮಾಜದ ಬಳಿಕೆಯೂ ಅವಶ್ಯವಾಗಿವೆ.

ಹುಡುಗರು ಸ್ವಾಭಾವಿಕವಾಗಿ ಕೂಡಿ ಆಡುವ ಸ್ವಭಾವ ಪ್ರಳ್ಳವರೂ, ಪರಸ್ಪರರಲ್ಲಿ ಸಹಾನುಭೂತಿಯುಳ್ಳವರೂ, ಇರುವರು. ಬಾಲಕನು ಗೆಳೆಯರೊಡನೆ ಕೂಡಿ ಆಡುವದರಿಂದ ಅವರ ಮನೋವಿಕಾರಗಳನ್ನೂ ಹೆಳುಗಳನ್ನೂ ದುರ್ಲಕ್ಷ ಮಾಡದೆ ನಡೆಯಲಿಕ್ಕೆ ಅವನು ಕಲಿಯುವನು. ಮತ್ತು ಅದರಿಂದ ತನ್ನ ಕರ್ತವ್ಯವೇನು, ತಾನು ಯಾಕೆ ಸ್ವಾರ್ಥತ್ಯಾಗ ಮಾಡಬೇಕು, ಎಂಬದು ಅವನಿಗೆ ತಿಳಿಯಹತ್ತುವದು ಕುಟುಂಬದೊಳಗಿನ ಜನರ ಕೂಡ ಇರುವ ಬಳಿಕೆಗಿಂತ ಬೇರೆ ಪ್ರಕಾರದ ಬಳಿಕೆಯು ಈ ಕೆಲಸಕ್ಕೆ ಬೇಕು. ಇದೇ ಉದ್ದೇಶದಿಂದಲೇ ಹುಡುಗರು ಬೇರೆ ಹುಡುಗರ ಸಂಗಡ ಸ್ನೇಹ ಮಾಡಿ, ಅವರ ಕೂಡ ಅಪ್ರತಿಬಂಧವಾಗಿ ಆಡುವದನ್ನು ನಾವು ನೋಡುತ್ತೇವೆ. ಅವರು ಹಲವರು ಬಿಟ್ಟು ಗೂಡೋಣ ಕೂಡಿ ಆಡೋಣ-ಕೆಲಸಗಳನ್ನು ಮಾಡೋಣ ಇವುಗಳಿಂದುಂಟಾಗುವ ವೈತಿಳ ಪರಿಣಾಮವು ಶಿಶುಶಿಕ್ಷಣದಲ್ಲಿ ಒಂದು ಮಹತ್ವದ ಅಂಗವಾಗಿದೆ.

೬. ಶಿಶುವಿನ ಯೋಗ್ಯ ಬೆಳವಣಿಗೆಗೆ ಉಲ್ಲಾಸವೃತ್ತಿಯು ಅವಶ್ಯವಾಗಿದೆ ಆದದರಿಂದ ಸಂತೋಷ ಹುಟ್ಟುವಂಥ ಕೆಲಸಗಳನ್ನು ಅವನಿಂದ ಮಾಡಿಸಬೇಕು; ಅಂದರೆ ಆ ಕೆಲಸದಿಂದ ಅವನಿಗೆ ಸಂತೋಷವಾಗಬೇಕು. ಅವನು ಸ್ವಂತ ಇಚ್ಛೆಯಿಂದ ಕೆಲಸ ಮಾಡಲುದ್ಯುಕ್ತನಾಗುವದರಿಂದಲೂ, ಹಿಡಿದ

ಕೆಲಸವು ಸಫಲವಾಗುವದರಿಂದಲೂ ಈ ಸಂತೋಷವು ಉಂಟಾಗುವದು. ಹುಡುಗನು ಆರಂಭಿಸಿದ ಕೆಲಸವನ್ನು ಶಿಕ್ಷಕನು ಅವನ ಸಲುವಾಗಿ ತಾನು ಮಾಡದೆ, ಅವನಿಗೇ ಮಾಡಲಿಕ್ಕೆ ಬರುವಂತೆ ಸೂಚನೆಗಳನ್ನು ಮಾಡುವದೂ ಹಾದೀ ತೋರಿಸುವದೂ ಅವಶ್ಯವಾಗಿದೆ. ಹುಡುಗನು ಮಾಡಿದ ಕೆಲಸವು ಸ್ವಂತ ಪ್ರಯತ್ನದಿಂದಾಗಿದ್ದರೆ, ಪರಿಣಾಮವು ಸಾಧಾರಣ ರೀತಿಯಿಂದ ಚನ್ನಾಗಿ ಆಗಿದ್ದರೂ ಚಿಂತೆಯಿಲ್ಲ; ಅವನಿಗೆ ಸಂತೋಷವಾಗುವದು. ಈ ಸಂತೋಷದಿಂದ ಅವನಿಗೆ ಕೆಲಸ ಮಾಡುವದಕ್ಕೆ ವಿಶೇಷ ಹುರುಪು ಉಂಟಾಗುವದು.

೭. ಬಾಹ್ಯ ಸೃಷ್ಟಿಯ ಸಂಬಂಧದಿಂದ ಅವನಿಗೆ ಪ್ರತ್ಯಕ್ಷ ಜ್ಞಾನ ಮಾಡಿಕೊಡಬೇಕು.

ವಸ್ತುಗಳ ಸಂಬಂಧವಾಗಿ ಬೇರೆ ಬೇರೆ ಇಂದ್ರಿಯಗಳ ದ್ವಾರದಿಂದ ತಿಳುಕೊಳ್ಳುವದೂ, ಸೃಷ್ಟಿಚಮತ್ಕಾರಗಳನ್ನು ನಿರೀಕ್ಷಿಸುವದೂ, ಸಜೀವ * ವಸ್ತುಗಳ ಸಂಬಂಧವಿಡುವದೂ ಶಿಶುಶಿಕ್ಷಣದ ಅಂಗಗಳಾಗಿವೆ.

೮. ಬಾಲಕರಲ್ಲಿ ವಿಶೇಷವಾಗಿ ಎರಡು ಹುಟ್ಟು ಗುಣಗಳು ಕಂಡುಬರುತ್ತವೆ. ಯಾವವೆಂದರೆ:--ವಸ್ತುಗಳ ಸಂಬಂಧದಿಂದ ಪೂರ್ಣ ಜ್ಞಾನ ಮಾಡಿಕೊಳ್ಳುವ ಇಚ್ಛೆಯು ಒಂದನೇದು, ಕಲ್ಪನೆಯಿಂದ ಯಾವದೊಂದು ಹೊಸ ವಸ್ತುವನ್ನು ಇಲ್ಲವೆ ಸಂಗತಿಯನ್ನು ಮಾಡುವ ಅವಲವಿಕೆಯು ಎರಡನೇದು, ಆದದರಿಂದ ಈ ಶಿಶುಶಿಕ್ಷಣ ಪದ್ಧತಿಯಲ್ಲಿ ವಸ್ತುಗಳ ದರ್ಶನದ ಸಂಬಂಧದಿಂದ ತಕ್ಕಷ್ಟು ಪ್ರಸಂಗಗಳನ್ನು ಒದಗಿಸಿಕೊಡುವದೂ, ಹೊಸ ರಚನೆಯ ಸಂಬಂಧದ ಆಟಗಳನ್ನು ಆಡಿಸುವದೂ ಅವಶ್ಯವಾದದ್ದು.

ಫ್ರೊಬೆಲ್ಲನು ಶಿಶುಶಿಕ್ಷಣದ ತತ್ವಗಳನ್ನು ಶಿಕ್ಷಣದ ಸಾಮಾನ್ಯ ತತ್ವಗಳ ಅನುರೋಧದಿಂದ ರಚಿಸುವನೆಂಬದು ಎರಡೂ

* ಪಶುಪಕ್ಷಿಗಳೂ, ಹೂವುಗಳೂ ಇವುಗಳ ಸಂಬಂಧದಿಂದ ಸಹಾನುಭೂತಿಯನ್ನು ಹುಟ್ಟಿಸುವದಕ್ಕೆ ಬಾಲ್ಯವೇ ತಕ್ಕ ಕಾಲವು.

ತತ್ವಗಳನ್ನು ವಿಚಾರಪೂರ್ವಕವಾಗಿ ಓದಿದರೆ ಕಂಡುಬರು ವದು.

ಈ ತತ್ವಗಳನ್ನು ವ್ಯವಹಾರದಲ್ಲಿ ತರುವದಕ್ಕೆ ಕಿಂಡರಗಾ ರ್ಟನ್ ಪದ್ಧತಿಯಲ್ಲಿ ೨೦ ಕರಣ ಅಥವಾ ಇನಾಮುಗಳೂ ಬೇರೆ ಕೆಲಪು ಕೆಲಸಗಳೂ ಗೊತ್ತು ಮಾಡಲ್ಪಟ್ಟವೆ. ಅವುಗ ಳಲ್ಲಿ ಕೆಳಗೆ ಹೇಳಿದ ೧೪ ವಿಷಯಗಳು ಸಮಾವೇಶವಾಗು ತ್ತವೆ.

ಸಾಧಕದ (ಗರಡಿ) ಪ್ರಾರಂಭದ ಮೆಟ್ಟಿಲುಗಳಾದ—

೧. ಅಂಗವಿಕ್ಷೇಪ ಅಥವಾ ಅವಯವಗಳ ಚಲನವಲನಾ ದಿಗಳನ್ನು ಮಾಡಿಸುವದು,

೨. ತಾಲದೊಂದಿಗೆ ನಡೆಯುವದು, ಕುಣಿಯುವದು ಮುಂತಾದವು.

೩. ರಾಗದ ಹೆಟ್ಟಿಗೆ ಮುಂತಾದ ವಾದ್ಯಗಳೊಡನೆ ಆಟಿಗ ಳನ್ನಾಡಿಸುವದು ಸಾಭಿನಯ ಗೀತಗಳನ್ನು ಹಾಡಿಸುವದು ಮುಂತಾದವು.

೪. ಬಗೆ ಬಗೆಯ ಸಾಧಾರಣ ವಸ್ತುಗಳ ದರ್ಶನ ಸ್ಪರ್ಶ ನಾದಿಗಳ ಮೂಲಕ ಬೇರೆ ಬೇರೆ ಇಂದ್ರಿಯಗಳಿಗೆ ಕೆಲಸಗ ಳನ್ನು ಕೊಡುವದು,

೫. ಆಕಾರ ಬಣ್ಣಗಳಿಗೆ ವಿಶೇಷವಾಗಿ ಸಂಬಂಧಿಸಿದ ಇಂ ದ್ರಿಯ ಜ್ಞಾನಾಭಿವರ್ಧಕ ಸಾಧನಗಳು.

೬. ಹಸ್ತಕೌಶಲ್ಯ, ನೇತ್ರಚಾಪಲ್ಯ, ಕಲ್ಪನಾಶಕ್ತಿ ಇವು ಗಳ ಬೆಳವಣಿಗೆಯಾಗುವಂತೆ ಬೇರೆ ಬೇರೆ ಕೈಕೆಲಸಗಳು.

೭. ಉಸುಬು ಅಲ್ಲು ಗಳಿಂದ ಆಟಿಗೆಗಳನ್ನು ಮಾಡಿಸು ವದು.

೮. ನಾಯಿ, ಬೆಕ್ಕು, ಗಿಳಿ, ಪಾರಿವಾಳ ಮುಂತಾದ ಪ್ರಾಣಿ ಗಳನ್ನು ಪ್ರೀತಿಯಿಂದ ಸಾಕುವದೂ ತೋಟವನ್ನು ಮಾಡು ವದೂ.

೯. ಸೃಷ್ಟಿ ವ್ಯಾಪಾರಗಳ ಪ್ರತ್ಯಕ್ಷ ದರ್ಶನ.

೧೦. ಚಿತ್ರಗಳ ಪರೀಕ್ಷಣವೂ ಅವುಗಳ ಸಂಬಂಧದಿಂದ ಸಂಭಾಷಣವೂ.

೧೧. ಮನೋರಂಜಕವಾದ ವರ್ಣನೆಗಳನ್ನೂ ಕಥೆಗಳನ್ನೂ ಹಾಡುಗಳನ್ನೂ ಹೇಳುವದು.

೧೨. ಒಂದು ವಿಶೇಷ ವಿಚಾರವನ್ನು ನಾಟಕರೂಪದಿಂದ ಪ್ರಕಟಿಸುವಂಥ ಆಟಗಳನ್ನು ಆಡಿಸುವದು (ಉದಾ:— ಕಾರೀಮುರಿಯು ಮಾರಾಟದ ಆಟ, ಕಾಮಣ್ಣನಂತೆ ಕಣ್ಣು ಕಟ್ಟಿಕೊಂಡು ಹುಡುಕುವ ಆಟ)

೧೩. ತರ್ಕದ ಸಹಾಯದಿಂದ ಆಗತಕ್ಕ ಆಟಗಳೂ ಸುಲಭ ಒಗಟುಗಳೂ— (ಕೈಯಲ್ಲಿ ಒಂದು ಉಂಗುರವನ್ನು ಹಿಡುಕೊಂಡು, "ನನ್ನ ಮುಷ್ಟಿಯಲ್ಲಿ ಒಂದು ಜೀನಸು ಅದೆ, ಅದು ಹುಂಡಗದೆ, ಫಳ್ಳನ ಅದೆ," ಆದರೆ ಆ ಜೀನಸು ಯಾವದು? ಮುಂತಾದ ಆಟಗಳು.)

೧೪. ಚೌಕು ಮನೆಗಳುಳ್ಳ ಸ್ಲೇಟು ಕಾಗದ ಅಥವಾ ಇಂಥ ಬೇರೆ ಯಾವದೊಂದರ ಸಹಾಯದಿಂದ ಚಿತ್ರಗಳನ್ನು ತೆಗಿಸುವದು.

ಆವುಗಳಲ್ಲಿ ಸಾಧ್ಯವಾಹವ್ಟು ವಿಷಯಗಳು ಸಮಾವೇಶವಾಗುವಂತೆ ನಾವು ಪ್ರೈಮರಿಸ್ಕೂಲ ಮಾಸ್ತರ ರಾ. ರಾ. ಗೋ. ವೆ. ದೇಸಪಾಂಡೆ ಅವರ ನೆರವಿನಿಂದ ರಚಿಸಿದ ಪ್ಲೇಬೆಲ್ಲನ ಪೊಡಲನೇ ಆಟವನ್ನು ತಮ್ಮ ಮುಂದೆ ಇಡುವವು. ಎಂದು ಹೇಳಿದರು. ತರುವಾಯ ಕಾಲೇಜಿನ ೪ನೇ ವರ್ಷದ ವಿದ್ಯಾರ್ಥಿ ಮುರಕೇಭಾವಿ ಇವರು ಪ್ರಯೋಗ ಮಾಡಿ ತೋರಿಸಿದರು.

ಈ ಪಾಠದೊಳಗಿನ ಆಟಗಳಲ್ಲಿ ನಿತ್ಯ ೩೦ ನಿಮಿಷಗಳ ತಕ್ಕಷ್ಟು ವಿಷಯವನ್ನು ಗೊತ್ತು ಮಾಡಿಕೊಂಡು ಕಲಿಸತಕ್ಕದ್ದು. ವಿಷಯವು ದೃಢವಾಗುವದಕ್ಕೆ ಒಂದೇ ವಿಷಯವನ್ನು ಕೆಲವು ದಿವಸಗಳ ವರೆಗೆ ಸಾಗಿಸಬೇಕು. ಹುಡುಗರಿಗೆ ಆ ವಿಷಯವು ನೆಟ್ಟಗೆ ಬಂದ ಕೂಡಲೆ ಮುಂದಿನ ವಿಷಯವನ್ನು ನಡಿಸಬೇಕು.

ಪ್ರಥಮ ಪ್ರಕರಣ

ಅಥವಾ

ಮೊದಲನೇ ಅಧ್ಯಾಯ

೧. **ಉಪಕರಣಗಳು ಅಥವಾ ಆಟಿಗೆಗಳು—**

(ಅ) **ಕೆಂಪು, ಹಳದಿ, ನೀಲಿ ಈ ಮೂರು ಮೂಲ ಬಣ್ಣಗಳನ್ನೂ ಕಿತ್ತಳೆ, ಹಸಿರು ನೇರಿಳ ಈ ಮೂರು ಮಿಶ್ರ ಬಣ್ಣಗಳನ್ನೂ ತೋರಿಸುವಂಥ ಉಣ್ಣೆಯಿಂದ ಹೆಣೆದ ಚೆಂಡುಗಳು.** (ವರ್ಗದೊಳಗಿನ ಪ್ರತಿಯೊಬ್ಬ ಹುಡುಗನಿಗೆ ಪ್ರತಿಯೊಂದು ಬಣ್ಣದ್ದು ಬರುವಷ್ಟು.)

ಟೀಪು - ಕಿಂಡರಗಾರ್ಟನ್ ಸಂಸ್ಥೆಗಳಲ್ಲಿ ಮೂರು ಅಥವಾ ನಾಲ್ಕು ವರ್ಷದ ಹುಡುಗರಿಗೆ ಈ ಆಟವನ್ನು ಕಲಿಸುತ್ತಿರುವದರಿಂದ ಒಂದು ವರ್ಗದಲ್ಲಿ ಹತ್ತಕ್ಕಿಂತ ಹೆಚ್ಚು ಹುಡುಗರನ್ನು ಕಾಣದಿಲ್ಲ.

(ಬ) **ಮೇಲೆ ಹೇಳಿದ ಬಣ್ಣಗಳ ಹೂವುಗಳೂ ಎಲೆಗಳೂ ಹೆಣ್ಣುಗಳೂ ಬೇರೆ ಅವಶ್ಯವಾದ ಪದಾರ್ಥಗಳೂ, ಬಣ್ಣದ ಪಟವೂ.**

(ಕ) **ಗೋಲಿಯುಗುಂಡುಗಳು.**

ಟೀಪು—ಬೆತ್ತದ ಅಥವಾ ಬಿದರಿನ ಎರಡು ಹೊವಿನ ಟುಟ್ಟಿಗಳನ್ನು ತಕ್ಕೊಂಡು ಒಂದರಲ್ಲಿ ಚೆಂಡುಗಳನ್ನೂ ಮತ್ತೊಂದರಲ್ಲಿ ಹೂವು, ಹಣ್ಣು, ಎಲೆ ಮುಂತಾದವುಗಳನ್ನೂ ಹಾಕಿಡಬೇಕು.

೨. **ಉದ್ದೇಶ**—ಎಡಬಲ ಮೇಲ ಕೆಳಗೆ ಮುಂದೆ ಹಿಂದೆ ಮುಂತಾದ ದ್ವಿಗ್ವಾಚಕ ಶಬ್ದಗಳ ಜ್ಞಾನವಾಗಿಕೊಡುವದೂ ಮುಖ್ಯ ಬಣ್ಣಗಳ ಗುರುತು ಹಿಡಿಯಲಿಕ್ಕೆ ಕಲಿಸುವದೂ ಶುದ್ಧ ರೀತಿಯಿಂದ ಸ್ಪಷ್ಟವಾಗಿ ಮಾತಾಡಲಿಕ್ಕೆ ಕಲಿಸುವದೂ ಗೋಲದ ಧರ್ಮವನ್ನು ತಿಳಿಸುವದು. ಮುಖ್ಯ ಉದ್ದೇಶಗಳಾಗಿರುತ್ತವೆ. ಇದಲ್ಲದೆ ಸಭ್ಯತನದ ನಡೆನುಡಿಗಳನ್ನೂ ವಿಧೇಯತ್ವವನ್ನೂ ಸಮುದು ವಿಶೇಷಗಳಲ್ಲಿ ಕಲಿಸತಕ್ಕದ್ದು. ಹಾಗೂ ದೇವರ ಉದಾರವು ಮನುಷ್ಯಜಾತಿಯ ಮೇಲೆ ಎಷ್ಟು ಆಗಿರುತ್ತದೆಂಬದನ್ನು ಲಕ್ಷದಲ್ಲಿ ತಂದು ಕೊಡುವದು

೩. **ವ್ಯವಸ್ಥೆ**—ಶಾಲಾಗೃಹದೊಳಗಿನ ಯಾವದೂಂದು ಎ

ಾಲವಾದ ಮೈದಾನದಲ್ಲಿ ಈ ಆಟವನ್ನು ಕಲಿಸುವದಕ್ಕೋಸ್ಕರ ತಕ್ಕಷ್ಟು ದೊಡ್ಡದಾದ ವರ್ತುಲವನ್ನು ತೆಗೆದು ಅದರ ವ್ಯಾಸದಲ್ಲಿ ಸಾಲಾಗಿ ಮನೆಗಳನ್ನು ಮಾಡಬೇಕು. ಪ್ರತಿ ಯೊಂದುಮನೆಯ ನಡುವೆ ತಕ್ಕಷ್ಟು ಅಂತರವಿರಬೇಕು. ಆ ಮನೆಗಳಲ್ಲಿ ಹುಡುಗರು ನೀಟಾಗಿ (ಅಟೆನ್‌ಶನ್‌ಎಂತೆ) ನಿಲ್ಲುವ ತಕ್ಕದ್ದು.

ಈ ಇನಾಮಿನಲ್ಲಿ ೩-೪ ಆಟಗಳಿರುವವು. ೧ನೇ ಆಟದ ಸಮುದುಕ್ಕೆ ಹುಡುಗರನ್ನು ಒಂದೇ ಸಾಲಿನಲ್ಲಿ ಇಲ್ಲವೆ ಒಂದರ ಹಿಂದೊಂದರಂತೆ ಎರಡು ಸಾಲಿನಲ್ಲಿ ನಿಲ್ಲಿಸಬೇಕು. ೨ನೇ ಆಟದಲ್ಲಿ ಒಂದರ ಎದುರಿಗೆ ಒಂದು ಸಾಲು ಬರುವಂತೆಯೂ, ೩ನೇ ಆಟದಲ್ಲಿ ವರ್ತುಲಾಕಾರವಾಗಿಯೂ ನಿಲ್ಲಿಸಬೇಕು. ೪ನೇ ಆಟದಲ್ಲಿ ೩ ಸಾಲು ಮಾಡಿ, ಒಂದರ ಹಿಂದೊಂದರಂತೆ ೪ ಸಾಲು, ಎದುರಿಗೆ ಒಂದು ಸಾಲು, ಹೀಗೆ ನಿಲ್ಲಿಸಬೇಕು.

೪. ಡ್ರಿಲ್—ಹುಡುಗರಿಗೆ ಎಡಗೈ ಬಲಗೈಗಳು ಗೊತ್ತಾಗುವದಕ್ಕಾಗಿಯೂ ಮೇಲೆ, ಕೆಳಗೆ ಮುಂತಾದ ಶಬ್ದಗಳ ಜ್ಞಾನವಾಗುವದಕ್ಕಾಗಿಯೂ ಶಿರಣವನ್ನು ನೆಲಿಗೊಳಿಸುವ ದಕ್ಕಾಗಿಯೂ ಡ್ರಿಲ್ ಕಲಿಸತಕ್ಕದ್ದು. ಆದರೆ ಪಾಠದ ಆರಂಭಕ್ಕೆ ಡ್ರಿಲ್ ಮಾಡಿಸುವದರ ಬದಲು ಸಮುದು ವಿಶೇಷದಲ್ಲಿ ಮಾಡಿಸಬೇಕು. ಅಂದರೆ ಬೇಸತ್ತ ಹುಡುಗರಿಗೆ ಹೊಸ ಉಮೇದು ಉಂಟಾಗುವದು. ಚಿಕ್ಕ ಹುಡುಗರು ಪ್ರಾರಂಭಕ್ಕೆ ಶಿಕ್ಷಕನ ಅಪ್ಪಣೆಗಳಿಗನುಸರಿಸಿ ಡ್ರಿಲ್ ಮಾಡುವದು ಅಸಾಧ್ಯ. ಆದಕಾರಣ ಶಿಕ್ಷಕರು ಹುಡುಗರೊಡನೆ ಅವರ ಸಾಲಿನಲ್ಲಿ ನಿಂತು ಶಬ್ದಗಳಿಗನುಸರಿಸಿ ತಾವೂ ಡ್ರಿಲ್ ಮಾಡಬೇಕು. ಅನುಕರಣಶಕ್ತಿಯು ಹುಡುಗರಲ್ಲಿ ಪ್ರಬಲವಾಗಿರುವದರಿಂದ ಅವರು ನಿರಾಯಾಸವೇ ಅದರಂತೆ ಮಾಡುವರು. ಕೆಲವು ದಿವಸ ಹೀಗೆ ರೂಢಿ ಮಾಡಿಸಿದ ಬಳಿಕ ಶಿಕ್ಷಕರು ಎದುರಿಗೆ ನಿಂತು ಅಪ್ಪಣೆ ಕೊಟ್ಟು ಡ್ರಿಲ್ ಮಾಡಿಸಬೇಕು.

೧. ಬಲಗೈ* ಮೇಲಕ್ಕೆತ್ತಿರಿ (ಸರಳವಾಗಿ ಮೇಲಕ್ಕೆತ್ತ

* ಟೀಪು—ಬಲಗೈ ಎಡಗೈಗಳನ್ನು ತಿಳಿಸುವದಾದರೆ ಉಣ್ಣುವ ಕೈ ಬಲಗೈ ಮತ್ತೊಂದು ಕೈ ಎಡಗೈ ಎಂದು ಹೇಳತ್ತ ಹೋಗುವದು ಸಹಿತ್ಯಗೆ.

ಬೇಕು.) ಕೆಳಗೆ ಮಾಡಿರಿ (ಸರಳವಾಗಿ ಕೆಳಗಿಳಿಸಿ ತೊಡೆಗೆ ಹಚ್ಚಬೇಕು.)

೨. ಎಡಗೈ ಮೇಲಕ್ಕೆತ್ತಿರಿ.
ಕೆಳಗೆ ಮಾಡಿರಿ.

೩. ಎರಡೂ ಕೈ ಮೇಲಕ್ಕೆತ್ತಿರಿ.
ಕೆಳಗೆ ಮಾಡಿರಿ.

೪. ಬಲಗೈ ಮುಂದೆ ಮಾಡಿರಿ. (ಸರಳವಾಗಿ ಚಾಚಬೇಕು.)
ಕೆಳಗೆ ಮಾಡಿರಿ.

೫. ಎಡಗೈ ಮುಂದೆ ಮಾಡಿರಿ.
ಕೆಳಗೆ.

೬. ಎರಡೂ ಕೈ ಮುಂದೆ ಮಾಡಿರಿ.
ಕೆಳಗೆ.

೫. ಶಿಕ್ಷಣ—

(ಅ) ಉಪಕ್ರಮ—ಆಟದಲ್ಲಿ ಕುತೂಹಲವುಂಟಾಗುವಂ ತೆ ಕುಶಲವಾದ ಮಾತುಗಳನ್ನಾಡುತ್ತ ಹುಡುಗರು ತಮ್ಮ ಮನಸಿಗೆ ಬಂದ ಚೆಂಡುಗಳನ್ನು ತಕ್ಕೊಂಡು ಗೊತ್ತು ಮಾಡಿದ ಸ್ಥಳದಲ್ಲಿ ನಿಲ್ಲುವಂತೆ ಮಾಡಬೇಕು. ಬಳಿಕ ಹುಡುಗರ ಕೈಯೊಳಗಿನ ಚೆಂಡುಗಳು (ಬಣ್ಣದಿಂದ) ಒಂದೇ ತರವಾಗಿರದೆ ಬೇರೆ ಬೇರೆಯಾಗಿರುವದನ್ನು ಆವರ ಲಕ್ಷಕ್ಕೆ ತಂದು ಕೊಟ್ಟು ಕೆಂಪು ಬಣ್ಣದ ಚೆಂಡು ತೋರಿಸಿ-ಇಂಥ (ಈ ಬಣ್ಣದ) ಚೆಂಡು ಯಾರ ಯಾರ ಹತ್ತರ ಉಂಟೋ ಅವರೆಲ್ಲ ಕೈ ಮೇಲಕ್ಕೆತ್ತಿ ತೋರಿಸಿರಿ ಎಂದು ಹೇಳುವದು. ಯಾರಾದರೂ ತಪ್ಪಿದರೆ ತಮ್ಮ ಚೆಂಡಿಗೂ ಆದಕ್ಕೂ ಹೊಂದಿಸಿ (ಬಣ್ಣದ) ಭೇದವನ್ನು ಅವರ ಲಕ್ಷಕ್ಕೆ ತಂದು ಕೊಡಬೇಕು. ಹಾಗೂ ಎಲ್ಲರೂ ಆದೇ ಬಣ್ಣದ (ಕೆಂಪು) ಚೆಂಡುಗಳನ್ನು ಕಯ್ಯಲ್ಲಿ ತಕ್ಕೊಳ್ಳುವಂತೆ ಮಾಡಬೇಕು.

(ಬ) ಬಣ್ಣ—ಹುಡುಗರು ತಮ್ಮ ಕೈಯ್ಯಲ್ಲಿರುವ ಚೆಂಡಿನ ಬಣ್ಣದ ಪದಾರ್ಥಗಳನ್ನು ಬುಟ್ಟಿಯೊಳಗಿಂದ ಆರಿಸಿ ತೆಗೆದು ಅವುಗಳನ್ನು ಪರಸ್ಪರ ಹೊಂದಿಸಿ ಹೋಲಿಸಿ ನೋಡುವಂತೆ

ಮೂ ಅವುಗಳ ಹೆಸರು ಹೇಳುವಂತೆಯೂ ಶಿಕ್ಷಕರು ಉಪಾಯ ಮಾಡಿದ ಬಳಿಕ ಇವು "ಕೆಂಪು" ಬಣ್ಣದವು ಎಂದು ಹೇಳಬೇಕು. ತರುವಾಯ ಕೆಂಪು ಬಣ್ಣದ ಬೇರೆ ಪದಾರ್ಥ (ಕುಂಕುಮ, ರಕ್ತ ಇ.) ಗಳನ್ನು ಹುಡುಗರ ನೆನಪಿಗೆ ತಂದು ಕೊಡಬೇಕು. ಈ ಪ್ರಕಾರ ಕಲಿಸುವಿಕೆಯು ಮುಂದಿನ ಕಲಮಿನಲ್ಲಿ ವಿವರಿಸಿದ ಪದ್ಧತಿಯಂತೆ ಉತ್ತರಗಳನ್ನು ಪೂರ್ಣ ವಾಕ್ಯಗಳಲ್ಲಿ ತೆಗೆದುಕೊಳ್ಳುತ್ತ ಹೋಗಬೇಕು. ತರುವಾಯ ಮನರಂಜನವಾಗುವಂತೆ ಓದಲು ಅಥವಾ ರಾಗದ ಪೆಟ್ಟಿಗೆಯೊಡನೆ ಸುಸ್ವರದಿಂದ ತಾಳಕ್ಕನುಸಾರವಾಗಿ ಕೆಳಗಿನ ಪದವನ್ನು ಹಾಡಲಿಕ್ಕೆ ಕಲಿಸಬೇಕು.

ರಾಗ ಶಂಕರಾಭರಣ, ತಾಳ.

ಕುಂಕುಮದ ಬಣ್ಣದಿಂದೂಪ್ಪುವ ಚಂಡಂ ॥
ಬಿಂಕದಿ ತೂರುವಾ ಕೆಂಪನ್ನ ಗುಂಡಂ ॥

ಇದೇ ಪೇರೆಗೆ ಒಂದೊಂದು ದಿನ ಒಂದೊಂದು ಬಣ್ಣದ ೬ ವಾಕ್ಯದ ೬ ದಿನಗಳಲ್ಲಿ ಆದಿತ್ಯವಾರ ಬಿಟ್ಟು ಉಳಿದ ಸೋಮವಾರಾದಿ ದಿವಸಗಳಲ್ಲಿ ಕೆಂಪು ಮೊದಲಾದ ೬ ಬಣ್ಣಗಳನ್ನು ಕ್ರಮದಿಂದ ಕಲಿಸಬೇಕು, ಇದರಿಂದ ವಾರದ ಹೆಸರೂ ಬಣ್ಣದ ಹೆಸರೂ, ಕೂಡಿ ನೆನಪಿನಲ್ಲಿ ಉಳಿಯುವವು. ತೀರ ಚಿಕ್ಕ ಹುಡುಗರಿಗೆ ನೀಲಿ, ಹಸರು, ಕೆಂಪು ಈ ಸ್ವಾಭಾವಿಕ ಬಣ್ಣದ ಕ್ರಮದಿಂದ ಕಲಿಸಬೇಕೆಂದು ಫ್ರೊಬೆಲ್ಲನು ಹೇಳುತ್ತಾನೆ. ಆದರೆ ನಮ್ಮಲ್ಲಿ ಸದ್ಯಕ್ಕೆ ಸಾಲೆಗೆ ಬರುವ ಹುಡುಗರ ವಯಸ್ಸಿನ ಮಾನದಿಂದ ವಿಚಾರ ಮಾಡಿದರೆ ಇಂದ್ರಧನುಷ್ಯದ ಬಣ್ಣಗಳ ಕ್ರಮದಿಂದಾಗಲಿ ಮೂಲಬಣ್ಣ ಮಿಶ್ರ ಬಣ್ಣಗಳ ಕ್ರಮದಿಂದಾಗಲಿ ಕಲಿಸಲಿಕ್ಕೆ ಆಡ್ಡಿಯಿಲ್ಲ.

ಒಂದು ಚಂಡು ಇಟ್ಟು ಮತ್ತೊಂದು ಚಂಡು ತಕ್ಕೊಳ್ಳುವಾಗ ಕೆಳಗಿನ ಪದವನ್ನು ಅಮ್ಮತ್ತು ತಾಲದೊಂದಿಗೆ ಕಾಲಿಕ್ಕುತ್ತ ವರ್ತುಲದ ಸುತ್ತಲೆ ಶಿಕ್ಷಕವನ್ನು ಹಿಂಬಾಲಿಸಿ ಹಾಡಬೇಕು.

ಒಂದು ಚಂಡನಿಡುವವು । ಒಂದು ಚಂಡಕೊಳ್ವೆವು ॥
ಒಂದುನಿಂತು ನಮ್ಮಸ್ಥಳಕೆ । ಚಂಡನಾಡ್ವೆವು ॥

ಕಿತ್ತಳೆ ಬಣ್ಣದ ಚೆಂಡು, ಕಿತ್ತಳೀಹಣ್ಣು ಬೋರೀಹಣ್ಣು ಗಳಿಗೆ ಹೋಲಿಸಿ ಕಲಿಸಬಹುದು.

ಕಿತ್ತಳೀಹಣ್ಣು ಬೋರೀಹಣ್ಣುಗಳನ್ನು ಹಣ್ಣು ಮಾರುವವರು ಬೆಣೆ ಬೆಣೆಗೆ ಮಾರಲಿಕ್ಕೆ ತರುವ ರೀತಿಯನ್ನು ಹುಡುಗರ ನೆನಪಿಗೆ ತಂದುಕೊಟ್ಟು "ಕಿತ್ತಳೀಹಣ್ಣು" "ಬೋರೀಹಣ್ಣು" ಎಂದು ಎಲ್ಲರೂ ಒಟ್ಟಾಗಿ ಕೂಗುತ್ತ ವರ್ತುಲಾಕಾರವಾಗಿ ತಾಳದೊಂದಿಗೆ ತಿರುಗಲಿಕ್ಕೆ ಹೇಳುವದು, ತರುವಾಯ ಈ ಚಂಡಿನ ಮೇಲೆ ಕೆಳಗಿನ ಪದವನ್ನು ಹಾಡಲಿಕ್ಕೆ ಕಲಿಸತಕ್ಕದ್ದು.

ರಾಗ–ಶಂಕರಾಭರಣ, ತಾಳ.

ಹುಡುಗರು ನಿಂತಲ್ಲೇ ಹಾಡತಕ್ಕ ಪದ.

ಇದು ನೋಡಿರಿ ನೀವ್ ಮತ್ತೊಂದು ಚೆಂಡಂ।
ಮುದವಿಂದ ಸವಿಯುವಾ ಕಿತ್ತಳೆಯ ಹಣ್ಣಂ ॥೧॥

ಹುಡುಗರು ತಿರುಗುತ್ತ ಅನ್ನುವ ಪದ.

ಕಿತ್ತಳೆ ಬಣ್ಣದ ಚಂಡು ನೋಡಿದಿರೈ।
ಸುತ್ತಲೆ ತಿರುಗುತ ಹಣ್ಣು ಮಾರುವರೈ ॥೨॥

ಬುಧವಾರ ಹಳದಿಯ ಬಣ್ಣವನ್ನು, ಲಿಂಬೀಹಣ್ಣು ಮೋಸಂಬಿಹಣ್ಣುಗಳಿಗೆ ಹೊಂದಿಸಿ ಕಲಿಸಿದ ತರುವಾಯ ಹುಡುಗರು ತಮ್ಮ ತಮ್ಮ ಚಂಡು ಮುಂದೆ ಮಾಡಿ ಕೆಳಗಿನ ಪದವನ್ನು ಹಾಡಬಹುದು.

ರಾಗ–ಶಂಕರಾಭರಣ, ತಾಳ.

ಸೋಮವಾರ ಮೊದಲಾದ ವಾರಗಳನ್ನು ಸಾಲೆ ಸೂಟು
ಇರುವ ವಾರ, ಸಂತೆಯವಾರ ಮುಂತಾದ ವಾರಗಳ
ಮೇಲಿಂದ ಕಲಿಸಬಹುದು.

ಇದು ನೋಡಿರಿ ನೀವ್। ಲಿಂಬಿಯುಂತಿಹುದಂ।
ಬುಧವಾರ ದಿನದಲ್ಲಿ। ಸಂಭ್ರಮವ ಬಡುತ್ತಂ ॥

ಹಸುರು ಬಣ್ಣವನ್ನು, ಎಲೆ ಹುಲ್ಲು ಮುಂತಾದವುಗಳ ಮೇಲಿಂದ ಕಲಿಸುವದು. ಗಿಳಿಯು ಪಕ್ಕವೂ ಶಿವನ ಕುದುರೆ ಎಂಬ ಹುಳದ ಪಕ್ಕವೂ ಹಸುರಾಗಿರುವದನ್ನೂ ಲಕ್ಷಕ್ಕೆ ತಂದು ಕೊಡತಕ್ಕದ್ದು. ತರುವಾಯ ಹಾಡತಕ್ಕ ಪದ.

ಹಸರು ಚಂಡಿನ ಬಣ್ಣ ಹುಲ್ಲಿನಂತಿಹುದು ।
ಸಸನಾದ ಗಿಳಿಯ ಪಕ್ಕವ ಹೋಲುತಿಹುದು ॥

ನೀಲಿ ಬಣ್ಣದ ಚಂಡನ್ನು ಮುಗಿಲಿಗೂ ನೀಲ ಗೋರಟೆಯ ಹೂವಿಗೂ ಹೋಲಿಸಿ ಕಲಿಸಬಹುದು.

ಪದ ॥ ಮುಗಿಲಿನ ಬಣ್ಣದಂತೊಪ್ಪುವ ಚಂಡಂ ।
ಮುಗಿಲಿಗೆ ತೂರುವಾ ನೀಲಿಯ ಗುಂಡಂ ॥

ನೇರಿಲ ಬಣ್ಣದ ಚಂಡನ್ನು ನೇರಿಲ ಹಣ್ಣಿಗೂ, ಜಾಂಬಳಿ ಮಸಿಗೂ ಹೋಲಿಸಿ ತೋರಿಸುವದು.

(ತೂರಿ, ಉರುಳಿಸಿ, ಪುಟಿಸಿ.)

ಹಾಡು ॥ ನೇರಿಲ ಬಣ್ಣದ್ದು ನೋಡಿರಿ ಚಂಡಂ ।
ಪರಿಪರಿಯಿಂದಲಿ ಆಡುವಾ ಗುಂಡಂ ॥

(ಕ) ಆಕಾರ ಮುಂದೆ (ಇ) ಕಲಮಿನಲ್ಲಿ ಹೇಳಿದಂತೆ ಹುಡುಗರಿಂದ ಆಟಗಳನ್ನು ಆಡಿಸುವಾಗ್ಗೆ ಚಂಡು ಉರುಳುವದನ್ನು ಅವರ ಲಕ್ಷಕ್ಕೆ ತಂದುಕೊಟ್ಟು ಚಂಡಿನಂತೆ ಗುಂಡೂ ಉರುಳುತ್ತದೆಂಬದನ್ನು ತೋರಿಸಿ ಚಂಡು ಗುಂಡಿನಂತೆ ಅದೆ ಅಂದರೆ ಚಂಡು ಗುಂಡಗೆ ಅದೆ ಎಂಬದನ್ನು ತಿಳಿಸಿ ಕೊಡಬೇಕು. ಹಾಗೂ ಹಿಂದೆ ಹೇಳಿದಂತೆ ಹುಡುಗರಿಂದ ಪೂರ್ಣ ವಾಕ್ಯಗಳಲ್ಲಿ ಉತ್ತರ ತೆಗೆದುಕೊಳ್ಳಬೇಕು. ತರುವಾಯ ಉಂಡಿ, ಲಿಂಬೀಹಣ್ಣು ಮುಂತಾದ ಪದಾರ್ಥಗಳು ಸಹ ಚಂಡಿನಂತೆಯೇ ಗುಂಡಗಿರುತ್ತವೆಂಬದನ್ನು ಹೊರಡಿಸಬೇಕು.

(ಖ) ಪೂರ್ಣ ವಾಕ್ಯಗಳಿಂದ ಉತ್ತರ ಕೊಡಲಿಕ್ಕೆ ಕಲಿಸುವ ರೀತಿಯು—ನಿನ ಚಂಡು ಯಾವ ಬಣ್ಣದ್ದು ಅದೆ? ಕೆಂಪು ಬಣ್ಣದ್ದು ಏನು? ಚಂಡು. ಯಾರ ಚಂಡು? ನನ್ನ ಚಂಡು, ಹಾಗಾದರೆ ಎಲ್ಲ ಕೂಡಿಸಿ ಪೂರಾ ಹೇಳಿರಿ, "ನನ್ನ ಚಂಡು ಕೆಂಪು ಬಣ್ಣದ್ದು ಅದೆ," ಇದೇ ಮೇರೆಗೆ ಆಕಾರ ಮೊದಲಾದವುಗಳನ್ನು ಕಲಿಸುವಾಗ್ಗೆ "ಚಂಡು ಗುಂಡಗೆ ಅದೆ" "ಚಂಡು ಉರುಳುತ್ತದೆ" ಎಂಬಂತೆ ಪೂರ್ಣ ವಾಕ್ಯಗಳಿಂದ ಉತ್ತರ ತಕ್ಕೊಳ್ಳಬೇಕು. ಮೊದಲನೇ ಸಾರೆ ಸರಿಯಾಗಿ ಉತ್ತರ ಕೊಡಲಿಕ್ಕೆ ಬಾರದಿದ್ದರೆ ಶಿಕ್ಷಕರು ತಾವೇ ಆಗ

ಡು ಹುಡುಗರಿಂದ ಅನಿಸಬೇಕು. ಬಾಲ್ಯದಿಂದಲೇ ಈ ರೂ
ಢಿ ಹಚ್ಚಿದರೆ ಮುಂದೆ ಅವರ ವಾಚನಕ್ಕೂ ನಿಬಂಧ ಲೇಖನ
ಕ್ಕೂ ಒಳ್ಳೇ ಸಹಾಯವಾಗುವದು; ಆದರೆ ಪ್ರತಿಯೊಂದು
ಉತ್ತರವನ್ನು ಪೂರ್ಣ ವಾಕ್ಯಗಳಿಂದ ತಕ್ಕೊಳ್ಳುವ ಸಹಾಸ
ಕ್ಕೆ ಬೀಳದೆ ಪ್ರಸಂಗವನ್ನೆರಿತು ಹೀಗೆ ಮಾಡುವದರಿಂದ ಹಿತ
ವಾಗುವದು.

(ಇ) ಆಟಗಳು—ಶಿಕ್ಷಕರು ಕೆಲಹೊತ್ತು ಸುಮ್ಮನೆ ಕೂ
ತರೆ ಹುಡುಗರಲ್ಲಿ ಕೆಲವರು ಚಂಡು ತೂರಬಹುದು ಕೆಲವ
ರು ಉರುಳಿಸಬಹುದು ೧,೦ ಮಿನಿಟು ಅವರಿಗೆ ಮನಬಂ
ದಂತೆ ಮಾಡಗೊಟ್ಟು ಅವರ ಬಲವ್ರಗಳ ಮೇರೆಗೆ ಆಟಗಳ
ನ್ನಾರಂಭಿಸಬೇಕು. ಅವ್ಯವಸ್ಥಿತವಾದ ವರ್ಗದಲ್ಲಿ ವ್ಯವಸ್ಥೆ
ಯನ್ನುಂಟುಮಾಡುವದಕ್ಕೋಸುಗ ಡ್ರಿಲ್‌ಮಾಡಿಸಬಹುದು.
ಆದರೆ ಎಂದೂ ಬಿರಸು ನುಡಿಗಳನ್ನು ಆಡಬಾರದು; ಹಾಗೂ
ಶಿಡಕುತನವನ್ನು ತೋರಿಸಬಾರದು; ಪ್ರೀತಿಯಿಂದ ಅವರ
ನ್ನು ಒಲಿಸಿಕೊಂಡು ತನ್ನ ಅಪ್ಪಣೆಯ ಮೇರೆಗೆ ಎಲ್ಲರೂ
ಒಮ್ಮೆಲೇ ತೂರುವಂತೆಯೂ ಪ್ರಟಿಸುವಂತೆಯೂ ಉರಿಳಿ
ಸುವಂತೆಯೂ ಅಭ್ಯಾಸ ಮಾಡಿಸಬೇಕು. ಈಗ್ಗೆ ಹುಡುಗ
ರನ್ನು ಹಿಂದೆ ಹೇಳಿದಂತೆ ಬಂದೇಸಾಲಿನಲ್ಲಿ ಅಥವಾ ಒಂದರ
ಹಿಂದೊಂದರಂತೆ ಎರಡು ಸಾಲಿನಲ್ಲಿ ನಿಲ್ಲಿಸಿ ತಾಳಗತ್ತಿಗನು
ಸರಿಸಿ ತೂರುವಂತೆ ಅಭ್ಯಾಸಮಾಡಿಸಬೇಕು.

೧ನೇ ಆಟ—ಮೊದಲು ಕೆಲವು ದಿವಸಗಳ ವರೆಗೆ ತೂರಿ
ಹಿಡಿಯಲಿಕ್ಕೆ ಬರಲಿಕ್ಕಿಲ್ಲ ರೂಢಿ ಮಾಡಿಸುತ್ತ ಹೋದರೆ
ಬರುವದು. ಹುಡುಗರಿಗೆ ಬೇಸರ ಬರುವ ಕಾಲಕ್ಕೆ ಶಿಕ್ಷ
ಕನು "ತೂರಿತೂರಿ ಹಿಡಿಯುವಾ" ಎಂಬ ಚರಣವನ್ನು ಸು
ಸ್ವರದಿಂದ ಹಾಡಬೇಕು. ಇದರಂತೆ ಅವಸರ ಮಾಡಿದರೆ
"ಸಾವಕಾಶ ಆಡುವಾ" ಎಂದು ನುಡಿಯಬಹುದು. ಈ
ವಿಧವಾಗಿ ಆಟದಲ್ಲಿ ಮನರಂಜನವಾಗುವಂತೆ ಸಮಯೋಚಿ
ತ ವಿಚಾರಟು ಮಾಡುತ್ತ ಹೋಗಬೇಕು.

೨ನೇ ಆಟದಲ್ಲಿ—ಬಂದರ ಎದುರಿಗೆ ಬಂದು ಸಾಲು ಬ
ರುವಂತೆನಿಲ್ಲಿಸಿ ಬಂದು ಸಾಲಿನವರು ತಮ್ಮ ಚಂಡು ೨ನೇ

ಸಾಲಿನವರಕ್ಕೆಯೊಳಗೆ ಕೊಡುವಂತೆ ಕಲಿಸಬೇಕು. ಮುಂದ ನೀಸಾಲಿನವರು ಬಿಗೆದ ಚೆಂಡುಗಳನ್ನು ಎನೇ ಸಾಲಿನವರು ಹಿಡಿದು ಇನೇ ಸಾಲಿನವರ ಕಡೆಗೆ ಬಿಗಿಯಬೇಕು. ಈ ಕ್ರಮಗಳು ಏಕಕಾಲಕ್ಕೆ ಆಗತಕ್ಕದ್ದು. ಇದರ ಅಭ್ಯಾಸ ಕ್ಕೆ ಕೊಡಲು ಇಬ್ಬಿಬ್ಬರು, ನಂತರ ಮೂರು ಮೂರು ಮುಂದಿ, ನಂತರ ನಾಲ್ಕಾಲ್ಕು ಮುಂದಿ ಕೂಡಿ ಆಡುತ್ತ ಹೋಗಬೇಕು.

ಈಗ ಮನರಂಜನಕ್ಕಾಗಿ ಪದ ಹಾಡಬೇಕು

ಬ್ಯಾಂಡದಂತೆ

ನಾವು ಕೊಡುವೆವು, ನೀವು ಹಿಡಿಯಕ್ಕೆ !
ನೀವು ಕೊಟ್ಟದನ್ನು ನಾವು ಹಿಡಿದುಕೊಳುವೆವು ॥

೩ನೇ ಆಟದಲ್ಲಿ — ಹುಡುಗರನ್ನು ವರ್ತುಲಾಕಾರವಾಗಿ, ಅವರ ಕೈಲೆ ಒಂದೊಂದು ಮಾರು ಅಂತರ ಬಿಟ್ಟು ನಿಲ್ಲಿಸಬೇಕು. ಹಾಗೂ ಇನೇ ಹುಡುಗನ ಬಳಿಯಲ್ಲಿ ೩ ಮುಟ್ಟು ಬಂಡಿದ ಚೆಂಡುಗಳ ಬುಟ್ಟಿಯನ್ನು ಇಡಬೇಕು. ಅವನು ಒಂದು ಚೆಂಡು ತಕ್ಕೊಂಡು ಎನೇ ಹುಡುಗನ ಬಲಗ್ಯೆಯೊಳಗೆ ಇಡಬೇಕು. ಅವನು ಎರಡೂ ಕೈ ಮೇಲೆ ಮಾಡಿ ಎಡಗ್ಯೆಯೊಳಗೆ ತಕ್ಕೊಂಡು ತಿನೇಯವನ ಕಯ್ಯಲ್ಲಿಕೊಡಬೇಕು. ಈ ವಿಧದಿಂದ ಕಡೇ ಹುಡುಗನ ವರೆಗೆ ನಡಿಯತಕ್ಕದ್ದು. ಕಡೆಯವನು ತನ್ನ ಕಯ್ಯಲ್ಲಿ ಬಂದ ಚೆಂಡನ್ನು ಎಡಗಯ್ಯಲ್ಲಿ ತಕ್ಕೊಂಡು ಎನೇ ಬುಟ್ಟಿಯಲ್ಲಿ ಹಾಕಬೇಕು.

ಹುಡುಗರು ತಮ್ಮ ತಲೆಯನ್ನು ಹೊರಳಿಸಿ ನೋಡದೆ ಕೊಡಕೊಳ್ಳುವ ಕೆಲಸವನ್ನು ತೀವ್ರವಾಗಿ ಸಾಗಿಸುವಷ್ಟು ಸಮರ್ಥರಾಗುವ ವರೆಗೆ ಆಟವನ್ನು ನಡಿಸಬೇಕು. ಮಧ್ಯೆ ಮಧ್ಯೆ ಮನರಂಜನಕ್ಕಾಗಿ ಕೆಳಗಿನ ಪದವನ್ನಾಗಲಿ ಬೇರೆ ಯೋಗ್ಯಪದಗಳನ್ನಾಗಲಿ ಅನ್ನಬಹುದು.

ಬಲಗ್ಯೆಯಿಂದ ಎಡಗಡೆಗೆ !
ಬಲಬದಿ ಸಾಗುವದೆಡಗಡೆಗೆ ॥

ಪೆಟ್ಟಿಮ ಆಟಗಳು — ಹುಡುಗರಿಗೆ ಮೇಲಿನ ಆಟಗಳು ಚ

ಸ್ಕೌಗಿ ಬಂದ ಬಳಿಕ ನೆಲಪುಟಗಿ ಗೋಡೆಪುಟಗೆಯನ್ನು ಹಿಡಿ ಪುಲಿಕ್ಕೆ ಕಲಿಸಬೇಕು. ಅದಕ್ಕೂ ಮಿಂದಿದ ಹುಡುಗರು ಚಂಡು ಪುಟಸಿ ಗಿಮಿಗಿಮಿ ತಿರುಗುತ್ತ ಹಿಡಿಯುವದನ್ನು ಕಲಿಯಬಹುದು. ಹುಡುಗರ ವಯಸ್ಸು ಯೋಗ್ಯತೆ ಮೊದಲಾದವುಗಳ ಅನುರೋಧದಿಂದ ಎಷ್ಟು ವಿಧದ ಆಟ ಕಲಿಸಬಹುದೆಂಬದನ್ನು ಗೊತ್ತು ಮಾಡಿಕೊಂಡು ಅದರಂತೆ ಮಾಡಬೇಕು.

(೪ನೇ ಆಟ) ಈ ಆಟದಲ್ಲಿ ಹುಡುಗರಿಗೆ ದೂರ ಚೆಂಡು, ಬಗೆಯಲಿಕ್ಕೂ ದೂರಿಂದ ಬಂದ ಚೆಂಡು ಹಿಡಿಯಲಿಕ್ಕೂ ಕಲಿಸತಕ್ಕದ್ದಾದೆ ಕಾರಣ ಹಿಂದೆ ವ್ಯವಸ್ಥೆ ಎಂಬ ಭಾಗದಲ್ಲಿ ಹೇಳಿದಂತೆ ೫ ಸಾಲು ಮಾಡಿ ೧ನೇ ಸಾಲಿನವರ ಎದುರಿಗೆ ಉಳಿದ ೪ ಸಾಲು ಸಿಲ್ಲುವಂತೆ ಮಾಡಬೇಕು. ೧ನೇ ಸಾಲಿನವರು ಮೊದಲು ೨ನೇ ಸಾಲಿನವರ ಕಡೆಗೆ ಚೆಂಡು ಬಗೆಯಬೇಕು. ಪುನಃ ೨ನೇ ಸಾಲಿನವರು ೧ನೇ ಸಾಲಿನವರ ಕಡೆಗೆ ಬಗೆಯಬೇಕು. ತರುವಾಯ ೨ನೇ ಸಾಲಿನವರು ಕೂತುಕೊಳ್ಳಬೇಕು. ಆಗ್ಗೆ ೧ನೇ ಸಾಲಿನವರು ೩ನೇ ಸಾಲಿನವರ ಕಡೆಗೆ ಚೆಂಡು ಬಗೆಯಬೇಕು ಆ ಮೇಲೆ ೩ನೇ ಸಾಲಿನವರು ೧ನೇ ಸಾಲಿನವರ ಕಡೆಗೆ ಬಗೆಯಬೇಕು. ಆ ಮೇಲೆ ೩ನೇ ಸಾಲಿನವರು ಕೂತುಕೊಳ್ಳಬೇಕು. ಹೀಗೆ ೫ ಸಾಲು ಮುಗಿಯುವವರೆಗೆ ಮಾಡುತ್ತ ಹೋಗಬೇಕು.

ಮೂಲ ಮಿಶ್ರ ಬಣ್ಣಗಳ ಬಗ್ಗೆ ಮಾಹಿತಿಯು.

ಮೇಲೆ ಕಾಮನ ಬಿಲ್ಲಿನ ಬಣ್ಣಗಳ ಕ್ರಮದಂತೆ ಕಲಿಸಿದ ಕೆಂಪು, ಕಿತ್ತಳೆ, ಹಳದಿ, ಹಸರು, ನೀಲಿ, ನೇರಳ ಬಣ್ಣಗಳಲ್ಲಿ ಕೆಂಪು, ಹಳದಿ, ನೀಲಿ ಈ ಮೂರು ಮೂಲ ಬಣ್ಣಗಳೂ, ಉಳಿದ ಮೂರು ಮಿಶ್ರ ಬಣ್ಣಗಳೂ ಎಂದು ತಿಳಿಸುವ ಕ್ರಮ ಹ್ಯಾಗೆಂದರೆ— ಕೆಂಪು, ಹಳದಿ ನೀಲಿ ಬಣ್ಣದ ಕನ್ನಡಿಯ ಚೌಕ ತುಂಡುಗಳನ್ನು ಪ್ರತ್ಯೇಕವಾಗಿ ತೋ

ಸಿರಿದ ಬಳಿಕ ಕೆಂಪು, ಹಳದಿ ಕನ್ನಡಿಗಳನ್ನು ಜೋಡಿಸಿ ಹಿಡಿದು ನೋಡಿದರೆ ಕಿತ್ತಳೆ, (ಕೇಸರಿ) ಬಂಣ ಕಾಣುವದು.

ಪದ ॥ ಕಿತ್ತಳೆಬಂಣತಾಮಿಶ್ರವೆನಿಸುವದು ।
ಮತ್ತೆಶಾಕುಂಕುಮುಹಳದಿಕೂಡಿಹುದು ॥

ಇವರಂತೆ ಹಳದಿ, ನೀಲಿ ಕನ್ನಡಿಗಳನ್ನು ಜೋಡಿಸಿ ಕೇಳಲು ಹಸರು ಕಾಣುವದು.

ಪದ ॥ ಹಸರುಬಂಣತಾಮಿಶ್ರವೆನಿಪ್ಪುದು ।
ಹಸನಾದ ಅರಿಶಿನ ನೀಲಿಕೂಡಿಹುದು ॥

ನೀಲಿ, ಕೆಂಪು ಕನ್ನಡಿಗಳನ್ನು ಕೂಡಿಸಿ ನೋಡಲು ನೇರಿಲ ಬಂಣ ಕಾಣುವದು.

ಪದ ॥ ನೇರಿಲ ಬಂಣತಾಮಿಶ್ರವೆನಿಪ್ಪುದು ।
ಸರಿಯಾಗಿ ನೀಲಿ ಕೆಂಪೆರಡು ಕೂಡಿಹುದು ॥

ಕಿತ್ತಳೆ, ಹಸರು, ನೇರಿಲ ಈ ಮೂರು ಮಿಶ್ರಬಂಣಗಳೆಂದು ತಿಳಿಸುವದು.

ಪದ ॥ ಕೆಂಪುಹಳದಿನೀಲಿಗಳ್, ಆಱ್‌ಮೂಲಬಂಣಗಳ್ ॥
ಸೊಂಪುವೆತ್ತಮಿಶ್ರಬಣ್ಣ. ಕಿತ್ತಳೆಹಸರುನೇರ್ಲಗಳ್ ॥

ದೇವರ ಉಪಕಾರವು— ಉಪಕರಣಕ್ಕೆ ತಂದ ಹಂಣು ಹಂಪಲಗಳು ಬಾಲಕರಿಗೆ ಬಹಳ ಪ್ರಿಯಕರವಾಗಿರುವ ಸಂಗತಿಯನ್ನು ಮನನ ಮಾಡಿಕೊಟ್ಟು, ಅವು ನಮಗೆ ದೊರೆಯುವದಕ್ಕೆ ಅವಶ್ಯವಾದ ಅನುಕೂಲತೆಗಳನ್ನು ದೇವರು ಮಾಡಿಕೊಟ್ಟಿರುವಕಾರಣ ಎಲ್ಲರೂ ಅತನ ಉಪಕಾರವನ್ನು ನೆನಿಸಬೇಕು. ಎಂಬ ಸಂಗತಿಯನ್ನು ಬಿಂಬಿಸಿ ಕೆಳಗಿನ ಪದವನ್ನು ಸಾಭಿನಯವಾಗಿ ಹಾಡಿಸಬೇಕು.

ದೇವದೇವನೇ ನಾವನಾತ್ಮನೆ ।
ನಾವು ಬಾಲರೈ ಕಾವುದೆಮ್ಮನು ॥ ೧ ॥
ಕತವ ಮುಗಿವೆವೈ ಕರುಣಾಸಾಗರ ।
ಕತಣವಿಂದಿಲೈ ಭರದೆ ಬೆಳಯಿಸೈ ॥ ೨ ॥

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕರಂ ಸಚ್ಛಿಕ್ಷಣೋತ್ಕರ್ಷಮುಂ
ಜಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮುಂ ಪುಟ್ಟಿಸಿ ॥
ಸಯದಿಂದಿತ್ತಕೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಪವತಿದ್ದ ವೇಳ್ವುದುಳಿದರ್ಹಜ್ಞಾನಿಷೃದ್ಧಿಪ್ರಿಯರಿಂ॥

ಪುಸ್ತಕ ೩೯] ಮೇ ೧೯೦೩ [ಸಂಚಿಕೆ ೫.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

(ಶಿಕ್ಷಕರ ದ್ವಿತೀಯ ಸಮ್ಮೇಲನದಲ್ಲಿ ನಡೆದ ವಿಷಯುಗಳು, ಹಿಂದಿನ ಅಂಕದಿಂದ ಮುಂದೆ ಸಾಗಿದು.)

ಕಿಂಡರಗಾರ್ಟನ್ ಮೊದಲನೇ ಕರಣ (ಮುಂದೆ ಸಾಗಿದ್ದು.)

೭. ಸಭ್ಯತನದ ನಡೆಮಡಿಗಳು:—ಹುಡುಗರು ದೊಡ್ಡವರಾದ ಬಳಿಕ ಕುಟುಂಬದವರ ಸಂಗಡಲೂ ಸಮಾಜದ ಸಂಗಡಲೂ ನಡಕೊಳ್ಳತಕ್ಕ ಬಗೆಗಳನ್ನು ಚಿಕ್ಕಂದಿನಿಂದಲೇ ಕಲಿಸುತ್ತ ಹೋಗುವದರಿಂದ ಅವು ಅವರಲ್ಲಿ ನೆಲೆಗೊಳ್ಳುವವು. ಶಿಕ್ಷಕರು ಹುಡುಗರಿಗೆ ಬೇರೆ ಹಲವು ಸಂಗತಿಗಳನ್ನು ಸ್ವಂತ ಕೃತಿಯಿಂದಲೂ ಉಪದೇಶಗಳಿಂದಲೂ ಕಲಿಸುವಂತೆ ಇದನ್ನಾದರೂ ಕಲಿಸತಕ್ಕದ್ದು. ಫ್ರೊಬೆಲ್ಲನು ಬಾಲೋದ್ಯಾನ ಪದ್ಧತಿಯ ಶಿಕ್ಷಣದಲ್ಲಿ ಈ ವಿಷಯವನ್ನು ಸಹ ಸೇರಿಸಿರುವನು. ಹ್ಯಾಗಂದರೆ—ಒಂದು ಆಟವು ಮುಗಿದಬಳಿಕ, ಆ ಆಟದಿಂದ ಬಾಲಕರಿಗೆ ಆದ ಆನಂದವನ್ನು ಅವರ ಲಕ್ಷಕ್ಕೆ ತಂದುಕೊಟ್ಟು, "ಉಪಕಾರವಾಯಿತು." "ಆಭಾರಿಯಾಗಿದ್ದೇವೆ." ಮುಂತಾದ ತಕ್ಕ ಶಬ್ದಗಳಿಂದ ವಿದ್ಯಾರ್ಥಿಗಳು ಶಿಕ್ಷಕರ ಉಪಕಾರವನ್ನು ನೆನಿಸುವಂತೆ ಮಾಡಬೇಕು.

ನಿರಿದ ಬಳಿಕ ಕೆಂಪು, ಹಳದಿ ಕನ್ನಡಿಗಳನ್ನು ಜೋಡಿಸಿ ಹಿಡಿದು ನೋಡಿದರೆ ಕಿತ್ತಳೆ, (ಕೇಸರಿ) ಬಣ್ಣ ಕಾಣುವದು.

ಪದ ॥ ಕಿತ್ತಳೆಬಣ್ಣತಾಮಿಶ್ರವೆನಿಸುವದು।
ಮುತ್ತೈತಾಕುಂಕುಮಹಳದಿಕೂಡಿಹುದು ॥

ಇದರಂತೆ ಹಳದಿ, ನೀಲಿ ಕನ್ನಡಿಗಳನ್ನು ಜೋಡಿಸಿ ಕೇಳಲು 'ಪಸರು' ಕಾಣುವದು.

ಪದ ॥ ಪಸರುಬಣ್ಣತಾಮಿಶ್ರವೆನಿಪುದು।
ಹಸನಾದ ಅದಿಕ್ಕಿನ ನೀಲಿಕೂಡಿಹುದು ॥

ನೀಲಿ, ಕೆಂಪು ಕನ್ನಡಿಗಳನ್ನು ಕೂಡಿಸಿ ನೋಡಲು ನೇರಿಲ ಬಣ್ಣ ಕಾಣುವದು.

ಪದ ॥ ನೇರಿಲ ಬಣ್ಣತಾಮಿಶ್ರವೆನಿಪ್ಪುದು।
ಸರಿಯಾಗಿ ನೀಲಿ ಜೊಂಪೆರಡು ಕೂಡಿಹುದು ॥

ಕಿತ್ತಳೆ, ಪಸರು, ನೇರಿಲ ಈ ಮೂರು ಮಿಶ್ರಬಣ್ಣಗಳಿಂದ ತಿಳಿಸುವದು.

ಪದ ॥ ಕೆಂಪ್ರಹಳದಿನೀಲಿಗಳ್, ಅಚ್ಚಮೂಲಬಣ್ಣಗಳ್ ॥
ಸೊಂಪುವೆತ್ತಮಿಶ್ರಬಣ್ಣ, ಕಿತ್ತಳೆಪಸರುನೇರ್ಲಗಳ್ ॥

ಜೀವರ ಉಪಕಾರಕ್ಕೆ— ಉಪಕರಣಕ್ಕೆ ತಂದ ಹಣ್ಣು ಹೂವುಗಳು ಬಾಲಕರಿಗೆ ಬಹಳ ಪ್ರಿಯಕರವಾಗಿರುವ ಸಂಗತಿಯನ್ನು ಮನನ ಮಾಡಿಕೊಟ್ಟು, ಅವು ನಮಗೆ ದೊರೆಯುವದಕ್ಕೆ ಅವಶ್ಯವಾದ ಅನುಕೂಲತೆಗಳನ್ನು ದೇವ ಬಹಳ ಮಾಡಿಕೊಟ್ಟಿರುವ ಕಾರಣ ಎಲ್ಲರೂ ಆತನ ಉಪಕಾರವನ್ನು ನೆನಿಸಬೇಕು. ಎಂಬ ಸಂಗತಿಯನ್ನು ಬಿಂಬಿಸಿ ಕೆಳಗಿನ ಪದವನ್ನು ಸಾಭಿನಯವಾಗಿ ಹಾಡಿಸಬೇಕು.

ದೇವದೇವನೇ ಭಾವನಾತ್ಮನೆ!
ನಾವು ಬಾಲರೈ ಕಾಪುದೆಮ್ಮನು ॥ ೧ ॥
ಕೆರವ ಮುಗಿಪೆವೈ ಕರುಣಾಸಾಗರ!
ಚರಣವಿಂಬಿಲೈ ಭರದಿ ಜೆಳಯಿನ್ನೈ ॥ ೨ ॥

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತುಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತವಿನೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ಜಯದಿಂದೋಪವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೩೯] ಮೇ ೧೯೦೩ [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

(ಶಿಕ್ಷಕರ ದ್ವಿತೀಯ ಸಮ್ಮೇಲನದಲ್ಲಿ ನಡೆದ ವಿಷಯಗಳು, ಹಿಂದಿನ ಅಂಕದಿಂದ ಮುಂದೆ ಸಾಗಿದುದು.)

ಕಂಡರಗಾಟ್ರ್ಗಾನ್ ಮೊದಲನೇ ಕರಣ (ಮುಂದೆ ಸಾಗಿದ್ದು.)

೭, ಸಭ್ಯತನದ ನಡೆನುಡಿಗಳು:—ಹುಡುಗರು ಮೊಡ್ಡವಾದ ಬಳಿಕ ಕುಟುಂಬದವರ ಸಂಗಡಲೂ ಸಮಾಜದ ಸಂಗಡಲೂ ನಡೆಕೊಳ್ಳತಕ್ಕ ಬಗೆಗಳನ್ನು ಚಿಕ್ಕಂದಿನಿಂದಲೇ ಕಲಿಸುತ್ತ ಪೋಗುವದರಿಂದ ಅವು ಅವರಲ್ಲಿ ನೆಲೆಗೊಳ್ಳುವವು. ಶಿಕ್ಷಕರು ಹುಡುಗರಿಗೆ ಬೇರೆ ಹಲವು ಸಂಗತಿಗಳನ್ನು ಸ್ವಂತ ಕೃತಿಯಿಂದಲೂ ಉಪದೇಶಗಳಿಂದಲೂ ಕಲಿಸುವಂತೆ ಹಿರಿಯರೂ ಕಲಿಸತಕ್ಕದ್ದು. ಫ್ರೊಬೆಲ್ಲನು ಬಾಲೋದ್ಯಾನ ಪದ್ಧತಿಯ ಶಿಕ್ಷಣದಲ್ಲಿ ಈ ವಿಷಯವನ್ನು ಸಹ ಸೇರಿಸಿರುವನು. ಡ್ಯಾಗಂಬರೆ—ಒಂದು ಆಟವು ಮುಗಿದಬಳಿಕ, ಆ ಆಟದಿಂದ ಬೂಲಕರಿಗೆ ಆದ ಆನಂದವನ್ನು ಅವರ ಲಕ್ಷಕ್ಕೆ ತಂದುಕೊಟ್ಟು, "ಉಪಕಾರವಾಯಿತು." "ಆಭಾರಿಯಾಗಿದ್ದೇವೆ." ಮುಂತಾದ ತಕ್ಕ ಶಬ್ದಗಳಿಂದ ವಿದ್ಯಾರ್ಥಿಗಳು ಶಿಕ್ಷಕರ ಉಪಕಾರವನ್ನು ನೆನಿಸುವಂತೆ ಮಾಡಬೇಕು.

ಸಿರದ ಬಳಿಕ ಕೆಂಪು, ಹಳದಿ ಕನ್ನಡಿಗಳನ್ನು ಜೋಡಿಸಿ ಹಿಡಿದು ನೋಡಿದರೆ ಕಿತ್ತಳೆ, (ಕೇಸರಿ) ಬಣ್ಣ ಕಾಣುವದು.

ಪದ ॥ ಕಿತ್ತಳೆಬಣ್ಣತಾಮಿಶ್ರವೆನಿಸುವದು ।
ಮತ್ತೆಶಾಕುಂಕುಮಹಳದಿಕೂಡಿಹುದು ॥

ಇದರಂತೆ ಹಳದಿ, ನೀಲಿ ಕನ್ನಡಿಗಳನ್ನು ಜೋಡಿಸಿ ಕೇಳಲು 'ಹಸರು' ಕಾಣುವದು.

ಪದ ॥ ಹಸರುಬಣ್ಣತಾಮಿಶ್ರವೆನಿಪ್ಪದು ।
ಹಸನಾದ ಅರಿಶಿನ ನೀಲಿಕೂಡಿಹುದು ॥

ನೀಲಿ, ಕೆಂಪು ಕನ್ನಡಿಗಳನ್ನು ಕೂಡಿಸಿ ನೋಡಲು ನೇರಿಳ ಬಣ್ಣ ಕಾಣುವದು.

ಪದ ॥ ನೇರಿಳ ಬಣ್ಣತಾಮಿಶ್ರವೆನಿಪ್ಪದು ।
ಸರಿಯಾಗಿ ನೀಲಿ ಕೆಂಪೆರಡು ಕೂಡಿಹುದು

ಕಿತ್ತಳೆ, ಹಸರು, ನೇರಿಳ ಈ ಮೂರು ಮಿಶ್ರಬಣ್ಣಗಳೆಂದು ತಿಳಿಸುವದು.

ಪದ ॥ ಕೆಂಪ್ರಹಳದಿನೀಲಿಗಳ್, ಅಬ್ಮೂಲಬಣ್ಣಗಳ್ ॥
ಸೊಂಪುವೆತ್ತಮಿಶ್ರಬಣ್ಣ, ಕಿತ್ತಳೆಹಸರುನೇರ್ಳಗಳ್ ॥

ದೇವರ ಉಪಕಾರವು— ಉಪಕರಣಕ್ಕೆ ತಂದ ಹಣ್ಣು ಹಂಪಲಗಳು ಬಾಲಕರಿಗೆ ಬಹಳ ಪ್ರಿಯಕರವಾಗಿರುವ ಸಂಗತಿಯನ್ನು ಮನನ ಮಾಡಿಕೊಟ್ಟು, ಅವು ನಮಗೆ ದೊರೆಯುವದಕ್ಕೆ ಅವಶ್ಯವಾದ ಅನುಕೂಲತೆಗಳನ್ನು ದೇವರು ಮಾಡಿಕೊಟ್ಟಿರುವ ಕಾರಣ ಎಲ್ಲರೂ ಆತನ ಉಪಕಾರವನ್ನು ನೆನಿಸಬೇಕು. ಎಂಬ ಸಂಗತಿಯನ್ನು ಬಿಂಬಿಸಿ ಕೆಳಗಿನ ಪದವನ್ನು ಸಾಭಿನಯವಾಗಿ ಹಾಡಿಸಬೇಕು.

ದೇವದೇವನೇ ಪಾವನಾತ್ಮನೆ ।
ನಾವು ಬಾಲರ್ಯ ಕಾವುದೆಮ್ಮನು ॥ ೧ ॥
ಕರವ ಮುಗಿವೆವೈ ಕರುಣಾಸಾಗರ ।
ಕರುಣದಿಂದಿಲ್ಲಿ ಫಲದ ಬೆಳೆಯಿಸೈ ॥ ೨ ॥

ಶಾಲಾಪತ್ರಿಕ.

ಪದ್ಯಂ.

ಶ್ರುತವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಟಸೋತ್ಕರ್ಷಮಂ।
ಚಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಸಯದಿಂದಿತ್ತಕವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ಪಯಿಯಿಂದೋಷವತಿದ್ದವೇಳ್ವುದುಚಿತರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೯] ಮೇ ೧೯೦೩ [ಸಂಚಿಕೆ ೫.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

(ಶಿಕ್ಷಕರ ದ್ವಿತೀಯ ಸಮ್ಮೇಲನದಲ್ಲಿ ನಡೆದ ವಿಷಯುಗಳು, ಹಿಂದಿನ ಅಂಕದಿಂದ ಮುಂದೆ ಸಾಗಿದು!)

ಕಿಂಡರಗಾರ್ಟನ್ ಮೊದಲನೇ ಕರಣ (ಮುಂದೆ ಸಾಗಿದ್ದು.)

೭. ಸಭ್ಯತನದ ನಡೆಮಡಿಗಳು:—ಹುಡುಗರು ದೊಡ್ಡವರಾದ ಬಳಿಕ ಕುಟುಂಬದವರ ಸಂಗಡಲೂ ಸಮಾಜದ ಸಂಗಡಲೂ ನಡಕೊಳ್ಳತಕ್ಕ ಬಗೆಗಳನ್ನು ಚಿಕ್ಕಂದಿನಿಂದಲೇ ಕಲಿಸುತ್ತ ಹೋಗುವದರಿಂದ ಅವು ಅವರಲ್ಲಿ ನೆಲೆಗೊಳ್ಳುವವು. ಶಿಕ್ಷಕರು ಹುಡುಗರಿಗೆ ಬೇರೆ ಹಲವು ಸಂಗತಿಗಳನ್ನು ಸ್ವಂತ ಕೃತಿಯಿಂದಲೂ ಉಪದೇಶಗಳಿಂದಲೂ ಕಲಿಸುವಂತೆ ಇದನ್ನಾದರೂ ಕಲಿಸತಕ್ಕದ್ದು. ಫ್ರೊಬೆಲ್ಲನು ಬಾಲೋದ್ಯಾನ ಪದ್ಧತಿಯು ಶಿಕ್ಷಣದಲ್ಲಿ ಈ ವಿಷಯವನ್ನು ಸಹ ಸೇರಿಸಿರುವನು. ಹ್ಯಾಗಂದರೆ—ಒಂದು ಆಟವು ಮುಗಿದಬಳಿಕ, ಆ ಆಟದಿಂದ ಬಾಲಕರಿಗೆ ಆದ ಆನಂದವನ್ನು ಅವರ ಲಕ್ಷಕ್ಕೆ ತಂದುಕೊಟ್ಟು, "ಉಪಕಾರವಾಯಿತು" "ಆಭಾರಿಯಾಗಿದ್ದೇವೆ." ಮುಂತಾದ ತಕ್ಕ ಶಬ್ದಗಳಿಂದ ವಿದ್ಯಾರ್ಥಿಗಳು ಶಿಕ್ಷಕರ ಉಪಕಾರವನ್ನು ನೆನಿಸುವಂತೆ ಮಾಡಬೇಕು.

ಅದೇ ಮೇರೆಗೆ ಆಟದಲ್ಲಿ ಪ್ರಸಂಗ ಬಿದ್ದಾಗ್ಗೆ ನೆರವಾದವರ ಉಪಾಧ ಸ್ಮರಿಸಲಿಕ್ಕೆ ಕಲಿಸಬೇಕು. ಮತ್ತು ಉತ್ತರವನ್ನು ವಿಧೇಯತ್ವ ಸೂಚಕವಾದ ನವ್ರಭಾಷೆಯಿಂದ ಕೊಡಲಿಕ್ಕೆ ಕಲಿಸಬೇಕು.

ಈ ವಿಷಯವು ಮುಗಿದ ಬಳಿಕ ವಿಶ್ರಾಂತಿಯ ಹೊತ್ತಾಯಿತು. ಮೂರು ಗಂಟೆಯ ನಂತರ ಐತಿಹಾಸಿಕ ಕಥೆಯು ಆವರ್ತನ ರೂಪದಿಂದ ತೋರಿಸಲ್ಪಟ್ಟಿತು. ಈ ವಿಷಯವನ್ನು ಕಲಿಸುವ ಪದ್ಧತಿಯ ಸಂಬಂಧದಿಂದ ಮು. ರಾ. ರಾ. ಶ್ರೀ. ಕುಲಕರ್ಣಿ ಎಲ್. ಸಿ. ಈ. ಗನೇ ಅ. ಮಾ ಟ್ರೇ. ಕಾ. ಇವರು ಕೆಳಗೆ ವಿವರಿಸಿದ ಮೇರೆಗೆ ಸೂಚನೆಗಳನ್ನು ಮಾಡಿದರು. ಪ್ರತಿ ಒಂದು ವಿಷಯದ ಆರಂಭದಲ್ಲಿ ಅವಶ್ಯವಾದ ಸೂಚನೆಗಳನ್ನು ಇವರು ಮಾಡುತ್ತಿದ್ದರು. ಆ ಸೂಚನೆಗಳನ್ನು ಮುಂದೆ ಯೋಗ್ಯ ಸ್ಥಳಗಳಲ್ಲಿ ಬರೆಯುವೆವು.

ಈ ವಿಷಯವನ್ನು ನಡೆಯುವ ಮೊದಲು ಮು. ರಾ. ಕುಲಕರ್ಣಿ ಮಾಸ್ತರರು † ಉಪೋದ್‌ಘಾತ ರೂಪದಿಂದ ಮಾಡಿದ ಸೂಚನೆಗಳು:—

ಇತಿಹಾಸವನ್ನು ಕಲಿಸುವ ಉದ್ದೇಶಗಳು ಮುಖ್ಯವಾಗಿ ಎರಡು. * ಐತಿಹ್ಯ ಸಂಗತಿಗಳ ಉಪಯುಕ್ತ ಜ್ಞಾನ ಮಾಡಿಕೊಡುವದು ಮೊದಲನೇದು ಆ ಸಂಗತಿಗಳಿಂದ ಫಲಿತವಾಗುವ ಸಾಮಾನ್ಯ ಸಿದ್ಧಾಂತಗಳ ಯೋಗದಿಂದ ಮನಸ್ಸು ಧಾರಣೆಯನ್ನು ಮಾಡುವದು ಎರಡನೇದು. ಈ ಎರಡು ಉದ್ದೇಶಗಳು ಪ್ರಯೋಜನಕರವಾಗುವಂತೆ ಕೈಗೂಡಬೇಕಾದರೆ ಈ ವಿಷಯದಲ್ಲಿ ವಿದ್ಯಾರ್ಥಿಗಳ ವಯಸ್ಸಿಗೂ

---

† ಮುಂದೆ ಪ್ರತಿ ಒಂದು ವಿಷಯದ ಆರಂಭದಲ್ಲಿ ಬರೆದ ಸೂಚನೆಗಳು ಇವರಿಂದಲೇ ಮಾಡಲ್ಪಟ್ಟವೆ.

* ಐತಿಹ್ಯ ಸಂಗತಿಯಲ್ಲಿ ರಾಜಕೀಯ ವಿಷಯವಲ್ಲದೆ ಆ ಆ ಜನಾಂಗದ ಸಾಮಾಜಿಕ ನೈತಿಕ ಔದ್ಯೋಗಿಕ ಸಂಗತಿಗಳು ಸಹ ಸಮಾವೇಶವಾಗುತ್ತವೆ.

ಯೋಗ್ಯತೆಗೂ ಅನುಗುಣವಾಗಿ ಮೆಟ್ಟುಗಳನ್ನು ಮಾಡಿ ಕಲಿಸತಕ್ಕದ್ದು. ಆ ಮೆಟ್ಟುಗಳು ಮೂರುಂಟು.

೧ನೇ ಮೆಟ್ಟು, ಕಥಾರೂಪದಿಂದ:—ಚಿಕ್ಕ ಮಕ್ಕಳಿಗೆ ಕಲಿಸತಕ್ಕ ಪಾಠದ ಭಾಷೆಯು ಮನೋವೇಧಕವೂ ಸುಲಭವೂ ಇರಬೇಕು; ವಿಚಾರಗಳು ಅವರ ಯೋಗ್ಯತೆಯನ್ನು ಮೀರಿರಬಾರದು. ಅಂದರೆ ಹಿರಿಯರು ಮನೆಯಲ್ಲಿ ಚಿಕ್ಕ ಮಕ್ಕಳಿಗೆ ಕಥೆ ಹೇಳುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಐತಿಹಾಸಿಕ ಕಥೆಗಳನ್ನು ಹೇಳಬೇಕು. ಐತಿಹಾಸಿಕ ಕಥೆಯಲ್ಲಿ ವರ್ತಿಸಿದ ಸ್ಥಳಕಾಲಗಳ ಬಗ್ಗೆ ಹುಡುಗರಿಗೆ ಸ್ಥೂಲಜ್ಞಾನಮಾಡಿಕೊಟ್ಟರೆ ಸಾಕು; ಇಷ್ಟನೇ ಇಸವಿ ಇಂಥ ಸ್ಥಳ ಮುಂತಾದ ಸೂಕ್ಷ್ಮ ಸಂಗತಿಗಳನ್ನು ಹೇಳುವ ಅವಶ್ಯವಿಲ್ಲ. ಹಾಗೂ ಆ ಕಥೆಯಿಂದ ಹೊರಡಬಹುದಾದ ಸಾಮಾನ್ಯ ಸಿದ್ಧಾಂತಗಳನ್ನೂ, ಪ್ರಮುಖ ಪಾತ್ರಗಳ ಗುಣಾವಗುಣಗಳನ್ನೂ ಅವರಿಗೆ ಶಬ್ದಗಳಿಂದ ಹೇಳುವದು ಸರಿಯಲ್ಲ. ಶಿಕ್ಷಕರು ಹೇಳಿದ ಸಂಗತಿಗಳ ವರ್ಣನೆಯಿಂದಲೇ ವಿದ್ಯಾರ್ಥಿಗಳಿಗೆ ಸಹಜವಾಗಿ ತಿಳಿಯುವಂತೆ ಆ ಪಾಠದ ರಚನೆಯು ಇರತಕ್ಕದ್ದು. ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಸಂಗತಿಗಳ ಅಭ್ಯಾಸದ ವಿಷಯವಾಗಿ ಪ್ರೀತಿಯನ್ನು ಹುಟ್ಟಿಸುವದೇ ಈ ಮೆಟ್ಟಿನ ಮುಖ್ಯ ಉದ್ದೇಶವಾಗಿರುತ್ತದೆ.

೨ನೇ ಮೆಟ್ಟು, ಸ್ಥೂಲವಾದ ಇತಿಹಾಸದ ರೂಪದಿಂದ:—ಇತಿಹಾಸದಲ್ಲಿ ಮುಖ್ಯ ಮುಖ್ಯ ಕಾಲವಿಭಾಗಗಳನ್ನು ಮಾಡಿಕೊಂಡು, ಆ ಆ ಕಾಲವಿಭಾಗದಲ್ಲಿ ವರ್ತಿಸಿದಂಥ ಮಹತ್ವದ ಸಂಗತಿಗಳನ್ನು ಇಲ್ಲವೆ ಆ ಕಾಲದಲ್ಲಿ ಆಗಿಹೋದ ಪ್ರಸಿದ್ಧ ಪುರುಷರ ಚರಿತ್ರೆಗಳನ್ನು ತಕ್ಕೊಂಡು, ಆ ಕಾಲವಿಭಾಗದಲ್ಲಿ ವರ್ತಿಸಿದ ಸಂಗತಿಗಳನ್ನು ವ್ಯವಸ್ಥೆಯಿಂದ ಅದಕ್ಕೆ ಹೊಂದಿಸಿ ಇತಿಹಾಸರೂಪದಿಂದ ಹೇಳುವದು. ಈ ಮೆಟ್ಟಿನಲ್ಲಿ ಅವಶ್ಯವಿಲ್ಲದ ಸಣ್ಣಪುಟ್ಟ ಸಂಗತಿಗಳನ್ನು ಬಿಡುವದೂ, ಹೇಳತಕ್ಕ ಮುಖ್ಯ ಮುಖ್ಯ ಸಂಗತಿಗಳನ್ನು ಆರಿಸುವದೂ, ಯಾವದೊಂದು ಕಾಲವಿಭಾಗದಲ್ಲಿ ಮಹತ್ವದ ಸಂಗತಿಗಳು ನಡೆಯದೆ ಇದ್ದಲ್ಲಿ ಆ ಕಾಲದ ವರ್ಣನೆಯನ್ನು ಸ್ವಲ್ಪದರಲ್ಲಿ

ಹೇಳಿ ಮುಂದಕ್ಕೆ ಹೋಗುವದೂ ಜಾಣತನದ ಕೆಲಸವಾಗಿದೆ. ಮತ್ತು ಬಹಳ ಹಿಂದಿನ ಕಾಲದ ಸಂಗತಿಗಳನ್ನು ಸಂಕ್ಷೇಪವಾಗಿಯೂ ಇತ್ತೀಚ್ಚಲಾಗಿನ ಸಂಗತಿಗಳನ್ನು ವಿಸ್ತಾರಪೂರ್ವಕವಾಗಿಯೂ ಹೇಳುವದು ಅವಶ್ಯವಾಗಿದೆ. ಕಾಲವಿಭಾಗಗಳನ್ನು ಅರಸರ ಆಳಿಕೆಯ ಕ್ರಮದಿಂದ ಮಾಡುವ ಅವಶ್ಯವಿಲ್ಲ. ಆದರೆ ಆ ಕಾಲವಿಭಾಗದಲ್ಲಿ ಆಗಿ ಹೋದ ಅರಸರ ಕಾಲಕ್ಕೆ ವರ್ತಿಸಿದ ಮುಖ್ಯ ಮುಖ್ಯ ಸಂಗತಿಗಳ ಇಸವಿಗಳನ್ನು ನೆನಪಿಡುವದಕ್ಕೆ ಆ ಕಾಲದ ಅರಸರ ಪಟ್ಟ ಮರಣ ಮುಂತಾದವು ಸಂಭವಿಸಿದ ಇಸವಿಗಳು ಉಪಯೋಗವಾಗುವವು.

ಈ ಮೆಟ್ಟಿನಲ್ಲಿ ಹೇಳಿದ ಮೇರೆಗೆ ಇತಿಹಾಸ ಕಲಿಸುವದರಿಂದ ಮುಂದಿನ ಮೆಟ್ಟಿನ ವಿಸ್ತಾರವಾದ ಇತಿಹಾಸಾಭ್ಯಾಸಕ್ಕೆ ಅನುಕೂಲವಾಗುವದಲ್ಲದೆ, ಈ ಮೆಟ್ಟಿನ ಅಭ್ಯಾಸ ಮುಗಿಸಿ ಸಾಲೆ ಬಿಡುವ ವಿದ್ಯಾರ್ಥಿಗಳಿಗೂ ಇತಿಹಾಸ ಕಲಿತದ್ದರಿಂದ ಆಗಬೇಕಾದ ಪ್ರಯೋಜನಗಳು ತಕ್ಕಮಟ್ಟಿಗೆ ಆಗದೆ ಇರಲಾರವು.

೩ನೇ ಮೆಟ್ಟು, ಯಾವದೊಂದು ಕಾರಕಿರ್ದಿಯನ್ನು ಕಲಿಸುವದು :--ಯಾವ ದೇಶದ ಇತಿಹಾಸ ಕಲಿಸುವದಿರುವದೋ, ಆ ದೇಶದಲ್ಲಿ ಆಳಿದ ಅನೇಕ ರಾಜವಂಶಗಳಲ್ಲಿ ಯಾವದೊಂದನ್ನು, ಇಸವಿಯ ಅನುಕ್ರಮದಿಂದ ವಿದ್ಯಾರ್ಥಿಗಳಿಗೆ ಕಲಿಸುತ್ತ ಹೋಗಬೇಕು. ಹಿಂದಿನ ಎರಡು ಮೆಟ್ಟುಗಳ ಶಿಕ್ಷಣದ ಯೋಗದಿಂದ ವಿದ್ಯಾರ್ಥಿಗಳ ಧಾರಣಾಶಕ್ತಿಯು ಬೆಳೆದಿರುವ ಕಾರಣ ಹುಡುಗರ ಬುದ್ಧಿಯು ಹೆಚ್ಚು ಸಂಸ್ಕೃತವಾಗುವಂತೆ ಹೆಕ್ಕಿಚಕ್ಕಿ ವಿವರಣಗಳನ್ನು ಹೇಳುವದೂ ಆ ವಿವರಣಗಳ ಮೂಲಕ ವಿಚಾರ ಮಾಡಲಿಕ್ಕೆ ಹಚ್ಚಿ ಫಲಿತಾಂಶಗಳನ್ನು ಹೊರಡಿಸುವದೂ ಅವಶ್ಯವದೆ. ಈ ೩ನೇ ಮೆಟ್ಟಿನಂತೆ ಅಭ್ಯಾಸ ಮಾಡಿದ ವಿದ್ಯಾರ್ಥಿಯು, ರಾಷ್ಟ್ರದ ಒಂದು ವ್ಯಕ್ತಿಯು ಮಾಡತಕ್ಕ ಕರ್ತವ್ಯವನ್ನು ನೆರವೇರಿಸುವದಕ್ಕೆ ತಕ್ಕವನಾಗಬೇಕು.

ಈ ಮೂರು ಮೆಟ್ಟುಗಳಲ್ಲಿ ಒಂದನೇ ಮೆಟ್ಟಿನ ಉಬ್ಬೇ
ಗಳನ್ನು ಕೊನೆಗಾಣಿಸುವಂತೆ ಸಿದ್ಧಪಡಿಸಿದ ಒಂದು ಕಥೆಯ
ಪ್ರಯೋಗರೂಪದಿಂದ ಸಭಿಕರ ಮುಂದೆ ಇಡಲ್ಪಟ್ಟಿತು
ಷೀನೇ ಇಯತ್ತೆಯವನೊಬ್ಬ ವಿದ್ಯಾರ್ಥಿಯು ಕೊರಳಲ್ಲಿ
ವಾಜೆಯ ಚಿತ್ರವನ್ನು ಹಾಕಿಕೊಂಡು ಸಭೆಯ ಮುಂದ
ನಿಂತು ಸಾಭಿನಯದಿಂದ ಕೆಳಗಿನ ಕಥೆಯನ್ನು ಸ್ಪಷ್ಟವಾಗಿ ಹೇ
ದನು.

ಐತಿಹಾಸಿಕ ಕಥೆ.

ಬಾಲಭಾಷೆ.

ಈ ಕಥೆಯನ್ನು ಮು! ರಾ॥ ಕುಲಕರ್ಣಿ ಎಲ್ ಸಿ ಇ
ವರು ರಚಿಸಿದ್ದರು. ಅದನ್ನು ರಾ! ಅಮ್ಮಿನಭಾವಿ ಎನೇ
ಶಿ॥ ಮೊ॥ ಪ್ರಾಕ್ಟೀಸಿಂಗಸ್ಕೂಲ ಇವರು ಹುಡುಗರಿಗೆ ಕಲಿ
ಪ್ರಯೋಗವಾಗಿಸಿದರು.

ಮುನ್ನೂರು ವರ್ಷದ ಹಿಂದೆ, ಪುಣೇದ ಹತ್ತೀಲೆ, ಶಿವನೇರಿ
ಎಂಬ ಊರಾಗ, ಕಹಾಜಿ ಎಂಬಾವ, ಒಬ್ಬ ಆರೇಜಾತಿ ಸ
ರದಾರ ಇದ್ದ; ಅವನ ಮಗ ಶಿವಾಜಿ. ಶಿವಾಜಿ ಹುಟ್ಟದಾಗ
ುತ್ತೆಲ್ಲ ಮುಸಲ್ಮಾನ ಅರಸರು ಇದ್ದರು. ಅವರು, ನಮ್ಮ
ುಡಿ ನೋಡಿದರ ಕೆಡವತಿದ್ದರು, ನಮ್ಮ ಮೂರ್ತಿ, ಬಡೀತಿ
ದ್ದರು, ನಮ್ಮನ್ನು ಕುಲಗೆಡಸತಿದ್ದರು; ಇದನ್ನೆಲ್ಲ ನೋಡಿ,
ವಾಜಿಗೆ ಬಹಳ ಶಿಟ್ಟು ಬಂತು. ಅವ, ತನ್ನ ಗೆಳೆಯರನ್ನು
ೂಡಿಕೊಂಡು, ಮುಸಲ್ಮಾನರ ರಾಜ್ಯದೊಳಗ ಹೋಗಿ,
ೂರು ಸುಲೀಲಿಕ್ಕೆ ಹತ್ತಿದ; ಇಂದ ಈ ಊರು, ನಾಳೆ ಮು
ೂಂದು ಊರು, ಹೀಂಗ ಹಾಳಮಾಡಲಿಕ್ಕೆ ಹತ್ತಿದ. ಈ
ುದ್ದಿ ವಿಜಾಪೂರ ಬಾದಶಹಗ ಹತ್ತ್ಯೋ. ಅವ ಅಫಜುಲ್
ಾನ ಎಂಬ ಸರದಾರನ ಕಯ್ಯಾಗ, ಬಹಳಷ್ಟು ದಂಡುಕೊ
ುಟ್ಟು, ಶಿವಾಜಿನ್ನ, ಒಳಿತಾಗಿ ಥಳಿಸಿಬಾ, ಅಂತ ಹೇಳಿ ಕಳಿಸಿ

ಅವ ದಂಡುತಗೊಂಡು ಬಂದು, ಶಿವಾಜಿ ಇರುವ ರಾಯ
ಡದ ಕೋಟಿಯ ಸುತ್ತಲೆ, ಮುತ್ತಿಗಿ ಹಾಕಿದ ಅದನ್ನ ಶಿ
ಾಜಿ ನೋಡಿ, ಅಬಬ! ಏನ ದಂಡಪಾ! ಇದರ ಸಾಗಡ

ಕಾದಿ, ನಾ ಹ್ಯಾಂಗ ಪಾರಾದೇನು? ಏನಾದರೂ ಹಂಚಿಕೆ ಮಾಡಿ ಪಾರಾಗಬೇಕು, ಅಂತ ಅಂದ ಅಫಜುಲ್‌ಖಾನನ ಕಡೆ ಗೋಪೀನಾಥಪಂತ ಅಂಬಾವ, ಒಬ್ಬ ನಮ್ಮ ಜಾತಿಯವ ಪಕೀಲ ಇದ್ದ, ಅವನ್ನ ಕರಿಸಿ,-ನಾ, ಊರು ಯಾಕ ಸುಲೀತೇನಿ, ನಿನಗ ಗೊತ್ತು ಅವ ಏನು? ಮುಸಲ್ಮಾನರು ನಮ್ಮ ಜನರನ್ನ ಎಷ್ಟು ಪರಿ ಕಾಡತಾರ ನೋಡು, ನೀನೂ ಅವರ ಹ್ಯಾಂಗೇ ಕಾಡತೀಯೊ, ನನಗೇನಾದರೂ ಮದ್ದತಮಾಡತೀಯೊ, ಅಂತ ಕೇಳಿದ. ಅದಕ ಅವ—"ನಾನು ಆವರ ಚಾಕರ, ನನ್ನ ಕಯ್ಯಾಗ ಏನದ? ಅದಷ್ಟು ಮದ್ದತಮಾಡತೇನಿ" ಅಂದ. "ಹ್ಯಾಂಗಾದರ ಹ್ಯಾಂಗಾದರೂ ಮಾಡಿ ನನಗ ಏಕಾಂತದಾಗ, ಅಫಜುಲ್‌ಖಾನನ ಭೆಟ್ಟಿ ಮಾಡಿಸು" ಅಂತ ಶಿವಾಜಿ ಹೇಳಿ ಕಳಿಸಿದ ಆ ಮ್ಯಾಲ ಅವ, ಅಫಜುಲ್‌ಖಾನನ ಕಡಿಗೆ ಹೋಗಿ, "ಸಲಾಮ್ ಸರದಾರ, ಶಿವಾಜಿ ನಮ್ಮ ಸಂಗತ್ರೀಲೆ ಯುದ್ಧಾ ಮಾಡೋದಿಲ್ಲ, ಶರಣ ಬರತಾನ, ತಮಗ ಬೇರೆ ಒಬ್ಬನೇ ಭೆಟ್ಟಾಗಿ ಬಂದು ಮಾತು ಹೇಳಿಕೊಂಬೋದದ ಅಂತಾನ, ನಿಮ್ಮ ಮರ್ಜಿ ಬಂದ್ಹಾಂಗ ಮಾಡರಿ, ಅಂತ ಹೇಳಿದ ಅದಕ ಅಫಜುಲ್‌ಖಾವ ಅಂದ—ಅವ ಒಬ್ಬನೇ ಬರಿಗ್ಯೆಲೆ ಬಂದರೆ, ಏಕಾಂತದಾಗ ಬೆಟ್ಟಿ ತಗೋತೇನಿ, ಈ ಮಾತು ಅವಗ ತಿಳಿಸು.—ಈ ಸುದ್ದಿ ಶಿವಾಜಿಗೆ ಹತ್ತೋಣ,—ಕೈಯಾಗ ಉಕ್ಕಿನ ಹುಲಿ ಉಗುರು ಹಾಕ್ಯಾಂಡು, ಅವನ್ನ ಅಂಗಿತೋಳಾಗ ಹೀಂಗ (ಅಭಿನಯ) ಮುಚಿಗೊಂಡು, ಟೊಂಕದೊಳಗ, ಕಠಾರಿ ಕಾಣಿಸದ್ಹಾಂಗ ಕಟಿಗೊಂಡು, ಅಫಜುಲ್‌ಖಾನನ ಎದುರಿಗೆ, ಬೆಕ್ಕಿನ್ಹಾಂಗ, ಹೆದರಿಕೋತ ದೂರನಿಂತ. ಇದನ್ನ ಅಫಜುಲ್‌ಖಾನ ನೋಡಿ, ಪಾಪ! ಇಂಥ ಪುಕ್ಕ ನಮಗೇನು ಮಾಡ್ಯಾನು? ಅಂತ ಮನಸಿನಾಗ ಅಂದು, ಶಿವಾಜಿ "ಮತ ಡರೋ" ಅಂತ ಗಟ್ಟಿಸಿ ಅಂದು, ಅವನ್ನ ಅಪಿಗೋಳಿಕ್ಕೆ ಬಂದ. ಆಗ ಶಿವಾಜಿ ತಾನೂ ಅಲಂಬಲ ಕೊಡೋಹಾಂಗ ಮಾಡಿ, ಹುಲಿ ಉಗುರು ರುಚುಚ್ಚಿ, ಅವನ ಹೊಟ್ಟ ಹರದಾ, ಕಠಾರಿ ಎದ್ಹಾಗ ತಿವದು ಕೊಂದಾ, ಆ ಮ್ಯಾಲ ದರೂನಿಂತು, ತನ್ನ ದಂಡಿಗೆ ಸನ್ನೆ ಮಾಡಿ

ಕಂದ ಇದನ್ನೆಲ್ಲ ಅಫಜಲ್‌ಖಾನನೆ ದಂಡಿನವರು ನೋಡಿ, ದಿಕ್ಕಾಪಾಲಾ ಓಡಿದರು. ಇದರಿಂದ ಮುಸಲ್ಮಾನರ ಹಾವಳಿ ಎಪ್ಪೋ ಕಡಿಮೆ ಆಯಿತು. ಹೀಂಗ ಹಿಂದಕ್ಕ ಮುಸಲ್ಮಾನರೂ ನಾವೂ ಜಗಳಾಡಿಕೋತ ಇದ್ವಿ. ಈಗ ದಯಾಳು ಇಂಗ್ಲೀಷ ಸರಕಾರದ ಅಮಲಿನಾಗ ನಾವೂ ಮುಸಲ್ಮಾನರೂ ಅಣ್ಣ ತಮ್ಮಂದಿರ್ಹಾಂಗ ಪ್ರೀತಿಯಿಂದ ಇರತೇವಿ.

ಬಳಿಕ ರೂಪಾಂತರದ ಪಾಠವನ್ನು ೫ನೇ ವರ್ಷದ ವಿದ್ಯಾರ್ಥಿಯಾದ ತಿ. ಲೋ ನಾಯಿಕ ಎಂಬವರು ಕಲಿಸಿದರು. ಈ ವಿಷಯವನ್ನು ಕಲಿಸುವ ಮೊದಲು ಮಾಡಲ್ಪಟ್ಟ ಸೂಚನೆಗಳು,

ಶಿಕ್ಷಣದ ಸಾಮಾನ್ಯ ತತ್ವಗಳು, ಈ ಮೊದಲೇ ನಿರೂಪಿಸಲ್ಪಟ್ಟಿರುತ್ತವೆ. ವಿಶೇಷದಿಂದ ಸಾಮಾನ್ಯಕ್ಕೆ, ಉದಾಹರಣೆಗಳಿಂದ ನಿಯಮಕ್ಕೆ, ಹೋಗಬೇಕೆಂಬ ತತ್ವಗಳು ಹಿಂದೆ ಹೇಳಿದ ಸಾಮಾನ್ಯ ನಿಯಮಗಳಲ್ಲಿ ೧೧ನೇದರಲ್ಲಿಯೂ ಪ್ರತ್ಯಕ್ಷ ಪದಾರ್ಥಗಳ ಸಹಾಯದಿಂದ ಕಲಿಸಬೇಕೆಂಬದು ೪ನೇ ನಿಯಮದಲ್ಲಿಯೂ, ಹುಡುಗರ ಬೇರೆ ಬೇರೆ ಇಂದ್ರಿಯಗಳಿಗೂ ಕೈಗೂ ಕೆಲಸಕೊಡಬೇಕೆಂಬದು ೫ನೇ ನಿಯಮದಲ್ಲಿಯೂ ಹೇಳಲ್ಪಟ್ಟಿರುತ್ತವೆ. ಆ ನಿಯಮಗಳಿಗನುಸರಿಸಿ ಗಣಿತ ವಿಷಯವನ್ನೂ ಕಲಿಸಬೇಕು. ಹಾಗೂ ಗಣಿತದಂಥ ಕಠಿಣ ವಿಷಯವು ಹುಡುಗರ ಧಾರಣಾ ಶಕ್ತಿಗೆ ಜಡವಾಗುವದರಿಂದ ಹಿಂದಿನ ಸಾಮಾನ್ಯ ನಿಯಮಗಳ ೨ನೇ ೧೧ನೇ ನಿಯಮಗಳಲ್ಲಿ ಹೇಳಿದಂತೆ ಮೆಟ್ಟುಗಳನ್ನೂ ಕಲ್ಪಿಸಿ, ಆ ಮೆಟ್ಟುಗಳ ಕ್ರಮದಿಂದ ಶಿಕ್ಷಣವನ್ನು ಸಾಗಿಸತಕ್ಕದ್ದು; ಮತ್ತು ಕಲಿಸಿದ ಮೆಟ್ಟುಗಳು ಹುಡುಗರಿಗೆ ಮನವರಿಕೆಯಾದ ಸಂಗತಿಯನ್ನು ಮನಗಾಣುವದಕ್ಕಾಗಿ ೧೧ನೇ ನಿಯಮದಲ್ಲಿ ಹೇಳಿದಂತೆ ಮೇಲೆ ಮೇಲೆ ಸಿಂಹಾವಲೋಕನ ಮಾಡುವದು ಅವಶ್ಯವದೆ. ಅದೇ ಮೇರಗೆ ೫ನೇ ನಿಯಮದಲ್ಲಿ ಹೇಳಿದಂತೆ ವಿದ್ಯಾರ್ಥಿಗಳು ಸ್ವಂತ ಶ್ರಮದಿಂದ ವಿಷಯ ಜ್ಞಾನ ಸಂಪಾದಿಸುವಂತೆ ಉಪಾಯಗಳನ್ನು ಯೋಚಿಸಿ

ಸಬೇಕೆಂಬ ತತ್ವವನ್ನಾದರೂ ಈ ವಿಷಯಕಲಿಸುವಾಗ್ಗೆ ಉಪಯೋಗಿಸಿಕೊಳ್ಳಬೇಕು. ಈ ನಿಯಮಗಳು ಸಮಾವೇಶವಾಗುವಂತೆ ರಚಿಸಿದ ಟಿಪ್ಪಣಿಗನುಸರಿಸಿ ರೂಪಾಂತರದ ವಿಷಯವು ಕಲಿಸಿ ತೋರಿಸಲ್ಪಡುವದು

ಕೆಳಗೆ ಕೊಟ್ಟ ರೂಪಾಂತರದ ಟಿಪ್ಪಣಿಯ ಮಾದರಿಯು ಗಣಿತ ವಿಷಯದೊಳಗಿನ ಯಾವದೊಂದು ಭಾಗವನ್ನು ಕಲಿಸುವದಕ್ಕೆ ಉಪಯೋಗವಾಗುವದು. ಆದರೆ ಸಂಖ್ಯಾ ಮುಂತಾದ ಪ್ರಾರಂಭದ ಭಾಗಗಳನ್ನು ಕಲಿಸುವಾಗ್ಗೆ ಮೇಲೆ ಹೇಳಿದಂತೆ ಪ್ರತ್ಯಕ್ಷ ವಸ್ತುಗಳ ಉಪಯೋಗವನ್ನು ವಿಶೇಷವಾಗಿ ಮಾಡಬೇಕಾಗುವದು. ಮುಂದಿನ ಪ್ರಕರಣಗಳನ್ನು ಕಲಿಸುವಾಗ್ಗೆ ಅವುಗಳ ಉಪಯೋಗವನ್ನು ಕಡಿಮೆ ಕಡಿಮೆ ಮಾಡುತ್ತ ವಿದ್ಯಾರ್ಥಿಗಳ ವಿಚಾರಶಕ್ತಿ, ಕಲ್ಪನಾಶಕ್ತಿಗಳು ಬೆಳೆದ ಹಾಗೆ ಇವುಗಳ ಸಹಾಯದಿಂದ ಶಿಕ್ಷಣವನ್ನು ನಡಿಸಬೇಕು. ಇದೇ ಮೇರೆಗೆ ವ್ಯಾಖ್ಯೆಗಳನ್ನೂ ನಿಯಮಗಳನ್ನೂ ಕಲಿಸುವಾಗ್ಗೆ ಆರಂಭದ ಇಯತ್ತೆಗಳಲ್ಲಿ ಬಹಳ ಉದಾಹರಣೆಗಳನ್ನು ತೆಗೆದುಕೊಳ್ಳಬೇಕು. ಮುಂದೆ ಬರಬರುತ್ತ ಉದಾಹರಣೆಗಳನ್ನು ಕಡಿಮೆಮಾಡಿ ೧ - ೨ ಉದಾಹರಣೆಗಳಿಂದಲೇ ನಿಯಮುಗಳನ್ನು ತೆಗಿಸತಕ್ಕದ್ದು.

ನೀತಿ ಶಿಕ್ಷಣವೆನ್ನು ಸ್ವತಂತ್ರವಾದ ಒಂದು ವಿಷಯದಂತೆ ಸಾಗಿಸುವದು ಪ್ರಯೋಜನಕರವಲ್ಲ. " ಉಪದೇಶಕ್ಕಿಂತ ಉದಾಹರಣೆಯೇ ಹೆಚ್ಚು " ಆದರಿಂದ ಶಿಕ್ಷಕನು ವಿದ್ಯಾರ್ಥಿಗಳ ಕೂಡ ನಡೆಯುವಾಗ್ಗೆ ಅಭ್ಯಾಸದಲ್ಲಿಯೂ ಆಟದ ಸಮಯದಲ್ಲಿಯೂ ಪ್ರಸಂಗವನ್ನರಿತು ಪ್ರೀತಿ ದಯಾ ನ್ಯಾಯ ಇತ್ಯಾದಿಗಳನ್ನು ವ್ಯಕ್ತಪಡಿಸುವ ತನ್ನ ಸ್ವಂತಕೃತಿಯಿಂದ ನೀತಿ ಶಿಕ್ಷಣವನ್ನು ಕೊಟ್ಟರೆ ಹಿತವಾಗುವದು. ನೀತಿ ಶಿಕ್ಷಣಕ್ಕೆ ಯಾವ ಬಗೆಯಿಂದಲೂ ಸಂಬಂಧವಿಲ್ಲದಂಥ ಗಣಿತ ವಿಷಯದಲ್ಲಾದರೂ ಪ್ರಸಂಗ ದೊರೆತರೆ ನೀತಿಯನ್ನು ಕಲಿಸಬಹುದೆಂಬದನ್ನು ತೋರಿಸುವವಕ್ಕಾಗಿ ಟಿಪ್ಪಣಿಯ ಬುಡದಲ್ಲಿ ಸೂಚನೆಯು ಕೊಡಲಟ್ಟಿದೆ.

ರೂಪಾಂತರವು.

ಸಿನೇ ಇಯತ್ತೆ.

ವೇಳೆ—೪೫ ಮಿನಿಟು.

ಉದ್ದೇಶ :- ರೂಪಾಂತರವನ್ನು ತಕ್ಕ ಪದ್ಧತಿಯಿಂದ ಕಲಿಸುವದು.

(ನಾಣ್ಯ, ಉದ್ದಳತೆ, ಕಾಳು ಅಳೆಯುವ ಕೋಷ್ಟಕಗಳನ್ನು ಹುಡುಗರು ತಕ್ಕ ಪದ್ಧತಿಯಿಂದ ಕಲಿತಿರುವರೆಂದು ತಿಳಿದಿರುತ್ತದೆ.)

ಉಪಕರಣಗಳು :—೨೫ ರೂಪಾಯಿಯ ದುಡ್ಡುಗಳು, ೮ ಶೇರು ಜೋಳ, ಅಳೆಯುವ ಮಾಪುಗಳು, ಪೂಟು ಯಾರ್ಡುಗಳ ಕಟ್ಟಿಗೆ.

ವಿಷಯ	ಕ್ರಮ.
	ಪರೀಕ್ಷೆಯ ಪ್ರಶ್ನೆಗಳು :-ವಿದ್ಯಾರ್ಥಿಗಳ ಮುಂದಿಟ್ಟ ಉಪಕರಣಗಳನ್ನು ತೋರಿಸಿ ಪ್ರತಿಯೊಂದರ ಹೆಸರು, ಪರಸ್ಪರ ಸಂಬಂಧ ಅಂದರೆ ಕೋಷ್ಟಕ ಸಂಖ್ಯೆ, ಅವುಗಳ ಸ್ವತಂತ್ರ ಕಲ್ಪನೆ, ಉಪಯೋಗ ಇವುಗಳ ಬಗ್ಗೆ ಕೇಳುವದು.

ಉಪೋದ್ಘಾತ :—ಉದಾ. ರೂಪಾಯಿಗೆ ೮ ಶೇರು ಜೋಳ ಬರುತ್ತದೆ. ಆದರೆ ಪಾವಲಿಗೆಷ್ಟು? (೨ ಶೇರು) ಅಳಿ. (ಶೇರಿನಿಂದ ಅಳೆಯಲಿ)

(ಅ) ಅರ್ಥ ವಿವರಣ

(೧) ೪ ಕಾಲಪಾವು ೨ ಶೇರಿನ ರೂಪಾಂತರ
೮ ಗಿರಪಾವು „ „

(೨) ೨ ಯಾಡು, ೬ ಘೂಟಿನ ರೂಪಾಂತರ.

(೩) ೧೨ ಅಣಿ, ೩ ಪಾವಲಿಯ ರೂಪಾಂತರ
„ ೬ ಚವಲಿಯ „

(ಆ) (೧) ಶೇರು ಇಲ್ಲದಿದ್ದರೆ? (ಕಾಲಪಾವಿನಿಂದ) ಅಳಿ, (೪ ಕಾಲಪಾವು). ೨ ಶೇರು, ೪ ಕಾಲಪಾವು, ಇವು ಬೆಲೆಯಲ್ಲಿ ಹ್ಯಾಗವೆ? (ಮಾಪು) "ನಾಲ್ಕು ಕಾಲಪಾವಿಗೆ ೨ ಶೇರಿನ ರೂಪಾಂತರವೆನ್ನುತ್ತಾರೆ" ಎಂದು ಹೇಳುವದು.
ಇದರಂತೆ ಗಿರಪಾವಿನ ವಿಷಯವಾಗಿ ಹೇಳುವದು.

(೨) ನಿಮ್ಮ ಎದುರಿನ ಸ್ಥಳದ ಅಂತರವನ್ನು ಘೂಟಿನಿಂದ ಅಳೆಯಿರಿ. (೬ ಘೂಟು); (ಘೂಟು ಇಲ್ಲದಿದ್ದರೆ ಯಾರ್ಡಿನಿಂದಾಗಲಿ, ಇಂಚಿನಿಂದಾಗಲಿ ಅಳೆಯುತಾರೆಂಬದನ್ನು ಹೊರಡಿಸಿ ಮೇಲಿನಂತೆ ಸಾಗುವದು.)

(೩) ರೊಕ್ಕದಲ್ಲಿ ಮೂರು ಸಮಗುಂಪು ಮಾಡಿ ಮೂವರು ವಿದ್ಯಾರ್ಥಿಗಳ ಕೈಯಲ್ಲಿ ಒಂದೊಂದು ಗುಂಪಿಯಂತೆ ಕೊಟ್ಟು ಅನು

(ಆ) ವ್ಯಾಖ್ಯೆ—ಒಂದು ಪರಿಮಾಣದಲ್ಲಿ ಅಳೆದದ್ದನ್ನು ಬೆಲೆಯಲ್ಲಿ ಹೆಚ್ಚು ಕಡಿಮೆ ಮಾಡದೆ ಅದೇ ಜಾತಿಯ ಮತ್ತೊಂದು ಪರಿಮಾಣದಿಂದ ಅಳೆದು ಹೇಳುವದಕ್ಕೆ ರೂಪಾಂತರವೆನ್ನುವರು.

(ಇ) ಉಪಯೋಗ—ಯಾವದೊಂದು ಜೀನಸು ಅಳೆಯುವಾಗ್ಗೆ ಬಂದು ಪರಿಮಾಣವಿಲ್ಲದಿದ್ದರೆ, ಅದೇ ಜಾತಿಯ ಮತ್ತೊಂದು ಪರಿಮಾಣದಿಂದ ಅಳೆಯಲಿಕ್ಕೆ ಬರುತ್ತದೆ.

(ಬ) (ಆ) ರೀತಿಯ ವಿವರಣೆ.

(೧) ೫ ಪಾವಲಿ (೫×೨) ೧೦ ಚವಲಿ

ಕ್ರಮವಾಗಿ ಪಾವಲಿ, ಚವಲಿ, ಅಣಿಗಳಂತೆ ಎಣಿಸಲಿಕ್ಕೆ ಹೇಳುವದು (೩ ಪಾವಲಿ, ೬ ಚವಲಿ, ೧೨ ಅಣಿ), ಉಳಿದ ಪ್ರಶ್ನೆಗಳ (೧) ರಲ್ಲಿ ಹೇಳಿದಂತೆ

(೪.) ಶೇರು ಇಲ್ಲದಿದ್ದರೆ ಯಾತರಿಂದ ಅಳೆಯುತ್ತಿದ್ದಿ; (ಕಾಲು ಪಾವು, ಗಿರಪಾವು ಇತ್ಯಾದಿ) ಪೂಟಿನಿಂದ ಅಳೆಯಲಿಕ್ಕೆ ಬರುವದೋ? (ಬರುವದಿಲ್ಲ.) ಒಂದರ ಬದಲು ಮತ್ತೊಂದು ಎಂಥಾದ್ದು ತೆಗೆದುಕೊಳ್ಳಬೇಕು? (ಅದೇ ಜಾತಿಯದು) ರೂಪಾಂತರ ಅಂದರೇನು? ಉಪಯೋಗವೇನು?

(ಬ) (ಆ) (೧) ೫ ಪಾವಲಿಯ ರೂಪಾಂತರಗಳಾವವು? (೧೨ ಅಣಿ, ೬ ಚವಲಿ) ೫ ಪಾವಲಿಯ ರೂಪಾಂತರ ಎಷ್ಟು ಚವಲಿ? (೧೦ ಚವಲಿ) ಹ್ಯಾಗೆ ಮಾಡಿದಿ? ಯಾವ ಪರಿಮಾಣವಿಂದ ಯಾವ ಪರಿಮಾಣಕ್ಕೆ ತಂದಿ? ದೊಡ್ಡದು ಯಾವದು? ಸಣ್ಣದು ಯಾವ

(೨) ೪ ಯಾರ್ಡ್ = (೪×೩) = ೧೨ ಫೂಟು

(೩) ದೊಡ್ಡ ಪರಿಮಾಣದಿಂದ ಸಣ್ಣ ಪರಿಮಾಣದ ರೂಪಕೊಡುವಾಗ್ಗೆ ಕೋಷ್ಟಕ ಸಂಖ್ಯೆಯಿಂದ ಗುಣಿಸುವದು.

(೪) (೧) ೯ ಫೂಟು = ೯ ÷ ೩ = ೩ ಯಾರ್ಡ್

(೨) ೧೨ ಗಿರಪಾವು = ೧೨ ÷ ೪ = ೩ ಶೇರು

(೩) ಸಣ್ಣ ಪರಿಮಾಣದಿಂದ ದೊಡ್ಡ ಪರಿಮಾಣದ ರೂಪಕೊಡುವಾಗ್ಗೆ ಕೋಷ್ಟಕ ಸಂಖ್ಯೆಯಿಂದ ಭಾಗಿಸುವದು.

ದು? ಎಂಥ ಪರಿಮಾಣದಿಂದ ಎಂಥದ್ದಕ್ಕೆ ತಂದಿ? ಏನು ಕೃತಿ ಮಾಡಿದಿ? (೨ ರಿಂದ ಗುಣಿಸಿದೆನು.)

(೨) ಮೇಲಿನಂತೆ.

(೩) ಇವೆರಡು ಲೆಖ್ಖಗಳಲ್ಲಿ ಎಂಥ ಪರಿಮಾಣದಿಂದ ಎಂಥ ಪರಿಮಾಣಕ್ಕೆ ತಂದೆವು? ಅದಕ್ಕೇನು ಕೃತಿಮಾಡಿದೆವು. (೨ ರಿಂದ ೩ ರಿಂದ ಗುಣಿಸಿದೆವು.) ೨–೩ ಈ ಸಂಖ್ಯೆಗಳು ಏನು? (ಕೋಷ್ಟಕ. ಸಂಖ್ಯೆ).

(೪) (೧) ೩ ಫೂಟಿನ ರೂಪಾಂತರವ್ಯಾವವು? ೯ ಫೂಟಿನ ರೂಪಾಂತರವು ಎಷ್ಟು ಯಾರ್ಡ್? ಇತ್ಯಾದಿ.

(೨) (೧) ರಲ್ಲಿ ಹೇಳಿದಂತೆ ಪ್ರಶ್ನೆಮಾಡುವದು.

(೨) ಮೇಲಿನಂತೆ.

(೩) ಇವೆರಡು ಲೆಖ್ಖಗಳಲ್ಲಿ ಎಂಥ ಪರಿಮಾಣದಿಂದ ಎಂಥ ಪರಿಮಾಣಕ್ಕೆ ತಂದೆವು; ಅದಕ್ಕೇನು ಕೃತಿಮಾಡಿದೆವು? ೩ ರಿಂದ ೪ ರಿಂದ ಭಾಗಿಸಿದೆವು. ೩–೪ ಈ ಸಂಖ್ಯೆಗಳು ಏನು? (ಕೋಷ್ಟಕ ಸಂಖ್ಯೆ).

(ಕ) ಪ್ರಕಾರಗಳು. (೧) ೨ ಪ್ರಕಾರಗಳು.	(ಕ) (೧) ರೂಪಾಂತರವನ್ನು ಯಾವ ಯಾವ ಕೃತಿಯಿಂದ ಮಾಡಿದೆವು. (ಗುಣ'ಸಿ, ಭಾಗಿಸಿ) ಗುಣ'ಸುವದೆಂಥಲ್ಲಿ? ಎಷ್ಟು ಪ್ರಕಾರದ ರೂಪಾಂತರಗಳಾದವು?
(೨) ಇಳಿಕೆಯ ರೂಪಾಂತರ(ದೊಡ್ಡ ಪರಿಮಾಣದಿಂದ ಅದೇ ಜಾತಿಯ ಸಣ್ಣ ಪರಿಮಾಣಕ್ಕೆ ತರುವದು.)	(೨) ಮೊದಲನೇದಕ್ಕೆ ಇಳಿಕೆಯ ರೂಪಾಂತರವೆನ್ನುವರು.
(೩) ಏರಿಕೆಯ ರೂಪಾಂತರ(ಸಣ್ಣ ಪರಿಮಾಣದಿಂದ ಅದೇ ಜಾತಿಯ ದೊಡ್ಡ ಪರಿಮಾಣಕ್ಕೆ ತರುವದು.)	(೩) ಎರಡನೇದಕ್ಕೆ ಏರಿಕೆಯ ರೂಪಾಂತರವೆನ್ನುವರು.

ಸೂಚನೆ :—ಹುಡುಗರ ಕೈಯಲ್ಲಿ ಕೊಟ್ಟ ಹಣವನ್ನು ತಿರಿಗಿ ತಂದುಕೊಡಲಿಕ್ಕೆ ಹೇಳುವದು. ಹಾಗು ಅವನ್ನು ಎಲ್ಲರೂ ಸರಿಯಾಗಿ ಮುಟ್ಟಿಸಿದ ಬಗ್ಗೆ ಕೇಳುವದು. ಇದರಂತೆ ಯಾರಾದರೂ ತಮ್ಮ ಕಡಿಗೆ ಒಪ್ಪಿಸಿದ ಜೀನಸನ್ನು ಜೋಕೆಯಿಂದ ಅವರಿಗೆ ಮುಟ್ಟಿಸಬೇಕು. ಎಂಬ ಮಾತನ್ನು ಅವರಿಗೆ ತಿಳಿಸುವದು.

R. S. Kulkarni,
ಫಾ॥ ಬಿ॥ ಮಾಸ್ತರ ಟ್ರೇನಿಂಗ್ ಕಾಲೇಜ ಧಾರವಾಡ.

ಇದಾದೆ ಬಳಿಕ ಅಂಕಿಗಳ 'ಅವರ್ತನ'ವೆಂಬ ಪಾಠವು ಸಾಗಿತು. ಇದನ್ನು ಕಲಿಸುವ ಮೊದಲು ಮಾಡಲ್ಪಟ್ಟ ಸೂಚನೆಗಳು

ಅಂಕಿಗಳನ್ನು ಪ್ರತ್ಯಕ್ಷ ವಸ್ತುಗಳಿಂದ ಕಲಿಸುವದೇ ಮೇಲಾದ ಮಾರ್ಗವು. ಮೊದಲು ವಸ್ತುಗಳು, ಬಳಿಕ ಎಣಿಕೆಯು ಆ. ರಾ ಬಿಂದೇ ಬಿಡವೆಯನ್ನೇ ಉಪಯೋಗಿಸದೆ ಅನೇಕ, ಬಿಡವೆಗಳನ್ನು ಉಪಯೋಗಿಸುವದರಿಂದ ವಿದ್ಯಾರ್ಥಿಗಳಿಗೆ ಎಣಿಕೆಯು ನಿಜತ್ವವು ಮನದಟ್ಟಾಗುವದಲ್ಲದೆ ಅನೇಕ ವಸ್ತುಗಳ ಜ್ಞಾನವೂ ಅವುಗಳ ದರ್ಶನದಿಂದ ಅವುಗಳ ಗುಣಧರ್ಮಗಳ ಜ್ಞಾನವೂ ಆಗುತ್ತದೆ ಶಿಕ್ಷಣದ ಮುಖ್ಯತತ್ವವೇನೆಂದರೆ ಅನೇಕ ವಿಷಯಗಳ ಶಿಕ್ಷಣವು ಅದಷ್ಟು ಬೆಂಡಕ್ಕೊಂದು ಸಂಬಂಧಿಸಿ ನಡೆಯಲಿಕ್ಕೆಬೇಕು. ಈ ತತ್ವದಂತೆ ಗಣಿತ ಕಲಿಸುವಾಗ ವಸ್ತುಗಳ ಜ್ಞಾನವೂ ವಸ್ತುಗಳನ್ನು ಕಲಿಸುವಾಗ ಸಂಖ್ಯೆಯ ಜ್ಞಾನವೂ ಉಂಟಾಗುವಂತೆ ಈ ಪಾಠವು ಕಲಿಸಲ್ಪಟ್ಟಿದೆ.

ಅಂಕಿಗಳು.

ಈ ಪಾಠವನ್ನು ಪಾಟಕ್ಟಿಸಿಂಗಸ್ಕೂಲ ಹೆಚ್ ಮಾ॥ ರಾ॥ ದೇಶಪಾಂಡೆ ಹಾಗೂ ಅವರ ಅ॥ ಪಶುಪತಿ ಈ ಉಭಯತರು ಕೂಡಿ ಸಿದ್ಧಮಾಡಿದ್ದರು. ಪಶುಪತಿಯವರು ಹುಡುಗರಿಂದ ಪ್ರಯೋಗಮಾಡಿಸಿದರು

ಉಪಕರಣಗಳು :—ಚೆಂಡುಗಳು (೮); ಎತ್ತಿನಗೊಂಬೆ ೧ ಕೋಡು ಮುರಿದ ಎತ್ತಿನಗೊಂಬೆ, ೨ ಕೋಡು ಮುರಿದ ಎತ್ತಿನಗೊಂಬೆ, ಅನೆಯಬೊಂಬೆ, ಗಿಡದ ಚಿತ್ರ, ಗೋಲ, ಸಿಲಿಂದರ, ಶಂಕು, ಅಡ್ಡಣಿಗೆ, ಚೇಳಿನಚಿತ್ರ ಅಥವಾ ಗೊಂಬೆ, ನೊಣದಚಿತ್ರ, ಟೆಂಗಿನಕಾಯಿ, ರಥ, ಇತ್ಯಾದಿ

ಟೀಪು :—ಹುಡುಗರು ಉಪಕರಣಗಳನ್ನು ತೋರಿಸುತ್ತ ಕೆಳಗೆ ಹೇಳಿದಂತೆ ಅಂಕಿಗಳ ಅವರ್ತನವಾಡುವ ಬಗೆಯನ್ನು ತೋರಿಸಿ, ರಾಗದ ಕಿಟ್ಟಿಗೆ ಪಿಟಲುಗಳೊಡನೆ ಸುಸ್ವರದಿಂದ ಅಭಿನಯದೊಂದಿಗೆ ಹಾಡಿದರು.

ಒಂದು

೧ನೆಯವ—ನನ್ನ ಹತ್ತರ ಒಂದು ಚೆಂಡು ಅದೆ.

೨ನೆಯವ—ನನಗೆ ಒಂದು ತಲೆ ಅದೆ.

೩ನೆಯವ—ಅನೆಗೆ ಒಂದು ಸೊಂಡೆ ಇರುತ್ತದೆ.

೪ನೆಯವ—ಎತ್ತಿಗೆ ಒಂದು ಇಣಿ ಇರುತ್ತದೆ.

೫ನೆಯವ—ನೋಡಿರಿ, ನಾನು ಒಂದು ಬೆರಳು ಮೇಲೆ ಮಾಡಿದ್ದೇನೆ.

೬ನೆಯವ—ಮುಗಿಲಲ್ಲಿ ಒಂದು ಸೂರ್ಯ ಇರುತ್ತದೆ.

೭ನೆಯವ—ಗೋಲಕ್ಕೆ ಒಂದು ಮೈ ಇರುತ್ತದೆ.

೮ನೆಯವ—ಗಿಡಕ್ಕೆ ಒಂದು ಬೊಡ್ಡೆ ಇರುತ್ತದೆ.

ಪದ—ಬ್ಯಾಂಡಿನಂತೆ

ಒಂಸು ಎಂಬುದು, ತಲೆಯ ತೋರ್ಪುದು!
ಒಂದು ಸೊಂಡೆಯು, ಅನೆಗಿರುವದು ॥ ೧ ॥

ಎರಡು

೧ನೆಯವ—ಇಗೋ, ಇದೊಂದು ಚಂಡು, ಇದೊಂದು ಚಂಡು ಕೂಡಿ ಎರಡು ಆದವು.

೨ನೆಯವ—ನನಗೆ ಎರಡು ಕೈಗಳು ಇರುತ್ತವೆ.

೩ನೆಯವ—ಇದೊಂದು ಕೈ ಇದೊಂದು ಕೈ ಕೂಡಿ ಚಪ್ಪಾಳಿ (ಅಭಿನಯ)

೪ನೆಯವ—ಅನೆಗೆ ಇದೊಂದು ಕಿವಿ, ಇದೊಂದು ಕಿವಿ, ಎರಡು ಮಾದಂಥ ಕಿವಿ ಇರುತ್ತವೆ.

೫ನೆಯವ—ಎತ್ತಿಗೆ ಎರಡು ಕೊಡುಗಳು ಇರುತ್ತವೆ.

೬ನೆಯವ—ನನ್ನ ಎತ್ತಿಗೆ ೨ ಕೊಡು ಇದ್ದವು, ೧ ಮುರಿಯಿತು, ಒಂದು ಉಳಿಯಿತು.

೭ನೆಯವ—ನನ್ನ ಎತ್ತಿನ ಎರಡೂ ಕೊಡು ಮುರಿದವು. ಈಗ ಕೊಡೇ ಇಲ್ಲ; ಬೋಳ,

೮ನೆಯವ—ಇದು ಶಂಕು, ಇದು ಬೊಗರಿಯಂತೆ ತಿರುಗುತ್ತದೆ. ಈ ಮೈಮೇಲೆ ದುಂಡಗೆ ಉರುಳು

ತ್ತದೆ, ಈ ಮೈಮೇಲೆ ನಿಲ್ಲುತ್ತಗೆ. ಅಂತೂ ಎರಡು ಮೈಗಳು.

ಪದ—ಬ್ಯಾಂಡಿನಂತೆ.

ಎರಡು ಎಂಬುದು, ಕಯ್ಯ ತೋರ್ಪುದು।
ಎರಡು ಕೋಡುಗಳ್, ಪನಕೆಯಿರುವವು ॥ ೨ ॥

ಇದೇ ಮೇರೆಗೆ ೮ ಅಂಕೆಗಳ ವರೆಗೆ ಆವರ್ತನವಾಡಿ ಸಲ್ಪಟ್ಟಿತು. ಬೇರೆ ಬೇರೆ ಅಂಕಿಗಳ ಸಂಬಂಧದ ಪದಗಳು ಕೆಳಗೆ ಬರೆಯಲ್ಪಟ್ಟವೆ.

ಪದ—ಬ್ಯಾಂಡಿನಂತೆ.

ಮೂರು—ಮೂರು ಎಂಬುದು ಕೆಂಣು ಟೆಂಗಿನೆ।
ಮೂರು ಕಾಲುಗಳಡ್ಡಣಿಗೆಗಿರುವವು ॥ ೩ ॥

ನಾಲ್ಕು—ನಾಲ್ಕು ಕಾಲುಗಳ್, ಪನಕೆಯಿರುವವು।
ನಾಲ್ಕು ಗಾಲಿಗಳ್, ರಥಕೆಯಿರುವವು ॥ ೪ ॥

ಐದು—ಐದು ಎಂಬುದು, ಕಯ್ಯ ಬೆರಳುಗಳ್।
ಐದು ಬಣ್ಣದ, ಗಿಳಿಯು ಇರುವುದು ॥ ೫ ॥

ಆರು—ಆರು ಎಂಬುದು, ನೊಣದಕಾಲುಗಳ್।
ಆರು * ಕಡಿಗಳು ಚೇಳಿಗಿರುವವು ॥ ೬ ॥

ಏಳು—ಏಳು ಎಂಬವು, ವಾರವಿರುವವು।
ಏಳು ಬಣ್ಣಗಳ್, * ಬಿಲ್ಲಿಗಿರುವವು ॥ ೭ ॥

ಎಂಟು—ಎಂಟು ಕಾಲುಗಳ್, ಚೇಳಿಗಿರುವವು।
ಎಂಟು ದಿಕ್ಕುಗಳ್, ಮೆರೆಯು ತಿರುವವು ॥ ೮ ॥

ಇಷ್ಟಾದ ಬಳಿಕ ಸಪ್ತಸ್ವರದೊಳಗೆ, ೮ ಅಂಕಿಗಳನ್ನು, ಎಲ್ಲ ವಿದ್ಯಾರ್ಥಿಗಳು ಗಾಯನ ಕಲಾಭಿಜ್ಞ ವಿದ್ಯಾರ್ಥಿ ಶಿಕ್ಷಕರೊಡನೆ, ರಾಗದ ಕೆಟ್ಟಗೆ ಪಿಟಿಲುಗಳೊಂದಿಗೆ ಏಕತಾಳದಿಂದ ಒಮ್ಮೆ ಯೆಥಾಸ್ಥಿತವಾಗಿ ಒಮ್ಮೆ ತಿರುವು ಮುರುವು, ಸುಸ್ವರದಿಂದ ಅಂದರು.

---

* ಚೇಳಿನ ಬಾಲಕ್ಕೆ ೬ ಕಡಿಗಳಿರುತ್ತವೆ,
* ಕಾಮನ ಬಿಲ್ಲು.

ಇಲ್ಲಿಗೆ ಮೊದಲನೇ ದಿವಸದ ಕೆಲಸವು ಮುಗಿಯಿತು. ಮರುದಿನ ಪೂರ್ವ ಸಂಕೇತ ಪ್ರಕಾರ ಮಧ್ಯಾನ್ಹದ ೧೦ ಘೆಂಟೆಗೆ ಸರಿಯಾಗಿ ಸಭೆಯು ಕೆಲಸವು ಪುನಃ ಪ್ರಾರಂಭವಾಯಿತು.

ಎಲ್ಲಕ್ಕೂ ಮೊದಲು ಭೂಗೋಲದ ಪಾಠವು ಪ್ರಾರಂಭವಾಯಿತು. ಆ ಬಗ್ಗೆ ಮಾಡಿದ ಸೂಚನೆಗಳು—

ಈ ವಿಷಯವನ್ನು ಕಲಿಸುವಾಗ್ಗೆ ಮುಖ್ಯವಾಗಿ ೩ ಭಾಗಗಳನ್ನು ಮಾಡಬಹುದು. ಮೊದಲನೇ ಭಾಗದಲ್ಲಿ ವಸ್ತು ಪಾಠ ಶಿಕ್ಷಣದಂತೆ ಹುಡುಗರನ್ನು ಊರ ಹೊರಗೆ ಕರೆದು ಕೊಂಡು ಹೋಗಿ ಊರಸುತ್ತಲಿರುವ ಭೂಮಿಯ ಪ್ರಾಕೃತಿಕ ಸ್ವರೂಪದ ಸಂಬಂಧದ ಜ್ಞಾನವನ್ನೂ ಮಳೆ ಮುಂತಾದ ಸೃಷ್ಟಿವಿಚಮತ್ಕಾರಗಳ ಸಂಬಂಧದ ಜ್ಞಾನವನ್ನೂ ಮಾಡಿಕೊಡುವದು ಬರುತ್ತದೆ. ಮತ್ತು ಈ ವಿಷಯವನ್ನು ತಿಳಿಸುವಾಗ್ಗೆ ಪ್ರತ್ಯಕ್ಷ ವಸ್ತುಗಳಿಂದ ಅಂತರ ದಿಕ್ಕು ಸ್ಕೇಲುಗಳ ಜ್ಞಾನವಾಡಿಕೊಟ್ಟು ನಕಾಶ ತೆಗೆಯಲಿಕ್ಕೆ ಕಲಿಸತಕ್ಕದ್ದು.

ಈ ಕ್ರಮದಿಂದ ವಿದ್ಯಾರ್ಥಿಯು ಇರುವ ಊರ ಭೂಗೋಲ ಜ್ಞಾನವನ್ನು ಮಾಡಿಕೊಡಬೇಕು.

೨ನೇ ಭಾಗ:—ತಾಲೂಕಿನ ಅಥವಾ ಜಿಲ್ಲೆಯ ಭೂಗೋಲದ ಜ್ಞಾನ ಮಾಡಿಕೊಡುವದು ಈ ಭಾಗದಲ್ಲಿ ಬರುತ್ತದೆ. ಹಿಂದಿನ ಭಾಗದಲ್ಲಿ ಹೇಳಿದಂತೆ ಇಡೀ ತಾಲೂಕಿನ ಅಥವಾ ಜಿಲ್ಲೆಯ ಪ್ರದೇಶವನ್ನು ಪ್ರತ್ಯಕ್ಷ ಹುಡುಗರಿಗೆ ತೋರಿಸಿ ಜ್ಞಾನ ಮಾಡಿಕೊಡುವ ಸಂಭವವಿರುವದಿಲ್ಲ. ಆದಕಾರಣ ತಾಲೂಕಿನ ಅಥವಾ ಜಿಲ್ಲೆಯ "ಪ್ರಾಕೃತಿಕ ಸ್ವರೂಪದ ದರ್ಶಕ ಪ್ರತಿಮೆ" (Relief Model) ಯನ್ನೂ ವಾಕ್ಯಗಳನ್ನು ತಿಳಿಸುವ ನಕಾಶವನ್ನೂ ತೋರಿಸಿ ಅವುಗಳ ಯೋಗದಿಂದಲೂ ಹಿಂದೆ ಕಲಿತದ್ದರ ಸಹಾಯದಿಂದಲೂ ಅವರ ಕಲ್ಪನಾಶಕ್ತಿಗೆ ಚಾಲನೆಕೊಟ್ಟು ಆ ಸಂಬಂಧದ ಭೂಗೋಲದ ಜ್ಞಾನವನ್ನೂ ಮಾಡಿಕೊಟ್ಟು ಅವುಗಳ ನಕಾಶ ತೆಗೆಯಲಿಕ್ಕೆ ಕಲಿಸಿ, ತಯಾರಾದ ನಕಾಶಗಳ ಮೇಲಿಂದ ಪ್ರಾಕೃತಿಕ ಸ್ವರೂಪದ

ಬಗ್ಗೆ ಜ್ಞಾನವಮಾಡಿಕೊಳ್ಳುವ ಸಾಮರ್ಥ್ಯವನ್ನು ಹುಡುಗರಲ್ಲಿ ಉಂಟು ಮಾಡುವದು.

೩ನೇ ಭಾಗ:—ಕಲಿಸುವ ಪ್ರದೇಶದ ನಕಾಶದಲ್ಲಿ ಉತ್ಪನ್ನವಾಗುವ ಖನಿಜ ಉದ್ಭಿಜ್ಜ ಕೈಗಾರಿಕೆಯ ವಿಶೇಷವಾದ ಮಾದರಿಯ ಒಡವೆಗಳು ಮತ್ತು ಆ ಪ್ರದೇಶದೊಳಗಿನ ಸೃಷ್ಟಿ ಸೌಂದರ್ಯದ, ಜನರ, ಇಲ್ಲವೆ ನಾಣ್ಯಗಳ ಚಿತ್ರಗಳು ಇವುಗಳ ಸಹಾಯದಿಂದ ಭೂಗೋಲವನ್ನು ಕಲಿಸುವದು

೨ನೇ ೩ನೇ ಭಾಗಗಳಲ್ಲಿ ವಿವರಿಸಿದ ವಿಷಯವನ್ನು ಕಲಿಸುವಾಗ್ಗೆ ಭೂಗೋಲದ ಪುಸ್ತಕದಲ್ಲಿ ಹೇಳಿದಂತೆ ಮೇರೆ, ಭಾಗ, ಆಖಾತ, ಭೂಶಿರ, ಪಟ್ಟಣ ಮುಂತಾದವುಗಳನ್ನು ಒಂದರ ಹಿಂದೊಂದು ನಕಾಶದಲ್ಲಿ ತೋರಿಸುತ್ತ ಹೋಗುವದು ಸರಿಯಲ್ಲ. ಅದರೆ ಕಲಿಸುವ ಪ್ರದೇಶದ ಪ್ರಾಕೃತಿಕ ಸ್ವರೂಪಜ್ಞಾನವನ್ನು ಮೊದಲು ಮಾಡಿಕೊಟ್ಟು ಅದರ ಸಹಾಯದಿಂದ ಮಳೆ, ಬೆಳೆ, ಹವೆ ಮುಂತಾದ ಸೃಷ್ಟಿಚಮತ್ಕಾರಗಳು ಇವುಗಳಿಂದುಂಟಾಗುವ ಕೈಗಾರಿಕೆಯ ಕೆಲಸಗಳು ಖನಿಜ, ಉದ್ಭಿಜ್ಜ ಮುಂತಾದ ಕೈಗಾರಿಕೆಯ ಮೂಲಕ ನಡೆಯುವ ವ್ಯಾಪಾರ ಉದ್ಯೋಗಗಳು, ಜನರ ಸ್ವಭಾವ ಆಹಾರ ರೀತಿ ನಡಾವಳಿಗಳು, ರಾಜ್ಯರೀತಿ ಮುಂತಾದವುಗಳನ್ನು ಕ್ರಮದಿಂದ ಒಂದಕ್ಕೊಂದು ಸಂಬಂಧಿಸಿ ವಿದ್ಯಾರ್ಥಿಗಳ ವಿಚಾರಶಕ್ತಿಯು ಬೆಳೆಯುವಂತೆಯೂ ಸ್ಮರಣಶಕ್ತಿಗೆ ಅನುಕೂಲವಾಗುವಂತೆಯೂ ಶಿಕ್ಷಣವನ್ನು ನಡಿಸತಕ್ಕದ್ದು.

ಈ ತತ್ವಗಳನ್ನನುಸರಿಸಿ ಸಿದ್ಧಪಡಿಸಿದ "ಸಹ್ಯಾದ್ರಿ" ಯ ಭೂಗೋಲದ ಪಾಠವು ಕೆಳಗಿನ ನೋಟಗನುಸರಿಸಿ ೩ನೇ ವರ್ಷದ ವಿದ್ಯಾರ್ಥಿಯಾದ "ಬರದವಾಡ" ಇವರಿಂದ ಕಲಿಸಿ ತೋರಿಸಲ್ಪಟ್ಟಿತು.

ಸಹ್ಯಾದ್ರಿ ಪರ್ವತವು.

೪ನೇ ಇಯತ್ತೆ.

ವೇಳೆ—೪೫ ಮಿನಿಟು.

ಉದ್ದೇಶ :—ಸಹ್ಯಾದ್ರಿಯ ಬಗ್ಗೆ ವಿಶೇಷ ಮಾಹಿತಿ.

ಉಪಕರಣಗಳು: - ಹಿಂದುಸ್ಥಾನದ ನಕಾಶ, ದಕ್ಷಿಣ ಹಿಂದುಸ್ತಾನದ ಪ್ರಾಕೃತಿಸ್ವರೂಪ ದರ್ಶಕ ಪ್ರತಿಮಾ ಪೊಟಗಟ್ಟಿಗೆ, ತ್ರಾಪ ಶಿಲೆಯ ಥರಗಳನ್ನು ತೋರಿಸುವ ಚಿತ್ರ. (ವಾವಟಗೆಯ ಶಿಲೆ,) ಕರೆ ಉಸಬು ಎರೇಮಣ್ಣು, ಕಬ್ಬಿಣದ ಕಲ್ಲು, ಕೆಂಪುಮಣ್ಣು.

ಭಾಗ.	ವಿಷಯ.	ಕ್ರಮ
ಸ್ಥಾನ	ಮುಂಬೈ ಇಲಾಖೆಯ ದಕ್ಷಿಣಭಾಗದಲ್ಲಿ ಪಶ್ಚಿಮ ದಿಕ್ಕಿಗೆ ಸಾತಪುಡಾದಿಂದ ನೀಲಗಿರಿಯವರೆಗೆ ಹಬ್ಬಿರುತ್ತದೆ.	ಮುಂಬೈ ಇಲಾಖೆಯೊಳಗಿನ ಮುಖ್ಯಪರ್ವತಗಳನ್ನು ಕೇಳಿ ಸಹ್ಯಾದ್ರಿ ಪರ್ವತವನ್ನು ತೋರಿಸಲಿಕ್ಕೆ ಹೇಳುವದು. ಮುಂಬೈ ಇಲಾಖೆಯು ಯಾವ ಭಾಗದಲ್ಲಿ ? ಯಾವ ದಿಕ್ಕಿಗೆ ? ಎಲ್ಲಿಂದ ಎಲ್ಲಿಯವರೆಗೆ ಹಬ್ಬಿರುತ್ತದೆಂಬದನ್ನು ಕೇಳಿ ಹೇಳಿಸುವದು.
ಮೇರೆಗಳು	ಪೂರ್ವಕ್ಕೆ, ದೇಶ, ದಕ್ಷಿಣಮಹಾರಾಷ್ಟ್ರ ಮೈಸೂರಪ್ರಾಂತ.	ಈ ಮೇರೆಗಳನ್ನು ಹುಡುಗರಿಂದಲೇ ನಕಾಶದ ಸಹಾಯದಿಂದ ಹೊರಡಿಸುವದು.

ಪಶ್ಚಿಮಕ್ಕೆ ಕೊಂಕಣ, ಗೋವೆ, ಕಾರವಾರ, ಮಂಗಳೂರು.

(೧) ಸಮುದ್ರದ ದಂಡೆಯಿಂದಲೂ ಸರಾಸರಿ ೪೦ ಮೈಲು ದೂರವಾಗಿ, ಸಾಧಾರಣ ಮಾನದಿಂದ ಸಮುದ್ರಕ್ಕೆ ಸಮಾಂತರವಾಗಿ, ೪೦೦ ಮೈಲು ಉದ್ದವಾಗಿ ಹಬ್ಬಿರುವದು.

(೨) ಎತ್ತರ–ಸಮುದ್ರ ಸಪಾಟಿಯಿಂದ ಇದರ ಎತ್ತರವು ಸರಾಸರಿ ಮಾನದಿಂದ ಮೂರುಸಾವಿರ ಫೂಟು ಮತ್ತು ಧಾರವಾಡಕ್ಕಿಂತ ೪೦೦ ಫೂಟು ಎತ್ತರವದೆ. ಅದರ ಪಶ್ಚಿಮದ ಇಳುಕಲು ಬಹಳ, ಪೂರ್ವದ್ದು ಕಡಿವೆ.

(೩) ನಾಶಿಕದ ಹತ್ತರ ಬಹಳ ಅಂದರೆ ಅರಬೀ ಸಮುದ್ರವು ಮುಂಬೈ ಇಲಾಖೆಯ ದಕ್ಷಿಣಭಾಗದ ಪಶ್ಚಿಮಕ್ಕೆ ದಕ್ಷಿಣೋತ್ತರ ಸ್ವಲ್ಪ ಎಡಕ್ಕೆ ಒಲಿದು ಹಬ್ಬಿದ್ದನ್ನೂ ಸಹ್ಯಾದ್ರಿಯಾದರೂ ದಕ್ಷಿಣೋತ್ತರ ಸ್ವಲ್ಪ ಎಡಕ್ಕೆ ಒಲಿದು ಹಬ್ಬಿದ್ದನ್ನೂ ಹುಡುಗರಿಂದ ಹೊರಡಿಸಿ ಸಮುದ್ರಕ್ಕೆ ಸಹ್ಯಾದ್ರಿಯು ಸಮಾಂತರವದೆ. ಎಂಬದನ್ನು ತಿಳಿಸುದು. ಧಾರವಾಡದಿಂದಲೂ ಸಮುದ್ರದಿಂದಲೂ ಸಹ್ಯಾದ್ರಿಯ ಅತರವನ್ನು ಅಳಿಸಿರಿ. ಇದರಂತೆ ಧಾರವಾಡ ಉತ್ತರಕ್ಕೂ ದಕ್ಷಿಣಕ್ಕೂ ಇರುವ ಅದರ ಉದ್ದಳತೆಯನ್ನು ಅಳೆಯಿಸು, ಇದರ ಸಹಾಯದ ಹುಡುಗರಿಂದ ನಕಾಶವನ್ನು ತೆಗೆಯಿಸು.

ಪ್ರಾಕೃತಿಕ ಸ್ವರೂಪದರ್ಶಕ ಪ್ರತಿಮೆಯಮೇಲಿಂದ ಸಮುದ್ರದಿಂದ ಪರ್ವತದ ಎತ್ತರವನ್ನೂ ಧಾರವಾಡದ ಎತ್ತರವನ್ನೂ ಅಳೆದು, ಎತ್ತರವನ್ನು ಹೊರಡಿಸುವದು, ಇದರಂತೆ ವಿಜಾಪೂರವು ೨೦೦೦ ಫೂಟು, ಸಾತಾರೆ ೨೨೦೦ ಫೂಟು, ನಾಶಿಕ ೨೦೦೦ ಫೂಟು ಎತ್ತರವದೆಂಬದನ್ನು ಅಳೆಯಿಸಿ, ಅವುಗಳಿಂದ ಎತ್ತರದ ನಕಾಶವನ್ನು ತೆಗೆಯಿಸಿ ಪೂರ್ವ ಪಶ್ಚಿಮದ ಇಳುಕಲು ಹೊರಡಿಸುವದು.

ಇದರ ಅಳತೆಯನ್ನು ಮಾಡಿಸಿ ಎಷ್ಟು, ಎತ್ತರ ಆಗುತ್ತದೆಂದು

೫೨೫೦ ಫೂಟು ಎತ್ತರ, ಅದಕ್ಕೆ ಕಳಸುಬಾಯಿ ಶಿಖರವೆಂಬ ಹೆಸರುಂಟು. ಅದಕ್ಕೆ ಮಹಬಳೇಶ್ವರದ ಹತ್ತರಾದರೂ ಉಳಿದ ಕಡೆಯಗಿಂತಹೆಚ್ಚು ಎತ್ತರವದೆ.

ಶಾಖೆಗಳು:—ಚಾಂದವಡದಗುಡ್ಡ, ಅಜಿಂಟದಗುಡ್ಡ, ಶಂಭೂಮಹಾದೇವನಗುಡ್ಡ, ಜೋತಿಬಾನಗುಡ್ಡ—

ಘಟ್ಟದ ಮಾರ್ಗಗಳು—

(೧) ಬೋರಘಾಟ (೨) ಅಂಬಿಘಾಟ ಕೊಲ್ಹಾಪುರದಿಂದ ರತ್ನಾಗಿರಿಗೆ ಹೋಗುವ ಮಾರ್ಗದಲ್ಲಿ (೩) ತಿನ್ಯೆಘಾಟ ಬೆಳಗಾವಿಯಿಂದ ಗೋವೆಗೆ ಹೋಗುವ ಮಾರ್ಗದ ಮಾರ್ಗದಲ್ಲಿ (೪) ಆರಬೈಲಘಾಟ (೫) ಹೊರಡಿಸುವದು. ಈ ಪರ್ವತದಲ್ಲಿ ಇದು ಬಹಳ ಎತ್ತರವದೆ ಆ ದ್ದರಿಂದ ಇದಕ್ಕೆ ಶಿಖರವೆನ್ನುವರು.

ಸಹ್ಯಾದ್ರಿಯ ಪೂರ್ವ ಪಶ್ಚಿಮಗಳಿಗೆ ಇರುವ ಮುಖ್ಯ ಮುಖ್ಯ ಪಟ್ಟಣಗಳನ್ನು ಕೇಳುವದು. ಈ ಗುಡ್ಡದ ಕಡೆಯ ಗ್ರಾಮದವರು ಆ ಕಡೆಗೆ ಹೋಗಬೇಕಾದರೆ ಇಳವು ಇದ್ದಲಿ ಹಾದು ಹೋಗುತ್ತಾರೆ; ಆದಕ್ಕೆ ಅಲ್ಲಿ ಮಾರ್ಗಗಳನ್ನು ಮಾಡಿದ್ದಾರೆ, ಇವುಗಳಿಗೆ ಘಟ್ಟದ ಮಾರ್ಗಗಳೆನ್ನುತ್ತಾರೆ. ಇಂಥ ಘಟ್ಟದ ಮಾರ್ಗಗಳು ಎಲ್ಲೆಲ್ಲಿ ಅವೆ ಎಂಬದನ್ನು ನಕಾಶದ ಮೇಲಿಂದ ತಿಳಿಸುವದು.

ಈ ಪರ್ವತದಿಂದ ಪೂರ್ವಕ್ಕೆ ಅಲ್ಲಲ್ಲಿಗೆ ಹಬ್ಬಿದಂಥ ಸಣ್ಣ ಸಣ್ಣ ಪರ್ವತಗಳನ್ನು ನಕಾಶದಲ್ಲಿ ತೋರಿಸಿ ಶಾಖೆ ಎಂಬದನ್ನು ತಿಳಿಸುವದು.

	ದೇವಿಮನಿಘಾಟ (ಓ) ಮಲ್ಲಿಮನಿಘಾಟ ಮುಂತಾದವುಗಳು.	
ಮಳೆ	ಇಲ್ಲಿ ಮಳೆ ಬಹಳವಾಗುತ್ತದೆ. ಇದರ ಪೂರ್ವಭಾಗಕ್ಕೆ ಮಳೆ ಕಡಿಮೆ.	ಮಲ್ಲಪ್ಪಗಡದಲ್ಲಿ ಮಳೆ ಬಹಳ ಆಗುತ್ತದೆಂಬದನ್ನು ಹೊರಡಿಸುವದು ಮತ್ತು ನಮಗೆ ಪಶ್ಚಿಮದಿಂದ ಮಳೆ ಬರುತ್ತದೆಂಬದನ್ನೂ ಹೊರಡಿಸಿ, ಈ ಪರ್ವತವು ಸಮುದ್ರಕ್ಕೆ ಸಮೀಪವಿರುವದರಿಂದ ಮೋಡಗಳನ್ನು ಮುಂದೆ ಬಿಡದೆ ಅಲ್ಲೇ ಎಳಕೊಳ್ಳುತ್ತದೆಂದು ತಿಳಿಸುವದು.
ನದಿಗಳು	ಗೋದಾವರಿ, ಕೃಷ್ಣಾ ಇವು ಪೂರ್ವಕ್ಕೆ ಹರಿಯುತ್ತವೆ ಶರಾವತಿ ನದಿಯು ಪಶ್ಚಿಮಕ್ಕೆ ಹರಿಯುತ್ತದೆ.	ಎತ್ತರದ ಸ್ಥಳದಲ್ಲಿ ನೀರು ಹಾಕಿದರೆ ಆ ನೀರು ಎರಡೂ ಕಡೆಗೂ ಉರುಳಿ ಹರಿದು ಹೋಗುತ್ತದೆ. ಅದರಂತೆ ಈ ಪರ್ವತದ ಮೇಲೆ ಮಳೆ ಬೀಳಲು ಎರಡೂ ಕಡೆ ಹರಿದು ಹೋಗುತ್ತದೆ. ಅದರಿಂದ ಹೊಳೆಗಳುಂಟಾಗುತ್ತವೆ. ಈ ಪರ್ವತವು ಪೂರ್ವಕ್ಕೆ ಕಡಿಮೆ ಇಳುಕಲಾಗಿ ಸಮುದ್ರಕ್ಕೆ ದೂರವಾಗಿರುವದರಿಂದ ಪೂರ್ವಕ್ಕೆ ಹೊಳೆಗಳು ಬಹಳ; ಅದರೆ ಪಶ್ಚಿಮಕ್ಕೆ ಇಳುಕಲು ಬಹಳ ಇದ್ದು ಸಮುದ್ರ ಸಮೀಪ ಇರುವದರಿಂದ ಬಿದ್ದ ನೀರು ಕೂಡಲೆ ಸಮುದ್ರಕ್ಕೆ ಕೂಡುತ್ತದೆ. ಅದರಿಂದ ದೊಡ್ಡ ನದಿಗಳು ಇಲ.

ತೇಗು, ಮತ್ತಿ, ಹೊನ್ನಿ, ಬಿದರು ಮುಂತಾದ ಇಮಾರತಿಯ ಗಿಡಗಳೂ ಶ್ರೀಗಂಧವೂ ಬಹಳ ಬೆಳೆಯುತ್ತವೆ.

ಹವೆಯು

ಇಲ್ಲಿಯ ಹವೆಯು ರೋಗಕಾರಕವಾದದ್ದು. ಬೇಸಿಗೆಯಲ್ಲಿ ಮಾತ್ರ ಕೆಲಕೆಲವು ಕಡೆಯಲ್ಲಿ ಅಂದರೆ ಮಹಾಬಳೇಶ್ವರ, ಮಾಥೆರಾನ, ಪುರಂಧರ, ಸಪ್ತಶೃಂಗ ಎಂಬ ಎತ್ತರದ ಸ್ಥಳಗಳು ಆರೋಗ್ಯಕಾರಕವಾಗಿರುತ್ತದೆ.

ಮಳೆ ಬೀಳುವದರಿಂದ ಇಲ್ಲಿ ಗಿಡಗಳು ಬಹಳ ಬೆಳೆಯುತ್ತವೆ. ನವುಗೆ ತೊಲೆಗಳು ಹಲ್ಯಾಳದಿಂದ ಬರುತ್ತವೆ. ಮತ್ತು ಶ್ರೀಗಂಧವು ಮೈಸೂರ ಪ್ರಾಂತದೊಳಗೆ ಜಲೋದು ಹುಟ್ಟುತ್ತದೆ.

ಗುಡ್ಡದ ಮೇಲೆ ಮಳೆಯು ಬಹಳ ಆಗುವದರಿಂದ ತಗ್ಗು ಇದ್ದಲ್ಲಿ ನೀರು ನಿಲ್ಲುತ್ತದೆ. ಮತ್ತೂ ಗಿಡಗಳು ಬಹಳ ಬೆಳೆದಿರುವದರಿಂವ ಅವುಗಳ ಎಲೆಗಳು ನೀರಲ್ಲಿ ಉದುರಿ ಕೊಳೆತು ಕೆಟ್ಟ ಹವೆಯು ಉತ್ಪನ್ನವಾಗುತ್ತದೆ. ಇದನ್ನು ಮಲ್ಲಾಡದವರ ಪ್ರಕೃತಿಗೂ, ಬೆಳವಲ ಸೀಮೆಯವರ ಪ್ರಕೃತಿಗೂ ಸರಿ ಹಚ್ಚಿ ತೋರಿಸುವದು. ಮಲ್ಲಾಡದ ಜನರ ಮೈಕಟ್ಟೆಯು ಸಪ್ಪೆ ಕಳೆಯುಳ್ಳದ್ದು ಇರುತ್ತದೆ. ಬೆಳವಲ ಸೀಮೆಯವರು ಘಟ್ಟಿಯಾಗಿ ಮೈಕಟ್ಟೆಯ ಮೇಲೆ ಉತ್ತಮ ಕಳೆಯುಳ್ಳವರಾಗಿರುತ್ತಾರೆಂಬದನ್ನು ಹೊರಡಿಸಿ ತಿಳಿಸುವದು.

(೨) ಬಹಳ ಎತ್ತರದ ಸ್ಥಳದ ಹವೆಯು ತಂಪು ಇರುತ್ತದೆ. ಅದರಿಂದ ಬೇಸಿಗೆಯಲ್ಲಿ ಶ್ರೀಮಂತರು ಈ ಪರ್ವತದ ಕೆಲಕೆಲವು ಎತ್ತರದ ಸ್ಥಳಗಳನು ನೋಡಿ ಅಲ್ಲಿಯ ಗಿಡಗಳನ್ನೆಲ್ಲಾ ಕಡಿದು ಬಂಗಲೆ

ಪ್ರಾಣಿಗಳು	ಕಾಡಾಳಿಲು, ಕಾಡಕೋಣ, ಕಾಡೆಮ್ಮೆ, ಚಿಗರಿ ಮುಂತಾದ ಉದ್ಬಿಜ್ಜಾಹಾರಿಗಳೂ, ಹುಲಿ, ಕರಡಿ, ಚಿಚರ್ಕು, ತೋಳ ಮುಂತಾದ ವನ್ಯ ಪಶುಗಳೂ, ಅಡವೀ ಕೋಳಿ ಮೊಲ ಮುಂತಾದ ಪ್ರಾಣಿಗಳೂ ಇರುತ್ತವೆ.
ಖನಿಜಗಳು	ಅಲ್ಲಲ್ಲಿ ಕಬ್ಬಿಣದ ಕಲ್ಲುಗಳು—ಬೆಳಗಾಯಿಂದ ಪುಣಿಯ ವರೆಗೆ ಟ್ರಾಪ (ಪಾವಟಿಗೆ) ಶಿಲೆಗಳು ಹಬ್ಬಿರುತ್ತವೆ. ಇದಕ್ಕೆ ವಜ್ರದುಂಡೀ ಕಲ್ಲು ಅನ್ನುವರು.

ಗಳನ್ನು ಕಟ್ಟಿಸಿಕೊಂಡು ಅಲ್ಲಿ ಇರುತ್ತಾರೆ. ಬೇಸಿಗೆಯಲ್ಲಿ ಮುಂಬಯಿಯ ಗವರ್ನರರು ಮಹಾಬಳೇಶ್ವರದಲ್ಲಿ ಇರುತ್ತಾನೆ.

ಗುಡ್ಡದಲ್ಲಿ ಮಳೆ ಆಗುವದರಿಂದ ಹುಲ್ಲುಬೆಳೆಯುತ್ತದೆ; ಆ ಹುಲ್ಲುತಿಂದು ಚಿಗರೆ ಮುಂತಾದ ಪ್ರಾಣಿಗಳು ಜೀವಿಸುತ್ತವೆ; ಇಂಥ ಪ್ರಾಣಿಗಳನ್ನು ತಿಂದು ಹುಲಿ ಮುಂತಾದ ಪ್ರಾಣಿಗಳು ವಾಸಮಾಡುತ್ತವೆ. ಮತ್ತು ಅಡವಿಯೂ ದಟ್ಟ ಇರುವದರಿಂದ ಇರಲಿಕ್ಕೆ ಅವಕ್ಕೆ ಆಶ್ರಯವಾಗುತ್ತದೆ. ಆದ್ದರಿಂದ ಸಾಹೇಬರು ಬೇಟೆಯಾಡಲಿಕ್ಕೆ ಹೋಗುತ್ತಾರೆ.

ಕಬ್ಬಿಣದ ಕಲ್ಲುಗಳನ್ನು ತೋರಿಸುವದು. ಮತ್ತು ಕೆಂಪು ಮಣ್ಣಿನಲ್ಲಿಗೆ ಇಂಥ ಕಲ್ಲುಗಳು ದೊರೆಯುತ್ತವೆಂಬದನ್ನು ತೋರಿಸಿ ತಿಳಿಸುವದು. ತೇಗೂರಲ್ಲಿ ಮುಂಚೆ ಇದ್ದ ಕಬ್ಬಿಣದ ಕಾರಖಾನೆಯನ್ನು ಕೇಳುವದು.

ಟ್ರಾಪಶಿಲೆಯನ್ನು ತೋರಿಸಿ ಅದರ ರಚನೆಯನ್ನು ತಿಳಿಸುವದು ಇದು ಪಾವಟಿಗೆಯಂತೆ ನೆಟ್ಟಗೆ ನಿಂತಿದ್ದರಿಂದ ಶಿವಾಜಿಯು ಇಂಥ ಗುಡ್ಡಗಳ ತುದಿಯಲ್ಲಿ ದುರ್ಗಗಳನ್ನು ಕಟ್ಟಿಸಿದನು. ಅವುಗಳಲ್ಲಿ ಸಿಂಹಗಡ ರಾಯಗಡ ಮುಂತಾದವುಗಳು ಪ್ರಸಿದ್ಧ ಅವೆ.

ಭೂಮಿಯು	(೧) ಸಹ್ಯಾದ್ರಿಗಳು ಕರ್ನಾಟಕ ಮತ್ತು ಮಹಾರಾಷ್ಟ್ರ ದೇಶಗಳ ಭೂಮಿಯು ಕೆಂಪು ಮತ್ತು ಫಲದ್ರೂಪವಾಗಿರುತ್ತದೆ.	ಟ್ರ್ಯಾಪಶಿಲೆಗಳು ಶಿಥಿಲಗಿರುವದರಿಂದ ಗುಡ್ಡದ ಮೇಲೆ ಮಳೆ ಬಿಗಿಲಾಗಿ ಈ ಕಲ್ಲುಗಳು ಕೊರೆದು ಅದರ ಪುಡಿಯು ನೀರಿನ ಪ್ರವಾಹದ ಗುಂಟ ಹರಿದು ಬರುತ್ತದೆ. ಇದಕ್ಕೆ ಕೃಷ್ಣಾ ನದಿಯು ಉಸಬುಸ್ಸು ತೋರಿಸುವದು; ಮತ್ತು ಅದೇ ಉಸಬು ಅಫವಾ ಅದರ ಪುಡಿಯು ಮಣ್ಣಿನಲ್ಲಿಗೆ ಕೂಡಿ ಕರೀ ಭೂಮಿಯಾಗಿರುತ್ತದೆ.

ಉ ಪ ಸಂ ಹಾ ರ.

(೧) ಸಹ್ಯಾದ್ರಿ ಪರ್ವತದ ಪೂರ್ವಶ್ರೇಣಿ ಯಾವದು?
೨) ಸಹ್ಯಾದ್ರಿ ಪರ್ವತವು ಯಾಗೆ ಹಬ್ಬಿಯದೆ?
೩) ಸಹ್ಯಾದ್ರಿಯು ಧಾರವಾಡಕ್ಕಿಂತ ಎಷ್ಟು ಹೊಸು ಎತ್ತರವದೆ?
೪) ಘಟ್ಟದ ಮಾರ್ಗಗಳೆಂದರೇನು?
೫) ಮುಖ್ಯ ಮುಖ್ಯ ಘಟ್ಟದ ಮಾರ್ಗಗಳ್ಯಾವವು?
೬) ಹೊಳೆಗಳು ಯಾವವು?
೭) ಪೂರ್ವಕ್ಕೆ ಹೊಳೆಗಳು ಇರುವ ಕಾರಣವೇನು?

(ಅ) ಇಲ್ಲಿ ಹುಟ್ಟುವ ಅತ್ಯುಪಯುಕ್ತವಾದಂಥ ಗಿಡಗಳು ಯಾವವು?

(ಆ) ಇಲ್ಲಿಯ ಹವೆಯು ಯಾವಪ್ರಕಾರದ್ದಾಗಿರುವದು?

(೧೦) ಆರೋಗ್ಯಕರವಾದ ಸ್ಥಳಗಳು ಯಾವವು? ಯಾಕೆ?

(೧೧) ಇಲ್ಲಿ ಯಾವ ಯಾವ ಹಿಂಸ್ರ ಪ್ರಾಣಿಗಳು ಅವೆ? ಯಾಕೆ?

(೧೨) ಈ ಪರ್ವತದ ಹೊಟ್ಟೆಯಲ್ಲಿ ಶಿಗುವಂಥಾ ಮುಖ್ಯ ಖನಿಜಗಳು ಯಾವವು?

(೧೩) ಸಹ್ಯಾದ್ರಿಗೂ ಕರ್ನಾಟಕವೆಂಬ ಹೆಸರಿಗೂ ಇರುವ ಸಂಬಂಧವನ್ನು ಹೇಳು?

B. S. Kulkarni,
ಫಸ್ಟ್ ಆರ್ಟ್ ಮಾಸ್ತರ ಟ್ರೇನಿಂಗ ಕಾಲೇಜ ಧಾರವಾಡ

ಶಾಲಾಪತ್ರಿಕೆ.

ಪದ್ಯಂ.

ಪ್ರಥುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ತಪ್ತ ಮುಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರ ಮುಂ ಪುದ್ರಿಸಿ ॥
ಪ್ರಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುಮೈ ।
ದಯೆಯಿಂದೋಷಪತಿಪ್ಪ ವೇಳ್ವುದುಬುಧರ್ಜ್ಞಾನಾಭಿವೃದ್ಧಿ ಪ್ರಯರಿ ॥೯॥

ಪುಸ್ತಕ ೩೯] ಜುಲೈ ೧೯೦೩ [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

(ಶಿಕ್ಷಕರ ದ್ವಿತೀಯ ಸಮ್ಮೇಲನದಲ್ಲಿ ನಡೆದ ವಿಷಯುಗಳು, ಹಿಂದಿನ ಅಂಕದಿಂದ ಮುಂದೆ ಸಾಗಿದ್ದು.)

ಹಿಂದಿನ ಅಂಕದಲ್ಲಿ ಹೇಳಿದಂತೆ ಭೂಗೋಲದ ಪಾಠವು ಮುಗಿದ ಬಳಿಕ, ೫ನೇ ವರ್ಷದ ವಿದ್ಯಾರ್ಥಿಯಾದ "ವಸ್ತ್ರದ" ಇವರು ೫ನೇ ಇಯತ್ತೆಗೆ 'ಸ್ವರಗೈದವನಿತರೊಳ್' ಎಂಬ ಕವಿತೆಯನ್ನು ಕಲಿಸಿ ತೋರಿಸಿದರು.

ಭಾಷಾವಿಷಯವನ್ನು ಕಲಿಸುವವಗ್ಗೆ ಅನುಸರಿಸತಕ್ಕ ಸೂಚನೆಗಳು ಯಾವವಂದರೆ :—

೧. ಮನುಷ್ಯನು ಜ್ಞಾನಸಂಪಾದನೆ ಮಾಡುವದು ಅವಶ್ಯವಾಗಿರುವಂತೆ, ಆ ಜ್ಞಾನವನ್ನು ವ್ಯಕ್ತಪಡಿಸುವ ಸಾಧನವಾದ ಭಾಷೆಯನ್ನು ಚೆನ್ನಾಗಿ ಅರಿತುಕೊಳ್ಳುವದು ಅವಶ್ಯವದೆ. ಗಣಿತಜ್ಞಾನಾಗಲಿಕ್ಕೆ ಸಂಖ್ಯಾಲೇಖನ ಪದ್ಧತಿಯು ಅವಶ್ಯಕವಾಗಿರುವಂತೆ ಜ್ಞಾನಸಂಪಾದನೆಗೆ ಭಾಷೆಯು ಅವಶ್ಯವಾಗಿದೆ.

೨. ಭಾಷಾಜ್ಞಾನವನ್ನು ಬೆಳಿಸಲಿಕ್ಕೆ ಗದ್ಯಪದ್ಯಗಳು, ವ್ಯಾಕರಣ, ಮತ್ತು ನಿಬಂಧಲೇಖನ ಇವು ಮೂರು ಸಾಧನಗಳಾಗಿವೆ. ಅವುಗಳಲ್ಲಿ ಸ್ವಭಾಷೆಯ ಜ್ಞಾನವನ್ನು ಬೆಳಿಸಲಿಕ್ಕೆ ಗದ್ಯಪದ್ಯಗಳು ಪ್ರಾರಂಭದ ಸಾಧನಗಳು. ಕೆಲವು

ಕಾಲ ಸ್ವಭಾವೆಯ ಗದ್ಯಪದ್ಯಗಳ ಅಭ್ಯಾಸವನ್ನು ಯೋಗ್ಯ ಮಾರ್ಗದಿಂದ ನಡಿಸಿ, ಆ ಜ್ಞಾನದ ಮೂಲಕ ಸಾಮಾನ್ಯ ನಿಯಮಗಳನ್ನು ಅರಿತುಕೊಳ್ಳುವದು ೩ನೇ ಮೆಟ್ಟಾಗಿದೆ. ಈ ಸಾಮಾನ್ಯ ನಿಯಮಗಳೆಂದರೆ ವ್ಯಾಕರಣವು. ಈ ಸಾಮಾನ್ಯ ನಿಯಮಗಳನ್ನೂ ಗದ್ಯಪದ್ಯಗಳಲ್ಲಿ ಕಲಿತ ಶಬ್ದ ಜಾಗೂ ಭಾಷಾರೂಢಿ ಮುಂತಾದವುಗಳನ್ನೂ ನಿಬಂಧಲೇ ಖನದಲ್ಲಿ ಉಪಯೋಗಿಸಿ ರೂಢಿಯನ್ನು ಬೆಳಿಸುವದು ೪ನೇ ಮೆಟ್ಟು.

ಭಾಷಾಭ್ಯಾಸವನ್ನು ಸಾಗಿಸುವ ಕ್ರಮವ್ಯಾವದೆಂದರೆ—

೧. (ಅ) ವಿದ್ಯಾರ್ಥಿಗಳ ವಿಚಾರಕ್ಕೆ ಚಾಲನೆ ಕೊಡುವದ ಕ್ಕಾಗಿ ಅವರ ಮುಂದೆ ಯಾವತೊಂದು ವಿಷಯವನ್ನು ಇಡು ವದು

(ಬ) ಗ್ರಂಥಕರ್ತನು ಆ ವಿಷಯದ ಸಂಬಂಧದಿಂದ ಮಾ ಡಿದ ವಿಚಾರಗಳನ್ನು ವಿದ್ಯಾರ್ಥಿಗಳ ಲಕ್ಷಕ್ಕೆ ತಂದುಕೊಡು ವದು.

(ಕ) ಗ್ರಂಥಕರ್ತನು ತನ್ನ ವಿಚಾರಗಳನ್ನು ಸ್ಪಷ್ಟವಾಗಿ ಯೂ ಮನಸಿನಲ್ಲಿ ನಡುವಂತೆಯೂ ಮನೋಹರವಾಗಿಯೂ ಹೇಳುವದಕ್ಕೆ ಯಾವ ವಿಧದ ಭಾಷೆಯನ್ನು ಪ್ರಯೋಗಿಸಿರುವ ನೋ, ಆ ಭಾಷೆಯನ್ನು ವಿದ್ಯಾರ್ಥಿಗಳಲ್ಲಿ ನೆಲೆಗೊಳಿಸುವದು.

೨. ಗ್ರಂಥಕರ್ತನ ವಿಚಾರಗಳನ್ನು ತಿಳುಕೊಳ್ಳುವದಕ್ಕೆ ಮಾಡಬೇಕಾದ ಆಲೋಚನೆಯಿಂದಲೂ, ಅವನು ಪ್ರಯೋ ಗಿಸಿದ ಶಬ್ದಗಳು ಮತ್ತು ಭಾಷಾಪದ್ಧತಿ ಇವುಗಳನ್ನು ತೀ ವ್ರವಾಗಿಯೂ ಸರಿಯಾಗಿಯೂ ಉಪಯೋಗಿಸುವಂತೆ ಜ್ಞಾನ ಮಾಡಿಕೊಳ್ಳುವದರಿಂದಲೂ ವಿದ್ಯಾರ್ಥಿಗಳ ತಿಳುವಳಿಕೆಯು ಬಲಪಡುತ್ತದೆ.

೩. ವ್ಯಾಕರಣದಲ್ಲಿ, ಇಂದ್ರಿಯಗಳ ಸಹಾಯವಿಲ್ಲದೆ ಬ ರೇ ಬುದ್ಧಿಯಿಂದ ತಿಳುಕೊಳ್ಳತಕ್ಕ ಸಂಗತಿಗಳ ವಿಷಯವಾ ಗಿ ವಿಚಾರ ಮಾಡತಕ್ಕದ್ದಿರುವದರಿಂದ, ವಿಚಾರಶಕ್ತಿಯ ಅಂಗಗಳಾದ ಗ್ರಾಹಕಶಕ್ತಿ, ನಿರ್ಣಯಸಾಮರ್ಥ್ಯ, ಅನು ಮಾನಿಕಶಕ್ತಿ ಇವು ವಿಶೇಷವಾಗಿ ಬೆಳೆಯುವವು.

೪. ವಿದ್ಯಾರ್ಥಿಗಳಲಿ ಶಬ್ದಗಳ ಸಂಗ್ರಹವನ್ನು ಬೆಳಿಸು

ಅವುಗಳ ಸರಿಯಾದ ಅರ್ಥವನ್ನು ತಿಳಿಸಿ, ಸಂದಿಗ್ಧವಾದ ಅಭಿಪ್ರಾಯಗಳನ್ನು ವಿವರಿಸಿ, ಅನಿಶ್ಚಿತವಾದಂಥ ಮತ್ತು ಅಸಂಬದ್ಧವಾದಂಥ ವಿಚಾರಗಳನ್ನೂ ಭಾಷೆಯನ್ನೂ ಕುರಿತು ಆಲೋಚಿಸಲಿಕ್ಕೆ ಹಚ್ಚಿ ತಿದ್ದುವದು ಅವಶ್ಯವದೆ. ಅಶಿಕ್ಷಿತ ಜನರ ಮಕ್ಕಳ ಬಗ್ಗೆ ಈ ವಿಷಯದಲ್ಲಿ ಬಹಳ ಜಾಗ್ರತೆ ತೆಪಡಬೇಕಾಗುವದು.

೫. ವಿದ್ಯಾರ್ಥಿಗಳಲ್ಲಿ ಭಾಷೆಯು ಅಭಿರುಚಿ ಹುಟ್ಟುವಂತೆ ಆದರಲ್ಲಿ ಸಾಧಾರಣವಾದದ್ದನ್ನೂ ಉತ್ತಮವಾದದ್ದನ್ನೂ ಅರಿಸುವ ಸಾಮರ್ಥ್ಯವುಂಟಾಗುವಂತೆಯೂ ಆನಂದದಿಂದ ಕಾಲ ಕಳೆಯುವದಕ್ಕೆ ಭಾಷಾಭ್ಯಾಸವು ಒಂದು ಉಪಾಯವೆಂಬ ವಿಚಾರವು ಅವರ ಮನಸಿನಲ್ಲಿ ಬರುವಂತೆಯೂ ಭಾಷಾಭ್ಯಾಸದ ಶಿಕ್ಷಣವು ನಡೆಯತಕ್ಕದ್ದು.

ಈ ಉದ್ದೇಶಗಳು ಸಾಧಿಸುವಂತೆ ತೆಗೆಯಲ್ಪಟ್ಟ ಕವಿತೆಯು ಟಿಪ್ಪಣಿಯು ಕೆಳಗೆ ಮುದ್ರಿಸಲ್ಪಟ್ಟಿದೆ.

ಸೂಚನೆ:—ಮುಂದೆ ಮಾಡರಿಗಾಗಿ ತೋರಿಸಿದ ಕವಿತೆಯ ಟಿಪ್ಪಣಿಯಲ್ಲಿ ತೋರಿಸಿರುವಂತೆ ಭಾಗಗಳನ್ನು ಮಾಡಿ ಪ್ರತಿಬಂದು ಕವಿತೆಯನ್ನು ಕಲಿಸಿದರೆ ವಿದ್ಯಾರ್ಥಿಗಳು ಸ್ವಲ್ಪ ಪಾಠಗಳನ್ನು ಕಲಿತರೂ ಬಹು ಶ್ರುತರಾಗುವರು. ನಮ್ಮ ಟಿಪ್ಪಣಿಯಲ್ಲಿ ವಿವರಣವೆಂಬ ಭಾಗವು ಹೆಚ್ಚು ವಿಸ್ತೃತವಾಗಿದೆಂದು ಕೆಲವರಿಗೆ ತೋರಬಹುದು. ಆದರೆ ವಿದ್ಯಾರ್ಥಿಗಳು ಹಿಂದೆ ಕಲಿತ ಶಬ್ದಗಳ ಅರ್ಥವನ್ನು ನೆನಪಿಡುವದಲ್ಲದೆ, ಬೇಕಾದಾಗ್ಗೆ ಅವುಗಳನ್ನು ವಾಕ್ಯಗಳಲ್ಲಿ ಸರಿಯಾಗಿ ಉಪಯೋಗಿಸಸಮರ್ಥರಾಗಬೇಕೆಂಬದೇ ನಮ್ಮ ಉದ್ದೇಶವಾಗಿದೆ. ಆದದರಿಂದ ಪ್ರತಿಬಿಂದು ಹಳೇ ಶಬ್ದವು ಹಿಂದೆ ಎಲ್ಲಿ ಬಂದದೆಂಬದನ್ನು ನೆನಪಿಗೆ ತಂದುಕೊಡುವದಕ್ಕಾಗಿ 'ಕ್ರಮ'ದಲ್ಲಿ ಹಿಂದೆ ಕಲಿತ ಪದ್ಯಗಳು ಅಥವಾ ವಾಕ್ಯಗಳು ಆಧಾರವಾಗಿ ಕೊಡಲ್ಪಟ್ಟಿವೆ. ಅವುಗಳನ್ನು ವಿದ್ಯಾರ್ಥಿಗಳಿಂದಲೇ ಹೊರಡಿಸತಕ್ಕದ್ದು. ಆರಂಭಕ್ಕೆ ಕೆಲವು ದಿವಸ ಈ ಪ್ರಯತ್ನವು ತ್ರಾಸದಾಯಕವಾಗಿ ತೋರಬಹುದು. ಆದರೆ ರೂಢಿಯಾಗುತ್ತ ಹೋದಹಾಗೆ ಈ ಪದ್ಧತಿಯು ಸುಲಭವೂ ಆನಂದಕರವೂ ಆಗುವದು.

ಉಪಕ್ರಮ :—ಬೆಳಗಾಯಿತೆಂದು ನೀವು ಹ್ಯಾಗೆ ತಿಳಿಯುತ್ತೀರಿ ? ಬೆಳಗಾದಾಗ ಏನೇನು ಲಕ್ಷಣಗಳು ಆಗುತ್ತವೆ ? ಎಂದು ಕೇಳಿ, ಇನ್ನೂ ಅನೇಕ ಲಕ್ಷಣಗಳು ಆಗುತ್ತವೆ. ಅವನ್ನು, ಕನ್ನಡ ಜೈಮಿನಿಭಾರತವನ್ನು ರಚಿಸಿದ ಕವಿಯು, ಬಭ್ರುವಾಹನನು ತನ್ನ ತಂದೆಯಾದ ಅರ್ಜುನನಿಗೆ ಕಪ್ಪಕೊಡಲಿಕ್ಕೆ ಹೋಗುವಾಗಿನ ಪ್ರಾತಃಕಾಲದ ವರ್ಣನೆಯಲ್ಲಿ ಹೇಳಿದ್ದಾನೆ. ಆ ವರ್ಣನೆಯು ನಿಮ್ಮ ಕವಿತೆಯ ಏನೇ ಪುಸ್ತಕದ ಏನೇ ಪಾಠದಲ್ಲಿ ಇದೆ; ತೆಗೆಯಿರಿ, ಎಂದು ವಿಷಯಾರಂಭ ಮಾಡುವದು

ಭಾಗ.	ವಿಷಯ.	ಕ್ರಮ.
(ಅ) ಪೂರ್ವ ಕಥಾನುಸಂಧಾನ	ಅರ್ಜುನನ ಯಜ್ಞದ ಕುದುರೆಯು ತಿರುಗುತ್ತ ತಿರುಗುತ್ತ ಬಭ್ರುವಾಹನನ ರಾಜ್ಯದಲ್ಲಿ ಹೋಗಲು ಬಭ್ರುವಾಹನನು ಅದನ್ನು ಕಟ್ಟಿದನು. ಆಗ ಅವನ ತಾಯಿಯು ಅರ್ಜುನನು ತನಗೆ ಪತಿಯು; ಅತನೊಡನೆ ಯುದ್ಧ ಮಾಡಬೇಡ; ಕುದುರೆಯನ್ನು ಬಿಟ್ಟು ಕಪ್ಪುಗಾಣಿಕೆಯನ್ನು ಕೊಡು, ಎಂದು ಹೇಳಿದಳು. ಬಳಿಕ ಬಭ್ರು	

ವಾಹನನು ರಾತ್ರಿಯಲ್ಲಿ ರಾಜಸಭೆಯನ್ನು ನೆರಿಸಿ ಆಲೋಚನೆ ಮಾಡಿ ಬೆಳಿಗ್ಗೆ ತಂದೆಯಾದ ಅರ್ಜುನನಿಗೆ ಕಪ್ಪ ಕೊಡಲಿಕ್ಕೆ ಹೊರಟನು.

(ಗ) ವಾಚನ

ಸ್ಪಷ್ಟೋಚ್ಚಾರದಿಂದ ಶುದ್ಧವಾಗಿ ಧಾಟಿಯಿಂದ ಅನ್ನಿಸುವದು.
ಶಿಕ್ಷಕನು ಮಾದರಿಗಾಗಿ ಅಂದು ತೋರಿಸುವದು

(ಕ) ಪದಚ್ಛೇದ

ಖಳಜನರ ಮನಂ ಬೆಚ್ಚಿದುದು ಮೊಡದೆಸೆ ಬೆಳಗಿತು ಪಸರಿಸಿದುದು ತಂಗಾಳಿ ಖಗನಿಕರಮುಲಿದೆದ್ದವರಳಿದವು ತಾವರೆಗಳು.

(ಕ) ತಲೆಯ ಮೇಲೆ ಗೆರೆ ಹೊಡೆದಲ್ಲಲ್ಲಿಗೆ ಪದವನ್ನು ಮಾಡಬೇಕು.

ಪದಚ್ಛೇದವನ್ನು ವಿದ್ಯಾರ್ಥಿಗಳಿಂದಲೇ ಮಾಡಿಸುವದು. ತಪ್ಪಿದಲ್ಲಿ ತಿಳಿಸುವದು.

ಮೊರೆದವಾರಡಿ ನೆರೆದವೆಣಿವಕ್ಕಿ ತಾರೆಗಳ್ ಪರಿದವಡಿದಿರ್ದ ಕತ್ತಲೆ ತೊಲಗಿತುತ್ಪಲಂ ಕೊರಗಿದುದು ಜನದ ಕಣ್ಣಿವೆತೆರೆದುದೊದರಿದವು ದೇಗುಲದ ವಾದ್ಯಂಗಳು.

(ಖ) ವಿವರಣೆ

* ಹಳೆ ಶಬ್ದ—ಗೈ (ಧಾ.) ಮಾಡು
ಅನಿತರೊಳ್
ಖಳ

(ಕ) ಪುಣ್ಯಂಗೈಯದ, ಘಾಸಿಯಗೈದುದು
ಅನಿತರೊಳಗೆ ನೃಪರದಂಡು, ಅನಿತು, ಇನಿತು, ಎನಿತು
ಕೃತಿಯಂ ನಿಂದಿಪಖಳಂ, ಖಳರಾಹುನುಂಗಿ

ಮೆಸಂ
ಮೂಡದೆಸೆ = ಮೂಡಣದಿಕ್ಕು
ನಿಕರ
ನೆರೆದವ = ಕೂಡಿದವ
ಎಣೆ[3] = ಜೋಡು
ಪರಿದವ = ಓಡಿದವ, ಇಲ್ಲದಂತಾದವ
ಕೊರಗಿದುದು
ತೆರೆದುದು = ತೆರೆಯಲ್ಪಟ್ಟವು
* ಹೊಸ ಶಬ್ದ—ಸ್ವರ = ದನಿ
ಸ್ವರಗೈ = ದನಿಮಾಡು
ಚರಣಾಯುಧಂ = ಕೋಳಿಗಳು

ಬೆಚ್ಚಿದುದು = ಹೆದರಿತು
ಬೆಳಗಿತು = ಸ್ವಚ್ಛವಾಯಿತು
ಪಸರಿಸಿದುದು

ಮೆನವೆಂಬ ಮರ್ಕಟವೆ
ಅಡರಿಮೂಡಲು ಮಿಂಚೆ, ಶಂಕರನದೆಸೆಮಿಂಚೆ,
ಮಕರ ಕರ್ಕಟಕಮಠ ಶಾಲೂರ ಕಿಂಜುಲಕ ನಿಕರದಿಂ,
ಸಂತೆನೆರೆಯಿತ್ತು, ಬಹಳ ಜನರು ನೆರೆದಿದ್ದಾರೆ,
ಮಿಸುಪನುಣ್ಗದಪಿನೆಣೆ
ಪರಿದೈತುಂದುಣ್ಬುದಾಪೆಣ್ಬಲಿಯ, ಪರಿ = ಓಡು
ಕೊರಗಿದಾನನದೊಣಗಿದಧರದ,
ಪುಸ್ತಕ ಬಹಳ ತೆರೆಯಬೇಡ, ಬಾಗಿಲ ತೆರೆ,
ಸ್ವರ್ (ಧಾ.) ದನಿಮಾಡು; ಸ್ವರ
ಸ್ವರಮಂ ಗೈ ಸ್ವರಗೈ (ಕ್ರಿ. ಸ.)
ಚರಣ = ಕಾಲು, ಆಯುಧ = ಶಸ್ತ್ರ, ಚರಣವೆ ಆಯುಧವಾಗಿ ಉಳ್ಳದ್ದು ಚರಣಾಯುಧಂ (ಬ. ಸ.)
ಬೆಚ್ಚು (ಧಾ.) ಹೆದರು, ಬೆಚ್ಚು=ಹೆದರು, ಬೆಚ್ಚಿನಗಡಿಗೆ
ಬೆಳಗು (ಧಾ.) ಸ್ವಚ್ಛವಾಗು, ಸ್ವಚ್ಛಮಾಡು
ಪ್ರಸಾರ [ಪಸರ] = ಹಬ್ಬುವಿಕೆ, ಪಸರ+ಇಸು = ಪಸರಿಸು; ಪಸರಿಸು (ಧಾ.) ಹಬ್ಬು

ತಂಗಾಳಿ = ತಂಪುಗಾಳಿ

ಖಗ = ಆಕಾಶದಲ್ಲಿ ಗಮಿಸುವಂಥಾದ್ದು (ಪಕ್ಷಿ)

ಉಲಿದು = ಸಪ್ಪಳಮಾಡಿ

ತಾವರೆ = ತಾವರೆಯ ಹೂ
ಮೊರೆದವು = ಝೇಂಕಾರ ಧ್ವನಿಮಾಡಿದವು
ಅರಡಿ = ಗುಂಗೀಹುಳ

ಎಣಿವಕ್ಕಿ = ಜೋಡುಹಕ್ಕಿ; ಚಕ್ರವಾಕಪಕ್ಷಿ
ತಾರೆಗಳ್ = ಚಿಕ್ಕಿಗಳು
ತುಂಬಿದರ್ದ = ತುಂಬಿಕೊಂಡಿದ್ದ
ತೊಲಗಿತು = ದೂರಾಯಿತು
ಉತ್ಪಲಂ = ಕರೀಕಮಲವು, ರಾತ್ರಿಕಮಲ

ತಣ್ಣಿತುಗಾಳಿ ತಂಗಾಳಿ (ಕ. ಸ.) ತಣ್ + ಗಾಳಿ = ತ
ಗಾಳಿ ಣ್ ಕ್ಕೆ ಅನಸ್ವಾರವಾಗಿದೆ.
ಖ = ಆಕಾಶ, ಖೇಚರ, ಗ = ಹೋಗುವಂಥಾದ್ದು,
ಗ, ಅಗ, ಭುಜಗ.
ಉಲಿ (ಧಾ.) ಸಪ್ಪಳಮಾಡು, ಉಲುವು (ಸಪ್ಪಳ) ಜ
ರ ಉಲುವೇ ಇಲ್ಲ.
ತಾಮರಸ [ತಾವರೆ],
ಮೊರೆ (ಧಾ.)ಝೇಂಕಾರ ಧ್ವನಿಮಾಡು
ಆರು ಅಡಿಗಳುಳ್ಳದ್ದು ಅರಡಿ (ಬ. ಸ.) ಇದರಂತೆ ಎಂ
ಟಡಿ = ಶರಭ, ಅಡಿ = ಚರಣ ಕಾಲು, ಅರಡಿಯೆಂದು
ಷಟ್ಪದಿಯೆಂಬ ಮಾತಾ ವೃತ್ತಕ್ಕೂ ಹೆಸರು.
ಎಣಿಯಾಗಿ ಇರುವ ಪಕ್ಕಿ ಎಣ್ವಕ್ಕಿ (ಗ. ಸ.)
ತಾರಾ (ಸ. ಶ.) ಚಿಕ್ಕಿ, ತಾರೆ (ತತ್ಸಮ)
ಇಡಿ (ಧಾ.) ತುಂಬು
ತೊಲಗು (ಧಾ.) ದೂರಾಗು, ಬಿಟ್ಟುಹೋಗು

	ದೇಗುಲ = ಗುಡಿ
(ಕೆ)ಅನ್ವಯ	ವಾದ್ಯಂಗಳು = ನಗಾರಿ ಮುಂತಾದ ವಾದ್ಯಗಳು ಅನಿತರೊಳ್ ಚರಣಾಯುಧಂ ಸ್ವರಗೈದವು, ಬಳಜನರ ಮನಂ ಬೆಚ್ಚಿದುದು, ಮೂಡದೆಸೆ ಬೆಳಗಿತು ಇತ್ಯಾದಿ
(ಗ) ವಾಕ್ಯಾರ್ಥ ವಿಚಾರ	ಚರಣಾಯುಧಂ ಸ್ವರಗೈದವು
	ಬಳಜನರ ಮನಂ ಬೆಚ್ಚಿದುದು
	ತಾವರೆಗಳು ಅರಳಿದವು
	ಅರಡಿಮೊರೆದವು
	ಎಣೆ ಪಕ್ಕಿ

	ದೇವಕುಲ [ದೇಗುಲ], ಕುಲ = ಮನೆ ಕುಲ = ೧ ವಂಶ, ೨ ಸಮೂಹ, ೩ ಮನೆ
	ವದ್ಯ (ಧಾ.) ಮಾತಾಡು. ವಾದ್ಯ
	(ಕೆ) ಮೇಲೆ ಬರೆದ ಪದ್ಯದಲ್ಲಿ ತಲೆಯ ಮೇಲೆ ಹಾಕಿದ ಅಂಕಿಗಳ ಕ್ರಮದಿಂದ ಅನ್ವಯ. ಅನ್ವಯವನ್ನು ವಿದ್ಯಾರ್ಥಿಗಳಿಂದಲೇ ಹಚ್ಚಿಸುವದು.
	(ಗ) ಬಿಳಿಗ್ಗೆ ಕೋಳಿಗಳು ಅನಂದದಿಂದ ಕೂಗುವದು ಪ್ರಸಿದ್ಧವು. ಚರಣಾಯುಧಂ ಇಲ್ಲಿ ಬಹು ವಚನಾರ್ಥವಾದೆ ಜಾತಿವಾಚಕದಲ್ಲಿ ಏಕವಚನವು ಬಹುವಚನವನ್ನು ಹೇಳುತ್ತದೆ.
	ಕೆಟ್ಟ ಜನರು ತಮ್ಮ ಕೆಟ್ಟ ಕೃತ್ಯಗಳನ್ನು (ಕಳವು ಮುಂತಾದವು) ಕತ್ತಲಲ್ಲಿಯೇ ಮಾಡಬೇಕಾಗುವದರಿಂದ ಬೆಳಗಾಗುತ್ತಲೆ ಹೆದರುವರು.
	ತಾವರೆಗಳು ಸೂರ್ಯಕಿರಣಕ್ಕೆ ಅರಳುತ್ತವೆ; ಚಂದ್ರ ಕಿರಣಕ್ಕೆ ಬಾಡುತ್ತವೆ.
	ಇಲ್ಲಿಯೂ ಜಾತ್ಯೇಕ ವಚನವಿದೆ.
	ಎಣೆವಕ್ಕಿ ಇಲ್ಲಿಯೂ ಜಾತ್ಯೇಕವಚನ

ಉತ್ಪಲಂ ಕೊಡಗಿದುದು

ಕಣ್ಣಿಪೆ ತೆರೆದುದು

ದೇಗುಲದ ವಾದ್ಯಂಗಳು ಒದರಿದವು

(ಗ) ಭಾವಾರ್ಥ.

ಅಷ್ಟರಲ್ಲಿ ಕೋಳಿಗಳು ಕೂಗಿದವು, ಕೆಟ್ಟ ಜನರ ಮನಸ್ಸು ಹೆದರಿತು, ಪೂರ್ವದಿಕ್ಕು ಬೆಳ್ಳಗಾಯಿತು, ತಂಪುಗಾಳಿಯು ಎಲ್ಲ ಕಡೆಯಲ್ಲಿ ಸುಳಿಯಹತ್ತಿತು ಇತ್ಯಾದಿ ಮಾತ್ರಾವೃತ್ತ ವಾರ್ಧಿಕಷಟ್ಪದಿ.

(ಘ) ಛಂದಸ್ಸು.

ಇಲ್ಲಿ ಕರ್ತೃಕ್ರಿಯಾಪದಗಳೆರಡಕ್ಕೂ ಬಹುವಚನಾರ್ಥವು (ಜಾತಿಯ ಮೂಲಕ)

ಇಲ್ಲಿ ಕರ್ತೃಕ್ರಿಯಾಪದಗಳೆರಡಕ್ಕೂ ಬಹುವಚನಾರ್ಥವೆ ದೊಡ್ಡ ದೇವಸ್ಥಾನಗಳಲ್ಲಿ ಪ್ರಾತಃಕಾಲಕ್ಕೆ ದೇವರ ಪೂಜೆಯಾಗುವದು. ಆಗ ವಾದ್ಯಗಳನ್ನು ಬಾರಿಸುವರು.

(ಗ) ಪ್ರಶ್ನೆಮಾಡಿ ವಿದ್ಯಾರ್ಥಿಗಳಿಂದ ಹೊರಡಿಸುವದು.

(ಘ) ಲಕ್ಷಣ—ಗಿನೇ ತಿನೇಳನೇ ಞನೇ ಚರಣಗಳಲ್ಲಿ ಐದೈದು ಮಾತ್ರೆಯ ನಾಲ್ಕು ನಾಲ್ಕು ಗಣಗಳೂ ೩ನೇ ೬ನೇ ಚರಣಗಳಲ್ಲಿ ಐದೈದು ಮಾತ್ರೆಯ ಆರಾರು ಗಣಗಳೂ ಕಡೆಯಲ್ಲಿ ಒಂದೊಂದು ಗುರುವೂ ಇರಬೇಕು.

R. S. Kulkarni,
1st Assistant Master.

ಹಳೆ ಹೊಸ ಶಬ್ದಗಳನ್ನು ಪದಚ್ಛೇದದ ಕ್ರಮದಂತೆ ತಕ್ಕೊಂಡು ಅರ್ಥವಿವರಣೆ ಮಾಡಬೇಕು.

ಕವಿತೆಯು ಪಾಠವು ಮುಗಿಯುವಷ್ಟರೊಳಗೆ ವಿಶ್ರಾಂತಿಯು ಹೊತ್ತಾದ್ದರಿಂದ ಶಿಕ್ಷಣದ ಕೆಲಸವು ನಿಲ್ಲಿಸಲ್ಪಟ್ಟಿತು. ಸಭಿಕರು ಉಪಹಾರವನ್ನು ಶೀರಿಸಿಕೊಂಡು ಸಭೆಗೂಡಿದ ಬಳಿಕ ಹಾವೇರಿ ಶಾಲೆಯ ಹೆಡ್ ಮಾಸ್ತರ ಮಿ. ಕಲಿವಾಳ ಮತ್ತು ಅವರ ಅಸಿಸ್ಟಂಟ ಪಾಟೀಲ ಈ ಉಭಯತರು ಸ್ವತಃ ರಚಿಸಿದ ಕೆಳಗೆ ಬರೆದ ಶಾಸ್ತ್ರೀಯ ಪಾಠದ ಉಪಕರಣಗಳನ್ನು ಸಭೆಯ ಮುಂದಿರಿಸಿ ವಿವರಣೆಯೊಂದಿಗೆ ಪ್ರಯೋಗ ಮಾಡಿ ತೋರಿಸಿದರು. ಈ ವಿಷಯದಲ್ಲಿ ಮು. ರಾ. ಕುಲಕರ್ಣಿ ಮಾಸ್ತರರು ಹೇಳಿದ್ದೇನೆಂದರೆ-ವಿಶೇಷ ಬೆಲೆ ಬಾಳುವಂಥ ಸೂಕ್ಷ್ಮವಾದಂಥ ಪಾಶ್ಚಾತ್ಯ ಉಪಕರಣಗಳನ್ನು ದೊರಕಿಸಲಸಾಧ್ಯವಾದ ಪ್ರಾಥಮಿಕ ಶಾಲೆಗಳಲ್ಲಿ ಇವುಗಳಿಂದ ಬಹಳ ಉಪಯೋಗವಾಗುವದೆಂದು ಎಣಿಸುತ್ತೇವೆ. ಇವುಗಳನ್ನು ರಚಿಸಿದ ಕಲಿವಾಳ ಮತ್ತು ಪಾಟೀಲ ಇವರಿಗೆ ಈ ವಿಷಯಗಳು ಕರತಲಾಮಲಕವಾಗಿರಲಿಕ್ಕೆಬೇಕೆಂಬದರಲ್ಲಿ ಸಂಶಯವಿಲ್ಲ. ಇವರು ಒಳ್ಳೇ ವಿಚಾರದಿಂದಲೂ ಶ್ರಮದಿಂದಲೂ ರಚಿಸಿದ ಈ ಉಪಕರಣಗಳಿಂದ ತಮ್ಮ ವಿದ್ಯಾರ್ಥಿಗಳಿಗೆ ವಿಷಯಜ್ಞಾನವನ್ನು ಸರಿಯಾದ ಪದ್ಧತಿಯಿಂದ ಮಾಡಿಕೊಟ್ಟು ಕೃತ್ಯಕೃತ್ಯರಾಗದೆ, ವ್ಯವಸಾಯ ಬಾಂಧವರಲ್ಲಿ ಪ್ರೋತ್ಸಾಹವನ್ನುಂಟು ಮಾಡುವ ಯುಕ್ತಿಯಿಂದ ಇಲ್ಲಿ ಅವುಗಳನ್ನು ತಂದದ್ದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಇದೇ ಮೇರೆಗೆ ಮಿಕ್ಕ ಶಾಲಾಧ್ಯಾಪಕರು ಸಹ ತಮ್ಮ ಸ್ವಂತ ಕಲ್ಪನೆ ನಿಚಾರಗಳಿಂದ ವಿಷಯಗಳನ್ನು ತಿಳಿಸುವ ಸುಲಭೋಪಾಯಗಳನ್ನು ತೆಗೆದು ಮುಂದಿನ ವರಿಷತ್ತಿನಲ್ಲಿ ಇರಿಸುವರೆಂದು ಆಶಿಸುತ್ತೇವೆ.

ಸಭೆಯಲ್ಲಿ ತೋರಿಸಲ್ಪಟ್ಟ ಉಪಕರಣಗಳು, ಮಿ. ಕಲಿವಾಳ ಮತ್ತು ಪಾಟೀಲ ಇವರು ರಚಿಸಿದಂಥವು—

೧. ಲೇಡನ್‌ಜಾರ.
೨. ಘರ್ಷಣಜನ್ಯ ವಿದ್ಯುದ್ಯಂತ್ರ.
೩. ನೀರಿನ ಬಂಬು.
೪. ಗಾಳಿಯ ಚಕ್ರ.

೫. ಕಾಗದಪರಿಮಾರ್ಜಕ ಪೆಟ್ಟಿಗೆ.

೬. ಕಾರಂಜಿ.

೭. ಪದಾರ್ಥಸಂಗ್ರಾಹಕ ಪೆಟ್ಟಿಗೆ ಇತ್ಯಾದಿ.

ಇಷ್ಟಾದ ಬಳಿಕ ಬೆಂಡು ಕಡ್ಡಿಗಳಿಂದ ಬಗೆಬಗೆಯ ಆ ಕೃತಿಗಳನ್ನು ರಚಿಸುವ ವಿಷಯವು ಪ್ರಾಕ್ಟಿಸಿಂಗಸ್ಕೂಲಿನೇ ಅ॥ ಪಂಡುಪತಿಯವರಿಂದ ಕಲಿಸಲ್ಪಟ್ಟಿತು. ಆ ಸಂಬಂಧದಿಂದ ಮಾಡಲ್ಪಟ್ಟ ಸೂಚನೆಗಳು :—

೧ ಇಂದ್ರಿಯಗಳಿಂದ ಪದಾರ್ಥಗಳ ಜ್ಞಾನ ಮಾಡಿಕೊಂಡನಂತರ ಅವುಗಳ ಸಾಮಾನ್ಯಸ್ವರೂಪದ ವಿಷಯವಾಗಿ ವಿಚಾರ ಮಾಡಬೇಕಾದಲ್ಲಿ, ಪದಾರ್ಥಗಳ ವಿಶೇಷಸ್ವರೂಪಕ್ಕೂ ಸಾಮಾನ್ಯಸ್ವರೂಪಕ್ಕೂ ನಡುವಿನ ಕೆಲವು ಮೆಟ್ಟಿಲುಗಳ ಬಗ್ಗೆ ಆಲೋಚಿಸಬೇಕಾಗುತ್ತದೆ. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಕೆಲವು ವಿಶೇಷ (ಬೇರೆ ಬೇರೆ ಬಣ್ಣದ ಹಾಗೂ ಬೇರೆ ಬೇರೆ ಎತ್ತರದ) ಕುದುರೆಗಳನ್ನು ನೋಡಿದ ಬಳಿಕ ಕಲ್ಪನೆಯಿಂದ ಕುದುರೆಯ ಸಾಮಾನ್ಯಸ್ವರೂಪವನ್ನು ಮನಸಿನಲ್ಲಿಟ್ಟುಕೊಳ್ಳುವದಕ್ಕೆ ಕೆಲವು ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅಂದರೆ ಕುದುರೆಯ ಸಾಮಾನ್ಯಸ್ವರೂಪವನ್ನು ವಿಚಾರಿಸುವಾಗ್ಗೆ ಬಣ್ಣವಾಗಲಿ ಗಾತ್ರವಾಗಲಿ ಬೇರೆ ವಿಶೇಷ ಲಕ್ಷಣವಾಗಲಿ ಮನಸಿನಲ್ಲಿ ಬರುವದರ ಬದಲು ಬಾಹ್ಯಸ್ವರೂಪದ ಸಾಮಾನ್ಯಕಲ್ಪನೆಯು ಮಾತ್ರ ಬರುವದು ಅವಶ್ಯವದೆ. ಇದೇ ಮೇರೆಗೆ ಘನದ ಸಾಮಾನ್ಯ ಸ್ವರೂಪವನ್ನು ತಿಳುಕೊಳ್ಳಬೇಕಾದರೆ ಕಟ್ಟಿಗೆಯ ಘನ ಮತ್ತು ಮಣ್ಣಿನ ಘನಗಳಿಂದ ಘನದ ಜ್ಞಾನವಾದ ನಂತರ, ಸಾಮಾನ್ಯಜ್ಞಾನ ಮಾಡಿಕೊಡುವದಕ್ಕೆ ಮುಂಚೆ, ಕಾಗದದ ಪೊಳ್ಳು ಘನವನ್ನೂ, ಬೆಂಡು ಕಡ್ಡಿಗಳಿಂದ ಮಾಡಿದ ಘನವನ್ನೂ ತೋರಿಸುವದು ಅವಶ್ಯವದೆ. ಇವೇ ವಿಶೇಷ ಸ್ವರೂಪ ಸಾಮಾನ್ಯ ಸ್ವರೂಪಗಳ ನಡುವಿನ ಮೆಟ್ಟುಗಳು. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿಯೇ ಫ್ರೋಬೆಲ್ಲನು ತನ್ನ ೭ನೇ ಇನಾಮಿನಿಂದ ೧೦ನೇ ಇನಾಮಿನ ವರೆಗೆ ಕೈಕೆಲಸ

ಗಳನ್ನು (Occupations) ಗೊತ್ತು ಮಾಡಿದ್ದಾನೆ. ಅವುಗಳೊಳಗೆ ನಮ್ಮಲ್ಲಿ ರೂಢಿಯಿದ್ದ "ಬೆಂಡುಕಡ್ಡಿಗಳಿಂದ ಆಕೃತಿಗಳನ್ನು ರಚಿಸುವ ಆಟವು" ೧೯ನೆಯದಾಗಿದೆ. ಈ ಕೈಕೆಲಸಕ್ಕೆ ಬೇಕಾಗುವ ಉಪಕರಣಗಳಾದ ಬೆಂಡುಕಡ್ಡಿಗಳು ನಮ್ಮ ಪ್ರಾಂತದೊಳಗೆ ಎಲ್ಲ ಕಡೆಯಲ್ಲಿಯೂ ದೊರೆಯುವದರಿಂದ ಈ ಇನಾಮನ್ನು ಆರಿಸಿಕೊಂಡಿದ್ದೇವೆ. ಬೆಂಡುಕಡ್ಡಿಗಳಿಂದ ಯಾವ ಯಾವ ಆಕೃತಿಗಳನ್ನು ರಚಿಸಬಹುದು, ಯಾವ ಕ್ರಮದಿಂದ ರಚಿಸಬಹುದು, ಎಂಬದು ಕೆಳಗೆ ಹೇಳಲ್ಪಟ್ಟಿದೆ.

೧. ಎಲ್ಲ ವಿಧದ ತ್ರಿಕೋನಗಳೂ ಚತುಷ್ಕೋನಗಳೂ
೨. ಲಂಬಾಯುಕ್ತವಾದ ತ್ರಿಕೋನಗಳು.
೩. ಕರ್ಣಗಳಿಂದಲೂ ಮಧ್ಯರೇಖೆಗಳಿಂದಲೂ ಯುಕ್ತವಾದ ಚತುಷ್ಕೋನಗಳು.
೪. ಗಾಳಿಪಟಕ್ಕೆ—೪ ತ್ರಿಕೋನಗಳಿಂದ ಆದದ್ದು.
೫. ಮೂರೇಣಿನ ಲೋಲಕ.
೬. ತ್ರಿಕೋನ ತಳೆದ ಗೋಪುರಾಕೃತಿ.
೭. ಜಿತ್ತಿ.
೮. ಎಂಟು ಏಣಿನ ಸ್ಫಟಿಕಾಕೃತಿ.
೯. ಖುರ್ಚಿಯ ಆಕೃತಿ.
೧೦. ರಾಟೂಳ (ನೇಕಾರರು ನೂಲು ಹಾಸು ಹೊಯ್ಯುವಾಗ್ಗೆ ಉಪಯೋಗಿಸುವ ಯಂತ್ರ.)
೧೧. ಬಗೆಬಗೆಯ ಮಿಶ್ರ ಘನಾಕೃತಿಗಳು; ಹಾಗೂ ಬಂಡಿ, ತೇರು, ತುಬಾಕಿ, ಟಗರು ಮುಂತಾದವುಗಳು.

ಮುಂದಿನ ವಿಷಯವನ್ನು ಕಲಿಸಲಾರಂಭಿಸುವದಕ್ಕೆ ಮುಂಚೆ ಮಾಡಲ್ಪಟ್ಟ ಸೂಚನೆ—

ವಸ್ತುಪಾಠವನ್ನು ಕಲಿಸುವ ಉದ್ದೇಶಗಳಲ್ಲಿ ವಿದ್ಯಾರ್ಥಿಗಳ ನಿರೀಕ್ಷಣ ಸಾಮರ್ಥ್ಯವನ್ನೂ ವಿಚಾರಶಕ್ತಿಯನ್ನೂ ಬೆಳಿಸುವದು ಮೊದಲನೇದು; ಅವುಗಳ ಮೂಲಕ ಭಾಷಾಜ್ಞಾನವನ್ನುಂಟು ಮಾಡುವದು ೨ನೇದು. ಮೊದಲನೇ ಉದ್ದೇಶ

ವು ನೆರವೇರುವಂತೆ ಕಲಿಸಬಹುದಾದ ವಸ್ತುಪಾಠದ ಹಲವು ಉದಾಹರಣೆಗಳು ಹಿಂದಿನ ವರ್ಷದ ಪರಿಪತ್ತ್ರಿನಲ್ಲಿ ತೋರಿಸಲ್ಪಟ್ಟವೆ; ಹಾಗೂ "ವಸ್ತುಪಾಠ ಶಿಕ್ಷಣಕ್ರಮ" ವೆಂಬ ಪುಸ್ತಕವು ಮುದ್ರಿಸಲ್ಪಟ್ಟಿರುತ್ತದೆ. ಇವುಗಳ ಸಹಾಯದಿಂದ ಶಿಕ್ಷಕರು ವಸ್ತುಪಾಠವನ್ನು ಕಲಿಸಸಮರ್ಥರಾಗಬಹುದು. ಈ ನೇ ಉದ್ದೇಶವನ್ನು ಸಾಧಿಸುವದಕ್ಕೋಸ್ಕರ ಮಾವಿನ ಮರದ ವಸ್ತುಪಾಠದ ಮೇಲೆ ರಚಿಸಿದ ಸಂವಾದದ ಪಾಠವೂ ಪದವೂ ಇಂದು ತೋರಿಸಲ್ಪಡುವವು.

ಸಂಭಾಷಣಾ ಪಾಠ.

ಈ ಪಾಠವು ಪ್ರೈ. ಸ್ಕೂ. ಹೆಡ್‌ಮಾಸ್ತರ ರಾ. ರಾ. ದೇಶಪಾಂಡೆಯವರಿಂದ ರಚಿಸಲ್ಪಟ್ಟು, ನು. ರಾ. ಕುಲಕರ್ಣಿ ಮಾಸ್ತರರಿಂದ ಪರಿಶೋಧಿಸಲ್ಪಟ್ಟಿರುತ್ತದೆ. ಇದನ್ನು ಪ್ರೈ. ಸ್ಕೂಲ ಈ ನೇ ಅ. ಮಾ. ರಾ. ಅಮ್ಮಿನಭಾವಿ ಇವರು ಹುಡುಗರಿಗೆ ಕಲಿಸಿ ಪ್ರಯೋಗ ಮಾಡಿಸಿದರು. ಹುಡುಗರು ಚಿತ್ರಗಳನ್ನು ಕೊರಳೊಳಗೆ ಹಾಕಿಕೊಂಡು ಅಭಿನಯಯುಕ್ತವಾಗಿ ಚಿತ್ರಗಳನ್ನು ತೋರಿಸುತ್ತ ಮಾತಾಡಿದರು.

ಶಾಲೆಯೊಳಗಿರುವ ಭಾಷೆಯು.

೧ನೆಯವನೆ—(ಮಾವಿನ ಗೊರಟಿನ ಚಿತ್ರವನ್ನು ತೋರಿಸಿ) ಇದು ನೋಡಿರಿ. ಮಾವಿನ ಗೊರಟು; ಛೇ ಅಲ್ಲಲ್ಲ; (ಕೈಸನ್ನೆ) ಅದರ ಚಿತ್ರ. ಗೊರಟು ನೆಲದೊಳಗೆ ಹುಗಿದು, ದಿನಾ, ನೀರು ಹನಿಸಿದರೆ ಹೀಗೆ (ಚಿತ್ರ ತೋರಿಸಿ) ಮೊಳಕೆ ಒಡೆಯುವದು. (ಬೇರು ತೋರಿಸಿ) ಇದೇ ಬೇರು. ಈ ಬೇರು ನೆಲದೊಳಗೆ ಇಳಿಯುವದು ಇದಕ್ಕೆ ದಿನಾ ನೀರು ಹನಿಸಿದರೆ ಮೊಳಕೆ ದೊಡ್ಡದಾಗಿ ಎಲೆ ಬಿಟ್ಟು ಸಸಿಯಾಗುವದು.

೨ನೆಯವನೆ—ಇದು ನೋಡಿರಿ. ನಾನು (ಚಿತ್ರ) ಸಸಿ ಕಿತ್ತಿ ಹಚ್ಚುವಾಗ ಬೇರು ಹರಿಯಿತು. ಇದಕ್ಕೆ ಎಷ್ಟು ಮಣ್ಣು ನೀರೂ ಹಾಕಿದೆ, ಆದರೂ ಗಿಡಾ ಹತ್ತಲಿಲ್ಲ. ಒಣಗಿ ಹೋಯಿತು. ಆದರೆ ಮತ್ತೊಂದು ಸಸಿ ಜೋಕೆಂದ ಬೇರು ಹರಿಯದಾಂಗ ಕಿತ್ತಿ ಹಚ್ಚಿ ದಿನಾ ನೀರು ಹಾಕಿದೆ. ಇದು

ನೋಡಿರಿ. ಈಗ ಎಷ್ಟು ದೊಡ್ಡದಾಯಿತು. ನಾವು ಬಾಯಿಂದ ಅನ್ನಾ ಉಣ್ಣುತ್ತೇವೆ, ನೀರು ಕುಡಿಯುತ್ತೇವೆ. ಅದರಂತೆ ಗಿಡಗಳು ಬೇರಿನಿಂದ ಮಣ್ಣು ತಿಂದು ನೀರು ಕುಡಿಯುತ್ತವೆ. ನಮಗೆ ಬಾಯಿ ಇದ್ಹಾಂಗ ಗಿಡಗಳಿಗೆ ಬೇರು.

೩ ನೆಯವ—ಇಗೋ, ಇದು ೪ ವರ್ಷದ ಗಿಡ. ಇದು ಎಷ್ಟು ಜೆಂದ ಕಾಣುತ್ತದೆ! ಹಚ್ಚಗ ಹಸರು ಮುರಿಯುತ್ತದೆ. ಇದರ ಬುಡಕ ಕೂತರೆ ತಣ್ಣಗ ಆನಂದ ಆಗತದ. ಬಿಸಿಲಗಾಲದಾಗ ದಾರಿಕಾರರಿಗನಕ ಬಲು ಹಿತ.

೪ ನೆಯವ—ಭೂರತಹುಣ್ಣಿ ಬಂತಂದರ ಹೂ ಬಿಟ್ಟು ಫಲ ಮಷಿಮು ವಾಸನಿ ಸುತ್ತೆಲ್ಲ ಇಡಗತದ. ಹೋಳೀ ಹುಣ್ಣಿವಿಗೆ (ಕೈವಾಡಿ) ಇಷ್ಟಿಷ್ಟು ದೊಡ್ಡ ಕಾಯಿ ಆಗುತ್ತವೆ. ಅವು ಬಗರೊಗರು ಇರತಾವ. ಅದಕ್ಕೂ ದೊಡ್ಡ ಕಾಯಾದವಂದರ, ಅವನ್ನ ಹೆಚ್ಚಿ ಚಟ್ನೀ ಮಾಡತಾರ. ಗೊರಟು ಒಲ್ತು (ಕೈ) ಇಷ್ಟಿಷ್ಟು ದೊಡ್ಡ ಕಾಬಾದವಂದರ ಗುಳುಂಬಾ ಮಾಡತಾರ, ಉಪ್ಪಿನಕಾಯಿ ಹಾಕತಾರ. ಅಹಹ! ಉಪ್ಪಿನ ಕಾಯಿ, ಬಹಳ ಸವಿ. "ಮಾತಿಗೆ ಮೊದಲು ಗಾದಿ, ಊಟಕ್ಕೆ ಮೊದಲು ಉಪ್ಪಿನಕಾಯಿ."

೫ ನೆಯವ—ಇದು ಪಾಡು, ಇಲ್ಲೆ ತುಸು ತುಸು ಹಳದೀ ಬಣ್ಣ, ಇಲ್ಲೆ ಕೆಂಪ ಬಣ್ಣ ಹೊಳೆಯುತ್ತದೆ; ಈ ಹಸರು ಕಾಯಿಯಾ ಬಣ್ಣ. ಈ ಗಿಳಿ ಈ ಗುಬ್ಬಿ ಈ ಪಾರಿವಾಳ ಇವೆಲ್ಲ ಪಾಡು ತಿನಬೇಕೆಂದು ಹೊಂಚು ಹಾಕಿವೆ. ಗೆಳೆಯಾ, ಇದು ನೋಡು, ಗಿಳಿಯು ತನ್ನ ಚುಂಚಿನಿಂದ ಪಾಡು ಚುಚ್ಚಿ ಚುಚ್ಚಿ ಹ್ಯಾಗೆ ರಸ ಸವಿಯುತ್ತದೆ!

೬ ನೆಯವ—ಮಿತ್ರಾ, ಅದೇನು ಆಶ್ಚರ್ಯ! ಚಿತ್ರದಾಗಿನ ರಸ ನೋಡಿ ನನಗೂ ನಿನಗೂ ಬಾಯೊಳಗ ನೀರು ಬಂದವು. (ಬಾಯಿ ಚಪ್ಪರಿಸಿ) ಪಾಪ! ಅವಂತೂ ಹಕ್ಕಿಗಳು, ಹಣ್ಣೇ ಅವುಗಳ ಜೀವನ.

೭ ನೆಯವ—ಗೆಳೆಯಾ, ಈ ಪಾಡಿಗೇ ಇಷ್ಟು ಮರುಳಾದಿಯೊ! ಪಾಡು ಇಳಿಸಿ, ಅಡಿ ಹಾಕಿ, ಪೂರಾ ಹಣ್ಣಾದವಂದ

ರೆ ಅದರ ರುಚಿ ಏನ ಹೇಳಲಿ ! ಅಹಹ, ಅಮೃತ ! ನೀನು ಶೀಕರಣಿ ತಿಂದಹಾಂಗ ಕಾಣೋದಿಲ್ಲ ಶೀಕರಣಿನೊಳಗ ಕರಗಿದ ತುಪ್ಪಾ ಹಾಕಿ ಬಿಳೇ ಹೋಳಿಗಿ ಎದ್ದಿ ಒಂದು ಸರತಿ ಸರ್ರನ ಸುರದರ (ಕಣ್ಣು ಮುಚ್ಚಿ).....ಬಲು ಸವಿ. ಅದಕ್ಕೇ ಕವಿಗಳು ಆ ರಸಕ್ಕೆ ಈ ಲೋಕದ ಅಮೃತ ಅಂತಾರ. ಹಣ್ಣು ಹಿಂಡಿ ಬೀಜಾ ಹಾಂಗೇ ತಿಪ್ಪೀ ಮೇಲೆ ಚಲ್ಲಬೇಡ ಕಂಡ್ಯಾ. ಅವನ್ನ ಹುಗಿದು ಜೋಕೆ ಮಾಡಿದರೆ ರಗಡ ಹಣ್ಣು ಆಗತಾವ. ನಾವೂ ತಿಂಬೋಣ, ಮಂದಿಗೂ ಕೊಡೋಣ, ಹಕ್ಕಿಗಳೂ ತಿನ್ನಲಿ.

೪ ನೆಯವ—ಮಿತ್ರಾ-ನಮ್ಮ ಚಕ್ರವರ್ತಿ, ಎಡ್ವರ್ಡ ಪ್ರಭುಗಳಿರುವ ಇಂಗ್ಲಂಡ, ಬಹಳ ಥಂಡೀ ರಾಜ್ಯಂತ. ಅಲ್ಲಿ ಈ ಗಿಡ (ಕೈಮಾಡಿ) ಇಲ್ಲೇ ಇಲ್ಲಂತಪಾ ! ಅವರು ಒಂದೊಂದು ಹಣ್ಣಿಗೆ ೪।೪, ೫।೫ (ಕೈಮಾಡಿ) ರೂಪಾಯಿ ಕೊಟ್ಟು ಇಲ್ಲಿಂದ ತರಿಸಿಕೋತಾರಂತ. ಇಲ್ಲೆ ನಮಗ ೪ ರುಪಾಯಿ ಕೊಟ್ಟರ (ಕೈಮಾಡಿ) ಬುಟ್ಟೆತುಂಬಾ ಹಣ್ಣು ಬರತಾವ.

೫ ನೆಯವ—ತಮ್ಮಾ ಅವರು ಅರಸರು, ಅವರು ಹ್ಯಾಂಗಾದರೂ ಕೊಂಡಾರು, ನಾವು ಬಡವರು, ಅಷ್ಟು ದುಡ್ಡು ಎಲ್ಲಿಂದ ತರಬೇಕು? ದೇವರು "ದೀನರಕ್ಷಕ" ನಮ್ಮ ಮೇಲೆ ಆತನ ಉಪಕಾರ ಎಷ್ಟು ನೋಡಿರಿ! ಈಗ ನಾನೆಲ್ಲರೂ ಕೂಡಿ ಆತನನ್ನು ಹಾಡಿ ಕೊಂಡಾಡೋಣ.

ಮಾವಿನ ಮರದ ಮೇಲೆ ವಸ್ತುಪಾಠದ ರೀತಿಯಿಂದ ರಚಿಸಿದ ಪದವ್ರ.

ಈ ಪದವನ್ನು ಪ್ರೊ. ಸ್ಕೂ. ಹೆ. ಮಾ. ದೇಶಪಾಂಡೆಯವರು, ಗಾಯನಕಲಾಭಿಜ್ಞರಾದ ಬಾ. ಪು ಸಾವಕಾರ ಶಿನೇ ವರ್ಷದ ವಿದ್ಯಾರ್ಥಿ ಇವರ ಸಹಾಯದಿಂದ ರಚಿಸಿದರು. ವಿದ್ಯಾರ್ಥಿಗಳು ರಾಗದ ಕಟ್ಟಿಗೆ ಪಿಟೆಲುಗಳೊಡನೆ ಸುಸ್ವರದಿಂದ ಹಾಡಿ ಶ್ರೇಷ್ಠಕರ ಮನಸನ್ನು ಆನಂದಗೊಳಿಸಿದರು.

ರಾಗ: —ಖಮಾಜ; ಆದಿತಾಳ.

ಗೆಳೆಯರೆ ನೋಡಿರಿ, ಮಾವಿನ ಮರವನು ॥ ಪಲ್ಲ ॥
ಮಾವಿನ ಬೀಜವ ನೆಲದೊಳು ಹುಗಿದು ।
ನಾವು ನಿರಂತರ ನೀರ ಹನಿಸುವುದು ॥ ೧ ॥
ಸುಂದರ ಮೊಳಿಕೆಯು ಕಾಲಾಂತರದಿಂ ।
ಚಿಗುರದಿ ಬೇರ್, ಎಲೆಗಳನು ಧರಿಸುವದು ॥ ೨ ॥
ಹಚ್ಚಿದ ನಾಲ್ಕೈದಾರು ವರುಷದೊಳು ।
ಸಿಹ್ಜಳಾಗಿ ಕೊಡೆಯಂತೆ ತೋರುವದು ॥ ೩ ॥
ಮಾಘಫಾಲ್ಗುಣದೆ ಹೂವ ಧರಿಸುವದು ।
ಕೋಗದೆ ಭ್ರಮರಗಳ್ ಝೇಂಕರಿಸುವವು ॥ ೪ ॥
ಹೋಳಿದು ಹಬ್ಬಕೆ ಹರಳುಗಾಯ್ಗಳು ।
ಗೆಳೆಯರೆ ರುಚಿಯಿಂ, ಬಗರೊಗರಿರುವವು ॥ ೫ ॥
ಕೋಳೀ ತತ್ತಿಯ ಗಾತ್ರದ ಕಾಯ್ಗಳು ।
ಹುಳಿಯಾಗಿರುವವು ಚೈತ್ರದ ಕಡೆಯೊಳ್ ॥ ೬ ॥
ತಪ್ಪದೆ ಕಾಯ್‌ರಸ ಚಟ್ಟಿಗುಳುಂಬಾ ।
ಉಪ್ಪಿನ ಕಾಯನು ಸಕಲರು ಮಾಳ್ಪರು ॥ ೭ ॥
ಪಾಡುವುದುರುವದ ಕಂಡು ತೋಟಿಗರು ।
ಕಡು ಸಂತೋಷದೆ ಇಳಿಸುವರವನು ॥ ೮ ॥
ಪೂರಿವಾಳ ಗಿಳಿ ಕೋಗಿಲೆ ಗುಬ್ಬಿಗಳ್ ।
ಸೇರಿಕೊಂಡು ಸಂಭ್ರಮದಿಂದಿರುವವು ॥ ೯ ॥
ಹುಲ್ಲ ಹಾಸಿನೊಳ್ ಪಾಡುಗಳಿಡುವರ್ ।
ಎಲ್ಲರದಕೆ "ಅಡಿ" ಯೆಂದು ಪೇಳುವರು ॥ ೧೦ ॥
ಹಣ್ಣಿನ ರಸವೆದು ಅಮೃತವ ಪೋಲ್ವುದು ।
ಕಣ್ಣಪೆರಿದನಾದಕದೆ ಸವಿವರು ॥ ೧೧ ॥
ಇದರುಪಯೋಗವ ನಾನಾ ತೆರದಿಂ ।
ನುಡದೆ ನಾವು ಸರಸಾಗಿ ತಿಳಿದೆವ್ವೆ ॥ ೧೨ ॥
ಕಲ್ಪವೃಕ್ಷದಂತಿರ್ದೀ ಮರವನು ।
ಅಲ್ಪರಾದ ನಮಗಿತ್ತ ದೇವರನು ॥
ಆನಂದದಿ ನಾವೆಲ್ಲರು ಕೂಡಿ ।

ಧ್ಯಾನೆ ಮಾಡುವಾ ದೀನ ರಕ್ಷಕನನು ॥ ೧೩ ॥
ಪ್ರೈಮ್ಕಿಸ್ಕೂಲಿನ ಮುಖ್ಯಾಧ್ಯಾಪಕರ್ ।
ಅಟ್ಟಹಾಸದಿಂ ರಚಿಸಿಹ ಪದವಿದು ॥ ೧೪ ॥

CORRESPONDENCE.

ಪತ್ರವ್ಯವಹಾರ.

LAKE AT MASUR.

ಮದಗಮೂಸೂರಿನ ಸರೋವರ

(ಬರೆದು ಬಂದದ್ದು.)

(೬೬ ನೇ ಪುಟದಿಂದ ಮುಂದೆ ಸಾಗಿದ್ದು.)

ಇದಕ್ಕೋಸ್ಕರ ಮೈಸೂರ ಕಡೆಯ ಜನರು ಆರಂಭದಲ್ಲಿ ಇವರನ್ನು ಓಡಿಸಿದಾಗ್ಯೂ ಕಡೆಗೆ ಏನೂ ಅಡ್ಡಿ ಮಾಡಲಿಲ್ಲ. ಮತ್ತು ತಮ್ಮ ಕಡೆಗೆ ಆದ ಕೆಲಸಕ್ಕೆ ಏನೂ ಅಡ್ಡಿ ತರಲಿಲ್ಲ. ಆ ಎರಡೂ ಕೆಲಸ ಮಾಡುವವರು ೧೦೦ ಫೂಟು ಹತ್ತರ ಬಂದಾಗ ಅವರ ಕೆಲಸವು ನಿಂತಿತು. ಯಾಕಂದರೆ ಈ ಮೋರೆಯಲ್ಲಿ ಬಿದ್ದಿರಬಹುದೆಂದು ಕಂಡುಬಂದಂಥ ಥಾಟು, ಬಹಳ ದೊಡ್ಡ ಕಲ್ಲುಗಳಿಂದ ಮಾಡಿದ್ದು, ಕಂದರದ ಮೇಲ್ಭಾಗದ ಬಂಡೆಗಲ್ಲಿನ ಮೇಲೆ ಇಟ್ಟಿರುವರೆಂದೂ ಆ ಬಿಡ್ಡು ಆ ದಂಡೆಯ ಮೇಲೆ ಕಟ್ಟಿದ್ದಾರೆಂದೂ ಕಂಡುಬಂತು. ೧೦೦ ಫೂಟು ದಪ್ಪ ಇರುವಂಥ ಆ ಮಣ್ಣೊಡ್ಡಿನ ಭಾರವು ಆ ಮೋರೆಯ ಛಪ್ಪರಕ್ಕೆ ಬಹಳೇ ದೊಡ್ಡದಾಗಿತ್ತು. ಆ ಮೋರೆಯ ಛಪ್ಪರವು ಬಿದ್ದ ಸ್ಥಳವನ್ನು ಸ್ವಚ್ಛ ಮಾಡುವ ಕೆಲಸವು ಬಹು ಗಂಡಾಂತರದ್ದಾಗಿತ್ತು. ಅಲ್ಲಿಯ ಕಲ್ಲುಗಳನ್ನು ಉಳಿಗಳಿಂದ ಹಗುರಾಗಿ ಅಗಿದು ತೆಗೆಯುವ ಯುಕ್ತಿಯು ಹೊರತು, ಮತ್ತಾವ ಪ್ರಯತ್ನವೂ ಸಾಗಲಿಲ್ಲ. ಮತ್ತು ಗಟ್ಟಿಯಾದ ಕಲ್ಲುಗಳು ಎರಡನೇ ಮಗ್ಗಲಿಗೆ ಹತ್ತುವವೆಂದು ನಂಬಿ, ಈ ಪ್ರಕಾರ ಮಾಡಿದರೆ ಆ ಕೂಲಿಕಾರರ ತಲೆಯ ಮೇಲಿನ ಮತ್ತೊಂದು ಭಾರವಾದ ಕೆಲಸವು ಕೈಗೂಡುವ

ದೆಂದು ಕಂಡುಬಂದು, ಅದರಂತೆ ಪ್ರಯತ್ನಪಟ್ಟ ಪ್ರಕಾರ ಕೈಗೂಡಿತು. ಆದರೆ ಸ್ವಲ್ಪ ಹೊದಿಕೆಯ ಕಲ್ಲುಗಳು ಮಾತ್ರ ಕೆಳಗೆ ಬಿದ್ದವು. ಮತ್ತು ಅದರ ಮೇಲಿರುವ ಮಣ್ಣಿನ ದ್ದಿನೊಳಗಿಂದ ಒಂದು ದಾರಿಯನ್ನು ಮಾಡಿ ಘಟ್ಟ ಮಾಡಲ್ಪಟ್ಟಿತು. ಕಟ್ಟಕಡೆಗೆ ಆ ಎರಡೂ ತಂಡದವರು ಕೂಡಿದರು. ಆಗ ೪೦೦ ಘೂಟು ಉದ್ದುಳ್ಳ ಆ ಹಳ್ಳೀ ಸುರಂಗವು ತೆರೆಯಲ್ಪಟ್ಟಿತು. ಮತ್ತು ಆ ನೆಲದ ಕೆಳಗಿರುವ ಆ ಹಳ್ಳೀ ಮೋರೆಯ ಕಮಾನಿನ ಅಗಿಯೋಣವು ಆರಂಭಿಸಲ್ಪಟ್ಟಿತು. ಆ ಹಳ್ಳೀ ಗಾಳಿಯಾಡುವ ಸಾಧನವು ಮತ್ತು ಆ ಘಾಟು ಇವೆರಡಕ್ಕೂ ಆ ಸುರಂಗವಾರ್ಗವು ತಯಾರಾಗುವ ತನಕ ಕಮಾನು ಹಾಕಲ್ಪಟ್ಟಿತು. ಅದರ ಮಧ್ಯದ ವರೆಗೆ ಎಲ್ಲ ಕೆಲಸವು ಸುರಕ್ಷಿತವಾಗಿ ನಡೆಯಿತು. ಅಲ್ಲಿ ಒಂದು ಗಟ್ಟಿಯಾದ ಬಂಡೆಗಲ್ಲು ಬಹು ಶ್ರಮ ಕೊಟ್ಟಿತು. ಕರ್ನಲ್ ಪೊಷೇ ಅರನ ಯುಕ್ತಿಯಂತೆ ಎರಡೂ ಕಾಲುವೆಗಳು ಅಗಿಯತಕ್ಕವಿದ್ದವು. ಅವು ಆ ಹೊಳೆಯ ದಂಡೆಯ ಮೇಲೆ ೩೫೦ ಘೂಟು ಎತ್ತರದ ಮೇಲೆ ಒಯ್ಯತಕ್ಕವಿದ್ದವು. ಎಡದಂಡೆಯ ಕಾಲುವೆಯ ೧೬೨ ಮೈಲು ಉದ್ದಳತೆಯಲ್ಲಿ ೬ ಮೈಲು ಉದ್ದವೂ ಮತ್ತು ಬಲದಂಡೆಯ ಕಾಲುವೆಯ ೧೫೬ ಮೈಲು ಉದ್ದಳತೆಯಲ್ಲಿ ೪ ಮೈಲು ಉದ್ದವೂ ಅಗಿಯಲ್ಪಟ್ಟವು. ಎಡದಂಡೆಯ ಕಾಲುವೆಯನ್ನು ಮುಖ್ಯ ದಂಡೆಯ ಇಳಿಜಾರಿನ ಗುಂಟ ಒಯ್ದಿದ್ದಾರೆ. ಸ್ಟೇ ೧೪೪-೪೫ ರಲ್ಲಿ ಬಲದಂಡೆಯ ೪ ಮೈಲಿನ ತನಕ ಜಾಲೀಗಿಡ, ಮಾವಿನಗಿಡ, ಲಿಂಬೀಗಿಡ ಮುಂತಾದ ೬೦೦ ಗಿಡಗಳನ್ನು ಹಚ್ಚಿದರು. ಇಡೀ ಕ್ಷೇತ್ರಫಲವು ೪೪೦ ಯುಕರೆ ಇತ್ತು. ಹುಟ್ಟುವಳಿಯು*

ಟೀಪು— * ಈಗಾದರೂ ಇವೇ ಹುಟ್ಟುವಳಿಯವೆ. ಇಲ್ಲಿ ಬರಗಾಲವು ಅಪರೂಪವೆಂದರೂ ಸಲ್ಲುವದು. ಇದಕ್ಕೆ ತಕ್ಕಂತೆ ಸರಕಾರದ ತೆರಿಗೆಯಾದರೂ ಕೂತಿರುತ್ತದೆಂದು ಮೇಲಿನ ಲೇಖದಿಂದ ವ್ಯಕ್ತವಾಗುತ್ತದೆ.

ಮುಖ್ಯವಾಗಿ ಕಬ್ಬು, ಅಕ್ಕಿ, ಬೆಳ್ಳುಳ್ಳಿ ಮತ್ತು ನೀರುಳ್ಳಿ ಇವೇ ಮುಂತಾದವು ಇದ್ದವು ನೀರಿನ ದರವು ೧೦ ತಿಂಗಳ ಬೆಳೆಗೆ ೧ ಯಕರೆಗೆ ೧೬ ರಿಂದ ೪ ರೂಪಾಯಿಯ ವರೆಗೆ ಮತ್ತು ಮಳೆಗಾಲದ ಬೆಳೆಗೆ ೦ ರಿಂದ ೧ ರೂಪಾಯಿಯ ವರೆಗೆ ದರವಿತ್ತು.

ಆ ಜೀರ್ಣವಾದ ಕೋಡಿಯನ್ನು ಕಟ್ಟಿಸಿ ಆ ಕೆರೆಯಲ್ಲಿ ಇನ್ನೂ ಹೆಚ್ಚು ನೀರು ಹಿಡಿಯುವಂತೆ ಮಾಡಬಹುದಿತ್ತು. ಆದರೆ ಈ ಹೊಸ ಕೆಲಸವನ್ನು ಅಡ್ಡಿ ಮಾಡುವ ಕಾರಣ ಯಾವದೆಂದರೆ:-ಆ ಸರೋವರದ ಮೇಲ್ಭಾಗವನ್ನು ೧ ಫೂಟು ಮಾತ್ರ ಏರಿಸಿದರೆ, ಆ ಒಳ್ಳೇ ಭೂಮಿಯ ಕ್ಷೇತ್ರವು ಜವುಳು ಆಗುತ್ತಿತ್ತು. ಸರ್ ೧೪ ಪಿ ರಲ್ಲಿ ಮೈಸೂರ ಇಲಾಖೆಯ ಜನರು ಈ ಹಾನಿಯನ್ನು ಸಹನ ಮಾಡಿಕೊಂಡು ಆ ಭೂಮಿಯನ್ನು ಬಿಟ್ಟುಕೊಡಬೇಕೆಂದು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದವು. ಆದಾಗ್ಯೂ ಅದರ ವಿಷಯವಾಗಿ ಇನ್ನೂ ವಾದ ನಡೆದದೆ. ಮತ್ತು ಸ್ವಲ್ಪ ಕಾಲದಲ್ಲಿ ಏನಾದರೂ ವ್ಯವಸ್ಥೆಯಾದೀತೆಂಬ ಆಶೆಯದೆ. ಆ ಕಾಲುವೆಗೆ ಸಣ್ಣ ಧಬಧಬೆಯಿರುವದರಿಂದ, ಆ ಮೋರೆಯ ಮೇಲಿರುವ ನೀರಿನ ಕೆಳಭಾಗವನ್ನು ತೆಗೆಯುವದು ಅಸಂಭವವಾಗುತ್ತದೆ. ಮತ್ತು ದೀಲಿನ ನೀರಿನ ಭಾಗವು ಉಗಿಯಾಗಿ ಹೋಗುತ್ತದೆ. ಆ ಮೋರೆಯ ಕಾಲುವೆಯು ಹೊಸ್ತಲದ ಮೇಲ್ಭಾಗದಿಂದ ಆ ಸರೋವರದ ಆಳವು ೪೫೦ ಫೂಟು ಇರುವದರಿಂದ ಸ್ವಲ್ಪು ನೀರು ಮಾತ್ರ ಜೇಸಿಗೆಯ ಬೆಳೆಗೆ ಉಪಯೋಗಿಸತಕ್ಕದ್ದಿರುತ್ತದೆ. ವಾಡಿಕೆಯ ಮಳೆಯು ಸಾಧಾರಣ ಬೆಳೆಗೆ ಸಾಕು. ಯಾಕಂದರೆ ಅವು ನೆರೆಹೊರೆಯಲ್ಲಿ ಬೇಕಾದಷ್ಟು ಬೆಳೆಯುತ್ತವೆ.

ಎರಡನೇನೊಂದು ದಂತ ಕಥೆಯು ಹೇಳಲ್ಪಡುವದೇನಂದರೆ—ಮಾಸೂರ ಪಟೇಲನ ಕುಟುಂಬದವರು ಮೈಸೂರ ಇಲಾಖೆಯ ಶಿವನೊಗ್ಗಾ ಜಿಲ್ಲೆಯಲ್ಲಿರುವ "ಪುರಾಪುರ

ಕೇರಿ" ಎಂಬಲ್ಲಿ ಇರುತ್ತಿದ್ದರು ಆ ಪಟೇಲನಿಗೆ ಒಬ್ಬ ಸುಂದರಳಾದ ಕೆಂಚವ್ವನೆಂಬ ಮಗಳಿದ್ದಳು. ಅವಳನ್ನು ವಿಜಯನಗರದ ಅರಸು ಮದುವೆಯಾಗಬೇಕೆಂದು ಇಚ್ಛಿಸುತ್ತಿದ್ದನು, ಆದರೆ ಅವಳ ತಂದೆಯು ಆ ಅರಸಿಗಿಂತ ಉಚ್ಚ ಕುಲದವನಿದ್ದರಿಂದ ಅವಳು ಅವನನ್ನು ಮದುವೆಯಾಗುವದಿಲ್ಲೆಂದು ಹೇಳಿದಳು. ಮತ್ತು ಆದನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಓಡಿ ಹೋದಳು. ಬಳಿಕ ಅವಳ ತಾಯಿ ತಂದೆಗಳು ಅವಳನ್ನು ಮೈಸೂರ ಇಲಾಖೆಯ ಶಿಕಾರಪೂರ ಜಿಲ್ಲೆಯಲ್ಲಿರುವ "ಇಸೂರ" ಎಂಬ ಊರ ಪಟೇಲನಿಗೆ ಮದುವೆ ಮಾಡಿಕೊಡಬೇಕೆಂದು ಯೋಚಿಸಿದರು. ಅದೇ ನೇರೆಗೆ ಅವರು ಮದುವೆಯದೆಶೆಯಿಂದ ಹೊರಟು, ಈಗ ಮದಗಸರೋವರದ ನೀರಿನಿಂದ ಮುಚ್ಚಲ್ಪಟ್ಟ ಒಂದು ದೇವಸ್ಥಾನದ ಮೇಲಿಂದ ಹಾದು ಹೋಗುವಾಗ್ಗೆ ಕೆಂಚವ್ವನು ಆ ದೇವಸ್ಥಾನದೊಳಗೆ ಹೋಗಿ ಅಲ್ಲಿಯ ದೇವರನ್ನು ಸೇವಿಸಹತ್ತಿದಳು. ಆಗ ಆಕೆಯ ತಾಯಿ ತಂದೆಗಳು ಆ ದೇವಾಲಯದೊಳಗೆ ಹೊಕ್ಕು ಆಕೆಯನ್ನು ಕರೆಯಲಾಗಿ ಅವಳು ತನ್ನ ದೇವರನ್ನು ಬಿಟ್ಟು ಬರುವದಿಲ್ಲೆಂದು ಹೇಳಲು, ಇವರು ನಿರುಪಾಯರಾಗಿ ಹೊರಟು ಹೋದರು. ಆ ಕಾಲಕ್ಕೆ ಮಳೆಗಾಲವು ಬಹಳ ಇದ್ದದರಿಂದ ಆ ದೇವಸ್ಥಾನವು ಆ ಸರೋವರದಲ್ಲಿ ಅಡಗಿಹೋಯಿತು. ಆಗ್ಗೆ ಆ ಗುಡಿಯಿದ್ದ ಒಡ್ಡನ್ನು ಕಾಯಲಿಕ್ಕೆ ಒಬ್ಬ ಕಾವಲುಗಾರನನ್ನು ನೇಮಿಸಿದರು. ಕೆಂಚವ್ವನು ಈ ಕಾವಲುಗಾರನ ಸ್ವಪ್ನದಲ್ಲಿ ಬಂದು, ನೀನು ಹೋಗಿ ಈ ಊರ ಪಟೇಲನಿಗೆ ೯ ತಿಂಗಳು ತುಂಬಿದ ಗರ್ಭಿಣಿಯನ್ನು ಬಲಿಯಾಗಿ ಅರ್ಪಿಸದಿದ್ದರೆ ಈ ಸರೋವರವನ್ನು ಒಡೆಯುವೆನೆಂಬದಾಗಿ ಹೇಳು ಎಂದು ಹೇಳಿದಳು. ಆಗಲವನು ನನ್ನ ಪ್ರಾಣ್ಯವನ್ನು ಬಿಡುವದಿಲ್ಲೆಂದು ಹೇಳಿದನು. ಆಗ ಕೆಂಚವ್ವನು ನೀನು ಹೋಗಿ ಈಸಂಗತಿಯನ್ನು ಹೇಳಿ ತಿರುಗಿ ಬರುವ ತನಕ ನಾನು ಈ ಒಡ್ಡನ್ನು ಒಡೆಯುವದಿಲ್ಲೆಂದು ವಚನ ಕೊಟ್ಟಳು. ಅದರೆ ನೀನು ತಡವಾಡಿ ಬಂದಲ್ಲಿ ಈ ಗುಡ್ಡಗಳೆಲ್ಲೊಂದರಿಂದ ಒಡೆ

ಯುವೆನೆಂದು ಹೇಳಿದಳು. ಆವನು ಹೋಗಿ ಅಲ್ಲಿಯ ಮುಖ್ಯಸ್ಥನಿಗೆ ಕೆಂಚವ್ವನ ಮಾತನ್ನು ಹೇಳಲಾಗಿ; ಅವನು ಆ ಕಿಂಕರನ ಮಾತನ್ನು ಲಕ್ಷ್ಯಮಾಡದೆ, ಅವನನ್ನು ತನ್ನ ಸ್ಥಾನ ಬಿಟ್ಟು ಬಂದ ಬಗ್ಗೆ ಶಿಕ್ಷೆಮಾಡಿ, ಕೆಂಚವ್ವನಿಗೆ ಏನೊಂದು ಬಲೆಯನ್ನು ಅರ್ಪಿಸಲಿಲ್ಲ. ಈ ಪಟೇಲನ ಉದ್ಧಟತನಕ್ಕೆ ಶಿಟ್ಟಾಗಿ ಕೆಂಚವ್ವನು ಆ ಗುಡ್ಡಗಳಲ್ಲೊಂದಾದ ಒಡ್ಡನ್ನು ಬಿಡಿದಳು. ಬಡಬಗ್ಗರು ಆ ಸರೋವರಕ್ಕೆ ಹೋಗಿ, ಕೆಂಚವ್ವನನ್ನು ಕುರಿತು ತಮಗೆ ಮದುವೆಯಲ್ಲಿ ಉಪಯೋಗಿಸುವದಕ್ಕಾಗಿ, ಬೇಕಾದ ಒಡವೆಗಳನ್ನು ಬೇಡಿಕೊಳ್ಳುವರು. ಆ ದರಂತೆ ಸರೋವರದ ಬದಿಯಿಂದ ತಮಗೆ ಬೇಕಾದ ಒಡವೆಗಳನ್ನು ತಕ್ಕೊಂಡು ಹೋಗುವರು. ಒಬ್ಬನು ತಾನು ತಗೆದುಕೊಂಡು ಹೋದ ಒಡವೆಗಳನ್ನು ತಿರುಗಿಕೊಡದ್ದರಿಂದ ಕೆಂಚವ್ವನು ಈಗ ಅವುಗಳನ್ನು ಕೊಡುವದಿಲ್ಲೆಂದು ಹೇಳುತ್ತಾರೆ.

ಸರ್ ೧೮೨೦ ರಲ್ಲಿ ಒಬ್ಬ ಜಾಲಗಾರನ ಹಗ್ಗವು ನೀರಲ್ಲಿದ್ದ ದೇವಸ್ಥಾನದ ಘಾಟಿಗೆ ಸಿಕ್ಕಿಬಿತ್ತು. ತನ್ನ ಹಗ್ಗವನ್ನು ಬಿಡಿಸಿಕೊಳ್ಳುವದಕ್ಕಾಗಿ ನೀರಲ್ಲಿ ಹಾರಿ ಆ ದೇವಸ್ಥಾನದಲ್ಲಿರುವ ಕೆಂಚವ್ವನ ಬಂಗಾರದ ಮೂರ್ತಿಯನ್ನು ನೋಡಿದನು. ಆಗಲವಳು—ತಾನು ಬದುಕಿದ್ದೇನೆಂದು ಯಾರಿಗೂ ತಿಳಿಸಬಾರದೆಂತಲೂ, ನನ್ನ ಗುಟ್ಟನ್ನು ನೀನು ಬೇರೆಯವರಿಗೆ ಹೇಳಿದ ದಿವಸವೇ ನೆತ್ತರಕಾರಿ ಸತ್ತು ಹೋಗುವಿ ಎಂತಲೂ ಹೇಳಿದಳು. ಅವನು "ನಾನು ಹೊರಗೆ ಹ್ಯಾಗೆ ಹೋಗಬಹುದೆಂದು?" ಕೇಳಲಾಗಿ ಅವಳು ಅವನನ್ನು ನುಗಿಸಿಕೊಟ್ಟಳು. ಆಗಲವನು ಆ ಸರೋವರದ ದಂಡೆಯಮೇಲೆ ನಿಂತನು. ಅವನು ಆ ಗುಟ್ಟನ್ನು ಎರಡು ವರುಷದವರೆಗೆ ಗುಪ್ತವಾಗಿಟ್ಟನು. ಆದರೆ ಮುಂದೆ ಅವನು ಅದನ್ನು ಹೇಳಲಾಗಿ ನೆತ್ತರಕಾರಿ ಸತ್ತು ಹೋದನು.

ಬರಗಾಲದಲ್ಲಿ ಆ ದೇವಸ್ಥಾನದ ಶಿಕಾರಪೂರದಲ್ಲಿರುವ ಮೊಖ್ತೇದಾರರು ಬಂಗಾರದ ಮೂಗುತಿಯನ್ನು ತಕ್ಕೊಂಡು

ಆ ಸರೋವರಕ್ಕೆ ಬರುತ್ತಾರೆ. ಮತ್ತು ಆವರು ಬಂದು ಸಣ್ಣ ತೆಪ್ಪದ ಮೇಲೆ ನೈವೇದ್ಯವನ್ನೂ ಮೂಗತಿಯನ್ನು ಇಟ್ಟು ಅದನ್ನು ಆ ಸರೋವರದಲ್ಲಿ ಬಿಟ್ಟು ಕೆಂಚವ್ವನನ್ನು ಮಳೆ ಕಳುಹಿಸೆಂದು ಬೇಡಿಕೊಳ್ಳುತ್ತಾರೆ.''

ರಟ್ಟೀಹಳ್ಳಿ ಕನ್ನಡಶಾಲಾ
ತಾ॥ ೬—೨—೧೯೦೩. } ಸ್ವಾಮಿ ಗೋವಿಂದ ಕುಲಕರ್ಣಿ
ಹೆಡ್ ಮಾಸ್ತರ.

DHARWAR TRAINING COLLEGE TERMINAL EXAMINATION—1903.

ಧಾರವಾಡ ಟ್ರೇನಿಂಗಕಾಲೇಜದ ಷಾಣ್ಮಾಸಿಕ ಪರೀಕ್ಷೆಯ ಪ್ರಶ್ನೆಗಳು.

೩ನೇ ವರ್ಷ—ಎಪ್ರಿಲ.

ಕನ್ನಡ—ಗದ್ಯಪದ್ಯ.

೧. ಕನ್ನಡ ಕಾದಂಬರಿ, ರಾಜಶೇಖರವಿಳಾಸ,—ಈ ಗ್ರಂಥಗಳ ಹಾಗು ಇವನ್ನು ಮಾಡಿದವರ ವಿಷಯದಲ್ಲಿ ನಿಮಗೆ ತಿಳಿದಿರುವದೇನು?

೨. ಪಾಂಡವರು ಅಜ್ಞಾತವಾಸದಲ್ಲಿ ಯಾವ ವೇಷದಿಂದ ಯಾವ ಹೆಸರಿನಿಂದ ಇದ್ದರು.

೩. ಘ್ರಾಣೇಂದ್ರಿಯದಿಂದ.....ಸಮೂಹಗಳು,.....ಬ್ರಾಹ್ಮಣರು,.....ಕ್ಷತ್ರಿಯರು.....ಇತರ ಜನರು, ಸಕಲಾರ್ಥವನ್ನು ತಿಳಿಯುತ್ತಾರೆ. ಇಲ್ಲಿ ಬಿಟ್ಟಿರುವ ಪದಗಳನ್ನು ಶೇರಿಸುವದು.

೪. ವಂದಿವಾಗಧರು, ಈತಿಬಾಧೆ, ಮಹಾರಥಿಕ, ಮುನ್ಸರ, ಪ್ರಂಖ್ಯಾನುಪ್ರಂಖ್ಯವಾಗಿ, ಮೃತಪ್ರಾಯರು, ಪಸಿಯಬಣ್ಣ, ನಿಪ್ಪಾಸರ,—ಈ ಶಬ್ದಗಳ ಅರ್ಥವನ್ನು ಬರೆವುದು.

೫. ಕಾರ್ಯದ ರೀತಿಯು ಯಾರಿಗೂ ತಿಳಿಯುವದಕ್ಕೆ ಶಕ್ಯವಲ್ಲ;

ಪಾಂಡವರಿಗೆ ಅಜ್ಞಾತವಾಸ ಸಂವತ್ಸರವು ಸ್ವಲ್ಪವಾಗಿ ವಿ
ಕ್ಕಿದೆ.

ಆ ಪ್ರಕಾರವಾದ ಪುಣ್ಯದಿಂದಲೇ ಅವರು ತಮ್ಮ ಧರ್ಮ
ವನ್ನು ಬಿಡದೆ ಪ್ರತಿಜ್ಞೆಯನ್ನು ಪಾಲಿಸಿ ಕ್ಷೇಮವನ್ನು ಹೊಂ
ದಿದರು.

ಈ ವಾಕ್ಯಗಳನ್ನು ಹಳಗನ್ನಡದಲ್ಲಿ ಬರಿಯಬೇಕು.

೬. ಕಾರ್ಮುಕ, ಅಮಾತ್ಯ, ಅವಲಕ್ಕಿ, ಜೀನೆಯ್, ನಾ
ಹು, ಸತ್ಯಸಂಧ, ಕಂಧರ, ಬಿಜ್ಜೋಲಗ, ಇವುಗಳ ವ್ಯುತ್ಪತ್ತಿ
ಯೇನು?

೭. ಇಳೆಯೊಳದೊರ್ವನಿಂದ್ರನೆನೆ ಸಂಪಸಮೃದ್ಧಿಯೊ
ಳೊಂದಿ ಕೂಡಿ ತ!
ನ್ನೊಳ ನೃಪಲಕ್ಷಣಂ ನೆಗಳಿದೋರ್ವಳದಿಂ ಚಕುರ
ಬ್ಧಿ ಮೇಖಲಾ॥
ವಳಯಿತ ಭೂಮಿಗಾದ ನೆರೆಯುಂ ನೃಪತಿ ಪ್ರಭು
ಲೋಕಮುಂ ನಿಜೋ।
ಜ್ವಳತರ ಕೀರ್ತಿಯಿಂ ನೆರೆಯೆ ಮುದ್ರಿಸಿ ಶೂದ್ರಕ
ನೆಂಬ ಭೂಭುಜಂ॥ . ॥

೮. ಶೂದ್ರಕನ ವಿಕ್ರಮಂ ನರಸಿಂಹಾಡಂಬರಕ್ಕೆ ನಸು
ನಗುತಿರ್ಪುದಂ— ಇಲ್ಲಿ ನಗುವದಕ್ಕೆ ಕಾರಣವೇನು? ಇಲ್ಲಿ
ಯು ಚತುರ್ಥಿಗೆ ಅರ್ಥವೇನು?

೯. ಬಾಣಕ್ಷತಿ ಪುಳಿಂದನ ಸಂಘಾನವನೆಯ್ದಿದತ್ತು— ಇ
ದರ ಶ್ಲೇಷಾರ್ಥವೇನು?

೧೦. ಕುಟ್ಟಿ ಮುತಳದೊಳ್ ಪೊಳದತ್ತುರೊಪ್ಪು ಭೂಪೋ
ತ್ತಮನ ಅರಿಕರಿ ಮಸ್ತಕ ಮುಕ್ತೋತರದಂಕುರ ಮೆನೆಪ್ಪು
ವ ನೃಪಾಲಕೃಪಾಣಂ—ಅದು ಹ್ಯಾಗೆ ಎನೆಸಿದವು?

೧೧. (ಅ) ಕಡುಪು, ಕವಿ, ಪಿಡಿ, ಮುಡಿ, ಕುಡಿ, ಅರಡಿ,
ಲೆ, ತೆರೆ, ಒಲೆ, ಜಡಿ,—ಇವುಗಳಿಗೆ ಎರಡೆರಡರ್ಥಗಳ
ನ್ನು ಹೇಳಬೇಕು.

(ಬ) ಥಳಥಳಿಸಿ ಬಳಿದುಬಳ್ಳಿವರಿದು ಪರೆದು ಪಸುರಿಪ ಕಟೂಷ್ಣರುಚಿರ ರುಚಿಯೆಂಬ ವದನವಿಧು ವಿಮಳಪ್ರಭಾ ಪಟಲಂ ಕನತ್ಕನಕಮಯಮಣಿಭೂಷಣಾಂಶು ವಿಸರದರು ಣಾತರುಣಾತಪದೊಳ್ ಮಲ್ಲಗಾಳಗವನೊಡರ್ಚಿ—

ಇದರ ಅರ್ಥವನ್ನು ಸುಲಭವಾದ ಹೊಸಗನ್ನಡದಲ್ಲಿ ಸಂಸ್ಕೃತ ಮಿಶ್ರವಿಲ್ಲದಂತೆ ಬರೆಯುವುದು.

೧೦. (ಅ) ಅವುರಾಂಗನೆ ಯಿವಳಲ್ಲದೊ ।
ಡೆವೆಯಿಕ್ಕದೆ ದೀರ್ಘನಯನವಿಲಾಸಾಂದ
ರ್ಯಂ ॥
ಸವನಿಪುದೆ ನೋಳ್ಪೊಡೆಂದಾ ।
ರವುಣಿಯನಾನೃಪಕುಮಾರ ನೀಕ್ಷಿಸುತೆಂ
ದಂ ॥ . ॥

ಇದರ ಅಲಂಕಾರವಾವುದು? ಲಕ್ಷಣವೇನು?

(ಬ) "ರೂಪಕಾತಿಶೋಕ್ತಿಗೆ ರಾಜಶೇಖರವಿಲಾಸದಿಂದ ಬಂದು ಪದ್ಯವನ್ನು ತೆಗೆದು ಲಕ್ಷಣ ಸಮನ್ವಯ ಮಾಡುವದು.

(ಕ) ಇಂತೆಂದು ಪರಿಘಾರ್ಥನಂ ನಿಲಿಸಿನೋಡಿ ಹನು ।
ಮಂತನಂ ಕಂಡು ನೀನೀತನವರೂಥಮುಂ ॥
ತೊಂತಿವಾಲಾಗ್ರದಿಂ ಗಗನದೊಳ್ನಿರುಪಿಡು ಮಹಾ
ರ್ಣವಕೆ ಪೋಗಲೆನಲೂ ॥
ಎಂತಿವನೆ ರಥವನೀಡಾಡುವೆಂ ದಶವದನ ।
ನಂತೆಯುಂ ಜಂಬುಮಾಲಿಯು ತೆರದಿರಾವು ನೀ ।
ಮಂತನಿಗೆ ಕಾವಲಿರ್ದಸುರೆಯು ತರಬೆಳುಂ ಖಳ
ನೀತನಲ್ಲೆಂದನೂ ॥ ೧ ॥

ಈ ಪದ್ಯದ ಅನ್ವಯಾರ್ಥವನ್ನು ಬರೆದು ಪೌರಾಣಿಕ ದರ್ಭಗಳನ್ನು ಬರೆಯುವದು.

ಶಾಲಾಪತ್ರಕ.

ಪದ್ಯಂ.

ಶ್ರೀಹುವಿದ್ಯಾಗುರುವರ್ಯರುನ್ನತಿಕೆಯುಂಸಚ್ಛಿಷ್ಯಸೋತ್ಕರ್ಷಮುಂ।
ಬಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಸಹುದಿಂದಿತ್ತಪವೋದುವರ್ಗಸುಗುಣಂ ತೋರಲ್ಕೆಳ್ಕೈಕೊಂಬುದೈ।
ದಯೆಯಿಂದೋಷಪತಿದ್ದ ವೇಳ್ವುದುಧರಿಣ್ಣಾನಾಭಿವೃದ್ಧಿಪ್ರಿಯರಿಂ॥

ಪುಸ್ತಕ ೭೯] ಜುಲೈ ೧೯೦೩. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

(ಶಿಕ್ಷಕರ ದ್ವಿತೀಯ ಸಮ್ಮೇಲನದಲ್ಲಿ ನಡೆದ ವಿಷಯಗಳು, ಹಿಂದಿನ ಅಂಕದಿಂದ ಮುಂದೆ ಸಾಗಿದ್ದು.)

ಹಿಂದಿನ ಎರಡು ಸಂಚಿಕೆಯಲ್ಲಿ ಶಿಕ್ಷಕರ ದ್ವಿತೀಯಸಮ್ಮೇಲನದಲ್ಲಿ ನಡೆದ ಪಾಠಗಳನ್ನೂ ಅವುಗಳ ಶಿಷ್ಪಣೆಗಳನ್ನೂ ಮುದ್ರಿಸಿರುವೆವು. ಈ ಸಂಚಿಕೆಯಲ್ಲಿ ಸಮ್ಮೇಲನದ ಕಡೆಯಲ್ಲಿ ನಡೆದ ಸಂಗತಿಗಳನ್ನು ಸಂಕ್ಷೇಪದಿಂದ ಬರೆದು ವಿಷಯವನ್ನು ಪೂರ್ಣಮಾಡಿದ್ದೇವೆ.

ಪಾಠಗಳನ್ನು ಕಲಿಸುವದಾದ ಬಳಿಕ ಆವೊತ್ತು ರಾತ್ರಿ ಬಂದ ಅಧ್ಯಾಪಕರಿಗೆಲ್ಲ ಕಾಲೇಜದ ಬೋರ್ಡಿಂಗಿನಲ್ಲಿ ಸಗ್ರಾಸಭೋಜನವನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳು ಎಲ್ಲರನ್ನು ಚೆನ್ನಾಗಿ ಆದರಿಸಿ ಅವರೊಡನೆ ಭೋಜನ ಸಮಾರಂಭವನ್ನು ನೆರವೇರಿಸಿದರು. ತರುವಾಯ ಗಾಯನವಾದನ ಮುಂತಾದ ಚೆತ್ತಾನಂದಕರವಾದ ಕಾರ್ಯಗಳು ಸಾಂಗವಾದ ಬಳಿಕ, ಮೆಸರ್ಸ, ಕುಲಕರ್ಣಿ (ಅಬ್ಬಿಗೇರಿ) ದೀಕ್ಷಿತ (ಧಾರವಾಡ) ಮುಂತಾದ ಪ್ರವೀಣ ಮಾಸ್ತರರು ಸುಶ್ರಾವ್ಯವಾದ ಭಾಷಣಗಳನ್ನು ಮಾಡಿದರು. ಅವುಗಳೊಳಗಿನ ತಾತ್ಪರ್ಯವು:—ಕಾಲೇಜ ವಿದ್ಯಾರ್ಥಿಗಳು ತಮ್ಮನ್ನು ಬಹ

ಪ್ರೀತಿಯಿಂದಲೂ ಮರ್ಯಾದೆಯಿಂದಲೂ ಸತ್ಕರಿಸಿದ್ದಕ್ಕಾಗಿ ಅವರ ಆಭಾರವನ್ನು ಸದಯಾಂತಃಕರಣದಿಂದ ನೆನಿಸುತ್ತೇವೆ. ಕಾಲೇಜದ ಅಧ್ಯಾಪಕರು ಹೋದವರುಷ ಈ ವರುಷ ಹೀಗೆ ಎರಡು ವರುಷ ಶ್ರಮಪಟ್ಟು ವಿದ್ಯಾಖಾತೆಯಿಂದ ಬಳಿಕೆಯಲ್ಲಿ ಬಂದ ಹೊಸ ವಿಷಯಗಳನ್ನೂ ಕಲಿಸುವ ಮಾದರಿಗಳನ್ನೂ, ಇದ್ದಷ್ಟು ಬುದ್ಧಿಯನ್ನು ಕೆಡಿಸಿಕೊಳ್ಳುವಂಥ ಕುಗ್ರಾಮದಲ್ಲಿ ವಾಸಮಾಡುವ ನಮಗೆ ತೋರಿಸಿಕೊಟ್ಟರು ವಿಶೇಷವಾಗಿ ಮಿ. ಕುಲಕರ್ಣಿ ಮಾಸ್ತರರು ವಸ್ತುಪಾಠದ ಸಂಬಂಧದಿಂದಲೂ, ವಿದ್ಯಾಖಾತೆಯಿಂದ ಅವುಲಿನಲ್ಲಿ ಬಂದ "ಶಿಕ್ಷಕರಿಗೋಸ್ಕರ ಸೂಚನೆ" ಎಂಬ ಸೂಚನೆಗಳ ಸಂಬಂಧದಿಂದಲೂ, ಕಿಂಡರ ಗಾರ್ಟನ್ ಪದ್ಧತಿಯ ಸಂಬಂಧದಿಂದಲೂ ಜಂಗುತಿಂದವುತಿಯವರಾದ ನಮಗೆ ಸುಬೋಧವಾಗಿಯೂ ಸಪ್ರಯೋಗವಾಗಿಯೂ ತಿಳಿಸಿಕೊಟ್ಟದ್ದಕ್ಕಾಗಿ ಅವರ ಅನಂತ ಉಪಕಾರವನ್ನು ಎಣಿಸುವದು ನಮ್ಮ ಕರ್ತವ್ಯವೇ ಸರಿ ಆದರೂ ಒಂದು ಬಗೆಯಿಂದ ಅವರು ನಮ್ಮ ಗುರುಗಳು, ನಾವು ಅವರ ಶಿಷ್ಯರು, ಅಂದ ಬಳಿಕ ನಮಗೆ ಯಾವಾಗಲೂ ಸನ್ಮಾರ್ಗ ತೋರಿಸುವದೂ ನಮಗೊದಗುವ ತೊಂದರೆಗಳನ್ನು ದೂರಪಡಿಸುವದೂ ಅವರ ಕರ್ತವ್ಯವಾಗಿದ್ದುವು. ಆದರಂತೆ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಿದರ ಪ್ಪಲ್ಲದೆ ಹೊರ್ತು ನಮ್ಮ ಮೇಲೇನೂ ಉಪಕಾರ ಮಾಡಿದರೆಂದು ಹೇಳಲಿಕ್ಕಾಗದು ಆದರೆ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವ ಗುರುಗಳು ಪ್ರಸ್ತುತಕ್ಕೆ ಅಪರೂಪವಾಗಿ ಸಿಕ್ಕುತ್ತಾರೆ. ಪೂರ್ವಕಾಲದಲ್ಲಿ ಋಷಿಗಳು ಮಾತ್ರ ನಿಜವಾಗಿ ಗುರುಗಳೆಂಬ ಪದವಿಗೆ ತಕ್ಕವರಾಗಿದ್ದರು. ಸದ್ಯಕ್ಕೆ ಹೊಟ್ಟೆಗಾಗಿ ದುಡಿಯುವ ಗುರುಗಳಲ್ಲಿ ನಮ್ಮ ರಾಮರಾಯರಂಥ ಗುರುಗಳು ಸಿಗುವದು ದುರ್ಲಭವೇ ಸರಿ. ಮುಖ್ಯವಾಗಿ ವರುವರುಷ ಈ ಬಗೆಯ ಸಮ್ಮೇಲನವನ್ನು ಕೂಡಿಸಿ ಜಂಗುತಿಂದ ಅಧ್ಯಾಪಕರ ಮತಿಯನ್ನು ಸಾಣೇ ಹಿಡಿಸಿ, ಅವರ ಕಲ್ಯಾಣವನ್ನು ಪರ್ಯಾಯದಿಂದ ದೇಶದ ಕಲ್ಯಾಣವನ್ನು ಈ ಬಗೆಯ ಸಮ್ಮೇಲನದ್ವಾರದಿಂದ ನೆರವೇ

ರುತ್ತದೆಂಬ ಸಂಗತಿಯು ಸ್ಪಷ್ಟವಾಗುತ್ತದೆ. ಭಾರತೀಯರ ಮಾಡತಕ್ಕ ಕಾರ್ಯಗಳಲ್ಲಿ ಇದಕ್ಕೂ ಮಹತ್ವದ ಕಾರ್ಯವು ಯಾವದೂ ಇಲ್ಲವೆಂದು ಖಂಡಿತವಾಗಿ ಹೇಳುತ್ತೇವೆ."

ಈ ಮೇರೆಗೆ ಭಾಷಣವಾದ ಬಳಿಕ ಕಾಲೇಜದ ಅಧ್ಯಾಪಕರಲ್ಲಿ ಮಿ. ದೇಶಪಾಂಡೆ, ಕನ್ನಡ ಪಂಡಿತ, ಗಣಿತಮಾಸ್ತರರಾದ ರಾಮಚಂದ್ರರಾವ, ಮೊದಲಾದವರ ಭಾಷಣಗಳಾದ ಬಳಿಕ ಕಡೆಯಲ್ಲಿ ರಾ. ಸಾ. ಬೆಂಡಿಗೇರಿಯವರ ಭಾಷಣವಾಯಿತು. ಕನ್ನಡಪಂಡಿತರು ಮಾಡಿದ ಉಪನ್ಯಾಸವು:- ಛಾತ್ರವರ್ಗವೇ, ನೀವು ಈಗೆರೆಡು ದಿವಸ ಈ ಶಾಲೆಯಲ್ಲಿ ಪ್ರಯೋಗ ಮಾರ್ಗದಿಂದ ತೋರಿಸಿದ ವಿಷಯವಿವರಣೆಯನ್ನು ಚನ್ನಾಗಿ ಮನನ ಮಾಡಿಕೊಳ್ಳತಕ್ಕದ್ದು. ನೀವು ಪಳ್ಳಿಯ ಶಾಲೆಯ ಮಾಸ್ತರರು. ನಿಮಗೊದಗುವ ಸಂಶಯಗಳನ್ನು ದೂರ ಪಡಿಸಲಿಕ್ಕೆ ನಿಮಗೆ ಅಲ್ಲಿ ಆರೂ ಶಿಕ್ಷಕರಾರರು. ಆದ್ದರಿಂದ ನೀವು ನಿಃಸಂಶಯವಾದ ಜ್ಞಾನವನ್ನು ಸಂಪಾದಿಸುವದು ಅವಶ್ಯವು. ನೀವು ಚಿಕ್ಕ ಮಕ್ಕಳ ಮೌಢ್ಯವನ್ನು ಕಳೆಯತಕ್ಕವರು. ಆದ್ದರಿಂದ ನೀವು ನಿಮ್ಮಲ್ಲಿಯೇ ಮೌಢ್ಯವನ್ನು ಇರಗೊಡುವದುತಕ್ಕದ್ದಲ್ಲ. ಆದಕಾರಣ, ನಿಮಗೆ ಸಂಧಿದೊರೆದಾಗ ನಿಮ್ಮ ನಿಮ್ಮ ಸಂಶಯಗಳನ್ನು ದೂರಪಡಿಸಿಕೊಳ್ಳುವದು ಅವಶ್ಯವದೆ. ಈ ಕಾರ್ಯವನ್ನು ಇಂದಿನ ಸಮ್ಮೇಲನವು ಒಳಿತಾಗಿ ಸಾಂಗಗೊಳಿಸಿತೆಂದು ಹೇಳಬಹುದು ಇದೇ ಮೇರೆಗೆ ವರುವರುಷ ಅಥವಾ ಕೂಡಿದಾಗ ನಿಮ್ಮ ನಿಮ್ಮ ನೆರೆಹೊರೆಯ ಅಧ್ಯಾಪಕರೆಲ್ಲ ಒಟ್ಟುಗೂಡಿ ಆರು ತಿಂಗಳಿಗೊಮ್ಮೆ ಸಮ್ಮೇಲನವನ್ನು ಕೂಡಿಸಿ ವಿಷಯಗಳನ್ನು ಚರ್ಚಿಸಿ ಮೇಲಾದ ವಿದ್ವಗುರುಗಳೆಂಬ ಗೌರವದ ಪದವಿಯನ್ನು ಪಡೆಯಬೇಕೆಂದು ಆಶಿಸುತ್ತೇನೆ.

ಮಿ. ದೇಶಪಾಂಡೆಯವರ ಉಪನ್ಯಾಸವು- ಯಾವದೊಂದು ರಾಷ್ಟ್ರದಲ್ಲಿ ಉದ್ಯೋಗಗಳೂ ಕಲಾಕೌಶಲ್ಯಗಳೂ ಅಭಿವೃದ್ಧಿಯನ್ನು ಹೊಂದಬೇಕಾದರೆ ಮುಖ್ಯವಾಗಿ ಎರಡು ಸಾಧನಗಳು ಅವಶ್ಯವಾಗಿರುತ್ತವೆ. ಅವು ಯಾವವೆಂದರೆ;-

೧ನೇದು ರಾಜಾಶ್ರಯ, ೨ನೇದು ಉದ್ಯೋಗಸಮಾಜಗಳ ಪ್ರಯತ್ನ-ಈ ಸಾಧನಗಳಿಂದ ನಮ್ಮ ದೇಶದಲ್ಲಿ ಕೆಲವು

ತೆತೆಕಗಳ ಹಿಂದೆ ಬೇರೆ ಬೇರೆ ಕಲಾಕೌಶಲ್ಯಗಳಲ್ಲಿ ಜನರು ಒಳ್ಳೇ ಪ್ರಸಿದ್ಧಿಯನ್ನು ಹೊಂದಿದ್ದರೆಂಬುದು ಎಲ್ಲರಿಗೂ ಗೊತ್ತಿದ್ದ ಮಾತೇ ಆದೆ. ಅದೇ ಪೇರೆಗೆ ವಿದ್ಯಾಶಾಲಾಶಿಕ್ಷಣದಲ್ಲಿ ಸುಧಾರಣೆಯಾಗಬೇಕಾದರೆ ಮೇಲೆ ಹೇಳಿದ ಎರಡು ಸಾಧನಗಳ ಉಪಯೋಗವನ್ನು ಮಾಡುತ್ತ ಹೋಗಬೇಕೆಂಬದು ಸಹಜವವೆ. ಈ ಕೆಲಸಕ್ಕೆ ರಾಜಾಶ್ರಯವು ಮೊದಲಿನಿಂದ ಇದ್ದೇ ಇರುತ್ತದೆ. ಮುಂದಾದರೂ ತಕ್ಕ ಆಶ್ರಯವನ್ನು ಕಾಲಕಾಲಕ್ಕೆ ಕೊಡಲಿಕ್ಕೆ ಸರಕಾರವು ಸಿದ್ಧವಾಗಿರುವದು. ಆದರೆ ಸಮಾಜದ ಆಶ್ರಯವು ಮಾತ್ರ ಇದುವರೆಗೆ ಇದ್ದಿಲ್ಲ. ಅದನ್ನು ಒದಗಿಸಿಕೊಡುವ ವಿಷಯದಲ್ಲಿ ರಾ. ಸಾ. ಪ್ರಿನ್ಸಿಪಾಲ ರೊದ್ದ ಸಾ॥ ರೂ, ಮ. ರಾ. ರಾ. ಕುಲಕರ್ಣಿ ರಾಮಯರೂ ಟೊಂಕ ಕಟ್ಟಿದ್ದಾರೆ. ಇದಕ್ಕೆ ತಾವೆಲ್ಲರೂ ನೆರವಾದರೆ ಶಿಕ್ಷಣಕಲಾ ಸುಧಾರಣೆಯ ರಥವು ಮುಂದಕ್ಕೆ ತೀವ್ರ ಸಾಗುವದೆಂಬದಕ್ಕೆ ಸಂಶಯವಿಲ್ಲ.

ಒಂದೇ ಉದ್ಯೋಗ ಮಾಡುವ ಜನರು ಮೇಲೆ ಮೇಲೆ ಒತ್ತಟ್ಟಿಗೆ ಕೂಡುವದರಿಂದ ಪರಸ್ಪರರಲ್ಲಿ ಐಕ್ಯಭಾವವೂ ಪ್ರೇಮವೂ ಅಭಿವೃದ್ಧಿಹೊಂದಿ, ಉದ್ಯೋಗದ ಸುಧಾರಣೆಗೆ ಒಳ್ಳೇ ಅನುಕೂಲವಾಗುವದೆಂಬ ಮಾತು ಇತಿಹಾಸ ಪ್ರಸಿದ್ಧವದೆ ಸೂಜ್ಞರಾದ ತಾವೆಲ್ಲರೂ ಕೈಕೊಂಡ ಉದ್ಯೋಗವು ದೇಶ ಸುಧಾರಣೆಗೆ ಮೂಲಾಧಾರವಾಗಿರುವ ಕಾರಣ ಇವರಲ್ಲಿ ಕಾಲಕಾಲಕ್ಕೆ ಸುಧಾರಣೆಯಾಗುವದು ಅವಶ್ಯವೆಂಬದು ನಿರ್ವಿವಾದವಾದದ್ದು. ಆವಿಕಾರಣ ಈ ಸಂಮೇಲನದ ಸಮಾರಂಭವು ಪ್ರತಿವರ್ಷ ವಿಶೇಷ ವಿಜ್ರಂಭಣೆಯಿಂದ ನಡೆಯುವದಕ್ಕೆ ತಾವೆಲ್ಲರೂ ಮನಃಪೂರ್ವಕ ಸಹಾಯಮಾಡುವಿರೆಂದು ನಂಬುತ್ತೇನೆ. ಇನ್ನು "ಹನಿಹನಿ ಕೂಡಿದರೆ ಹಳ್ಳ" "ತೆನೆತೆನೆಕೂಡಿದರೆ ರಾಶಿಯೆಂ"ಬಂತೆ ತಮ್ಮಲ್ಲಿ ಅನುಕೂಲಸಿದ್ದವರು, ರಾ. ರಾ. ಕಲಿವಾಳ ಮತ್ತು ಪಾಟೀಲ ಇವರಂತೆ ಶಿಕ್ಷಣಕಲೆಯ ಸುಧಾರಣೆಯ ವಿಷಯದಲ್ಲಿ ಯೋಜಿಸಿದ ಉಪಾಯಗಳನ್ನು ಸಭೆಯ ಮುಂದೆ ತಂದಿರಿಸಿದರೆ, ಎಲ್ಲ ಶ್ರೇಯಸ್ಸಾಯ ಬಾಂಧವರಿಗೂ ಅದರಿಂದ ಪ್ರಯೋಜನವಾಗ್ಯ

ವೆದು; ಮತ್ತು ಸುಧಾರಣೆಯ ಉಪಾಯಗಳ ಸಂಗ್ರಹವು ಬೆಳೆಯುವದು. ಇಂಥ ಸಾಧನಗಳನ್ನು ಬೇರೆ ಬೇರೆ ಜಿಲ್ಲೆಯ ಶಾಲಾಧ್ಯಾಪಕರು ಸಭೆಯು ಮುಂದಿರಿಸುವಂತೆ ಸೃಷ್ಟಿಕರ್ತನು ಸಾವಕಾಶವನ್ನೀಯುಲೆಂದು ಜೋಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಬಳಿಕ ವಿ. ಕುಲಕರ್ಣಿಯವರು ಮಾತಾಡಿದರು. ಅದ ರಸಾರಾಂಶವು—ಇಷ್ಟು ಜನರು ನನ್ನನ್ನು ಪರಿಪರಿಯಿಂದ ಹೊಗಳಿದರು. ಆದರೆ ನಾನು ಅಧ್ಯಾಪಕನು. ಈ ಶರೀರವನ್ನೂ ಪ್ರಾಣವನ್ನೂ ವಿದ್ಯಾದಾನದಲ್ಲಿಯೇ ಕಳೆಯಬೇಕೆಂದು ನಾನು ನಿಶ್ಚಯಿಸಿದ್ದೇನೆ. ಈ ನಿಶ್ಚಯವನ್ನು ಕಡೆಗಾಣಿಸುವ ಭಾಗವು ಶ್ರೀ ಭಗವಂತನ ಅಧೀನದ್ದಾಗಿರುವದು. ಈ ನಿಶ್ಚಯಕ್ಕನುಸಾರವಾಗಿ ನಾನು ನನ್ನ ಕೆಲಸವನ್ನು ಮಾಡಿದ್ದೇನೆ. ಈ ಸಮ್ಮೇಲನದಲ್ಲಿ ನಾವು ತೆಗೆದ ಟಿಪ್ಪಣಿಗಳನ್ನು ಚನ್ನಾಗಿ ಓದಿಕೊಂಡು ಆಯಾ ವಿಷಯಗಳನ್ನು ಕಲಿಸುವ ಮೊದಲು ಹೇಳಿದ ಸೂಚನೆಗಳನ್ನು ಮನನಮಾಡಿಕೊಂಡು, ಪ್ರೌಢರಿದ್ದು ದುಡಿದರೆ ಯಾವತ್ತ್ಕರೂ ಒಳ್ಳೇ ಹೆಸರಾದ ಅಧ್ಯಾಪಕರಾಗಬಹುದೆಂದು ನನ್ನ ನಂಬಿಗೆಯುಂಟು ನನ್ನ ನಂಬಿಗೆಯನ್ನು ನೀವು ನಿಮ್ಮ ಆಚರಣೆಯಿಂದ ದೃಢಪಡಿಸಿದರೆ, ನಾವು ತೆಗೆದುಕೊಂಡ ಶ್ರಮವೂ ಸಮ್ಮೇಲನದ ಉದ್ದೇಶವೂ ಸಾರ್ಥಕವಾಯಿತೆಂದು ತಿಳಿಯುತ್ತೇನೆ.

ಇ.

ಬಳಿಕ ಆಕ್ಟಿಂಗ ಪ್ರಿನ್ಸಿಪಾಲರಾಗಿದ್ದ ರಾ. ಸಾ. ಬೆಂಡಿಗೇರಿಯವರು ತಮ್ಮ ಅಸ್ಖಲಿತವಾದ ಪ್ರಿಯವಾಣಿಯಿಂದ ಎಲ್ಲ ಅಧ್ಯಾಪಕರನ್ನು ತೃಪ್ತಿಪಡಿಸಿದ್ದಲ್ಲದೆ, ಮುಂದಿನ ಇದೇ ಅವಧಿಯಲ್ಲಿ ಮರಳಿ ಸಮ್ಮೇಲನವು ನೆರೆಯುವದೆಂತಲೂ, ಆ ಕಾಲದಲ್ಲಿ ತಮ್ಮೊಳಗಿನ ಅನುಭವಿಕರೂ, ಉತ್ಸುಕತೆಯುಳ್ಳವರೂ ತಮಗೆ ಬೇಕಾದ ವಿಷಯವನ್ನು ಆರಿಸಿಕೊಂಡು ಅದನ್ನು ಟಿಪ್ಪಣಿಯೊಂದಿಗೆ ಸಮ್ಮೇಲನದಲ್ಲಿ ಪ್ರಯೋಗ ಮಾಡಿ ತೋರಿಸಬಹುದೆಂತಲೂ ಆಡಿ ತೋರಿಸಿದರು. ಬಳಿಕ ಜಯ ಘೋಷದೊಂದಿಗೆ ಸಭಾಕಾರ್ಯವು ಸಮಾಪ್ತವಾಯಿತು.

ರಜೆಯ ಮೇಲಿದ್ದ ಕಾಹೀಮು ಇನಸ್ಪೇಕ್ಟರರಾದ ರಾ. ಖ ಸಹಸ್ರಬುದ್ಧೀ ಸಾಹೇಬರು ಬಂದಬಳಿಕ ಈ ಸಮ್ಮೇಲನದ ಸಮಗ್ರ ವೃತ್ತಾಂತವನ್ನು ಕೇಳಿ, ಕಾಲೇಜಕ್ಕೆ ಬಂದು ಎಲ್ಲ ವಿಷಯಗಳ ಪಾಠಗಳನ್ನು ಕಲಿಸುವ ಬಗೆಯನ್ನು ಪ್ರತ್ಯಕ್ಷ ನೋಡಿದರು. ಹಾಗೂ ಆ ವಿಷಯಗಳ ಟಿಪ್ಪಣಿಗಳನ್ನು ಇಂಗ್ಲೀಷದಲ್ಲಿ ಭಾಷಾಂತರಿಸಿಕೊಂಡು, ಅವುಗಳನ್ನೂ ಈ ಬಗೆಯ ಸಮ್ಮೇಲನದಿಂದ ಎಷ್ಟು ಲಾಭವಾಗುತ್ತದೆಂಬ ಬಗ್ಗೆ ಒಂದು ಸವಿಸ್ತರ ರಿಪೋರ್ಟನ್ನೂ ಮೇಹರ್ಬಾನ ಡಾಯರೆಕ್ಟರ ಸಾಹೇಬರವರ ಕಡೆಗೆ ಕಳಿಸಿದರು. ಮತ್ತು ಆ ರಿಪೋರ್ಟನಲ್ಲಿ 'ಸಮ್ಮೇಲನವು ಅವಶ್ಯವು ಅದರಿಂದ ಅನೇಕ ಲಾಭವುಂಟು. ಅಧ್ಯಾಪಕರು ಸಮ್ಮೇಲನಕ್ಕೆ ಬರುವದು ಅಗತ್ಯವು. ಆದರೆ ಅವರು ಬಡವರಿರುವ ಕಾರಣ ಅವರಿಗೆ ದಾರೀ ವೆಚ್ಚವನ್ನಾದರೂ ಪೂರ್ಣಕೊಡಬೇಕು' ಎಂದು ಸ್ಪಷ್ಟವಾಗಿ ಬರೆದರು. ಅದರ ವಿಚಾರವನ್ನು ಯೋಗ್ಯವಾಗಿ ಮಾಡಿ ಡಾಯರೆಕ್ಟರ ಸಾಹೇಬರು ಬರುವ ಅಥವಾ ಹೋಗುವ ಒಂದು ವೆಚ್ಚವನ್ನು ಕೊಡುವೆವೆಂದು ಲೇಖು ಮೂಲಕವಾಗಿ ಆಶ್ವಾಸನ ಕೊಟ್ಟಿದ್ದಾರೆ. ಇದು ಈಗೆರಡು ವರ್ಷದಿಂದ ನಡಿಸಿದ ಸಮ್ಮೇಲನದ ಫಲವು. ಮುಂದೆ ಇದಕ್ಕೂ ಹೆಚ್ಚು ಅನುಕೂಲತೆಗಳು ದೊರಕಬಹುದು ಆದರೂ ಸದ್ಯಕ್ಕೆ ನಮ್ಮ ಇನಸ್ಪೇಕ್ಟರಸಾಹೇಬರು ಇಷ್ಟು ಸುಟ್ಟಿಗಾದರೂ ಸಹಾಯವನ್ನು ದೊರಕಿಸಿಕೊಟ್ಟಿದ್ದಕ್ಕಾಗಿ ಅಧ್ಯಾಪಕರೆಲ್ಲರು ಅವರ ಉಪಕಾರವನ್ನು ಮನ್ನಿಸುವದು ಅವಶ್ಯವದೆ.

ದಾರೀವೆಚ್ಚವನ್ನು ಕೊಡುವದು ಗೊತ್ತಾದ ಬಳಿಕ ಬೇಕಾದಷ್ಟು ಮುಂದಿ ಸಮ್ಮೇಲನಕ್ಕೆ ಬರಬಹುದೆಂದು ಕಲ್ಪಿಸಲಾಗದು, ಒಂದೊಂದು ಜಿಲ್ಲೆಯ ಒಂದೊಂದು ತಾಲೂಕಿಗ ಇಂತಿಷ್ಟು ಜನ ಬರಬಹುದೆಂತಲೂ, ಅವರನ್ನು ರಾ. ಸಾ. ಡೆ. ಇನಸ್ಪೇಕ್ಟರರು ಮೊದಲಿಗೇ ಆರಿಸಿ ಗೊತ್ತು ಮಾಡಿಡಬೇಕೆಂತಲೂ, ಈ ಬಂದವರು ಮರಳಿ ಹೋದಬಳಿಕ ತಮ್ಮ

ತಮ್ಮ ಭಾಗದಲ್ಲಿ ಒಂದು ಮಧ್ಯದಲ್ಲಿ ಜಮೆಯಾಗಿ ಸಮ್ಮೇಲನಕ್ಕೆ ಬಾರದವರಿಗೆ ಸಮ್ಮೇಲನದಲ್ಲಿ ನಡೆದ ಸಂಗತಿಯನ್ನು ಮನನವಾಡಿಕೊಡಬೇಕೆಂತಲೂ ಏರ್ಪಾಟಾದರೆ, ಈ ಸಮ್ಮೇಲನದ ಉದ್ದೇಶವು ಸಫಲವಾಯಿತೆಂದು ತಿಳಿಯಬಹುತ್ತೇವೆ. ಇದನ್ನು ಅಧಿಕಾರಿಗಳು ಅವಲೋಕಿಸಬೇಕೆಂದು ಸೂಚಿಸುತ್ತೇವೆ.

ಈ ಸಾರೆಯ ಮುಲಖೀ ಪರೀಕ್ಷೆಯು ಸಪ್ತಂಬರ ೧೬ನೇ ತಾರೀಖಿಗೆ ಪ್ರಾರಂಭವಾಗುವದು.

ಸೆಕಂಡ ರೀಟೇಚರಸ್ ಎಗ್ಜಾಮಿನೇಶನ ಎಂಬ ಪರೀಕ್ಷೆಯು ಅಗಷ್ಟ ತಿಂಗಳ ೧೦ನೇ ತಾರೀಖಿಗೆ ಆಯಾ ಸೆಂಟರುಗಳಲ್ಲಿ ಪ್ರಾರಂಭವಾಗುವದು.

INSTRUCTION TO TEACHERS.

ಶಿಕ್ಷಕರಿಗೋಸ್ಕರ ಸೂಚನೆಗಳು.

(ಕಳೇ ಪುಟದಿಂದ ಮುಂದೆ ಸಾಗಿದ್ದು.)

ಈ ಬಗೆಯಿಂದ ೧೦ನೇ ಯತ್ತೆಯಲ್ಲಿ ಕಲಿಸಿದ ಮೇರೆಗೆ ಹುಡುಗರಿಗೆ ಸಾವಿರದ ವರೆಗೆ ಸಂಖ್ಯೆಯನ್ನು ಓದ ಬರೆಯುವ ಅಭ್ಯಾಸವನ್ನು ಮಾಡಿಸಬೇಕು ಇದೇಮೇರೆಗೆ ಪ್ರತ್ಯಕ್ಷ ಉದಾಹರಣೆಗಳಿಂದ ಸಾವಿರದ ವರೆಗೆ ಕಲಿತು ಹುಡುಗರು ತುಂದಿನ ಸಂಖೆಗಳನ್ನು ತಿಳಿಕೊಳ್ಳಲು ಸಮರ್ಥರಾಗುವರು ಇ್ಯಾಗಂದರೆ ಸಾವಿರ ಬೀಜಗಳು ಅಥವಾ ಹರಳುಗಳ ಬದು ರೂಪಾಯಿಗಳಿದ್ದರೆ ಅವುಗಳಿಗೆ ಇಷ್ಟು ದೊಡ್ಡ ಚೀಲವು ಬೇಕಾಗುವದೆಂಬದನ್ನೂ ಇಂಥವೇ ಲಕ್ಷ ರೂಪಾಯಿಗಳನ್ನು ತುಂಬಲಿಕ್ಕೆ ಚೀಲದಂಥ ನೂರು ಚೀಲಗಳು ಬೇಕಾಗುವದೆಂದು ಇಂಥ ನೂರು ಚೀಲಗಳನ್ನು ಇಡಲಿಕ್ಕೆ ಇಷ್ಟು ದೊಡ್ಡ ಆಕಾರದ್ದೊಂದು ಕೆಟ್ಟಿಗೆಯು ಬೇಕೆಂತಲೂ ಅವರ ತಿಳಿವಸ್ಸಿಗೆ ಹೊಳೆಯುವದು ಈ ಮಾದರಿಯಿಂದ ಸಾವಿರದ ಮೇಲಿನ ಸಂಖೆಗಳನ್ನು ಹುಡುಗರು ಪ್ರತ್ಯಕ್ಷ ಪದಾರ್ಥಗಳಿಲ್ಲದೇ ಕಲ್ಪಿಸಲಿಕ್ಕೆ ಸಮರ್ಥರನ್ನಾಗಿ ಮಾಡಬೇಕು.

ಈ ಇಯಿತ್ತೈಯೆಲ್ಲಿ ಅಂಕಗಣಿತದ ಮೊದಲಿನ ನಾಲ್ಕು ಕಾರ್ಯಗಳನ್ನು ಪ್ರತ್ಯಕ್ಷ ಉದಾಹರಣದಿಂದ ಕಲಿಸತಕ್ಕದಿರುವದು ಇದರಿಂದ ವಿವರಿಸಿದ ರೀತಿಯಿಂದ ಇವುಗಳನ್ನು ಕಲಿಸಬಹುದು ಬೇರಿಜಗಳನ್ನು ಕಲ್ಪಿಸತಕ್ಕದ್ದಲ್ಲ ಎಂದು ಕಲ್ಪಿಸವಾ ಹುಡುಗರು ಮಣಿಗಳಿಂದ ಎಕ್ಕಂ ದಹಂ ಶತಂಗಳನ್ನು ಕ್ರಮಗೊಳಿಸಿ ಇಡಲಿಕ್ಕೆ ಈ ಮೊದಲೇ ಕಲತಿರುವರಷ್ಟೇ ಮೊದಲು ಶಿಕ್ಷಕನು ಕೆಲವು ಸಂಖ್ಯೆಗಳನ್ನು ಪ್ರತ್ಯಕ್ಷ ಪದಾರ್ಥಗಳಿಂದ ಹುಡುಗರಿಗೆ ಕ್ರಮಗೊಳಿಸಿ ಇಡಲಿಕ್ಕೆ ಹಚ್ಚಬೇಕು. ಬಳಿಕ ತಾನು ಆ ಹುಡುಗರು ಉಪಕರಣಗಳಿಂದ ಕ್ರಮಗೊಳಿಸಿಟ್ಟ ಸಂಖೆಯನ್ನು ಅಂಕ ರೂಪದಿಂದ ಕರೇಹಲಿಗೆಯ ಮೇಲೆ ಬರೆಯಬೇಕು. ಬಳಿಕ ಕೆಳಗೆ ಬರೆದು ತೋರಿಸಿದಂತೆ ಅವೆಲ್ಲ ಸಂಖ್ಯೆಗಳನ್ನು ಕೂಡಿಸಲಿಕ್ಕೆ ಕಲಿಸಬೇಕು.

ಕಾಳುಗಳ ರೂಪದಿಂದ ಮೇಜಿನ ಮೇಲಿಟ್ಟ ಸಂಖ್ಯೆ

	ದಶಕ	ಎಕ್ಕಂ ಬಿಡಕಾಳಗಳು
	(ದಶಕ) (ದಶಕ)	೦ ೦ ೦
{	(ದಶಕ) (ದಶಕ)	೦ ೦ ೦ }
{	(ದಶಕ) (ದಶಕ)	೦ ೦ ೦ }
{	(ದಶಕ) (ದಶಕ) (ದಶಕ)	೦ ೦ ೦ }
{	(ದಶಕ) (ದಶಕ) (ದಶಕ)	೦ ೦ ೦ }
	(ದಶಕ) (ದಶಕ) (ದಶಕ) (ದಶಕ)	೦ ೦ ೦ ೦ ೦ ೦

ಕರೆ ಹಲಿಗೆಯ ಮೇಲಿನ ಅಂಕ ರೂಪ ಸಂಖ್ಯೆ

ಶತಕ	ದಶಕ	ಎಕ್ಕಂ
	೨	೪
	೪	೬
	೬	೩
೧	೨	೩

ಮೇಲೆ ಬರೆದು ತೋರಿಸಿದ ವಿವರಣೆಯಿಂದ ಎಕ್ಕಂಗಳನ್ನು ಎಕ್ಕಂಗಳಲ್ಲಿಯೂ ದಶಕಗಳನ್ನು ದಶಕಗಳಲ್ಲಿಯೂ ಈ ದರ ಒಂದೇ ಜಾತಿಯವುಗಳನ್ನು ಒಂದರಲ್ಲಿ ಕೂಡಿಸಬೇಕೆಂ ಬುದು ಹುಡುಗರಿಗೆ ಸಹಜವಾಗಿ ತಿಳಿಯುವದು. ಬೇರೀಜು ಸುಲಭವಾಗುವದಕ್ಕಾಗಿಯೇ ಎಕ್ಕಂದ ಬುಡದಲ್ಲಿ ಎಕ್ಕಂ ನ್ನು ದಶಕದ ಬುಡದಲ್ಲಿ ದಶಕವನ್ನು ಇದರಂತೆ ಒಂದೇ ಜಾತಿಯವುಗಳನ್ನು ಒಂದರ ಬುಡದಲ್ಲೊಂದು ಬರೆಯು ವ ಕಾರಣವಾದರೂ ತಿಳಿಯಲಿಕ್ಕೆ ಸುಲಭವೆನಿಸುವದು ಎಕ್ಕಂಗಳನ್ನು ಕೂಡಿಸಲು ೧೬ ಎಕ್ಕಂಗಳು ಬಂದವು ಇವುಗಳಲ್ಲಿ ದಶಕದ್ದೊಂದು ಸರವನ್ನು ಮಾಡಲು ಆರು ಎಕ್ಕಂಗಳು ಮಾತ್ರ ಉಳಿಯುವವು ಬಳಿಕ ಬಂದ ಈ ದಶ ಕವನ್ನು ದಹಂಸ್ಥಾನದ ಬೇರಿಜದಲ್ಲಿ ಕೂಡಿಸಲು ಹದಮೂ ರು ದಹಂಗಳು ಬಂದವು ಇವುಗಳಲ್ಲಿ ಹತ್ತು ದಹಂಗಳನ್ನು ಒಂದು ಸರವಾಗಿ ಮಾಡಿದರೆ ಅದು ಶತಂನ್ನು ತೋರಿಸುತ್ತ ಗೆಂತಲೂ ಮೂರು ದಶಕಗಳು ಮಾತ್ರ ಉಳಿದವೆಂತಲೂ ತ ವರಿಗೆ ಸಹಜವಾಗಿ ತಿಳಿಯುವದು. ಈ ಶತಂನ್ನು ದಶಕದ ಹಿಂದೆ ಬರೆದು ಉಳಿದವುಗಳನ್ನು ಅವುಗಳ ಸ್ಥಾನದಲ್ಲಿ ಬರೆ ಯಲು ಒಂದು ಶತಂ ಮೂರು ದಹಂ ಆರು ಎಕ್ಕಂ ಅಂದರೆ ನೂರಾ ಮೂವತ್ತಾರು ಒಟ್ಟಾಯಿತೆಂದು ಕೂಡಲೆ ಧ್ಯಾನದ ಲ್ಲಿ ಬರುವದು ಇದೇ ಮೇರೆಗೆ ವಜಾಬಾಕಿಯನ್ನಾದರೂ ಕಲಿಸಬಹುದು ಮಣಿ ಮುಂತಾದ ಉಪಕರಣಗಳಿಂದ ಹುಡು ಗರು ಮೇಜಿನ ಮೇಲೆ ಸಂಖ್ಯೆಗಳನ್ನು ಕ್ರಮಗೊಳಿಸಿ ಇಡ ಬೇಕು. ಶಿಕ್ಷಕನು ಅದೇ ಸಂಖ್ಯೆಯನ್ನು ಕರೇ ಹಲಿಗೆಯ ಮೇಲೆ ಬರೆಯಬೇಕು. ಬಳಿಕ ಇಬ್ಬರು ಹುಡುಗರನ್ನು ಮೇಜಿನ ಬಳಿಗೆ ಕರೆದು ಈ ಸಂಖ್ಯೆಯ ಬಳಿಯಲ್ಲಿ ನಿಲ್ಲಿಸಿ ನೀನು ಕೊಡುವವನಾಗು ನೀನು ಇಸಕೊಳ್ಳುವವನಾಗು ಎಂ ದು ಹೇಳಿ ಕೆಳಗೆ ಬರೆದು ತೋರಿಸಿದಂತೆ ಕಲಿಸಲಾರಂಭಿಸ ಬೇಕು

ಪೋಜಿನ ಮೇಲೆ ಇರುವಮಣಿಗಳು

ಶತಂ	ದಶಂ	ಎಕ್ಕಂ
ನೂರರ ಗಂಟು	ಹುತ್ತು ಹತ್ತು	ಹೆತ್ತು ೦ ೦ ಹತ್ತು

ಕೆರೆಹಲಿಗೆಯ ಮೇಲಿನ ಅಂಕಿಗಳು

ಶತಂ	ದಶಂ	ಎಕ್ಕಂ	ಷ
	(೪)	(೧೪)	
೧	೫	೪	
	೪	೯	
೧	೦	೫	

ಕೊಡುವವನು ತನ್ನಲ್ಲಿ ನಾಲ್ಕು ಬಿಡಿಗಾಳುಗಳಿರುತ್ತವೆಂದೂ ತಾನು (೯) ಬಿಡಿಗಾಳುಗಳನ್ನು ಕೊಡಬೇಕಾಗಿದೆ ಎಂದು ತಿಳಿದುಕೊಂಡು ಹತ್ತರದ್ದೊಂದು ಸರವನ್ನು ಬಿಚ್ಚಿ ಬಿಡಿಗಾಳುಗಳನ್ನು ಮಾಡಿಕೊಳ್ಳುವನು ಅದರಿಂದ ಅವರ ಹತ್ತರ ಹದಿನಾಲ್ಕು ಬಿಡಿಗಾಳುಗಳು ಆದ ಬಳಿಕ ಅವುಗಳಲ್ಲಿ ಕೊಡಬೇಕಾದ ಒಂಬತ್ತುಗಳನ್ನು ಕೊಟ್ಟು ಉಳಿದ (೫) ಕಾಳುಗಳನ್ನು ತನ್ನ ಹತ್ತರಿಟ್ಟುಕೊಳ್ಳುವನು. ಈಗ ಅವನ ಬಳಿಯಲ್ಲಿ ಹತ್ತರ ಸರಗಳು ನಾಲ್ಕು ಉಳಿದಿರುವವು ಅವುಗಳಲ್ಲಿ ನಾಲ್ಕು ಹತ್ತುಗಳನ್ನು ಕೊಡಲು ತನಗೇನೂ ಉಳಿಯುಲಿಲ್ಲಾದ್ದರಿಂದ ಕಪ್ಪು ಹಲಿಗೆಯ ಮೇಲಿನ ದಶಕದ ಬುಡದಲ್ಲಿ ಪೂಜೆಯನ್ನು ಬರೆಯಬೇಕು. ನೂರರ ಸರಗಳೊಳಗಿಂದ ಎನೂ ಕೊಡಬೇಕಾಗಲಿಲ್ಲಾದ್ದರಿಂದ ಅವನ ಬಳಿಯಲ್ಲಿ ಹಾಗೇ ಉಳಿಯುವವು ಈ ಪ್ರಕಾರವಾಗಿ ಇಸುಕೊಳ್ಳುವವನು ನಾಲ್ಕು ದಶಕಗಳನ್ನೂ ಒಂಭತ್ತು ಎಕ್ಕಮಗಳನ್ನೂ ಸಂಪಾದಿಸುವನು. ಕೊಟ್ಟವನ ಬಳಿಯಲ್ಲಿ ಒಂದು ನೂರ ಸರ ಪೂಜೆ ಹತ್ತರ ಸರ ೫ ಬಿಡುಗಾಳುಗಳು ಉಳಿಯುವವು ಈ ಸಮಯದಲ್ಲಿ ಹುಡುಗರಿಗೆ ಬೇರೀಜದಲ್ಲಿ ಅನೇಕ ಸಂಖೆಗಳನ್ನು ಕೂಡಿಸಿ ಒಂದು ಸಂಖ್ಯೆ ಮಾಡುವದಿರುತ್ತದೆಂಬದನ್ನು ವಜಾ ಬಾಕಿಯಲ್ಲಿ ಎರಡು ಸಂಖ್ಯೆಗಳೊಳಗೆ ಒಂದಕೊ

ಳಗಿಂದ ಮತ್ತೊಂದನ್ನ ಕಳೆಯುವದಿರುತ್ತನೆಂಬುದನ್ನು ತಿಳಿಸಿಕೊಡತಕ್ಕದ್ದು ಈ ಬಗೆಯ ವಜಾಬಾಕಿಯಲ್ಲಿ ಕೈಲೆ ತೆಗೆದುಕೊಳ್ಳುವದಿಲ್ಲ. ಅದನೂ ಹುಡುಗರಿಗೆತಿಳಿಯಲಿಕ್ಕೆ ಈ ಪದ್ಧತಿಯು ಸರಳವೂ ಸ್ಪಷ್ಟವೂ ಇರುತ್ತದೆ. ಹುಡುಗರು ಈ ಬಗೆಯಾಗಿ ಮುರಿಸುವ (ಶತಕಗಳನ್ನೂ ದಶಕಗಳಾಗಿ ದಶಕಗಳನ್ನೂ ಎಕ್ಕಮಗಳಾಗಿ ಮಾಡುವ) ಪದ್ಧತಿಯಲ್ಲಿ ನುರಿತ ಬಳಿಕ ಕೈಲೆ ತೆಗೆದುಕೊಳ್ಳುವ ಪದ್ಧತಿಯನ್ನು ಕಲಿಸಬೇಕು. (ಕಲಿಸ ಬಹುದು) ಹುಡುಗರು ಒಮ್ಮೆ ಚನ್ನಾಗಿ ಜೇರಿಜು ವಜಾಬಾಕಿಗಳನ್ನು ತಿಳಿದುಕೊಂಡನಂತರ ಗುಣಾಕಾರ ಭಾಗಾಕಾರಗಳನ್ನು ತಿಳಿಕೊಳ್ಳುವದು ಕಠಿಣವಲ್ಲ ಅವರಿಗೆ ವಸ್ತುಗಳು ಬದುತ್ತಿರುತ್ತವೆಂಬದಷ್ಟೇ ಅಲ್ಲ ಹೊಸ ಹೊಗ್ಗಳನ್ನು ರಚಿಸುವ ಬಗೆಯು ಸಹ ಗೊತ್ತಾಗಿರುತ್ತದೆ. ಭಾಗಾಕಾರವನ್ನು ಕಲಿಸುವಾಗ ಮೊದಲು ಪ್ರತ್ಯಕ್ಷವಾಗಿ ಮಣಿಗಳ ದಶಕಗಳನ್ನೂ ಬಿಡಿಗಾಳುಗಳನ್ನೂ ಜೇರೆ ಹುಡಗರಲ್ಲಿ ಹಂಚುವದಕ್ಕೋಸ್ಕರ ಉದಾಹರಣೆಯುಲ್ಲಿ ಉಳಿದ ಬಾಕಿಗೆ ದಶಕದಿಂದ ಗುಣಿಸಿ ಕಡಿವು ಬೆಲೆಯು ರೂಪವನು ಕೊಡುವದಕ್ಕೆ ತಿಳಿಸಬೇಕು. ಉದಾಹರಣೆ

ಶ ದ ಎಕ್ಕಂ

೫)೩ ೬ ೯(೭ ದ.

×೧೦

-೩೦

+೬

೩೬

೩೫

---

೦೧ ದ ಬಾಕಿ × ೧೦೦ ೧೦ ಎಕ್ಕಂ

+ ೯ ಎಕ್ಕಂ

---

೧೯ ಎಕ್ಕಂ

೧೫ ಎಕ್ಕಂ

---

೪ ಎಕ್ಕಂ

ಬಾಕಿ ಉಳಿಯಿತು.

ಈರೀ ಹಲಿಗೆಯ ಮೇಲೆ ಮಾಡಿತೋರಿಸಿದ ಉದಾಹರಣೆಯ
ಲ್ಲಿ ಉಳಿದ ಹೆಚ್ಚಿನ ಪರಿಮಾಣದ ಬಾಕಿಗೆ ಹತ್ತರಿಂದ ಗುಣಿ
ಸಿ ಹುಡುಗರ ಕೈಯಲ್ಲಿ ಪ್ರತ್ಯಕ್ಷವಾಗಿ ಮಣಿಗಳನ್ನು ಕೊಟ್ಟು ಸಂ
ಖ್ಯಾ ಪರಿಮಾಣದ ರೂಪವನ್ನು ಕೊಡಿಸಬೇಕು. ಹ್ಯಾಗಂದ
ರೆ ನೂರರ ೩ ಸರಗಳನ್ನು ೫ ಮಂದಿಯಲ್ಲಿ ಹಂಚಲಿಕ್ಕೆ ಬರು
ವದಿಲ್ಲೆಂತಲೂ ನೂರರ ಸರಗಳನ್ನು ಬಿಚ್ಚಿ ಒಂಭತ್ತರ ಸರಗಳನ್ನು
ಮಾಡಬೇಕೆಂತಲೂ ಅವರು ಅರಿತುಕೊಳ್ಳುವರು ಒಂಭತ್ತರಲ್ಲಿ
ಒಂ ದಶಕಗಳಿರುವದರಿಂದ ಮೂರು ನೂರರಲ್ಲಿ ೩೦ ದಶಕ
ಗಳು ಆಗುವವು. ಅವುಗಳಲ್ಲಿ ಲೆಖ್ಖದಲ್ಲಿ ಹೇಳಿರುವ ಆರು
ದಶಕಗಳನ್ನು ಕೂಡಿಸಲು ೩೬ ದಶಕಗಳಾದವೆಂಬದು ಸಹ
ಜವಾಗಿ ತಿಳಿಯುವದು ಈ ೩೬ ದಶಕಗಳನ್ನು ೫ ಮಂದಿ
ಯಲ್ಲಿ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಏಳೇಳು ದಶಕ
ಗಳು ಬಂದು ಒಂದು ದಶಕವು ಉಳಿಯುವದು. ಹಂಚಲಿ
ಕ್ಕಾಗದ ಈ ಒಂದು ದಶಕವನ್ನು ಬಿಚ್ಚಿ ಹತ್ತು ಬಿಡಿಗಾಳು
ಅಥವಾ ಎಕ್ಕಂಗಳನ್ನು ಮಾಡಿ ಲೆಖ್ಖದಲ್ಲಿ ಹೇಳಿದ ಒಂಭತ್ತು
ಎಕ್ಕಂಗಳನ್ನು ಕೂಡಿಸಲು ಒಟ್ಟು ೧೯ ಎಕ್ಕಂಗಳಾದವು ಇ
ದನ್ನು ೫ ಮುಂದಿಗೆ ಹಂಚಿಕೊಡಲು ಒಬ್ಬೊಬ್ಬನಿಗೆ ೩ ಬಿ
ಡಿಗಾಳುಗಳು ಅಥವಾ ಎಕ್ಕಂಗಳು ಬಂದು ೪ ಎಕ್ಕಂಗಳು
ಉಳಿದವು ಶತಕಗಳ ಗಂಟನ್ನು ಬಿಚ್ಚಿ ಒಂದ ಗಂಟುಗಳನ್ನು
ಒಂದ ಗಂಟುಗಳನ್ನು ಬಿಚ್ಚಿ ಎಕ್ಕಂಗಳನ್ನು ಮಾಡುವದರಿಂದ
ಹೆಚ್ಚಿನ ಪರಿಮಾಣದ ಬಾಕಿಗೆ ಒಂದಿಂದ ಗುಣಿಸಿ ಕಡಿಮೆ ಪ
ರಿಮಾಣಕ್ಕೆ ತಂದು ಅದರಲ್ಲಿ ಕಡಿಮೇ ಪರಿಮಾಣದ ಸಂಖ್ಯೆ
ಯನ್ನು ಯಾಕೆ ಕೂಡಿಸತಕ್ಕದ್ದೆಂಬದು ಒಂದಿಂದ ಯಾಕೆ
ಗುಣಿಸತಕ್ಕದ್ದೆಂಬದು ಹುಡುಗರಿಗೆ ಸಹಜವಾಗಿ ತಿಳಿಯುವ
ದು. ಹಳೆ ಪದ್ಧತಿಯಲ್ಲಿ ಹುಡುಗರು ಭಾಗಾಕಾರವನ್ನು
ಕೇವಲ ಯಾಂತ್ರಿಕ ರೀತಿಯಿಂದ ಮಾಡಲಿಕ್ಕೆ ಕಲಿಯುತ್ತಿ
ದ್ದರು. ಮೇಲಿನ ಅಂಕೆಯನ್ನು ಕೆಳಗೆ ಯಾಕೆ ತೆಗೆದುಕೊ
ಳ್ಳಬೇಕು. ಅದನ್ನು ಬಾಕಿಯ ಬಲಗಡಿಗೆ ಮುಂದಿನ ಕೃತಿ
ಯನ್ನು ಮಾಡುವದಕ್ಕೆ ಮುಂಚೆ ಯಾಕೆ ಇಡಬೇಕು ಮುಂ

ತಾದವುಗಳನ್ನು ಅರಿಯುವು ಪ್ರತಿಯೊಂದು ಬಾಕಿಯನ್ನು ಹೆ
ತ್ತರಿಂದ ಗುಣಿಸಿ ಕಾಳುಗಳನ್ನು ಹಚ್ಚಿಕೊಡುವದು ಮುಂತಾ
ಕೃತಿಗಳಿಂದ ಹುಡುಗರಿಗೆ ರೀತಿಯು ಸ್ಪಷ್ಟವಾಗಿ ತಿಳಿಯು
ವದು ರೇಷಾ ಅಪೂರ್ಣಾಂಕಗಳಲ್ಲಿಯೂ ಭಾಗಕಾರದಲ್ಲಿ
ಹೆಚ್ಚಿನ ಪರಿಮಾಣದ ಶೇಷವನ್ನು ಗಂ ರಿಂದ ಗುಣಿಸಿ
ಭಾಗಾಕಾರ ಮಾಡುವದು ಅಗತ್ಯವಾದದ್ದೇ ಇರುತ್ತದೆ.

ಎಲ್ಲ ವರ್ಗದ ಹುಡುಗರು ಗಣಿತದ ಎಲ್ಲ ಕೃತ್ಯಗಳನ್ನು
ಮಾಡುವಾಗ ಎಲ್ಲ ಕೃತ್ಯಗಳನ್ನು ಅವರು ಒಳ್ಳೇ ಅಂಕೆಗ
ಳನ್ನು ಹಾಕುವಂತೆಯೂ ಎಲ್ಲ ಕೃತಿಗಳನ್ನು ಅಚ್ಚುಕಟ್ಟಾಗಿ
ವ್ಯವಸ್ಥಿತರೀತಿಯಿಂದ ಈ ಲೆಖ್ಖದ ಅಂಕಿಗಳನ್ನು ಹಾಕಲಿ
ಕ್ಕೂ ರೀತಿಯನ್ನು ಬಿಡಿಸಿ ಮಾಡಲಿಕ್ಕೆ ಹಚ್ಚಬೇಕು. ಶಿಕ್ಷ
ಕರು ಕರೆಹಲಿಗೆಯ ಮೇಲೆ ಬಿಡಿಸಿ ತೋರಿಸಿದ ಉದಾ
ಹರಣೆಯು ಮೊದರಿಗಾಗಿರಬೇಕು. ಉದಾಹರಣೆಯೊಳಗಿ
ನ ಪ್ರತಿ ಒಂದು ಮೆಟ್ಟು ಬೇರೆ ಬೇರೆಯಾಗಿ ತಿಳಿಸಿಕೊಡಬೇ
ಕು. ಉತ್ತರ ಅವಶ್ಯವಿದ್ದಲ್ಲಿ ಪ್ರತಿ ಒಂದು ಮೆಟ್ಟು ಬೇರೆಬೇರೆ
ಬರೆದು ತೋರಿಸಬೇಕು. ಶಿ ಬರಹ ಗನೇ ಇಯತ್ತೆಯಲ್ಲಿ
ಮಾಡಿದ ಈ ಸಂಬಂಧದ ಸೂಚನೆ ಲಕ್ಷಕ್ಕೆ ತರಬೇಕು ಉ
ಕ್ತ ಲೇಖವನ್ನು ಬರಿಯಲಿಕ್ಕೆ ಹೇಳುವ ಮೊದಲು ಅದರೊ
ಳಗಿನ ಅಪರಿಚಿತ ಶಬ್ದಗಳನ್ನು ಮೊದಲು ಕರೇ ಹಲಿಗೆಯ
ಮೇಲೆ ಬರೆದು ಹುಡುಗರು ಅವುಗಳನ್ನು ತಿಳಿದುಕೊಂಡ
ಬಳಿಕ ಉಕ್ತ ಲೇಖವನ್ನು ಬರೆಯಹೇಳಬೇಕು. ಇದೇ
ಈ ವಿಷಯದ ಸಂಬಂಧದಿಂದ ಮುಖ್ಯವಾಗಿ ಲಕ್ಷದಲ್ಲಿಡತ
ಕ್ಕ ಸಂಗತಿಯು ಗಣಿತ, ಭೂಗೋಲ ಮುಂತಾದ ಪಾಠಗ
ಳಲ್ಲಿ ಬಂದ ಹೊಸ ಶಬ್ದಗಳನ್ನಾದರೂ ಕರೇ ಹಲಿಗೆಯ
ಮೇಲೆ ಬರೆದು ಹುಡುಗರಿಗೆ ಅವುಗಳ ಶುದ್ಧ ಸ್ವರೂಪವನ್ನು
ತಿಳಿಸಿಕೊಡಬೇಕು. ಉಕ್ತ ಲೇಖನವನ್ನು ಬರೆದ ಬಳಿಕ
ಹುಡುಗರ ಬರಹವನ್ನು ನೋಡಿದ ಬಳಿಕ ಅವರ ಕೈಯಿಂದ
ಲೇ ತಪ್ಪನ್ನು ತಿದ್ದಿಸಿ ಅವುಗಳ ಶುದ್ಧ ರೂಪವನ್ನು ಪಾಟಿಯ
ಮೇಲೆ ಹಲವು ಸಾರೆ ಬರೆಯಹಚ್ಚಬೇಕು. ಹುಡುಗರು

ಪುಸ್ತಿಯನ್ನು ಶಿಕ್ಷಕನು ವರ್ಗದಲ್ಲಿ ಅಡ್ಡಾಡುತ್ತ ಅವರ ಬರಹವನ್ನು ಲಕ್ಷವಿಟ್ಟು ನೋಡುತ್ತ ಅವಶ್ಯ ತೋರಿದಲ್ಲಿ ಅವರಿಗೆ ನೆರವಾಗುತ್ತ ಚಿಕಲೋ ಅಕ್ಷರಗಳನ್ನು ಬರಿಯ ಕಲಿಸಬೇಕು. ಕಾಪೀ ಬರಿಯುವಾಗ ಶಿಕ್ಷಕನು ಕೈಕೊಳ್ಳ ಬೇಕಾದ ಕೆಲಸವಿಷ್ಟೇ ಶಿಕ್ಷಕನು ಬರಿಯುವಾಗ ಕೊಡತ ಕ್ಕ ಬಗ್ಗೆ ಲೇಖಣಿಯನ್ನು ಹಿಡಿಯುವ ತರ ಕಾಗದವನ್ನು ಹಿಡಿಯುವ ಪ್ರಕಾರ ಮುಂತಾದವುಗಳನ್ನು ಹುಡುಗರಿಗೆ ತಿಳಿ ಸಿ ತಿದ್ದಬೇಕಲ್ಲದೆ ಅವರ ಕೈಯನ್ನು ಮಸಿಮಾಡಿಕೊಳ್ಳದಂತೆ ಎಚ್ಚರಪಡಬೇಕು. ಚಿಕ್ಕಮಕ್ಕಳ ಈ ಇಯತ್ತೆಗಳಲ್ಲಿ ಈ ವಿಷಯವು ಅರ್ಧತಾಸಿಗಿಂತ ಹೆಚ್ಚು ಹೊತ್ತು ನಡೆಯ ಬಾರದು ಲೇಖನಪಾಠ ಮುಗಿದ ಬಳಿಕ ಶಿಕ್ಷಕನು ಅವರ ಕಾಪೀಬುಕ್ಕುಗಳನ್ನೆ ನೋಡಿ ಅವರ ತಪ್ಪುಗಳನ್ನು ಅವರಿಗೆ ತೋರಿಸಿ ಬಳಿಕ ಮೇಲೆ ತಾರೀಖು ಹಾಕಿ ಸಹಿಮಾಡಬೇಕು. ಶಿಕ್ಷಕನು ಪ್ರಸಂಗಾನುಸಾರವಾಗಿ ಮಾದರಿಯ ಅಕ್ಷರಗ ಳನ್ನು ಕರೆಹಲಿಯ ಮೇಲೆ ಬರೆಯಬೇಕು. ವಿದ್ಯಾರ್ಥಿಗ ಳು ಪ್ರತಿವಂದ ಅಕ್ಷರವು ಹ್ಯಾಗೆ ತೆಗೆಯಲ್ಪಟ್ಟಿರುತ್ತದೆ. ವಾಸ್ತವೀಕವಾಗಿ ಅದರ ಉದ್ದಳತೆಯೂ ಪ್ರತಿವಂದು ಭಾಗ ದ ಅಳತೆಯೂ ಯಾವ ಪ್ರಮಾಣದಲ್ಲಿ ಇರುತ್ತದೆಂಬದನ್ನು ಮನಮುಟ್ಟಿ ನೋಡಿ ಅದರಂತೆ ಬರೆಯ ಹವಣಿಸಬೇಕು. ಶಿಕ್ಷಕನು ಅಭ್ಯಾಸದ ವಹಿಗಳನ್ನು ತಿದ್ದೋಣ ಬೇರೆಯಂದು ವರ್ಗದ ದೇಖರೇಖ ಮಾಡೋಣ ಪತ್ರ ಬರಿಯೋಣ ಓ ದೋಣ ಮುಂತಾದ ಯಾವ ಕೆಲಸವನ್ನಾದರೂ ಈ ವಿಷ ಯವು ನಡೆದ ಹೊತ್ತಿನಲ್ಲಿ ಖಂಡಿತವಾಗಿ ಮಾಡಕೂಡದು. ಗೊತ್ತಾದ ಎಲ್ಲ ಹೊತ್ತಿನಲ್ಲಿ ವಿಷಯವನ್ನು ಕಲಿಸುವದರಲ್ಲಿ ಯೇ ಕಳೆಯಬೇಕು.

(೪) ವಾಚನ ಮತ್ತು ವಿವರಣೆ—ಶಿಕ್ಷಕನು ಹುಡುಗರಿಗೆ ಮಾದರಿಗಾಗಿ ಕಾವ್ಯ ಓದಿ ತೋರಿಸಬೇಕು. ವಿಶೇಷವಾಗಿ ವಾಚನದಲ್ಲಿ ವಾಡಿಕೆಯಾಗಿ ಆಗುವ ಕೆಳಗೆ ತೋರಿಸಿದ ತಪ್ಪುಗಳು ಆಗದಂತೆ ಲಕ್ಷ ಕೊಡಬೇಕು.

DEPARTENTAL NOTICE.

ನೋಟೀಸುಗಳು.

PUBLIC SERVICE EXAMINATION.

ಪಬ್ಲಿಕ್ ಪರೀಕ್ಷೆಯು.

ಈ ನೋಟೀಸಿನಿಂದ ಪ್ರಸಿದ್ಧಿಸಲ್ಪಡುವದೇನಂದರೆ ಸರ್ಕಾರಂನೇ ದಿಶಂಬರ ಮಂನೇ ತಾರೀಖಿನ ದಿವಸ ಘೂಷಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟೀಟಿನ ೧೯ನೇ ಭಾಗದಲ್ಲಿ ಪ್ರಸಿದ್ಧಿಸಲ್ಪಟ್ಟ ಹೊಸ ನಿಯಮಗಳ ೧೯ನೇ ಪರಿಸಿದ್ಧದಸಿಡ್ಯೂಲಗಳಿಗೆ ಸರಿಯಾಗಿ ಸರ್ಕಾರಂತ್ರಿ—ರಂಗಳನೇ ಇಸವಿಯ ಪಬ್ಲಿಕ ಸರ್ವಿಸ ಸರ್ಟಿಫಿಕೇಟು ಪರೀಕ್ಷೆಗಳು ಸದ್ಟಂಬರ ೧೬ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗೆದುಕೊಳ್ಳಲ್ಪಡುವವು. ೨ ಮರಾಠಿ ಭಾಷೆಯಲ್ಲಿ ಪರೀಕ್ಷಿಸಲಪೇಕ್ಷಿಸುವ ಉಮೇದವಾರರು ಬೆಳಗಾವಿ ಅಥವಾ ಧಾರವಾಡ ಸೆಂಟರಿನಲ್ಲಿ ಆಗುವ ಪರೀಕ್ಷೆಗೆ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆಯನ್ನು ಪಡಕೊಂಡು ಕೂಡ್ರಬಹುದು

೩. ಪರೀಕ್ಷೆಗೆ ಕೂಡ್ರತಕ್ಕವರು ತಮ್ಮ ಅರ್ಜಿಗಳನ್ನು ತಾರೀಖು ಒಂದನೇ ಆಗಷ್ಟ ರಂತ್ರಿನೇ ಇಸವಿ ದಿವಸ ಇವನೇ ತತ್ಪೂರ್ವದಲ್ಲಿ ತಲಪುವಂತೆ ಪರೀಕ್ಷಾ ಕಮಿಟಿಯ ಸೆಕ್ರೆಟೆರಿಯಟರಾದ ಧಾರವಾಡ ಹಯಸ್ಕೂಲ ಹೆಡ್ಡ್‌ಮಾಸ್ತರರ ಕಡಿಗೆ ಕಳಿಸಬೇಕು. ಪ್ರತಿ ಒಂದು ಅರ್ಜಿಯಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರು ಅವನು ಯಾವದೊಂದು ಸಾಲೆಯಲ್ಲಿ ಕಲಿಯುತ್ತಿದ್ದರೆ, ಆ ಸಾಲೆಯ ಹೆಸರೂ ಇರತಕ್ಕದ್ದು. ಮತ್ತು ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ತರಗತಿಯನ್ನು (ಗ್ರೇಡು) ಅದರಲ್ಲಿ ತೋರಿಸಬೇಕು.

೪ ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳೆದ ಆರು ತಿಂಗಳಿಂದ ಆ ಜಿಲ್ಲೆಯಲ್ಲಿದ್ದನೆಂಬ ಬಗ್ಗೆ ತಾ

ನು ಇರುವ ಊರ ಪೊಟೀಲನದಾಗಲಿ, ಸಾಲೆಯ ಮಾಸ್ತರ ನದಾಗಲಿ, ಸರಟಿಫಿಕೇಟನ್ನು ಹಾಜರ ಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು ಪರೀಕ್ಷೆಯು ಫೀ ಪರೀಕೆಯ ವಿಷಯು ಮುಂತಾದ ಮಾಹಿತಿಯು ಸನ್ ೧೯೦೦ನೇ ಇಸವಿಯ ದಿಶಂಬರ ೩೦ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಸರ್ಹೆರ್ನಮೆಂಟ ಗ್ಯಾಝಿಟೀಟಿನ ೨೫ನೇ ಭಾಗಂದಿಂದ ೨೫ನೇ ಪೂಟಗಳ ವರೆಗೆ ಛಾಪಿಸಲ್ಪಟ್ಟಿದೆ.

೬. ಈ ವರ್ಷ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪುಸ್ತಕಗಳು ಸನ್ ೧೯೦೦ನೇ ಇಸವಿಯ ನವಂಬರ ೩೦ನೇ ತಾರೀಖಿನ ಗ್ಯಾಝಿಟೀಟಿನ ಎರಡನೇ ಭಾಗದ ೧೫೯-೩ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟಿವೆ.

ಧಾರವಾಡ
೩೦ ಮೇ ೧೯೦೧

M. C. GIBB,
ಕಲೆಕ್ಟರ ಧಾರವಾಡ

H. S. SCHOLARSHIP EXAMINATION.

ಹೈಸ್ಕೂಲ ಸ್ಕಾಲರಸಿಪ್ಪ ಪರೀಕ್ಷೆಯು

೩೦ನೇ ಜನವರಿ ೧೯೦೨ನೇ ಇಸವಿಯ ಸರಕಾರಿ ಗ್ಯಾಝಿಟೀನ ೧೦೪—೧೩ನೇ ಪಾನಿನಲ್ಲಿ ಪ್ರಸಿದ್ಧವಾದಂತೆ ಮೂರು ಹೈಸ್ಕೂಲ ಸ್ಕಾಲರ ಸಿಪ್ಪುಗಳ ಸಂಬಂಧದ ಪರೀಕ್ಷೆಯು ಸೋಮವಾರ ೩ನೇ ಸಪ್ತಂಬರ ೧೯೦೨ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಮದ್ರಾಸ ಕಾಲಮಾನದ ೧೦ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು

ಟೀಪು:—ಇದೇ ಮೇರೆಗೆ ವಿಜಾಪೂರ, ಬೆಳಗಾವ, ಕಾರವಾರ ಜಿಲ್ಲೆಗಳ ಕಲೆಕ್ಟರರಾದರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು ಎಲ್ಲ ಕಡೆಯಲ್ಲಿ ಆಗುವ ಪರೀಕ್ಷೆಗಳ ತಾರೀಖು ಒಂದೇ ಎಂಬದು ಎಲ್ಲರಿಗೂ ಗೊತ್ತೇ ಇರುವದು. ಈಸಾರೆ ಮರಾಠೆ ಪರೀಕ್ಷೆಯನ್ನು ಕೊಡಲಿಚ್ಛಿಸುವ ಉಮೇದವಾರರು ಬೇರೆ ಜಿಲ್ಲೆಗಳಿಗೆ ಹೋಗುವ ಕಾರಣವಿಲ್ಲ ಆಯಾ ಜಿಲ್ಲೆಗಳಲ್ಲಿಯೇ ಅವರನ್ನು ಪರೀಕಿಸುವ ವ್ಯವಸ್ಥೆಯನ್ನು ಸರಕಾರದವರು ಮಾಡಿದರು.

ಸೆಂಟರಿನಲ್ಲಿ ಪ್ರಾರಂಭವಾಗುವದು ಸೆಂಟರಗಳು ಯಾವ ವಂದರೆ

ಧಾರವಾಡ ಹೈಸ್ಕೂಲ
ಬೆಳಗಾವಿ ಹೈಸ್ಕೂಲ
ವಿಜಾಪುರ ಹೈಸ್ಕೂಲ
ಕಾರವಾರ ಹೈಸ್ಕೂಲ
ಅಲೀಬಾಗ ಜಾನ್ ಎಲ್ ಫಿನಸ್ಟೆನ್ ಮಿಶನ್ ಹಾಯಸ್ಕೂಲ

ಈ ಮೂರು ಸ್ಕೂಲರ ಸಿಪ್ಪುಗಳಲ್ಲಿ ಒಂದು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂಗ್ಲೀಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್ ಕುಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟದ್ದು ಅವರಲ್ಲಿ ಉತ್ಕೃತನಾದವನಿಗೆ ದೊರೆಯುವದು ಮೂರನೇಹು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟಿದೆ. ಆ ಜಾತಿಯ ವಿದ್ಯಾರ್ಥಿಗಳಲ್ಲಿ ಉತ್ಕೃತನಾದವನಿಗ ದೊರೆಯುವದು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಪಾಗೂ ಮರಾಠೀಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಧಾರವಾಡ, ವಿಜಾಪೂರ ಪುತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ಅಲೀಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದು ಕೊಳ್ಳಲ್ಪಡುವದು.

ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಅಲೀಬಾಗ ಪರೀಕ್ಷೆ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹಾಯ್ ಸ್ಕೂಲಿನ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಿಗೆಯನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಭಾಷಿ ನಮೂನೆಗಳ ಮೇ

ಲ್ಲಿ ಮಾಡತಕ್ಕದ್ದು ಅರ್ಜಿಯು ನಮೂನೆಗಳು ಪರೀಕ್ಷಾ ಕ ವಿಾಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗಲಿ ಸಿ ಗುವವು. ಅದಕ್ಕೆ ಕ್ರಯ ಬಿಳಲಿಕ್ಕಿಲ್ಲ. ಉಮೇದವಾರ ರು ಅರ್ಜಿಗಳನ್ನು ೧೫ನೇ ಅಗಷ್ಟದ ಒಳಗಾಗಿ ತಲಪುವಂತೆ ತಮ್ಮ ತಮ್ಮ ಜಿಲ್ಲೆಯ ಕವಿಾಟಿಯ ಅಧ್ಯಕ್ಷರ ಕಡಿಗೆ ಕಳಿ ಸಿಕೊಡಬೇಕು. ಆ ತಾರೀಖಿನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು ಸ್ಕಾ ಲರಸಿಪ್ಪಿನ ರಕಮು ಮತ್ತು ಅವಧಿ ಪರೀಕ್ಷೆಯ ಫೀ ಮುಂ ತಾದ ಸಂಗತಿಗಳ ಸಂಬಂಧದ ಹಿಚ್ಚಿನ ಮಾಹಿತಿಯು ನಮ್ಮ ಕೆಡಿಗಾಗಲಿ ಪರೀಕ್ಷಾ ಕವಿಾಟಿಯ ಅಧ್ಯಕ್ಷಕರ ಕಡಿಗಾಗ ಲಿ ಅರ್ಜ ಮಾಡಿದರೆ ಹಣದ ವೆಚ್ಚವಿಲ್ಲದೆ ಶಿಗುವವು.

ಭಾರವಾಡ } B. K. Sahasrabudhe
ತಾ. ೨೬-೧೧-೧೦ ಇಸ್ವಿ. } ಎ. ಇ. ದಕ್ಷಿಭಾಗ.

MIDDLE SCHOOL SCHOLARSHIP EXAMINATION.

ಮಿಡಲ್ ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಯು

೨೫ನೇ ಜಾನ್ಯೂಅರಿ ೧೯೦೨ನೇ ಇಸವಿಯ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟೀಟಿನ ಬಂದನೇ ಭಾಗದ ೧೩೦ರಿಂದ ೧೩೨ನೇ ಪಾನಿನಲ್ಲಿ ಛಾಪಿಸಿದಂತೆ ಆರು ಮಿಡಲ್ ಸ್ಕೂಲ ಸ್ಕಾಲರ ಶಿಪ್ಪುಗಳ ಸಂಬಂಧದ ಪರೀಕ್ಷೆಯು ಬುಧವಾರ ದ್ದನೇ ಸಪ್ತಂಬರ ೧೯೦೨ನೇ ಇಸವಿಯ ದಿವಸ ಮತ್ತು ತದು ತ್ತರ ದಿವಸಗಳಲ್ಲಿ ಮುದ್ರಾಸ ಕಾಲಮಾನದ ೧೧ ಗಂಟೆಗ ಸರಿ ಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾ ರಂಭವಾಗುಗದು ಸೆಂಟರುಗಳು ಯಾವವೆಂದರೆ.

ಧಾರವಾಡ ಹೈಸ್ಕೂಲ
ಬೆಳಗಾವ ಹೈಸ್ಕೂಲ
ವಿಜಾಪುರ ಹೈಸ್ಕೂಲ
ಕಾರವಾರ ಹೈಸ್ಕೂಲ

ಅಲೀಬಾಗ ಜಾನ್ ಎಲ್‌ಫಿನ್‌ಸ್ಟನ್ ಮಿಶನ್ ಹೈಸ್ಕೂಲ

ಈ ಆರು ಸ್ಕಾಲರ ಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೇನಿ ಇಸ್ರಾಯಲ್ ಕುಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆವರ್ಗದಲ್ಲಿ ಉತ್ತೀರ್ಣರಾದವರಿಗೆ ಸಿಗುವವು. ಎರಡು ಮುಸಲ್ಮಾನಜಾತಿಯವರಿಗಾಗಿ ಕಾದಿಟ್ಟಂಥವು ಅಜಾತಿಯಲ್ಲಿ ಉತ್ಕೃಷ್ಟರಾದ ವಿದ್ಯಾರ್ಥಿಗಳಿಗೆ ಸಿಗುವವು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ಅಲಿಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದು ಕೊಳ್ಳಲ್ಪಡುವದು.

ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯ ಕವಿಾಟಿಯು ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷಾ ಕವಿಾಟಿಯು ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ ಮಾಸ್ತರರು ಪರೀಕ್ಷಾ ಕವಿಾಟಿಯ ಅಧ್ಯಕ್ಷರಿರುವರು ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಥಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು ಅರ್ಜಿಯ ನಮೂನೆಗಳು ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳುವದಿಲ್ಲ. ಉಮೇದವಾರರು ಅರ್ಜಿಗಳನ್ನು ಗನೇ ಆಗವ್ವ ರ್ಗಂತಿನೇ ಇಸವಿಯ ಒಳಗಾಗಿ ತಮ್ಮ ತಮ್ಮ ಜೆಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲಿಕ್ಕಿಲ್ಲ.

ಈ ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು ಸ್ಕಾಲರ ಶಿಪ್ಪಿನ ರಕಮು ಅವಧಿ ಪರೀಕ್ಷಾ ಫೀ ಮುಂತಾದ

ಸಂಗತಿಗಳ ಸಂಬಂಧದ ಸುಧಾರಿಸಿದ ಹೆಚ್ಚಿನ ಮಾಹಿತಿಯು ನಮ್ಮ ಕಡೆಗಾಗಲಿ ಪರೀಕ್ಷಾ ಕಮಿಟಿಯ ಕಡೆಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಸಿಗುವವು.

ಧಾರವಾಡ
ಏಪ್ರೀಲ್ ೧೯೨೩. | B. R. SAHASRABUDHE,
ಎ. ಇ. ದಕ್ಷಿಣ ಭಾಗ

CORRESPONDENCE.

ಪತ್ರವ್ಯವಹಾರ.

ಮು. ರಾ. ರಾ. ಶಾಲಾಪತ್ರಕರ್ತರಿಗೆ—

ವಿ. ವಿ ಕೆಳಗಿನ ನಾಲ್ಕು ಪಂಕ್ತಿಗಳಿಗೆ ತಮ್ಮ ಪತ್ರದಲ್ಲಿ ಸ್ಥಳದೊರೆಯಬೇಕು.

ಶಿವಾಜಿಯ ಅಡಳಿತವು

ಮಹಾರಾಷ್ಟ್ರ ರಾಜ್ಯ ಸ್ಥಾಪಕನಾದ ಶಿವಾಜಿಯು ತಾನು ಸಂಪಾದಿಸಿದ ರಾಜ್ಯದ ವ್ಯವಸ್ಥೆಯನ್ನು ಹ್ಯಾಗೆ ಇಟ್ಟಿದ್ದನೆಂಬದನ್ನು ತಿಳಕೊಳ್ಳುವದು ಅತ್ಯವಶ್ಯವಾಗಿರುವದು. ಒಳಗಡೆಯು ಇತಿಹಾಸ ಕರ್ತರಲ್ಲಿ ಕೆಲವರು ಶಿವಾಜಿಗೆ ಕೊಲೆಗಡಕನೆಂತಲೂ, ಕೊಳ್ಳಿಕೊಂಬನೆಂತಲೂ, ಹೇಳಿರುವರು. ಅಂಥ ಪುಸ್ತಕಗಳನ್ನೇ ಸದ್ಯದ ವಿದ್ಯಾರ್ಥಿಗಳು ಓದುವರು. ಆದರೆ ಕೈ. ವಾ. ಸಾವುದಾರ ರಾನಡೆ ಮಾಧವರಾಯರು ಬ್ರಿಟಿಶ ಸರಕಾರದವರ ಪ್ರೋತ್ಸಾಹನದಿಂದಲೂ, ಸಹಾಯದಿಂದಲೂ ಮಹಾರಾಷ್ಟ್ರರ ದಪ್ತರವನ್ನು ಶೋಧಿಸಿ ಈ ರಾಜ್ಯದ ಇತಿಹಾಸವನ್ನು ಬರೆದಿದ್ದಾರೆ. ಅದರ ಮೊದಲಿನ ಭಾಗವು ಅಚ್ಚಾಗಿದೆ. ಮುಂದಿನ ಭಾಗವನ್ನು ಮುಗಿಸುವದರೊಳಗಾಗಿ ಈ ಮಹಾ ಪುರುಷರು ಇಹಲೋಕವನ್ನು ಬಿಟ್ಟರೆಂಬದು ಎಲ್ಲರಿಗೂ ಗೊತ್ತುಂಟು. ಇವರು ಬರೆದ ಪುಸ್ತಕದೊಳಗಿನ ಶಿವಾಜಿಯ ರಾಜ್ಯಕಾರಭಾರದ ಪದ್ಧತಿಯನ್ನು ವಾಚಕರಿಗಾಗಿ ಸಂಕ್ಷೇಪದಿಂದ ಇದರಡಿಯಲ್ಲಿ ಬರೆಯುತ್ತೇವೆ.

ರಾಜ್ಯವಿಭಾಗಗಳು ಅಥವಾ ಪ್ರಾಂತಗಳ.

(೧) ಮಾವಳಾ ಪ್ರಾಂತ—ಈಗಿರುವ ಸಾಸವಡ, ಮಾಳ

ಳ, ಜುನ್ನರ, ಖೇಡ ಮುಂತಾದ ತಾಲೂಕುಗಳೂ ೧೪ ಗಿರಿದುರ್ಗಗಳೂ; ಈ ಪ್ರಾಂತದೊಳಗೆ ಬರುವವು.

(೭) ಪೂಯಿ, ಕರ್ಹಾಡ, ಸಾತಾರಾ ಪ್ರಾಂತ—ಈಗಿನ ಸಾತಾರೆ ಜಿಲ್ಲೆಯ ಪಶ್ಚಿಮ ಭಾಗವು, ಮತ್ತು ಅದರ ಸುತ್ತು ಮುತ್ತಲಿನ ಗಿರಿದುರ್ಗಗಳೂ ಈ ಪ್ರಾಂತದೊಳಗೆ ಬರುವವು.

(೭) ಪನ್ಹಾಳಪ್ರಾಂತ—ಈಗಿನ ಕೊಲ್ಹಾಪುರದ ಪಶ್ಚಿಮ ಭಾಗವೂ ೧೩ ಗಿರಿದುರ್ಗಗಳೂ ಈ ಪ್ರಾಂತದೊಳಗೆ ಬರುವವು.

(೪) ದಕ್ಷಿಣಕೊಂಕಣಪ್ರಾಂತ—ಈಗಿನ ರತ್ನಾಗಿರಿ ಜಿಲ್ಲೆಯೂ; ೫೪ ಗಿರಿದುರ್ಗಗಳೂ, ೧ ನೆಲಕೋಟೆಯೂ ಈ ಪ್ರಾಂತದೊಳಗೆ ಬರುವವು.

(೫) ಠಾಣೆಪ್ರಾಂತ—ಈಗಿನ ಉತ್ತರಕೊಂಕಣ ಭಾಗವೂ, ೧೦ ಗಿರಿದುರ್ಗಗಳೂ, ಈ ಭಾಗದೊಳಗೆ ಸಮಾವೇಶವಾಗುತ್ತವೆ.

(೬) ತ್ರ್ಯಂಬಕ, ಮತ್ತು ಈಗಿನ ಬಾಗಲಾಣ ಪ್ರಾಂತವೂ, ನಾಶಿಕ ಜಿಲ್ಲೆಯ ಪಶ್ಚಿಮ ಭಾಗವೂ, ೬೦ ಗಿರಿದುರ್ಗಗಳೂ ಇವೆರಡಲ್ಲಿ ಸಮಾವೇಶವಾಗುವವು.

(೭) ವನಗಡಪ್ರಾಂತ—ಈಗಿನ ಧಾರವಾಡ ಜಿಲ್ಲೆಯ ದಕ್ಷಿಣ ಕಡೆಯಭಾಗವೂ, ೩೦ ಗಿರಿದುರ್ಗಗಳೂ ಇದರೊಳಗೆ ಬರುವವು.

(೯, ೧೦, ೧೧,) ಬಿದನೂರ, ಕೊಲ್ಲೂರ, ಶ್ರೀರಂಗಪಟ್ಟಣ—ಈಗಿನ ಮೈಸೂರ ಪ್ರಾಂತವೂ ೧೪ ಗಿರಿದುರ್ಗಗಳೂ ಈ ಮೂರರಲ್ಲಿ ಬರುವವು.

(೧೨) ಕರ್ನಾಟಕಪ್ರಾಂತ—ಈಗಿನ ಮದ್ರಾಸ ಇಲಾಖೆಗೆ ಕೂಡಿಸಿದ ಕೃಷ್ಣಾನದಿಯ ದಕ್ಷಿಣ ಪ್ರದೇಶವೂ, ೧೪ ಗಿರಿದುರ್ಗಗಳೂ ಇದರೊಳಗೆ ಬರುವವು.

(೧೩) ವೆಲ್ಲೂರು, (ಈಗಿನ ಆರ್ಕಾಟ ಜಿಲ್ಲೆ), ೭೫ ಗಿರಿದುರ್ಗಗಳೂ ಈ ಭಾಗದೊಳಗೆ ಬರುವವು.

(೧೪) ತಂಜಾವರ ಪ್ರಾಂತ—೬ ಗಿರಿದುರ್ಗಗಳೂ ಈ ಭಾಗದೊಳಗೆ ಬರುವವು.

ಈ ಪ್ರಾಂತಗಳಲ್ಲದೆ ಸಹ್ಯಾದ್ರಿಯ ಎಡಬದಿಯಲ್ಲಿ ಸು ಮಾರು ೫೦ ರಿಂದ ೧೦೦ ಮೈಲುಗಳ ವರೆಗಿರುವ ಪ್ರದೇಶದ ಲ್ಲಿ ೬೮೦ ಕೋಟಿಗಳಿದ್ದವು. ಒಂದು ಕೋಟೆಯಿಂದರೆ ಆ ಕೋಟೆ ಇರುವಷ್ಟೇ ಪ್ರದೇಶವಲ್ಲ. ಅದರ ನೆರೆಹೊರೆಯ ಹಳ್ಳಿಪಳ್ಳಿಗಳು ಸಹ ಆ ಕೋಟೆಯ ಅಧಿಕಾರದೊಳಗಿರು ವವು. ತಾಲೂಕು ಅಥವಾ ಮಹಾಲುಗಳಲ್ಲಿ ಗ್ರಾಮಗಳಿ ರುವಂತೆ ಕಿಲ್ಲೆಯು ಅಧಿಕಾರದೊಳಗೂ; ಕೆಲವು ಹಳ್ಳಿಗಳಿ ರುವವು. ಕಿಲ್ಲೆಯ ಅಧಿಕಾರಿಗೆ ಕಿಲ್ಲೇದಾರನೆಂಬ ಹೆಸರು. ಈ ಕಿಲ್ಲೆಗಳಲ್ಲಿ ಕೆಲವು ಕೆಲವೊಂದು ವಿಶೇಷ ಸಂಗತಿಗಾಗಿ ಹೆಸರು ಹೊಂದಿವೆ. ತೋರಣಾ, ರಾಯಗಡಗಳು ಶಿವಾಜಿ ಯು ಬಾಲ್ಯದ ಶೌರ್ಯೋತ್ಸಾಹವನ್ನು ಸೂಚಿಸುತ್ತವೆ. ಶಿವನೇರಿ ಯು ಈ ಪರಾಕ್ರಮಿಯು ಜನ್ಮಸ್ಥಾನವಾಗಿದೆ. ಪುರಂಧರ, ಸಿಂಹಗಡಗಳು ಕ್ರಮವಾಗಿ ಬಾಜಿಪ್ರಭು ಮತ್ತು ತಾನಾಜಿ ಮಾಲುಸುರೆ ಇವರಿಬ್ಬರ ಕಡುಗಲಿತನವನ್ನು ಜಗಕೆಲ್ಲಸಾ ರುತ್ತ ಸ್ಥಿರವಾಗಿ ನಿಂತುಕೊಂಡಿರುತ್ತವೆ. ಮಾಲವಣ, ಕು ಲಾಬೆಗಳು ಮಹಾರಾಷ್ಟ್ರರ ಹಡಗುಪಡೆಯ ಮುಖ್ಯಸ್ಥಾನ ಗಳಾಗಿದ್ದವು ಪ್ರತಾಪಗಡವು ಅಫಜುಲಖಾನನ ಕೊಲೆ ಯಿಂದ ಹೆಸರು ಹೊಂದಿದೆ. ಶಿವಾಜಿಯು ಕೈಯೊಳಗಿರುವ ೬೮೦ ಕೋಟೆಗಳಿರುವ ಪ್ರದೇಶದ ಪೂರ್ವ ಮೇರೆಯಲ್ಲಿ ಕಲ್ಯಾಣ, ಭಿವಂಡಿ, ವಾಯಿ, ಕರ್ಹಾಡ, ಸುಳೆ, ಬಾರಾಮತಿ, ಚಾಕಣ, ನಿರಜೆ, ತಾಸಗಾವ, ಕೊಲ್ಹಾಪೂರ, ಖಟಾವ ಮುಂತಾದ ಕೋಟೆಗಳಿದ್ದವು.

ಈ ಕೋಟೆಗಳ ಆಸರದಿಂದಲೇ ಶಿವಾಜಿಯು ಬಹು ಬೆ ಳಕಿಗೆ ಬಂದನೆಂದು ಹೇಳಬಹುದು. ಬಹುತರವಾಗಿ ಯಾ ವತ್ತು ಸಾಹಸದ ಮಹತ್ಕಾರ್ಯಗಳನ್ನು ಇವುಗಳ ನೆರವಿ ನಿಂದಲೇ ಕೈ ಗೂಡಿಸಿಕೊಂಡನು. ಇದರಿಂದ ಈ ಕೋಟೆ ಗಳ ವ್ಯವಸ್ಥೆಯನ್ನು ತಿಳಿಕೊಳ್ಳಬೇಕೆಂಬ ಲವಲವಿಕೆಯು

ವಾಚಕರಲ್ಲಿ ಉಂಟಾಗಬಹುದು. ಕಾರಣ ಅದನ್ನು ಕೆಳಗೆ ಬರೆದಿದ್ದೇವೆ.

ಗಿರಿದುರ್ಗಗಳ ವ್ಯವಸ್ಥೆಯು.

ಒಂದೊಂದು ಕೋಟೆಯಲ್ಲಿ ಒಬ್ಬೊಬ್ಬ ಹವಾಲದಾರ ನೆಂಬ ಅಧಿಕಾರಿಯು ಮಾವಳಿ ಅಥವಾ ಮರಾತಾ ಜಾತಿಯವನೂ ಅವನ ಜಾತಿಯವನೇ ಆದ ಒಬ್ಬ ಮುದ್ದತ್ತಗಾರನೂ ಇರುವರು. ಇವರು ದುರ್ಗವನ್ನೂ ಅದರ ನೆರೆಹೊರೆಯ ಪ್ರದೇಶವನ್ನೂ ಕಾಪಾಡುವರು. ದೇಶಸ್ಥ, ಕೊಂಕಣಸ್ಥ ಕರಾಡೆ ಎಂಬ ಈ ಮೂರು ತರದ ಬ್ರಾಹ್ಮಣರಲ್ಲಿ ಒಂದು ಜಾತಿಯ ಒಬ್ಬ ಅಧಿಕಾರಿಯು ಕಿಲ್ಲೆಯಲ್ಲಿರುವವನು ಇವನಿಗೆ ಸುಭೇದಾರನೆಂತಲೂ ಸಬನೀಸನೆಂತಲೂ ಅನ್ನುವರು. ಕಾರಖಾನನೀಸ ಎಂಬ ಪ್ರಭುಜಾತಿಯ ಅಧಿಕಾರಿಯೂ ಸುಭೇದಾರನೂ ಹವಾಲದಾರನಿಗೆ ನೆರವಿಗರಾಗಿರತಕ್ಕವನ್ದು, ಕಿಲ್ಲೆಯೊಳಗಿನ ಶಿಬಂದೀ ಜನರ ಪೂರ್ಣವಾದ ಒಡೆತನವು ಹವಾಲದಾರನದು ದಿವಾಣೀ ಮುಲಖೀ ಕೆಲಸಗಳನ್ನು ಜರಿಗಿಸುವವನು ಸುಭೇದಾರನು. ಕಾರಖಾನನೀಸನು ದಂಡಿಗೆ ಬೇಕಾಗುವ ಎಲ್ಲ ತರದ ಸಾಮುಗ್ರಿಯನ್ನು (ಕಾಳು, ಜಡಿ, ಮೇವು, ಮದ್ದು ಗುಂಡು ಇತ್ಯಾದಿ) ಸಂಗ್ರಹಿಸಿಡತಕ್ಕವನು. ಇದಲ್ಲದೆ ಕೋಟೆಯನ್ನು ಭದ್ರಪಡಿಸುವ ಕೆಲಸವೂ ಇವನದೇ. ಈ ಮೇರೆಗೆ ಈ ಮೂರು ಜಾತಿಯ ಜನರಿಗೆ ಶಿವಾಜಿಯು ಒಂದೇ ಸ್ಥಳದಲ್ಲಿ ಬೇರೆಬೇರೆ ಕೆಲಸಗಳನ್ನು ಕೊಟ್ಟು, ಇಟ್ಟಿದ್ದನು. ಇದರಿಂದ ಶಿವಾಜಿಯು ಈ ಮೂರು ಜಾತಿಯ ಜನರಲ್ಲಿ ಪರಸ್ಪರರಲ್ಲಿ ಪ್ರೀತಿ ವಿಶ್ವಾಸಗಳು ನೆಲೆಗೊಳ್ಳಬೇಕೆಂತಲೂ ದುರ್ಬುದ್ಧಿಗಳಿಗೆ ಎಳ್ಳಷ್ಟು ಆಸ್ಪದ ದೊರೆಯಬಾರದೆಂತಲೂ ಏರ್ಪಡಿಸಿದ ಈ ಪದ್ಧತಿಯಿಂದ ಅವನ ಧೂರ್ತತ್ವವು ಒಡೆದು ಕಾಣುವದು ಗುಡ್ಡದ ಕೆಳಗಿನ ಪ್ರದೇಶಗಳಲ್ಲಿ ರಾಮೋಸಿ, ಭಿಲ್ಲ, ಬೇಡ ಮುಂತಾದ ಜಾತಿಯ ಜನರನ್ನು ಜನರ ವಿತ್ತ ಜೀವತ ರಕ್ಷಣಕ್ಕಾಗಿಯೂ ಹಗೆಗಳ ಸಂಚಳತಿಗಾಗಿಯೂ ನೇಮಿಸಿದ್ದನು. ಈ ಕಾರ್ಯವನ್ನು ಹಗಲಿರುಳು ದಕ್ಷತೆಯಿಂದ ನಡೆಸುವ

ಬಗ್ಗೆಪ್ರತಿ ಒಬ್ಬನಿಗೆ ಅಗ್ರಹಪೂರ್ವಕವಾಗಿ ತಿಳಿಹೇಳು ತ್ತಿರುವನು. ಕೋಟೆಯು ಸಣ್ಣದು ದೊಡ್ಡದು ಇದ್ದಂತೆ ಶಿಬಂದಿಯ ಜನರಾದರೂ ಹೆಚ್ಚು ಕಡಿಮೆ ಇರುವರು. ೯ ಮಂದಿ ಸಿಪಾಯಿಗಳಿಗೆ ಒಬ್ಬ ನಾಯಕನಿರುವನು. ಒಬ್ಬೊಬ್ಬ ಸಿಪಾಯಿಗೆ ಅವನ ಯೋಗ್ಯತೆಯಂತೆ ರೋಖ ಆಗಲಿ ಜೇರೆ ರೀತಿಯಿಂದಾಗಲಿ ಸಂಬಳ ದೊರೆಯುವದು. ಈ ದಂಡಾಳುಗಳಿಗೆ ಕತ್ತಿ, ತುಪಾಕಿ, ಬರ್ಚಿ, ಪಟ್ಟೇ ಮೊದಲಾದ ಆಯುಧಗಳು ಇರುವವು.

ರಾಜ್ಯದ ವಸೂಲಿಯ ಪದ್ಧತಿ

ಈಗಿನ ಬ್ರಿತಿಶ ರಾಜ್ಯದಂತೆ ತಾಲೂಕುಗಳಿಗೆ ಬದಲಾಗಿ ಮಹಾಲುಗಳೆಂಬ ವಿಭಾಗಗಳನ್ನು ಮಾಡಿದ್ದನು. ೩೫ ಸಾವಿರದಿಂದ ೧೦೦೫ ಸಾವಿರದವರೆಗೆ ವಸೂಲಾಗುವಷ್ಟು ಭೂಪ್ರದೇಶಕ್ಕೆ ಮಹಾಲೆನ್ನುವರು. ಇಂಥ ಎರಡು ಅಥವಾ ಮೂರು ಮಹಾಲುಗಳು ಕೂಡಿ ಒಂದು ಸುಭೆಯಾಗುವದು. ಈ ಸುಭೆಯ ಒಡೆಯನಿಗೆ ಸುಭೆದಾರನೆನ್ನುವರು ಇವನ ಸಂಬಳವು ವರ್ಷಕ್ಕೆ ೪೦೦ ಹೊನ್ನು, ಎರಡು ಮೂರ ಹಳ್ಳಿಗಳನ್ನು ಒಬ್ಬೊಬ್ಬ ಕಮಾವೀಸದಾರನೆಂಬ ಅಧಿಕಾರಿಯ ಕೈಯಲ್ಲಿ ಕೊಟ್ಟಿದ್ದನು. ಇವರು ಜಮಾಬಂದಿಯ ಕೆಲಸವನ್ನು ಅಂದರೆ ಭೂಮಿಯ ತೆರಿಗೆಯನ್ನು ಗೊತ್ತು ಮಾಡುವದೂ ವಸೂಲು ಮಾಡುವದೂ ಮುಂತಾದ ಕೆಲಸಗೆಳನ್ನು ಮಾಡುತ್ತಿದ್ದರು. ಇವರಿಗೆ ಇನಾಮು ಭೂಮಿಗಳಿದ್ದಿಲ್ಲ. ಬೊಕ್ಕಸದಿಂದ ಹಣದ ರೂಪದಿಂದ ಸಂಬಳವು ದೊರೆಯುತ್ತಿತ್ತು. ಇಂಥ ಹಲವು ಕಮಾವೀಸದಾರರು ತಮ್ಮ ತಮ್ಮ ಭಾಗದ ತೆರಿಗೆಯನ್ನು ಜಮಾ ಮಾಡಿ ತಮ್ಮ ಒಡೆಯನಾದ ಮಹಾಲಿನ ಅಧಿಕಾರಿಯ ಕಡಿಗೆ ಕಳಿಸುವರು. ಈ ಮಹಾಲಿನ ಅಧಿಕಾರಿಗಳು ಜಮೆಯಾದ ಹಣವನ್ನು ಸುಭೆಗೆ ಮುಟ್ಟಿಸುವರು ಮೇ ಬರಗಾಲದಲ್ಲಿ ಅಥವಾ ಕರಿಸಾಲಾದ ಪರ್ಪದಲ್ಲಿ ರೈತರಿಗೆ ಇಡೀ ತೆರಿಗೆಯನ್ನಾಗಲಿ, ತೆರಿಗೆಯ ಭಾಗವನ್ನಾಗಲಿ ಸೂಟಬಿಡುವರು. (ಸಶೇಷ)

ಶಾಲಾಪತ್ರಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಸೋತ್ಕರ್ಷಮುಂ
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋದಿದವೇಳ್ವುದುಳಿದರಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೯] ಅಗಷ್ಟ ೧೯೦೩. [ಸಂಚಿಕೆ ೮

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಹೊತ್ತು ಬಂದಂತೆ ಕೊಡೆ ಹಿಡಿಯಬೇಕೆಂದು ಬಂದು ಕನ್ನಡದ ಗಾದೆಯು ಹೇಳುತ್ತದೆ. देशकालानुरोधेनवर्तितव्यम्सदात्मनैः ಎಂಬ ಸಂಸ್ಕೃತದ ಗಾದೆಯಾದರೂ ಇದೇ ಅರ್ಥವನ್ನು ಹೇಳುತ್ತದೆ. ಭರತ ಖಂಡದಲ್ಲಿ ಬ್ರಿತಿಶರ ಸಾರ್ವಭೌಮತ್ವವು ನೆಲಗೊಂಡದ್ದರಿಂದ, ದೇಶದ ಆಚಾರ ವಿಚಾರಗಳಲ್ಲಿ ಅನೇಕ ಭಿನ್ನತ್ವಗಳು ತಲೆದೋರಹತ್ತಿವೆ. ಅದರಂತೆ ಶಿಕ್ಷಣದ ಪದ್ಧತಿಯಲ್ಲಿಯೂ ಸ್ಥಿತ್ಯಂತರವುಂಟಾಗಿದೆ. ನಮ್ಮ ಮೊದಲಿನ ಪದ್ಧತಿಯು ಈಗ ಕೇವಲ ಅಪ್ರಯೋಜಕವೆಂದು ನಿರ್ಣಯಿಸಲ್ಪಟ್ಟಿದೆ. ಅದರಂತೆ ಕೆಲವು ಹೊರ್ತಾಗಿ ನಮ್ಮ ಪ್ರಾಚೀನ ಗ್ರಂಥಗಳಾದರೂ ಅದೇ ಬಿರುದನ್ನು ಪಡೆದಿರುತ್ತವೆ. ಯಾಕೆಂದರೆ ಸದ್ಯದ ಕಾಲದ ಜನರಲ್ಲಿ ಕೇವಲ ಐಹಿಕ ಸುಖವನ್ನು ಹಲವು ಪ್ರಯತ್ನದಿಂದ ವಿಪುಲವಾಗಿ ಪಡೆಯಬೇಕೆಂಬದೇ ಪ್ರಧಾನ ಉದ್ದೇಶವಾಗಿದೆ. ಯುರೋಪ, ಅಮೇರಿಕಾ, ಜಪಾನ, ಆಸ್ಟ್ರೇಲಿಯಾ ಮುಂತಾದ ಪ್ರದೇಶದ ಜನರು ದಿನದಿನ ಹೊಸ ಶೋಧಗಳನ್ನು ನಡಿಸುತ್ತ, ತಮ್ಮ ಐಹಿಕ ಸುಖವನ್ನು ಬೆಳಿಸಿಕೊಳ್ಳುವ

ಕೆಲಸದಲ್ಲಿ ಪೀರ ಉಪಜ್ಞರಾಗಿದ್ದಾರೆ. ಪ್ರಸ್ತುತದ ಸಿತಿಯನ್ನು ನೋಡಿದರೆ ನಮಗೆ ಮೇಲೆ ಹೇಳಿದವರಿಗಿಂತ ಹೊಟ್ಟೆಯ ಕಾಳಜಿಯು ಹೆಚ್ಚಿರುತ್ತದೆ. ಯಾಕೆಂದರೆ ಜನಸಂಖ್ಯೆಯು ಮಿತಿಮೀರಿ ಬೆಳೆದಿರುತ್ತದೆ. ಕೈಗಾರಿಕೆಯ ಕೆಲಸಗಳಲ್ಲಿ ಯಂತ್ರಾದಿಗಳ ಸಾಧನಗಳನ್ನು ಉಪಯೋಗಿಸಿಕೊಳ್ಳುವ ಅನುಕೂಲತೆಯೂ, ಜ್ಞಾನತನವೂ ನಮ್ಮಲ್ಲಿಲ್ಲ. ಆಹಾರದ ಪದಾರ್ಥಗಳು ತೆರಪಿಲ್ಲದೆ ಪರದೇಶಗಳಿಗೆ ಹೋಗುತ್ತವೆ. ಇತ್ಯಾದಿ ಅನೇಕ ಕಾರಣಗಳುಂಟು. ಈ ವ್ಯಂಗಗಳು ಸರಕಾರಿಗಪರ ಮನದಲ್ಲಿ ಹೊಳೆದದ್ದರಿಂದ ಅವರು ತಮ್ಮ ಕ್ಷೇಯುಂಬಾಗಬಹುದಾದ ಕಾರ್ಯಗಳನ್ನು ಕೈಕೊಂಡು ನಡಿಸಹತ್ತಿದ್ದಾರೆ. ಆದರೂ ಶಿಕ್ಷಣದಲ್ಲಿ ಸುಧಾರಿಸತಕ್ಕ ಸಂಗತಿಗಳು ಇನ್ನು ಅನೇಕವುಂಟು.

ಸಾಂಖ್ಯಸೂತ್ರರ ವಿಚಾರಸರಣಿಯಾದರೂ ನಮಗಿಂತ ಭಿನ್ನವಾಗಿರುತ್ತದೆ. ಇದಕ್ಕೆ ಇಲ್ಲಿ ಒಂದೇ ಉದಾಹರಣೆಯನ್ನು ಬರೆಯುತ್ತೇವೆ. ನಾವು, ಅರಸನು ವಿಷ್ಣುಸ್ವರೂಪನೆಂಬಲೂ, ಅವನು ತನ್ನೆ ಮನಸೆ ಸರಿತೋರಿದಂತ ನಮ್ಮನ್ನು ನಡಿಸಿಕೊಂಡರೆ ನಾವು ಸುಮ್ಮನಿರಬೇಕೆಂತಲೂ ನಮ್ಮ ಶಾಸ್ತ್ರದಲ್ಲಿ ಉಂಟು. ಅವರೆ ಸಾಂಖ್ಯಸೂತ್ರರು ಅರಸನು ಪ್ರಜೆಗಳ ಕಳೆಂತಲೂ, ಅವನು ಅವರ ಇಷ್ಟೈಯಂತೆ ವರ್ತಿಸುತ್ತಿರಬೇಕೆಂತಲೂ ಪ್ರತಿಪಾದಿಸಿದವರು ಇದೇ ನೇರಗೆ ಸಾಮಾಜಿಕ, ರಾಜಕೀಯ, ಧರ್ಮಿಕ ವಿಚಾರಗಳೆಲ್ಲಾದರೂ ಮತಭೇದವಿರುವದು ಸರ್ವರಿಗೂ ಗೊತ್ತಿದ್ದ ಸಂಗತಿಯೇ ಆಗಿರುವದು ಪ್ರಸ್ತುತದಲ್ಲಿ ಪಾಶ್ಚಾತ್ಯರ ಉಚ್ಚಶಿಕ್ಷಣವನ್ನು ಪಡೆದ ಅನೇಕ ಜನ ಪಂಡಿತರು ಸ್ವಾನುಭವದಿಂದ ಪ್ರಕಟಿಸಿದ ವಿಚಾರಗಳು ಬಹು ಬೆಲೆಯುಳ್ಳವುಗಳಾಗಿರುವದರಿಂದ ಅವುಗಳನ್ನು ಇದರಡಿಯಲ್ಲಿ ಬರೆದಿಬ್ಬೇವೆ.

"ಕಾಲೇಜುಗಳಲ್ಲಿ ಸೇರಿ ಮೊಲ್ಲರದ ವಿದ್ಯವನ್ನು ಅದಷ್ಟು ಹೆಚ್ಚು ಸಂಗ್ರಹಿಸಿಕೊಳ್ಳುವದು ಪ್ರತಿ ಒಬ್ಬ ಭಾರತೀಯನ ಪ್ರಥಮ ಕಾರ್ಯವು. ಇದು ಎಲ್ಲರಿಗೂ ಅವಶ್ಯವಾದದ್ದು. ಇದರಿಂದ ನಾವು ಮುಂದೆ ಹಿಡಿಯಬಹುದಾದ

ಮಾರ್ಗವು ನಿಚ್ಚಳವಾಗಿ ಕಾಣುತ್ತದೆ. ಮೊದಲು ನಾವು ಸ್ವತಂತ್ರವಾಗಿಯೂ ಯಾರೊಬ್ಬರ ಸಂಸರ್ಗವಿಲ್ಲದೆಯೂ ಬಾಳುವೆ ಮಾಡುತ್ತಿದ್ದೆವು. ಈಗ ಆ ಮನುವು ಬದಲಾಗಿರುವದರಿಂದ ಈ ಹೊಸದಾದ ಪಾಶ್ಚಾತ್ಯ ಶಿಕ್ಷಣವನ್ನೇ ಕಲಿತು ಸಾಧ್ಯವಾದ ಮಟ್ಟಿಗೆ ಅವೇ ಆಚಾರವಿಚಾರಗಳನ್ನು ಅವಲಂಬಿಸಿ ಸಂಸಾರಕ್ರಮವನ್ನು ಸಾಗಿಸಬೇಕಾಗಿದೆ. ಯಾಕೆಂದರೆ ನಮ್ಮ ಪ್ರಾಚೀನ ಶಿಕ್ಷಣಪದ್ಧತಿಯೂ, ವಿಷಯಗಳೂ ಪ್ರಸ್ತುತದ ಸ್ಥಿತಿಗೆ ಅನುರೂಪವಾದವುಗಳಿಲ್ಲ. ವೈದ್ಯದ ರಸಾಯನಶಾಸ್ತ್ರ, ಶಿಲ್ಪಶಾಸ್ತ್ರ, ಕೃಷಿಶಾಸ್ತ್ರ ಮೊದಲಾದ ಭೌತಿಕಶಾಸ್ತ್ರಗಳು ಮೊದಲಿಗಿಂತ ಎಷ್ಟೋ ಪಾಲಿಗೆ ಪೂರ್ಣತೆಯನ್ನು ಪಡೆದಿರುತ್ತವೆ. ಆದರೆ ಈ ಎಲ್ಲ ಶಾಸ್ತ್ರಗಳು ಇಂಗ್ಲೀಷ ಮೊದಲಾದ ಅನ್ಯ ಭಾಷೆಯೊಳಗೇ ಬರೆಯಲ್ಪಟ್ಟವೆ. ಮೇಲ್ತರದ ಶಾಲೆಗಳು ಅಂದರೆ ಕಾಲೇಜಗಳಲ್ಲಿ ಇದೇ ಭಾಷೆಯ ದ್ವಾರದಿಂದಲೇ ಇವು ಕಲಿಸಲ್ಪಡುತ್ತವೆ, ಸಾಮಾನ್ಯ ಬುದ್ಧಿಯುಳ್ಳ ಹಿಂದೂ ವಿದ್ಯಾರ್ಥಿಗಳಿಗೆ ಮೊದಲು ಭಾಷೆಯನ್ನೇ ಕಲಿಯಲಿಕ್ಕೆ ಅಸಾಧ್ಯವೆನಿಸುತ್ತದೆ. ಹಾಗೂ ಹೀಗೂ ಕಲಿಯಲಿಕ್ಕೆ ಪ್ರಜ್ಞೆ ಮಾಡಬೇಕಾದ ಹಣದ ಮಾನವಿಂದಲೂ ಈ ಕಲಿಯೋಣವು ಬಹು ಜನರಿಗೆ ಜಡವೆನಿಸುತ್ತದೆ. ಹಣದ ಅನುಕೂಲತೆಯುಳ್ಳಂಥ ತೀಕ್ಷ್ಣ ಬುದ್ಧಿಯ ವಿದ್ಯಾರ್ಥಿಗಳು ಎಷ್ಟು ಜನರು ಶಿಕ್ಷಾರು? ಅವರಾದರೂ ವಿದ್ಯಾಪೀಠದೊಳಗಿಂದ ಕಲಿತು ಬರುವದರೊಳಗಾಗಿ ತಮ್ಮ ಶಾರೀರಬಲವನ್ನು ಅರ್ಧಮರ್ಧ ಕಳಕೊಂಡೇ ಬರುವರು. ಅದರಿಂದಲೆವರಲ್ಲಿ ಬಹು ಜನರು ಅಲ್ಪಾಯುಷಿಗಳಾಗುವರು." ಇತ್ಯಾದಿ.

ಇವೆಲ್ಲ ಸಂಗತಿಗಳನ್ನು ನೋಡಿ ಕೆಲವು ದೇಶೀ ಅರಸರು ವಿಶೇಷವಾಗಿ ಮೈಸೂರ, ತ್ರಾವಣಕೋರ, ಬಡೋದೆಗಳ ಅರಸರು ಈ ವಿಷಯವಾಗಿ ಕೆಲವು ಹೊಸ ಸುಧಾರಣೆಗಳನ್ನು ಮಾಡತೊಡಗಿದ್ದಾರೆ. ತ್ರಾವಣಕೋರದಲ್ಲಿ ಒಂದು ಔದ್ಯೋಗಿಕ ಶಾಲೆಯು ಸ್ಥಾಪಿಸಲ್ಪಟ್ಟಿದೆ. ಮಿ. ಟಾಟಾ ಎಂಬ ಪಾರ್ಸೀ ಧನಿಕನು ಇದೇ ಕೆಲಸಕ್ಕಾಗಿ ತನುಮನಧನ

ಗಳನ್ನು ವೆಚ್ಚ ಮಾಡುತ್ತಲಿರುವನು; ಆದರೆ ಪ್ರಸ್ತುತದ ಶ್ರೀಮಂತ ಸಯಾಜೀರಾವ ಗಾಯಕವಾಡ ಮಹಾರಾಜರು, ಒಂದು ಅತ್ಯುತ್ತಮವಾದ ಗೌಗನದ ಸುಧಾರಣೆಯನ್ನು ಮಾಡಹವಣಿಸುತ್ತಾರೆ. ಅದು ಯಾವದೆಂದರೆ :— ದೇಶಭಾಷೆಯಲ್ಲಿಯೇ ಮೇಲ್ತರದ ಶಿಕ್ಷಣವು ದೊರೆಯುವಂತೆ ಮಾಡುವದು. ಸಾಂಗಲಿ, ಮಿರಜ, ಮುಧೋಳ, ಮೈಸೂರು ಬಡೋದೆ ಮುಂತಾದ ಚಿಕ್ಕ ದೊಡ್ಡ ಸಂಸ್ಥಾನಗಳಲ್ಲಿ ಈಗಲಾದರೂ ಇಂಗ್ಲಿಷ ವಿದ್ಯೆಯು ಅಲ್ಪ ಖರ್ಚಿನೀದ ಶಿಗುವಂತೆ ವ್ಯವಸ್ಥೆಯನ್ನು ಮಾಡಿದ್ದಾರೆ ಆದರೆ ಉಚ್ಚ ಶಿಕ್ಷಣವು ಮಾತ್ರ ಸುಲಭವಾಗಿಯೂ, ಅಲ್ಪ ಖರ್ಚಿನಿಂದಲೂ ದೊರೆಯುವ ವ್ಯವಸ್ಥೆಯನ್ನು ಯಾರೂ ಮಾಡಿದ್ದಿಲ್ಲ. ಅದನ್ನು ಶ್ರೀಮಂತ ಗಾಯಕವಾಡರವರು ಪೂರ್ಣಗೊಳಿಸುವರಿದ್ದಾರೆಂದು ಕೇಳಿ ನಮಗೆ ಪರಮಾವಧಿ ಆನಂದವಾಗುತ್ತದೆ. ಹೀಗಾಗುವದರಿಂದ ಅನ್ಯಭಾಷೆಯನ್ನು ಕಲಿಯುವ ಹೊರೆಯು ತಪ್ಪುವದಲ್ಲದೆ, ಕಲಿಸುವ ವಿಷಯಗಳಾದರೂ ಹೆಚ್ಚು ಸ್ಪಷ್ಟವಾಗಿ ತಿಳಿಯುವವು. ಹಾಗೂ ಆ ಅನ್ಯಭಾಷೆಯಲ್ಲಿರುವ ಅನೇಕ ಗ್ರಂಥಗಳಾದರೂ ದೇಶಭಾಷೆಯಲ್ಲಿ ಭಾಷಾಂತರಿಸಲ್ಪಡುವವು. ಅದರಿಂದ ಇತರ ಜನರಿಗೆ ಅಂದರೆ ಕಾಲೇಜಕ್ಕೆ ಹೋಗಿ ಕಲಿಯಲಿಕ್ಕೆ ಅನುಕೂಲವಿಲ್ಲದಂಥ ಅನೇಕ ಜನರಿಗೂ ಉಪಯೋಗವಾಗಿ ಹಳ್ಳಿಗಾಡ ಜನರಲ್ಲಿರುವ ಮೂಢ ಶ್ರದ್ಧೆಯೂ ಕಡಿಮೆಯಾಗುವದು. ಯಾವ ಭಾಷೆಯಲ್ಲಿ ಕಲಿತರೇನು? ವಿಷಯಗಳು ಒಂದೇಯಾದ ಮೇಲೆ ಇಂಗ್ಲಂಡದ ಕೇಂಬ್ರಿಜ್ಜ ಪಟ್ಟಣದ ಕಾಲೇಜದಲ್ಲಿ ಕಲಿತ ವಿದ್ಯಾರ್ಥಿಯೂ, ಬಡೋದೆಯ ಕಾಲೇಜದಲ್ಲಿ ಮಹಾರಾಷ್ಟ್ರ ಅಥವಾ ಗುಜರಾಥೀ ಭಾಷೆಯಲ್ಲಿ ಕಲಿತ ವಿದ್ಯಾರ್ಥಿಯೂ ಒಂದೇ ಯೋಗ್ಯತೆಯವರಾಗುವರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಹಿಂದೂ ವಿದ್ಯಾರ್ಥಿಗೆ ಇಂಗ್ಲಿಷ ಬರುವದಿಲ್ಲ, ಇಂಗ್ಲಿಷ ವಿದ್ಯಾರ್ಥಿಗೆ ಹಿಂದೀ ಭಾಷೆಗಳು ಬರುವದಿಲ್ಲ ಇಷ್ಟೇ ಭೇದವು. ಗರಜಿನ ಪೂರ್ತಿ ಉಭಯರು ಪರಭಾಷೆಗಳ ಅಭ್ಯಾಸವನ್ನು ಮಾಡಬಹುದು.

ಲಾರ್ಡ್ ಕರ್ಜನ್ ದೊರೆಗಳು ವಿದ್ಯಾಖಾತೆಯಲ್ಲಿ ಅನೇಕ ಸುಧಾರಣೆಗಳನ್ನುಂಟು ಮಾಡಲಿಕ್ಕೆ ಯತ್ನಿಸುವರಷ್ಟೆ, ಈ ಗಾಯಕವಾಡ ಮಹಾರಾಜರವರ ಹೊಸ ವಿಚಾರವು ಆ ದೊರೆಗಳ ಮನಸಿಗೆ ಬಂದರೆ ಬ್ರಿಟಿಶ ಇಂಡಿಯಾದಲ್ಲಿಯೂ ದೇಶಭಾಷೆಗಳ ದ್ವಾರವಾಗಿ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳನ್ನು ಕಾಣುವ ಸುಯೋಗವು ಪ್ರಾಪ್ತವಾಗಲಿಕ್ಕೆ ಆತಂಕವೇನೂ ತೋರುವದಿಲ್ಲ.

ಮೆ. ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರು, ಮೊನ್ನೆಮೊನ್ನೆ ಒಂದ ಹುಕುಮು ಕೊಟ್ಟಿರುತ್ತಾರೆ. ಅದರ ಸಾರಾಂಶವು :—ಇನ್ನು ಮುಂದೆ ಕಾಲೇಜದಲ್ಲಿ ಕಲಿಯುವ ವಿದ್ಯಾರ್ಥಿಗಳು ಚಿತ್ರಕಲೆಯ ಎರಡನೇ ಗ್ರೇಡಿನಲ್ಲಿಯೂ, ಮ್ಯಾನುಅಲ್ ಟ್ರೇನಿಂಗ (ಬಡಿಗತನ ಕಮ್ಮಾರಿಕೆ) ದಲ್ಲಿಯೂ, ಪಾಸಾಗಿ ಸರಟಿಫಿಕೇಟನ್ನು ಪಡೆದರೆ, ಅವರಿಗೆ ಅವರ ಜೋಡಿಯವರಿಗಿಂತ ಹೆಚ್ಚು ಸಂಬಳವು ಆರಂಭದಿಂದಲೇ ಶಿಗುವದು ಇದಲ್ಲದೆ ಮುಂದೆ ಅವರವರ ಕೆಲಸದ ಮಾನದಿಂದ ಉತ್ತೇಜನ ಶಿಕ್ಕುವದು ಜೇರೆ ಇತ್ಯಾದಿ. ಈ ಹುಕುಮಿನ ತಾತ್ಪರ್ಯವನ್ನು ಈ ಕಲೆಯಲ್ಲಿ ಅಭಿರುಚಿಯುಳ್ಳಂಥ ಈಗ ಕೆಲಸದ ಮೇಲಿರುವಂಥ ಅಧ್ಯಾಪಕರಾದರೂ ಮನನ ಮಾಡಿಕೊಂಡು, ಸಾಧ್ಯವಿದ್ದ ಮಟ್ಟಿಗೆ ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕು.

ಮಿದುಳಿನ ಭಾರವು:—ಡಾ. ಎಚ್. ಮಾಟಿಗ್‌ಕ್ಯಾ ಎಂಬ ಡಾಕ್ಟರನು ಅನೇಕ ಜನ ಸ್ತ್ರೀ ಪುರುಷರ ಮಿದುಳಿನ ಭಾರವನ್ನು ತೂಗಿ ಗೊತ್ತುಹಚ್ಚಿದ್ದಾನೆ. ಮತ್ತು ಈ ಸಂಬಂಧದಿಂದ ಕೆಲವು ತತ್ವಗಳನ್ನು ಕಂಡು ಹಿಡಿದಿದ್ದಾನೆ. ಅವನು ಇಂದಿನ ವರೆಗೆ ೬೩೫ ಜನ ಸ್ತ್ರೀ ಪುರುಷರ ಮಿದುಳನ್ನು ತೂಗಿ ನೋಡಿದ್ದಾನೆ. ಎಲ್ಲಕ್ಕೂ ಭಾರವಾದ ಗಂಡಸಿನ ಮಿದುಳು ೬೪೨ ಔಂಸ ಅಂದರೆ ಸುಮಾರು ನಾಲ್ಕು ಪೌಂಡು ಇತ್ತು. ಎಲ್ಲಕ್ಕೂ ಭಾರವಾದ ಹೆಂಗಸಿನ ಮಿದುಳು ೫೬೩

ಬಂಸ ಅಂದರೆ ೬೫ ಇತ್ತು. ಗಂಡಸರ ಮಿದುಳಿನ ಸರಾಸರಿ ತೂಕವು ೪೯ ಔಂಸ, ಹೆಂಗಸರದು ೪೧ ಔಂಸ ಇರುವದು. ಇವನು ಮಿದುಳಿನ ಕಾರ್ಯವನ್ನು ಏನೂ ನಡಿಸದೆ ಇದ್ದ ಅಂದರೆ ಯಾವ ಉದ್ಯೋಗವನ್ನು ಕಲಿಯಲಾರದ ಕೂಲಿಕಾರರನ್ನು ಹಿಡಿದು ಕೇವಲ ಮಿದುಳಿನ ಕಾರ್ಯವನ್ನೇ ನಡಿಸುವ ಗ್ರಂಥಕಾರರ ವರೆಗೆ ಆರು ವರ್ಗಗಳನ್ನು ಮಾಡಿ ಆಯಾ ಜನರ ಮಿದುಳಿನ ತೂಕವನ್ನು ಬರೆದದ್ದು ಹ್ಯಾಗಂದರೆ:—ಕೂಲಿಕಾರರ ಮಿದುಳಿನ ತೂಕವು ಸರಾಸರಿ ೫೦ ಔಂಸ, ಇದಕ್ಕೂ ಮೇಲ್ತರದ ಕೂಲಿಕಾರರ ಮಿದುಳಿನ ತೂಕವು ೫೨ ಔಂಸ, ದ್ವಾರಪಾಲಕ ಮೊದಲಾದ ಕಾಹೀಲಿ ಮ ಕೂಲಿಕಾರರದು ೫೫ ಔಂಸ, ಉಪ್ಪಾರ, ವ್ಯಾಪಾರಸ್ಥ, ಕಾರಕೂನ, ಮಾಸ್ತರ ಜನರ ಮಿದುಳಿನ ತೂಕ ೫೭ ಔಂಸ, ವಿದ್ವಾಂಸರಾದ ಗ್ರಂಥಕಾರರ ಮಿದುಳಿನ ತೂಕವು ೬೫ ಔಂಸು ಎಂದು ಪ್ರಯೋಗಾನುಭವಗಳಿಂದ ಗೊತ್ತು ಹಚ್ಚಿದ್ದಾನೆ. ಶಾರೀರಿಕ ಶ್ರಮ ಮಾಡುವ ಮನುಷ್ಯನ ಮಿದುಳಿನ ತೂಕವು ಕೂತು ಕೆಲಸ ಮಾಡುವವನ ಮಿದುಳಿನ ತೂಕಕ್ಕಿಂತ ಹಚ್ಚಿರುವದು ಇದೇ ವರೆಗೆ ಸರಾಯಿ ಕುಡಿಯುವವರ ಮಿದುಳು ಕಾಮಿ ಭಾರವಿರುತ್ತದೆಂದು ಗೊತ್ತಾಗಿದೆ

ಮಿ. ಕ್ಲೆಮೆಂಟನೆಂಬವನೊಬ್ಬ ಜರ್ಮನಿಯ ಜ್ಯೋತಿಷಿಯು ಕೆಲವು ಭವಿಷ್ಯಗಳನ್ನು ಪ್ರಕಟ ಮಾಡಿದ್ದಾನೆ. ಅವನ ತತ್ವಗಳು ಬಹು ಜನ ಪಂಡಿತರಿಗೆ ಮಾನ್ಯವಾಗಿವೆ. ಮುಖ್ಯವಾಗಿ ಹವೆ, ಮಳೆಗಳ ಸಂಬಂಧದಿಂದಂತೂ ಇವನು ಸಾವಿರಾರು ವರ್ಷಗಳ ಭವಿಷ್ಯವನ್ನು ಹೇಳುವೆನೆಂದು ಎದೆ ತಟ್ಟಿಕೊಳ್ಳುತ್ತಾನೆ. ಈ ಸಂಬಂಧದಿಂದ ಇವನು ಮಾಡಿದ ಶೋಧ ನಿರ್ಣಯಗಳು ಹ್ಯಾಗಂದರೆ:—ಕೆಲವೊಂದು ದೇಶದ ಉಷ್ಣ ಮಾನವನ್ನು ಮೊದಲು ಗೊತ್ತು ಮಾಡಿಕೊಳ್ಳುವನು. ಬಳಿಕ ಆ ದೇಶದ ಹಿಂದಿನ ಮೂರು ಅಥವಾ ಹೆಚ್ಚು ವರುಷಗಳ ಮಳೆಯ ಮಾನವನ್ನು ಸಂಪಾದಿಸುವನು. ಯಾವತ್ತು ಸುಧಾರಿಸಿದ ರಾಷ್ಟ್ರಗಳಲ್ಲಿ ಮಳೆಯಳತೆಯನ್ನು ಬರೆ

ನಡುವೆ ಸಾಂಪ್ರದಾಯವು ಉಂಟೇ ಉಂಟು. ಆ ಮಳೆಯ ಗತಿಯನ್ನು ಉಷ್ಣಮಾನವನ್ನು ಒರೆ ಹಚ್ಚಿ ಇಂತಿಷ್ಟು ವರ್ಷಗಳಲ್ಲಿ ಮಳೆ ಶಕೆಗಳ ಒಂದು ಪ್ರದಕ್ಷಿಣೆಯು ಮುಗಿಯುತ್ತದೆಂದು ನಿರ್ಣಯಿಸುವನು ಈ ಬಗೆಯಾಗಿ ಶೋಧಿಸಿ ಉತ್ತರ ಹಿಂದುಸ್ಥಾನದಲ್ಲಿ ೫೧ ವರ್ಷದಲ್ಲಿ ಒಂದು ಮಂಶಲವಾಗುವದೆಂತಲೂ, ದಕ್ಷಿಣದಲ್ಲಿ ೯೩ ವರ್ಷಗಳಲ್ಲಿ ಒಂದು ಮಂಡಲವಾಗುವದೆಂತಲೂ, ಕ್ಲೈಮೆಂಟನು ಸಿದ್ಧ ಮಾಡಿದ್ದಾನೆ. ಪ್ರಸ್ತುತದ ವರುಷದ ಮಳೆಯ ಅಂದಾಜನ್ನು ಗೊತ್ತು ಮಾಡುವದಿದ್ದರೆ ಉತ್ತರ ಹಿಂದುಸ್ತಾನದವರು ಇಂದಿನಿಂದ ಹಿಂದಿನ ೫೧ನೇ ವರ್ಷದ ಮಳೆಯ ಪ್ರಮಾಣವನ್ನು ದಕ್ಷಿಣದವರು ಇಂದಿಗೆ ಹಿಂದಿನ ೯೩ನೇ ವರ್ಷದ ಮಳೆಯ ಪ್ರಮಾಣವನ್ನು ತೆಗೆದುಕೊಳ್ಳಬೇಕು. ಈ ಸಿದ್ಧಾಂತದ ಆಧಾರದಿಂದ ಅವನು ೧೪೦೦, ೧೪೫, ೧೪೬, ಈ ಮೂರು ವರ್ಷಗಳಲ್ಲಿ ದಕ್ಷಿಣದಲ್ಲಿ ವಿಶೇಷವಾಗಿ ಮದ್ರಾಸ ಜಿಲ್ಲಾಖೆಯಲ್ಲಿ ಬರ ಬಿದ್ದಿತ್ತೆಂದ ಕಾರಣ ೧೯೦೫ ೬೩ನೇ ವರ್ಷವೂ ಹಾಗೇ ಆಗುವದೆಂದು ಪ್ರಕಟಿಸಿದ್ದಾನೆ.

ನಮ್ಮ ದೇಶದವರು ಪ್ರಭವಾದಿ ಅರುವತ್ತು ವರ್ಷಗಳನ್ನೂ ಉತ್ತಮ, ಮಧ್ಯಮ, ಕನಿಷ್ಠ ಎಂಬ ಮೂರು ಬೀಸಿಕಗಣನ್ನೂ ಇದೇ ತತ್ವದಿಂದ ಕಲ್ಪಿಸಿರಬಹುದೋ?

ಸುಧಾರಿಸಿದ ಹೊಸ ಇಯತ್ತೆಗಳಲ್ಲಿ ಗೊತ್ತು ಮಾಡಲ್ಪಟ್ಟ ವಿಷಯಗಳನ್ನು ಹೊಸದಾಗಿ ರಚಿಸಲ್ಪಟ್ಟ "ಶಿಕ್ಷಕರಿಗೋಸ್ಕರ ಸೂಚನೆ" ಗಳು ಎಂಬ ಪುಸ್ತಕದಲ್ಲಿ ವಿವರಿಸಿದ ಮೇರೆಗೆ ಕಲಿಸುವದಕ್ಕೆ ಅನುಕೂಲವಾಗಬೇಕೆಂದೆಣಿಸಿ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರು ಕಳೆದ ಒಂದೆರಡು ವರ್ಷಗಳಿಂದ ಹೋಳೀಹಬ್ಬದ ಸೂಟಿಯಲ್ಲಿ "ಶಿಕ್ಷಕಸಮ್ಮೇಲನವೆ"ಂಬ ಸಭೆಯನ್ನು ನೆರಿಸಿ, ಅಲ್ಲಿ ನಡೆದ ವಿಷಯಗಳನ್ನು ಕಾಲಾಪತ್ರಿಕೆಯಲ್ಲಿ ಮುದ್ರಿಸಿ ಪ್ರಸಿದ್ಧಪಡಿಸುತ್ತಿರುವರು. ಕಳೆದ ಸಭೆಯಲ್ಲಿ ನಡೆದ ವಿಷಯಗಳ ಮುಂದಿನ ಪಾಠಗಳನ್ನು ಕ್ರಮಕ್ರ

ನುದಿಂದ ಈ ಮಾಸಪತ್ರಿಕೆಯು ಮೂಲಕ ಪ್ರಕಟಿಸುವ ಆ
ಲೋಚನೆ ಮಾಡಿದ್ದೇವೆ ಸದ್ಯಕ್ಕೆ "ಬಾಲೋದ್ಯಾನ ಶಿಕ್ಷಣ
ಂ"ದ ಪಾಠಗಳೂ "ಭೂಗೋಲ ಶಿಕ್ಷಣ ಕ್ರಮ"ದ ಪಾಠ
ಗಳೂ ಸ್ಥಳಾವಕಾಶದಂತೆ ಇದರಲ್ಲಿ ಕೊಡಲ್ಪಡುವವು. ಈ
ಪಾಠಗಳನ್ನು ಕಾಲೇಜದ ೧ನೇ ಅ. ಮಾ. ರಾ. ರಾ. ರಾ.
ಶ್ರೀ. ಕುಲಕರ್ಣಿಯವರೂ, ಪ್ರ್ಯಾಕ್ಟಿಸಿಂಗಸ್ಕೂಲ್ ಹೆಡ್‌ಮಾ
ಸ್ತರ ರಾ. ಗೋ. ವೆ. ದೇಶಪಾಂಡೆಯವರೂ, ಇಂಗ್ಲೀಷ
ಗ್ರಂಥಗಳ ಆಧಾರದಿಂದ ನಮ್ಮ ದೇಶಪದ್ಧತಿಗನುಗುಣವಾ
ಗುವಂತೆ ರಚಿಸಿರುವರು. ಶಿಕ್ಷಕರು ಇವುಗಳನ್ನು ಚೆನ್ನಾಗಿ
ಓದಿ ಮನನಮಾಡಿಕೊಂಡು ಅನುಕೂಲವಿದ್ದಾಗ್ಗೆ ಇಲ್ಲಿಗ
ನಂದು ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕಲಿಸುವದನ್ನು ನೋಡಿ
ಇದರಂತೆ ಶಿಕ್ಷಣವನ್ನು ನಡಿಸಿದರೆ ಸರಕಾರದವರ ಉದ್ದೇ
ಶವು ನೆರವೇರುವದು. ಈ ಸಾರೆ ಬಾಲೋದ್ಯಾನ ಶಿಕ್ಷಣ
ದ ೨ನೇ ಇನಾಮು ಕೊಡಲ್ಪಟ್ಟಿರುವದು.

೨ನೇ ಕರಣ ಅಥವಾ ಇನಾಮು.

ಉಪಕರಣಗಳು— ಕರೇಗೋಲವೊಂದು, ಬಿಳೀಗೋಲ
ವೊಂದು, ೨ನೇ ಇನಾಮಿನ ಪೆಟ್ಟಿಗಗಳು. ಪ್ರತಿ ಒಬ್ಬ ಹು
ಡುಗನಿಗೆ ಒಂದೊಂದರಂತೆ ಬೆಳವಲ ಹಣ್ಣು, ನಿಂಬೀಹಣ್ಣು,
ಗುಂಡುಗಲ್ಲು, ತಾಬಾಣ, ಗೋಲೀಗುಂಡು, ಉಣ್ಣೆಯ ಅರಿ
ವೆ ಅಥವಾ ಲಡಿ, ನೂಲಿನಲಡಿ ಅಥವಾ ಅರಿವೆ, ಅರಿವೆಯ
ಚೆಂಡು, ಉಣ್ಣೆಯಚೆಂಡು.

ಉದ್ದೇಶ—ಮೊದಲನೇ ಇನಾಮಿನಲ್ಲಿ ಚೆಂಡುಗಳ ಆಟ
ದೊಡನೆ (ವಿಶೇಷವಾಗಿ) ಬಣ್ಣದ[+] ಜ್ಞಾನವಮಾಡಿಕೊಟ್ಟಿರುತ್ತ
ದೆ. ಇದರಲ್ಲಿ (ವಿಶೇಷವಾಗಿ) ಆಕಾರದ ಜ್ಞಾನವನ್ನೂ,
ಗೋಲಫನಸಿಲಿಂದರಗಳ ಗುಣಧರ್ಮಗಳ ಜ್ಞಾನವನ್ನೂ

+ ಹುಡುಗರ ಇಂದ್ರಿಯಗಳ ಪ್ರವೃತ್ತಿಯನ್ನನುಲಕ್ಷಿಸಿ ಫ್ರೋ
ಜೆಲ್ಲನು ಮೊದಲು ಪದಾರ್ಥಗಳ ಬಣ್ಣವನ್ನೂ ತರುವಾಯ ಆಕಾ
ರವನ್ನೂ ಕುರಿತು ಪಾಠಮಡಿಸಿರುವನು.

(ಬೀರ ಬೀರೆಯಾಗಿ ಹಾಗೂ ಪರಸ್ಪರ ಸಂಬಂಧದಿಂದ) ಮಾಡಿಕೊಡತಕ್ಕದ್ದಿರುತ್ತದೆ.

ಸೃಷ್ಟಿಯೊಳಗಿರುವ ಎಲ್ಲ ಪದಾರ್ಥಗಳ ಆಕಾರವನ್ನು ಕುರಿತು ಸ್ಥೂಲ ಮಾನದಿಂದ ಆಲೋಚಿಸಿದರೆ ಮೂರು ಪ್ರಕಾರಗಳು ಒಡೆದು ಕಾಣಿಸುವವು. ಅವುಗಳೊಳಗೆ ಈ ಇನಾಮಿನ ಉಪಕರಣಗಳಲ್ಲಿ ಮೊದಲನೆಯದಾದ ಗೋಲವು ಪೃಥ್ವಿ, ಸೂರ್ಯ, ಚಂದ್ರ, ಗ್ರಹ ಮುಂತಾದ ಖಸ್ಥಪದಾರ್ಥಗಳ* ಆಕಾರವನ್ನೂ, ಎರಡನೆಯದಾದ ಘನವು ಖನಿಜಗಳ ಆಕಾರವನ್ನೂ, ಮೂರನೆಯದಾದ ಸಿಲಿಂದರವು ಯಾವತ್ತೂ ಪ್ರಾಣಿ ವನಸ್ಪತಿಗಳ ಆಕಾರವನ್ನೂ ಹೋಲುತ್ತವೆ.

ವ್ಯವಸ್ಥೆ — ಬಾಲೋದ್ಯಾನ ಮಂದಿರದಲ್ಲಿ ತಕ್ಕಷ್ಟು ದೊಡ್ಡ ವರ್ತುಲವನ್ನು ತೆಗೆದು, ಅದರ ಹೊರಬದಿಯಲ್ಲಿ ಒಂದು ಫೊಟನ ಮೇಲೆ ಮತ್ತೊಂದು ವರ್ತುಲವನ್ನು ತೆಗೆದು (ಕಂಕಣಾಕೃತಿಗೃಹಣದಂತೆ) ಹುಡುಗರು ನಿಲ್ಲುವದಕ್ಕೆ ಮನೆಗಳನ್ನು ಗೊತ್ತುಮಾಡಿಕೊಡಿರಿ. ಮಧ್ಯಬಿಂದುವಿನಲ್ಲಿ ದೊಡ್ಡಗೋಲವನ್ನಿಡುವದಕ್ಕೆ ಬಂದು ಸಣ್ಣ ವರ್ತುಲಾಕೃತಿಯನ್ನು ತೋರಿಸಿರಿ (ಮುಂದೆ ಇನೇ ಆಕೃತಿಯನ್ನು ನೋಡಿರಿ.) ಶಿಕ್ಷಕರು ಗೊತ್ತುಮಾಡಿರುವ ಮನೆಗಳೊಳಗೊಂದರಲ್ಲಿ ನಿಂತು, ಒಂದೊಂದು ಮನೆಯಲ್ಲಿ ಒಬ್ಬೊಬ್ಬನಂತೆ ಹುಡುಗರನ್ನು ನಿಲ್ಲಿಸಿ ಆಟವನ್ನು ಕಲಿಸಲಾರಂಭಿಸಬೇಕು. ಒಂದಳ ಹೊತ್ತು ಒಂದೇ ಸವನೆ ನಿಂತುಕೊಳ್ಳುವದರ ಬದಲು ಕೆಲಹೊ

---

* ಬಹುಶಃ ಯಾವತ್ತು ಖನಿಜಗಳು ಅಂದರೆ ಉಪ್ಪಿನ ಹರಳುಕಲ್ಲು ಮುಂತಾದವುಗಳು ಸ್ಥೂಲಮಾನದಿಂದ ಘನದಂತೆ ಆಕಾರವುಳ್ಳವುಗಳಾಗಿರುತ್ತವೆ. ಅಂದರೆ ಘನದಂತೆ ಬರೀ ಸರಳ ಮೇಲ್ಮೈಯಿಂದ ಮರ್ಯಾದಿತವಾಗಿ ಏಣು ಮೂಲೆಗಳುಳ್ಳವಾಗಿರುತ್ತವೆ. ಅದರಂತೆ ಪ್ರಾಣಿ ಶರೀರಗಳೂ (ಮುಖ್ಯವಾಗಿ ನಡುವಿನ ಭಾಗವು) ವನಸ್ಪತಿಗಳ ಜೊಡ್ಡಿ ಹರಿ ಮುಂತಾದವುಗಳೂ ಸಿಲಿಂದರವನ್ನು ಹೋಲುತ್ತವೆ

ತ್ತು ಕುಳಿತು ಕೆಲಹೊತ್ತು ನಿಂತು ಶಿಕ್ಷಣವನ್ನು ನಡಿಸ ಬಹುದು.

ಆಕೃತಿ ೧.



ಡ್ರಿಲ್—ಹುಡುಗರು ತಮ್ಮ ವರ್ಗದಿಂದ ಬಾಲೋಚ್ಚಾರ್ಯನು ಮುಂದಿರಕ್ಕೆ ಹೋಗುವಾಗ್ಗೆ ತಾಳದೊಂದಿಗ್ಗೆ ಕಾಲಿಕ್ಕುತ್ತ ಕೆಳಗಿನ ಪದವನ್ನಾಗಲಿ ಇದೇ ಅಭಿಪ್ರಾಯದ ಬೇರೆ ಪದವ ನ್ನಾಗಲಿ ಹಾಡುತ್ತ ರಾಗದ ಕೆಟ್ಟಿಗೆ ಅಥವಾ ಪಿಟೀಲಿನ ವಾದ್ಯ ಕ್ಕನುಸರಿಸಿ ಹೋಗತಕ್ಕದ್ದು.

ಬ್ಯಾಂಡಿನಂತೆ

ಚಂಡಿನಾಟವನ್ನು ನಾವ್ರುಮೊದಲು ಕಲಿತೆವ್ಮೆ ।
ಚಂಡಿನಿಂದ ಬಣ್ಣವನ್ನು ನಾವು ಬರಿತೆವ್ಮೆ "೧"
ಪ್ರಟಿಸಿ ತೂರಿ ಹಿಡಿಯುವಿಕ್ಕೆ ನಾವು ಕಲಿತೆವ್ಮೆ ।
ಪುಟ್ಟಿಚಂಡು ಉಂಡಿರುವಂತೆ ಮುಂಡಗಿರುವದ್ಮೆ ॥
॥ ೭ ॥

ಸೂಚನೆಗಳು—(೧) ಮುಂದೆ ಹೇಳಲ್ಪಡುವ ಗುಣಧರ್ಮಗಳನ್ನು ಆಟದ ಸ್ವರೂಪಗಳಾದ ತಕ್ಕ ಪ್ರಯೋಗಗಳಿಂದಲೂ ಸಮಯೋಚಿತ ಪ್ರಶ್ನೆಗಳಿಂದಲೂ ಹುಡುಗರಿಗೆ ಮನವರಿಕೆ ಮಾಡಿಕೊಡಬೇಕು.

(೨) ಮೊದಲನೇ ಇನಾಮಿನಲ್ಲಿ ಹೇಳಿದಂತೆ ಹುಡುಗರ ಉತ್ತರಗಳನ್ನು ಪೂರ್ಣವಾಕ್ಯಗಳಲ್ಲಿ ತೆಗೆದುಕೊಳ್ಳಬೇಕು. ಹಾಗು ತಕ್ಕ ಸಮಯಗಳಲ್ಲಿ ಸಭ್ಯತನದ ನಡೆನುಡಿಗಳನು ಕಲಿಸಬೇಕು,

ಶಿಕ್ಷಣ—ಮೊದಲನೇ ಇನಾಮಿನಲ್ಲಿ ಚೆಂಡುಗಳ ಸಹಾಯದಿಂದ ಬಣ್ಣಗಳ ಜ್ಞಾನವನ್ನಾಡಿಕೊಟ್ಟಿರುವದನ್ನು ಹುಡುಗರ ನೆನಪಿಗೆ ತಂದುಕೊಟ್ಟು ಚೆಂಡಿನ ಗುಣಧರ್ಮಗಳ ಬಗ್ಗೆ ಪ್ರಶ್ನವಾಡಿ, ಎನೇ ಇನಾಮನ್ನು ಕಲಿಸಲಾರಂಭಿಸಬೇಕು. ಗೋಲಫಿನ ಸಿಲಿಂದರಗಳನ್ನು ಮೇಜಿನ ಮೇಲೆ ಇಟ್ಟು, ಇವುಗಳಲ್ಲಿ ಚೆಂಡಿನಂತೆ (ಆಕಾರದಿಂದ) ಯಾವದು ಕಾಣುತ್ತದೆ? ಎಂದು ಕೇಳಿದರೆ ಹುಡುಗರು ಗೋಲವನ್ನು ತೋರಿಸುವರು. ಗೋಲವು ಚೆಂಡಿನಂತೆ ಇರುವ ಕಾರಣ ಗೋಲಕ್ಕೆ ಸಹಾ ಹುಡುಗರು "ಚೆಂಡು" ಅನ್ನಬಹುದು. ಗೋಲವು ಕಟ್ಟಿಗೆಯಿಂದಲೂ ಚೆಂಡು ಉಣ್ಣೆಯಿಂದಲೂ ಮಾಡಲ್ಪಟ್ಟಿರುತ್ತವೆಂಬದನ್ನು ತಕ್ಕ ಉದಾಹರಣೆಗಳಿಂದಲೂ ಪ್ರಯೋಗಗಳಿಂದಲೂ ಕಲಿಸಿ ಗೋಲಕ್ಕೆ "ಕಟ್ಟಿಗೆಯ ಚೆಂಡು" ಅನ್ನಬಹುದೆಂದು ಹೇಳಿರಿ. ಕಟ್ಟಿಗೆಯ ಚೆಂಡು ಉಂಡಿಯುಂತೆ ಗೆಂಡಗೆ ಇರುತ್ತದೆಂಬದನ್ನು ಹೊರಡಿಸಿ ಇದಕ್ಕೆ "ಕಟ್ಟಿಗೆಯ ಗುಂಡು" ಅನ್ನಬಹುದೆಂದು ಹೇಳಿರಿ. "ಕಲ್ಲುಂಡು" ತೋರಿಸಿ, ಇದು ಕಲ್ಲಿನದಿರುವಕಾರಣ ಇದಕ್ಕೆ "ಕಲ್ಲುಂಡು" ಅನ್ನುವರು, ಕಟ್ಟಿಗೆಯ ಚೆಂಡು ಕಟ್ಟಿಗೆಯದಿರುವ ಕಾರಣ "ಕಟ್ಟಿಗೆಯ ಗುಂಡು" ಅನ್ನುವರು ಎಂದು ಹೇಳಿರಿ. ತರುವಾಯ ಹುಡುಗರು ಆಡುವ ಗುಂಡುಗಳನ್ನು ತೋರಿಸಿ ಅವುಗಳಿಗೆ 'ಗೋಲಿ'ಗಳೆನ್ನುವದನ್ನು ಅವರ ಲಕ್ಷಕ್ಕೆ ತಂದು ಕೊಟ್ಟು ಕಟ್ಟಿಗೆಯ ಗುಂಡಿಗೆ "ಗೋಲ" ವೆನ್ನುತ್ತಾರೆಂದು ಹೇಳಿರಿ. ಕಟ್ಟಿಗೆಯ ಚೆಂಡು, ಕಟ್ಟಿಗೆಯ ಗುಂಡು, ಗೋಲವೆಂಬ ಮೂರು ಹೆಸರುಗಳು ಬಂದೇ ವಸ್ತುವಿಗ ಇರುವದನ್ನೂ ಆ ಹೆಸರು ಬಂದಿರುವ ಕಾರಣವನ್ನೂ ಪ್ರಶ್ನೆಗಳಿಂದ ದೃಢಪಡಿಸಿರಿ. ಇನ್ನು ಮುಂದೆ "ಗೋಲ"ವೆಂಬ ಶಬ್ದವನ್ನೇ ವಿಶೇಷವಾಗಿ ಉಪಯೋಗಿಸಿರಿ.

ಆ ಮೇಲೆ ಪ್ರತಿ ಒಬ್ಬ ಹುಡುಗನ ಕೈಯಲ್ಲಿ ಒಂದೊಂದು ಚೆಂಡನ್ನೂ ಒಂದೊಂದು ಗೋಲವನ್ನೂ ಕೊಟ್ಟು, ಗೋಲದ ಗುಣಧರ್ಮಗಳನ್ನು, ಚೆಂಡಿಗೂ ಗೋಲಕ್ಕೂ ಇರುವ ಸಾಮ್ಯ ವೈಷಮ್ಯಗಳಿಂದ ತಿಳಿಸಿರಿ.

ಗೋಲದ ಗುಣಧರ್ಮಗಳು

ಸಾಮ್ಯ.

೧. ಚೆಂಡು ಹಾಗೂ ಗೋಲ **ಇವೆರಡೂ ಉರುಳುತ್ತವೆ.** (ಹುಡುಗರು ತಮ್ಮ ಮುಂದೆ ಇಟ್ಟಿರುವ ಚೆಂಡು ಗೋಲಗಳನ್ನು ಉರುಳಿಸಲಿ.)

೨. ಚೆಂಡು ಹಾಗು ಗೋಲ **ಎರಡೂ ಗುಂಡಗೆ ಅವೆ.** (ಗುಂಡಗಿರುವ ಬೇರೆ ಪದಾರ್ಥಗಳನ್ನು ಕೇಳಿರಿ.)

ವೈಷಮ್ಯ.

೧. ಚೆಂಡು ಮೆತ್ತಗದೆ, ಗೋಲವು ಬಿರಸು ಅದೆ. (ಹುಡುಗರು ಕೈಯಿಂದ ಹಿಚಿಕಿ ನೋಡಲಿ ಗೋಲವು ಬೆಳವಲ ಹಣ್ಣಿನಂತೆ ಬಿರುಸಾಗಿಯೂ, ಚೆಂಡು ನಿಂಬೇ ಹಣ್ಣಿನಂತೆ ಮೆತ್ತಗೂ ಹತ್ತುವವೆಂಬದನ್ನು ಪ್ರಯೋಗದಿಂದ ತಿಳಿಸಿರಿ.)

೨. ಚೆಂಡು ಹಗುರ ಅದೆ, ಗೋಲವು ಜಡವದೆ. (ಹುಡುಗರು ಕೈತೂಕದಿಂದ ಹೇಳಲಿ.)

೩. ನೆಲದ ಮೇಲೆ ಬಿದ್ದರೆ ಚೆಂಡಿಗಿಂತ ಗೋಲದಿಂದ ಹೆಚ್ಚು ಸಪ್ಪಳವಾತ್ತದೆ. (ನೆಲದಮೇಲೆ ಬಗೆದು ನೋಡಲಿ.)

೪. ಚೆಂಡು ಪುಟಿಯುತ್ತದೆ, ಗೋಲವು ಪುಟಿಯುವದಿಲ್ಲ. (ಹುಡುಗರು ಕೂತು ಪುಟಿಸಲಿ.)

೫. ಎರಡು ಗೋಲಗಳನ್ನು ಬಾರಿಸಿದರೆ ಸಪ್ಪಳವಾಗುತ್ತದೆ. ಗೋಲ ಚೆಂಡುಗಳನ್ನು ಬಾರಿಸಿದರೆ ಸಪ್ಪಳವಾಗುವದಿಲ್ಲ. ಅದರಂತೆ ಎರಡು ಚೆಂಡುಗಳನ್ನು ಬಾರಿಸಿದರೆ ಸಪ್ಪಳವಾಗುವದಿಲ್ಲ.

೬ ನೇ ಆಕೃತಿಯನ್ನು ನೋಡಿರಿ

(ಹುಡುಗರನ್ನು ವರ್ತುಲಾಕಾರವಾಗಿನಿಲ್ಲಿಸಿ ಮಧ್ಯಬಿಂದುವಿನಲ್ಲಿ ಬಂದು ಗೋಲವನ್ನು ಇಟ್ಟು, ಅದಕ್ಕೆ ಪ್ರತಿ ಒಬ್ಬರು ತಮ್ಮ ತಮ್ಮ ಗೋಲಗಳಿಂದ ಹೊಡೆಯುವಂತೆ ವ್ಯವಸ್ಥೆಯನ್ನು ಮಾಡಿ ಕೊಡಿರಿ. ಆಗ್ಗೆ ಸಪ್ಪಳವಾಗುವದನ್ನು ಹುಡುಗರು ನೆನಪಿನಲ್ಲಿಡಲಿ. ತರುವಾಯ ಮಧ್ಯಬಿಂದುವಿನಲ್ಲಿಟ್ಟ ಗೋಲಕ್ಕೆ ಚೆಂಡಿನಿಂದ ಹೊಡೆಯಲಿ. ಆಗ್ಗೆ ಸಪ್ಪಳವಾಗದೆ ಇರುವದನ್ನು ನೆನಪಿನಲ್ಲಿ ಇಡಲಿ)

೨ನೇ ಆಕೃತಿ



೪. ಚೆಂಡು ಉಣ್ಣೆಯದು, ಗೋಲ ಕಟ್ಟಿಗೆಯದು. (ಉಣ್ಣೆಯ ಹಾಗೂ ಕಟ್ಟಿಗೆಯ ಬೇರೆ ಬೇರೆ ಪದಾರ್ಥವನ್ನು ತೋರಿಸಿ ಕಲಿಸಿರಿ.

ಟೀಪು—ಮೇಲೆ ವಿವರಿಸಿದ ಮೇರೆಗೆ ಗುಣಧರ್ಮಗಳನ್ನು ತಿಳಿಸಿದ ಬಳಿಕ ಕೆಳಗೆ ಹೇಳಿದಂತೆ ಪರೀಕ್ಷೆ ತೆಗೆದುಕೊಳ್ಳಿರಿ. (ಹುಡುಗರು ಕಣ್ಣು ಮುಚ್ಚಿಕೊಂಡು ಕೂಡಲಿ.)

೧. ಒಂದು ಕೈಯಲ್ಲಿ ಚಂಡನ್ನು, ಮತ್ತೊಂದು ಕೈಯಲ್ಲಿ ಗೋಲವನ್ನು ಕೊಟ್ಟು ಎಡಗಯ್ಯಲ್ಲಿರುವದೇನು? ಬಲಗಯ್ಯಲ್ಲಿರುವದೇನು? ಎಂದು ಕೇಳಿರಿ. ಹುಡುಗರು ಹಿಜುಕಿ ಹೇಳುವರು.

೨. ಬಳಿಕ ನೆಲದಮೇಲೆ, ನೋಲಿಂದ ಗೋಲವನ್ನು ಚಲ್ಲಿ, ಈಗ ಕೆಳಗೆ ಬಿದ್ದದ್ದೇನು? ಎಂದು ಕೇಳಿರಿ. ಆ ಮೇಲೆ ಚಂಡು ಚಲ್ಲಿ ಅದರಂತೆ ಕೇಳಿರಿ.

೩. ಗೋಲದಂತೆ ಆಕಾರವುಳ್ಳ ಮನೆಯೊಳಗಿನ ಪದಾರ್ಥಗಳನ್ನು ಕೇಳಿರಿ,

ಗೋಲದ ಆಟಗಳು.

೧ನೇ ಆಟ—ಹುಡುಗರನ್ನು ವರ್ತುಲಾಕಾರವಾಗಿನಿಲ್ಲಿಸಿ ಕೆಳಗೆ ಹೇಳಿದಂತೆ ಆಟವನ್ನು ಆಡಿಸಿರಿ.

ಶಿಕ್ಷಕನು ವರ್ತುಲದ ಮಧ್ಯದಲ್ಲಿ ನಿಂತು ಮೊದಲನೇ ಹುಡುಗನ ಕಡೆಗೆ ಒಂದು ಗುಂಡು ಉರುಳಿಸಿ ಅದನ್ನು ಪಾದದಿಂದ ತಡೆದು ನಿಲ್ಲಿಸೆಂದು ಹೇಳಬೇಕು. ಅವನು ಅದನ್ನು ನಿಲ್ಲಿಸಿ ಕೈಯಲ್ಲಿ ತಕ್ಕೊಂಡು, ಶಿಕ್ಷಕನು ನಿಂತ ಸ್ಥಳಕ್ಕೆ ಹೋಗಿನಿಂತು, ೨ನೇ ಹುಡುಗನ ಕಡೆಗೆ, ಮೊದಲಿನಂತೆ ಉರುಳಿಸಬೇಕು. ಆಗ್ಗೆ ೨ನೇಯವನು ಅದನ್ನು ಪಾದದಿಂದ ತಡ

ದು, ಕೈಯಲ್ಲಿ ತಕ್ಕೊಂಡು, ಮಧ್ಯಸ್ಥಾನದಲ್ಲಿ ನಿಂತು, ತಿನೇ ಯವನ ಕಡೆಗೆ ಉರುಳಿಸಬೇಕು- ಇದೇ ಕ್ರಮದಿಂದ ಎಲ್ಲ ಹುಡುಗರ ಸರತಿ ಮುಗಿಯುವ ವರೆಗೆ ಮಾಡುತ್ತ ಹೋಗಬೇಕು.

(೨ನೇ ಆಕೃತಿ ನೋಡಿರಿ)

ಗುಂಡು ಉರುಳಿಸುವಾಗ್ಗೆ ಕೆಳಗಿನ ಪದವನ್ನು ರಾಗದ ಕಟ್ಟಿಗೆಯೊಡನೆ ಸುಸ್ವರದಿಂದ ಹಾಡುವದರಿಂದ ಹುಡುಗರ ಮನರಂಜನವಾಗುವದು. ಅದರೆ ಆಟದಲ್ಲಿ ನಡೆಯುತಕ್ಕ ಕೃತಿಗಳೂ ಪದದಲ್ಲಿ ಹೇಳಲ್ಪಟ್ಟಿರುವ ಅಭಿಪ್ರಾಯಗಳೂ ಹುಡುಗರಿಗೆ ಅವಗತವಾಗುವ ವರಗೆ ಪ್ರಶ್ನಗಳನ್ನು ಮಾಡುತ್ತ ಮಾತುಗಳನ್ನಾಡುತ್ತ ಕಲಿಸಬೇಕು. ಪ್ರತಿ ಬಂದು ಆಟದಲ್ಲಿ ಈ ಸೂಚನೆಯನ್ನು ಅನುಸರಿಸಬೇಕು.

ರಾಗ—ದಬಾರಿ; ತಾಳ—ರೂಪಕ.

ಗುಂಡನಾಡೋಣ ಬನ್ನಿರಿ, ನಾವೆಲ್ಲರೆ ।
ಗುಂಡನಾಡೋಣ ಬನ್ನಿರಿ ॥ ಪಲ್ಲ ॥
ಗುಡುಗುಡು ಎನ್ನುತ, ಗುಂಡು ಉರುಳುವದ್ಕೆ ।
ನಡುವಿನಿಂದೆಲ್ಲರ ಕಡೆಗೆ ಹೋಗುವದ್ಕೆ ॥ ೧ ॥
ನಡುವಿನಿಂತು ಒಬ್ಬ, ಗುಂಡನುರುಳಿಸುವಂ ।
ತಡೆಯದೆ ಪೂರ್ದದಿಂ ನಿಲ್ಲಿಸುವನೊಬ್ಬಂ ॥ ೨ ॥
ದೀಪದಿಂ ಸುತ್ತೆಲು, ಪಸರಿಪಬೆಳಕಿನೋಲ್ ।
ತಪ್ಪದೆ ಜೊಂಡುತಾ, ನುರುಳುವದುಸುತ್ತೆಲು ॥ ೩ ॥

೨ನೇ ಆಟ—ಹುಡುಗರನ್ನು ಎದುರು ಬದರು ಸಾಲಾಗಿ ಕುಳ್ಳಿರಿಸಿ, ಒಂದು ಕರೇ ಗುಂಡು ಒಂದು ಬಿಳೇ ಗುಂಡು ಇವುಗಳಿಂದ ಕೆಳಗಿನ ಆಟವನ್ನು ಆಡಿಸತಕ್ಕದ್ದು. (ಕರೇ ಬಿಳೇ, ಶಬ್ದಗಳ ಜ್ಞಾನವಾಗುವದಕ್ಕೆ ಹಲವು ಉಪಕರಣಗಳಿಂದ ಹಿಂದೆ ೧ನೇ ಇನಾಮಿನಲ್ಲಿ ಹೇಳಿದಂತೆ ಪ್ರಯತ್ನ ಮಾಡತಕ್ಕದ್ದು.)

ಒಂದು ಸಾಲಿನ ಮೊದಲನೇ ಹುಡುಗನು ಬಿಳೀ ಗುಂಡನ್ನೂ, ಮತ್ತೊಂದು ಸಾಲಿನ ಮೊದಲನೇ ಹುಡುಗನು ಕರೇ ಗುಂಡನ್ನೂ ಕೈಯಲ್ಲಿ ತಕ್ಕೊಂಡು ತಮ್ಮ ಎದುರಿನ ಹುಡುಗರ ಕಡೆಗೆ ಉರುಳಿಸಬೇಕು. ಆ ಮೇಲೆ ಅವರು ತಮ್ಮ ಎದುರಿನ ಸಾಲಿನ ಎನೇ ನಂಬರದವನ ಕಡೆಗೆ ಉರುಳಿಸಬೇಕು. ಹೀಗೇ ಕಡೇ ನಂಬರದ ವರೆಗೆ ಆಟವಾದ ಬಳಿಕ ಪುನಃ ಕಡೇ ನಂಬರದಿಂದ ಪ್ರಾರಂಭಿಸಿ, ಮೊದಲಿನಂತೆ ಎನೇ ನಂಬರದವರ ಕಡೆಗೆ ಗುಂಡು ಬರುವಂತೆ ಉರುಳಿಸುತ್ತ ಹೋಗಬೇಕು.

(ಸಶೇಷ)

INSTRUCTION TO TEACHERS.

ಶಿಕ್ಷಕರಿಗೋಸ್ಕರ ಸೂಚನೆಗಳು.

(೧೬ನೇ ಪುಟದಿಂದ ಮುಂದೆ ಸಂಪೂರ್ಣ.)

(ಅ) ಗ್ರಾಮ್ಯಪದ—ಉಪಯೋಗ ಮತ್ತು ಅಶುದ್ಧ ಉಚ್ಚಾರ.

(ಬ) ಕೂಗಿ ಓದೋಣ, ತುಟಿಯೊಳಗೆ ಗುಣಗುಣ ಓದೋಣ ಮತ್ತು ಶಬ್ದಗಳನ್ನು ನುಂಗುವಂತೆ ಅವಸರದಿಂದ ಓದೋಣ.

(ಕ) ಕೆಲವು ಭಾಷಾಂತ್ಯದಲ್ಲಿಯೂ ವಾಕ್ಯಾಂತ್ಯದಲ್ಲಿಯೂ ಕವಿತೆಯ ಪದಾಂತ್ಯದಲ್ಲಿಯೂ ಧ್ವನಿಯನ್ನು ಅಯೋಗ್ಯವಾಗಿ ಕುಗ್ಗಿಸೋಣ ಇಲ್ಲವೇ ಏರಿಸೋಣ ಅಥವಾ ಪ್ರತಿ ಒಂದು ವಾಕ್ಯದಲ್ಲಿಯೂ ಇಲ್ಲವೇ ಕವಿತೆಯ ಪ್ರತಿ ಒಂದು ಸಾಲಿನ ಅಂತ್ಯದಲ್ಲಿ ಇದ್ದ ಪ್ರತಿ ಒಂದು ಶಬ್ದದ ಮೇಲೆಯೂ ಆ ಘಾತದ ಅವಶ್ಯತೆ ಇರಲಿ ಇರದೆ ಇರಲಿ ಆಘಾತವನ್ನು ಕೊಡೋಣ.

(ಡ) ವಿರಾಮ ಚಿಹ್ನಗಳಿಗೂ ಸ್ವಭಾವಿಕ ಯತಿಗಳಿಗೂ ಲಕ್ಷ್ಯ ಕೊಡದೆ ಇರೋಣ.

(ಈ) ತಪ್ಪು ಮೆಟ್ಟಿನಲ್ಲಿ ಉಸುರು ಬಿಡೋಣ.

(ಸ) ಅರ್ಥದಲ್ಲಿ ಲಗುವ ವಿಪರ್ಯಾಸವನ್ನು ಲಕ್ಷ್ಯಕ್ಕೆ

ತರದೆ ಓದುವ ಭಾಗದಲ್ಲಿ ಇರುವ ಭಾವವನ್ನು ಲಕ್ಷಿಸದೆ ಒಂದು ವಾಕ್ಯವನ್ನು ಓದುವಾಗ ಒಂದೇ ಪ್ರಕಾರದ ಧ್ವನಿಯಿಂದ ಓದುವದು. ಇಲ್ಲವೆ ಒಂದು ಪ್ರಕಾರದಿಂದ ಧ್ವನಿಯನ್ನು ಇಳಿಸುವದು.

ಪ್ರಶ್ನಾರ್ಥ ವಾಕ್ಯಗಳನ್ನು ಸಾಧಾರಣ ವಾಕ್ಯಗಳಂತೆ ಓದುವದು. ಎಷ್ಟೇ ಅಶಿಕ್ಷಿತನು ಸಹ ಸ್ವಭಾವಿಕವಾಗಿ ಮಾತಾಡುವಾಗ ಧ್ವನಿಯನ್ನು ಬದಲು ಮಾಡಬೇಕಾದ ಹಾಗೆ ಮಾಡುತ್ತಾನೆ. ಅಂತ ಧ್ವನಿಯ ಬದಲುವಿಕೆಯನ್ನು ಲಕ್ಷಿಸದೆ ಇರುವದು.

(ಗ) ದೇಶಭಾಷೆಯಲ್ಲಿ ಬರೆದ ಧರ್ಮಸಂಬಂಧ ಪುಸ್ತಕಗಳನ್ನು ಓದುವಾಗ ಇಲ್ಲವೇ ಪೂರ್ವದೇಶದವರ ಮೃತಭಾಷೆಯಲ್ಲಿ ಬರೆದ ಗ್ರಂಥಗಳನ್ನು ಓದುವಾಗ ವಾಡಿಕೆಯಾಗಿ ಇರುವಂಥ ರಾಗ ಕೆಗೆದು ಪ್ರಬಂಧದಂತೆ ಓದುವದು. ಈ ಸೂಚನೆಗಳು ಎಲ್ಲ ವರ್ಗದವರೂ ಅನುಸರಿಸಬೇಕಾದವುಗಳಾಗಿರುತ್ತವೆ. ಒಳ್ಳೇ ರೀತಿಯಾಗಿ ಬರೆದ ಗದ್ಯವನ್ನು ಓದುವದೂ ಇಲ್ಲವೆ ಪದ್ಯವನ್ನು ಅನ್ನುವದೂ ಸ್ಪಷ್ಟೋಚ್ಚಾರದಿಂದ ಅರ್ಥ ತಿಳಿಯುವಂತೆಯೂ ಭಾವಬೋಧವಾಗುವಂತೆಯೂ ವಾಚನವನ್ನು ಸಾಧಿಸುವದು ವಿದ್ಯಾರ್ಥಿಯ ಶಾಲಾ ಅಭ್ಯಾಸಕ್ರಮದಲ್ಲಿ ಮನುಷ್ಯತ್ವದ ಲಕ್ಷಣವನ್ನು ಪ್ರಕಟಿಸುವ ಮನೋಯತ್ನವಾಗಿರುತ್ತದೆ. ಆದ್ದರಿಂದ ಶಿಕ್ಷಕರು ಆದಷ್ಟು ಮಟ್ಟಿಗೆ ಒಳ್ಳೇ ವಾಚನದ ಶಕ್ತಿಯನ್ನು ವಿದ್ಯಾರ್ಥಿಯಲ್ಲಿ ಹುಟ್ಟಿಸುವಂತೆ ಯತ್ನಿಸಬೇಕು. ಹೊಸ ಇಯತ್ತೆಗಳಲ್ಲಿ ಇದೇ ಕಾರಣದಿಂದ ಮೇಲಿನ ವರ್ಗದವರು ಓದುವಾಗ ಭಾವಬೋಧಕವಾಗುವಂತೆ ಓದಬೇಕೆಂಬ ಸಂಗತಿಯು ಖಂಡಿತವಾಗಿ ಹೇಳಲ್ಪಟ್ಟದೆ ವಿವರಣೆಯು ವಿಷಯವಾಗಿ ಹೇಳಬೇಕಾದರೆ ತೀರ ಉದ್ದವಾದ ಬಾಯಿಂದ ಹೇಳುವ ವ್ಯಾಖ್ಯಾನಗಳು ಅಥವಾ ಶಬ್ದಕ್ಕೆ ಪ್ರತಿಶಬ್ದಗಳನ್ನು ಹೇಳೋಣವು. ಅನಾವಶ್ಯವಾದವು. ಸಾಧ್ಯವಿದ್ದಲ್ಲಿ ಶಬ್ದದಿಂದ ಸೂಚಿತವಾಗುವ ಒಡವೆಗಳನ್ನು ಪ್ರತ್ಯಕ್ಷವಾಗಿ ತೋರಿ

ಸಬೇಕು. ಪ್ರತಿಶಬ್ದಕ್ಕೂ ಒಂದು ಸ್ಪಷ್ಟವಾದ ಅರ್ಥವು ಇರುತ್ತದೆಂದು ತಿಳುಕೊಳ್ಳುವ ಹಾಗೆ ಮಾಡಬೇಕು. ಮತ್ತು ಪ್ರತಿವಾಕ್ಯದ ಇಲ್ಲವೆ ಪದದ ಅರ್ಥವು ಅವರ ಮನಸ್ಸಿನಲ್ಲಿ ಬರುವಂತೆ ಮಾಡಬೇಕು. ಈ ರೀತಿಯಾಗಿ ಅರ್ಥಬೋಧವಾಗುವಂತೆ ವಾಚನಪಾಠವನ್ನು ಸಾಗಿಸಿದರೆ ಯಾಂತ್ರಿಕ ರೀತಿಯಾಗಿ ವಿಚಾರಾಂಶ ಇಲ್ಲದೆ ಓದುವ ಜಟವು ಹುಡುಗರಿಗೆ ಹತ್ತಲಾರದು. ಹುಡುಗರಿಗೆ ವಿಷಯ ಯಾವದೆಂಬುವದು ಪೂರ್ಣವಾಗಿ ತಿಳದದ್ದು ಅದರ ಸಾಧಾರಣ ಭಾವವು ಸಹ ಅವರಿಗೆ ಗೊತ್ತಾಗಿ ಅವರ ಸ್ಮರಣದ ಲ್ಲಿರುವದು ಅವಶ್ಯವು. ಈ ಸೂಚನೆಗಳು ಮೇಲಿನ ಒಡವೆಗಳಿಗೂ ಅನುಲಕ್ಷಿಸಿರುತ್ತವೆ. ೬ ಭೂಗೋಲ— ಹುಡುಗರಿಗೆ ಎರಡನೆ ಇಯತ್ತೆಯಲ್ಲಿ ಭೂಗೋಲವನ್ನು ಕಲಿಸಲಾರಂಭಿಸುತ್ತಾರೆ. ಅವರು ಮೊದಲು ಸ್ಥಳ ಪರಸ್ಪರ ಸಂಬಂಧವನ್ನು ಜ್ಞಾನ ಮಾಡಿಕೊಳ್ಳಬೇಕು. ಶಿಕ್ಷಕನು ಮೇಜಿನ ಮೇಲೆ ಮಧ್ಯದಲ್ಲಿ ಬಲಬದಿಗೆ ಎಡಬದಿಗೆ ಮುಂಬದಿಗೆ ಹಿಂಬದಿಗೆ ಹಲವು ಒಡವೆಗಳನ್ನು ಇಟ್ಟು ಹುಡುಗರನ್ನು ನಿರೀಕ್ಷಿಸಲಿಕ್ಕೆ ಹಚ್ಚಿ ಎಡಬಲ ಹಿಂದೆ ಮುಂದೆ ಮೇಲೆ ಕೆಳಗೆ ಮುಂತಾದ ದಿಕ್ಕುಗಳನ್ನು ಕಲಿತುಕೊಳ್ಳಲಿಕ್ಕೆ ಹಚ್ಚಬೇಕು. ಇಷ್ಟಾದ ಬಳಿಕ ಮೇಜಿನ ಮೇಲಿನ ಎಲ್ಲ ಒಡವೆಗಳನ್ನು ಅದಲುಬದಲು ಮಾಡಿ ಮೊದಲಿನ ವ್ಯವಸ್ಥೆಯನ್ನು ಮುರಿದು ಹುಡುಗರಿಗೆ ಮೊದಲಿನಂತೆ ಪುನಃ ಕ್ರಮಗೊಳಿಸಲಿಕ್ಕೆ ಹಚ್ಚಬೇಕು. ಅಥವಾ ಬೇರೆ ತಾನು ಹೇಳಿದ ರೀತಿಯಿಂದಾದರೂ ಕ್ರಮಗೊಳಿಸಲಿಕ್ಕೆ ಹೇಳಿದರೂ ಅಡ್ಡಿ ಇಲ್ಲ. ಬಳಿಕ ಹುಡುಗರಿಗೆ ವರ್ಗದ ಕೋಣೆಯೊಳಗಿನ ಒಡವೆಗಳ ಸ್ಥಾನವನ್ನು ಅರಿತುಕೊಳ್ಳಲಿಕ್ಕೆ ಹಚ್ಚಿ ನಂತರ ಸಾಲೆಯು ಬೇರೆ ಬೇರೆ ಭಾಗಗಳೊಳಗಿನ ಪದಾರ್ಥಗಳ ಸ್ಥಾನ ಸಂಬಂಧದ ಕಲ್ಪನೆಯನ್ನು ಹುಟ್ಟಿಸಬೇಕು. ಈ ಮೇರೆಗೆ ಹುಡುಗರು ಎಡ ಬಲ ಹಿಂದೆ ಮುಂದೆ ಮುಂತಾದ ಸ್ಥಳಗಳು ಮುಂದೇ ಅಲ್ಪ ಪದಾರ್ಥಗಳ ರಚನೆಯ ಸಂಬಂಧದಿಂದ

ಬೇರೆಬೇರೆಯಾಗುತ್ತದೆಂಬುದನ್ನು ತಾವು ನೋಡುವ ದಿಕ್ಕಿನ ಸಂಬಂಧದಿಂದ ಬೇರೆಯಾಗುತ್ತವೆಂಬುದನು ಅವರ ಮನಸ್ಸಿನಲ್ಲಿ ಹಾಕಬೇಕು. ಇದರಿಂದ ಒಂದು ಸಾಧಾರಣವಾದ ಸ್ಥಿರದಿಕ್ಕನ್ನು ಗೊತ್ತುಪಡಿಸುವದು ಅವಶ್ಯವೆಂಬುದನ್ನು ಅವರ ಮನಸ್ಸಿನಲ್ಲಿ ಹುಟ್ಟಿಸಿ ಹೋಕಾಯಂತ್ರವನ್ನು ತೋರಿಸಬೇಕು. ಹೋಕಾಯಂತ್ರದ ದಿಕ್ಕುಗಳನ್ನು ಆಕಾಶದಲ್ಲಿ ನಡಿಯುವ ಸೂರ್ಯನ ಗತಿಯನ್ನು ಪ್ರತ್ಯಕ್ಷ ತೋರಿಸಿ ತಿಳಿಸತಕ್ಕದ್ದು. ಬೇರೆ ಬೇರೆ ಹೊತ್ತಿಗೆ ಗಿಡ ಗೋಡೆ ಮತ್ತು ಬೇರೆ ಬಿಡಿಸಿಗಳ ನೆಳಲು ಇಗಲಿನ ೧೦ ತಾಸಿನಲ್ಲಿ ದಿಕ್ಕು ಬದಲಾಗುವ ಸ್ಥಿತಿಯನ್ನು ತೋರಿಸತಕ್ಕದ್ದು. ಆಟದ ಬೈಲಿನಲ್ಲಿ ಒಂದು ಕಟ್ಟಿಗೆಯನ್ನು ನಡಿಸಿ ಅದರ ನೆಳಲನ್ನು ಆ ನೆಳಲಿನ ಉದ್ಭವನನ್ನೂ ದಿಕ್ಕನ್ನೂ ಮುಂಜೆಳಗಿನ ೧೦ ಘಂಟೆ ಮಧ್ಯಾಹ್ನ ಇಳಿಹೊತ್ತು ಸಾಯಂಕಾಲ ಮುಂತಾದ ಹೊತ್ತುಗಳಲ್ಲಿ ಹೋಕಾಯಂತ್ರದ ದಿಕ್ಕುಗಳನ್ನು ಆಕಾಶದಲ್ಲಿ ಸೂರ್ಯನ ಗತಿಯ ಪ್ರತ್ಯಕ್ಷ ನಿರೀಕ್ಷಣೆಯಿಂದ ತಿಳಿಸಬೇಕು. ಗೋಡೆ ಗಿಡ ಇಲ್ಲವೆ ಬೇರೆ ಪದಾರ್ಥಗಳ ನೆಳಲನ್ನು ನೋಡಿಕೊಳ್ಳುತ್ತ ಹಗಲಿನಲ್ಲಿ ಬೇರೆ ಬೇರೆ ವೇಳೆಯಲ್ಲಿ ಬೀಳುವ ನೆಳಲಿನ ಬೇರೆ ಬೇರೆ ಸ್ಥಳಗಳನ್ನು ಗುರ್ತು ಮಾಡುತ್ತ ಹೋಗಬೇಕು. ಕೋಲು ಅಥವಾ ಜೂಪಾದ ತುದಿಯುಳ್ಳ ಕಂಬವನ್ನು ಶಾಲೆಯ ಆಟದ ಸ್ಥಳದಲ್ಲಿ ಲಂಬವಾಗುವಂತೆ ನಿಲ್ಲಿಸಿ ಅದರ ನೆಳಲನ್ನು ಪ್ರಾತಃಕಾಲದ ೧೦ ಗಂಟೆಗೆ ಮಧ್ಯಾಹ್ನ ಅಪರಾಹ್ನ ಮತ್ತು ಸೂರ್ಯಾಸ್ತ ಸಮಯಗಳಲ್ಲಿ ಅವಲೋಕಿಸುತ್ತ ಹೋಗಬೇಕು. ಹೀಗೆ ಮಾಡುವದರಿಂದ ಪೂರ್ವ ಪಶ್ಚಿಮ ದಿಕ್ಕುಗಳು ಯಾವವೆಂಬದು ಚೆನ್ನಾಗಿ ಗೊತ್ತಾಗುವದರಿಂದ ಎರಡನೇ ದಿಕ್ಕುಗಳನ್ನು ಹುಡುಗರಿಗೆ ಸುಲಭವಾಗಿ ತಿಳಿಸಿಕೊಡಬಹುದು. ನಂತರ ಹುಡುಗರಿಗೆ ಧ್ರುವನಕ್ಷತ್ರವನ್ನು ತೋರಿಸಿ ಅದರ ಮೂಲಕ ರಾತ್ರಿಯಲ್ಲಿ ದಿಕ್ಕುಗಳನ್ನು ಗೊತ್ತುಪಡಿಸಿಕೊಳ್ಳುವದನ್ನು ಹೇಳಬೇಕು. ಸಾಧ್ಯವಿದ್ದಲ್ಲಿ ನಾವಿಕನ ಹೋಕಾಯಂತ್ರವನ್ನು ತೋರಿಸ

ಬೇಕು. ಸಣ್ಣ ಹೋಕಾಯಂತ್ರಗಳೂ ಬಂದೆರಡು ದುಡ್ಡಿಗ
ದಪ್ಪಣಗಳ ಅಂಗಡಿಗಳಲ್ಲಿ ದೊರಿಯುತ್ತವೆ. ಎಲ್ಲರಿಗೂ
ಕಣ್ಣಿಗೆ ಬೀಳುವಂಥ ಸಾಲೆಯ ಮುಖ್ಯ ಭಾಗದ ನೆಲದ
ಮೇಲೆ ರೇಖಾವೃತ್ತದ ಗೆರೆಯನ್ನು ಬಣ್ಣದಿಂದ ಬರೆದಿಡಬೇ
ಕು. ಇದರಿಂದ ಹುಡುಗರು ಬೇರೆ ಬೇರೆ ಸ್ಥಳದ ದಿಕ್ಕುಗ
ಳನ್ನು ಹೇಳುವದಕ್ಕೆ ಅನುಕೂಲವಾಗುವದು. ಅಂಕಗಣಿ
ತದ ಪಾಠದಲ್ಲಿ ಪ್ರತ್ಯಕ್ಷ ಅಳತೆ ಮಾಡಿ ಯಾವದೊಂದು ಸ್ಥಳ
ಉದ್ದಳತೆ ಎದರು ಸ್ಥಳಗಳ ನಡುವಿನ ಅಂತರ ಮತ್ತು
ಪರಿಮಿತಿಗಳ ಜ್ಞಾನವನ್ನು ಹುಡುಗರು ಮಾಡಿಕೊಂಡಿರಬೇ
ಕು. ಈ ಜ್ಞಾನವು ಅವರಿಗೆ ಆಗಿರದಿದ್ದರೆ ಈಗ ಪ್ರತ್ಯಕ್ಷ
ಬಳತೇ ಮಾಡಿ ಅಂತರಂಗಳನ್ನು ಹೋಲಿಸಿ ನೋಡಲಿಕ್ಕೂ
ಶಾಲೆಯಲ್ಲಿರುವ ವಿಧವಿಧದ ಪದಾರ್ಥಗಳ ಪರಿಮಿತಿಯನ್ನು
ಅಳೆದು ಹೋಲಿಸಿ ನೋಡಲಿಕ್ಕೂ ಕಲಿಸಬೇಕು. ಶಾಲೆಯಿ
ದ್ದ ಊರೊಳಗಿನ ಪ್ರಸಿದ್ಧ ಸ್ಥಳಗಳ ನಡುವಿನ ಅಂತರವನ್ನು
ಎತ್ತರವನ್ನು ನೋಡಿ ಅಳೆದು ನೆನಪಿಡಬೇಕು. ಭೂಗೋ
ಲದ ಪಾಠಗಳಲ್ಲಿ ಅಂತರ ಮತ್ತು ಎತ್ತರಗಳ ವಿಷಯವಾಗಿ
ಹೇಳುವಾಗ್ಗೆ ಹೋಲಿಸಿ ನೋಡುವದಕ್ಕೆ ಇವುಗಳಿಂದ ಬಹ
ಳೇ ಉಪಯೋಗವಾಗುವದು.

ಈ ಪ್ರಕಾರ ಅಭ್ಯಾಸ ಮಾಡಿಸಿದ ಮೇಲೆ ಹುಡುಗರಿಗೆ
ಚಿತ್ರ ಮತ್ತು ನಕಾಶಗಳ ಭೇದವನ್ನೂ ತಿಳಿಸಬೇಕು. ಮ
ತ್ತು ಅನೇಕ ಪ್ರಕಾರದ ದೃಷ್ಟಾಂತಗಳನ್ನು ಕೊಟ್ಟು ನಕಾಶ
ದಿಂದ ಆಕಾರ, ಪರಿಮಿತಿ, ಅಂತರ, ಸ್ಥಾನ, ಮತ್ತು ದಿಕ್ಕುಗ
ಳು ತಿಳಿಯುತ್ತವೆಂಬದನ್ನು ಕಲಿಸಬೇಕು. ಬಳಿಕ ಶಿಕ್ಷಕ
ನು ಕರೇ ಹಲಗೆಯ ಮೇಲೆ ಪುಸ್ತಕ ಸ್ಲೇಟು ಅಥವಾ ಬೇ
ರೆ ಯಾವದೊಂದು ಒಡವೆಯ ನಕಾಶವನ್ನು ತೆಗೆದು ಸ್ಲೇಟು
ನ ಮೇಲೆ ಅದರಂತೆಯೇ ತೆಗಿಸಬೇಕು. ಮೊದಲು ಪುಸ್ತಕ
ಸ್ಲೇಟು ಅಥವಾ ಬೇರೆ ಒಡವೆಯು ಎಷ್ಟು ದೊಡ್ಡದಿರುವ
ದೋ ಅಷ್ಟೇ ಆಕಾರದ ನಕಾಶವನ್ನು ತಗಿಸಬೇಕು. ತರು
ವಾಯ ಇಮ್ಮಡಿ ಅರ್ಧ ಅಥವಾ ಕಾಲು ಪಾಲಷ್ಟು ತೆಗಿಸಬ
ಹುದು. ಇದರಿಂದ ನಕಾಶ ತೆಗಿಯುವಾಗ್ಗೆ ಸ್ಕೇಲಿನ (ಪ್ರ

ಮಾಣದ), ಅವಶ್ಯಕತೆಯ ಸಾಧಾರಣ ವಿಚಾರವು ಹುಡು... ರ ಮನಸ್ಸಿನಲ್ಲಿ ಬರಬಹುದು. ಹಾಗೂ ಸ್ಕೇಲು ಬದಲಾ ದಾಗ್ಯೂ ಪರಸ್ಪರ ಸಂಬಂಧದ ಪ್ರಮಾಣಗಳು ಹೆಚ್ಚುಕಡಿ ಮೆಯಾಗುವದಿಲ್ಲವೆಂಬದು ಗೊತ್ತಾಗುವದು. ತರುವಾಯ ಹುಡುಗರ ಸಹಾಯದಿಂದ ವರ್ಗದ ಕೋಣೆಯ ನಕಾಶವನ್ನು ಕರೆ ಕಲಿಗೆಯ ಮೇಲೆ ತೆಗೆಯಬೇಕು. ಕರೆ ಹಲಿಗೆಯ ಮೇಲೆ ಪುಸ್ತಕದ ಆಕಾರದಪ್ಪೇ ನಕಾಶ ತೆಗೆಯುವದು ಹ್ಯಾಗೆ ಸಾಧನವಾಯಿತೋ ಹಾಗೆ ವರ್ಗದ ಕೋಣೆಯ ನಕಾಶವನ್ನು ಅದರಪ್ಪೇ ಆಕಾರದಿಂದ ತೆಗೆಯುವದು ಸಾಧ್ಯವಲ್ಲವಾದುದರಿಂದ ಅದರ ಆಕಾರವನ್ನು ಯಾವದೊಂದು ಪ್ರಮಾಣದಿಂದ ಕಡಿಮೆ ಮಾಡಿ ತೆಗೆಯಬೇಕಾಗುವದೆಂದು ಮನಗಾಣುವದು. ನಕಾಶದ ಉತ್ತರಪಾರ್ಶ್ವವು ಉತ್ತರಕ್ಕೆ ಆಗುವಂತೆ ಕರೇ ಹಲಿಗೆಯನ್ನು ಮೊದಲು ನೆಲದ ಮೇಲೆ ಇಡಬೇಕು. ಹುಡುಗರು ಕೋಣೆಯ ಉದ್ದಗಲಗಳನ್ನು ಬಾಗಿಲು ಕಿಡಿಕೆಗಳ ನಡುವಿನ ಅಂತರಗಳನ್ನು ಮೇಜು ಖುರ್ಚಿ ಹಾಗೂ ಇತರ ಸಾಮಾನುಗಳ ನಡುವಿನ ಅಂತರಗಳನ್ನೂ ತೆಗೆದು ಅಳೆದು ಪ್ರತಿ ಒಂದರ ಪರಸ್ಪರ ಸಂಬಂಧಕ್ಕೂ ಅಂತರಕ್ಕೂ ಅನುಸರಿಸಿ ನಕಾಶದಲ್ಲಿ ಅವುಗಳನ್ನು ತೋರಿಸಬೇಕು. ಬಳಿಕ ಇದೇ ನಕಾಶವನ್ನು ಇದಕ್ಕೂ ಸಣ್ಣ ಪ್ರಮಾಣದಿಂದ ಅರ್ಧ ಕಾಲುಗಳ ಪ್ರಮಾಣದಿಂದಲೂ ಪುನಃ ತೆಗೆಯಬೇಕು. ತರವಾಯ ಹುಡುಗರು ತಮ್ಮ ಸ್ಲೇಟಿನ ಮೇಲೆ ಈ ನಕಾಶದ ನಕಲು ಮಾಡಿಕೊಳ್ಳಬೇಕು. ಹಾಗೂ ಅದಕ್ಕೆ ಹೊಂದಿದ ಕೋಣೆಗಳನ್ನು ಆಟದ ಸ್ಥಳವನ್ನು ಸಾಲೇ ಇಮಾರತಿಯ ಬೇರೆ ಭಾಗವನ್ನು ನೆರೆಯಲ್ಲಿರುವ ಮನೆಗಳನ್ನು ಕ್ರಮಕ್ರಮದಿಂದ ಹೊಂದಿಸುತ್ತ ಹೋಗಬೇಕು. ಆ ಮೇಲೆ ಸಾಲೇ ಇರುವ ಹಳ್ಳಿಯ ನಕಾಶವನ್ನು ತೋರಿಸಿ ಅದರಲ್ಲಿ ಹುಡುಗರು ಸಾಲೆಗೆ ಬರುವ ಮಾರ್ಗವನ್ನು ಅಥವಾ ಹೊಲಕ್ಕೆ ಹೋಗುವ ಹಾದಿಗಳನ್ನು ಊರ ಕೆರೆ ದೇವಸ್ಥಾನ ಅಥವಾ ಇತರ ಸ್ಥಳಗಳನ್ನು ತೋರಿಸಬೇಕು. ಇದರಿಂದ ನಕಾಶದ ಉಪಯೋಗದ ಜ್ಞಾನವು

ಕೆಲವು ಮಟ್ಟಿಗೆ ಅವರಿಗೆ ಆಗುವದು. ಸಾಲೆ ಇಕುವ ಊರ ಭೂಗೋಲ ಅಥವಾ ಜನ್ಮಸ್ಥಾನದ ಭೂಗೋಲದ ಜ್ಞಾನವು ಬಹಳ ಮಹತ್ವದ್ದು ಮುಂದೆ ಹುಡುಗರು ಕಲಿಯುವ ಅನೇಕ ದೇಶ ಅಥವಾ ಸ್ಥಳಗಳನ್ನು ಎಂದೂ ಪ್ರತ್ಯಕ್ಷ ನೋಡುವ ಸಂಭವ ಇರುವದಿಲ್ಲಾದದರಿಂದ ಅವುಗಳ ವಿಷಯಕ್ಕೆ ಇವರಲ್ಲಿ ಉಂಟಾಗುವ ಕಲ್ಪನೆಗಳು ತಮ್ಮ ಊರು ಅಥವಾ ಪಟ್ಟಣದಲ್ಲಿ ಪ್ರತ್ಯಕ್ಷವಾಗಿ ನೋಡಿದ್ದಕ್ಕೆ ಹೋಲಿಸಿ ನೋಡುವದರಿಂದಲೇ ಆಗತಕ್ಕದ್ದಿರುತ್ತದೆ. ಜನ್ಮಸ್ಥಾನದ ಭೂಗೋಲದ ವಿಶೇಷಾಂಶವನ್ನು ಹಳ್ಳಿಯಲ್ಲಿಯೂ ಅದರ ಸುತ್ತುಮುತ್ತಲೂ ಪರಿಯಟಣದ ದ್ವಾರದಿಂದ ಕಲಿಸತಕ್ಕದ್ದು. ಪರಿಯಟಣಗಳ ಉದ್ದೇಶಗಳು ನಿರೀಕ್ಷಣ ಮತ್ತು ಸ್ವಂತ ವಿಚಾರದ ಚಟುವನ್ನು ಹುಡುಗರಿಗೆ ಹಚ್ಚುವದೂ ಭೂಪೃಷ್ಠದ ಮೂಲಸ್ವರೂಪವನ್ನು ಕಲಿಸುವದೂ ಭೂಗೋಲದ ಜ್ಞಾನವನ್ನು ಹೊಂದುವದಕ್ಕೆ ಮನಸ್ಸಿನ ಗ್ರಾಹಕಶಕ್ತಿಯನ್ನು ಬೆಳಿಸುವದೂ ಸರ್ವಸಾಧಾರಣವಾಗಿ ಸೃಷ್ಟಿಯ ಸೌಂದರ್ಯದ ಬಗ್ಗೆ ಹುಡುಗರ ಮನಸ್ಸಿನಲ್ಲಿ ಪ್ರೀತಿಯನ್ನು ಉಂಟು ಮಾಡುವದೂ ಇವುಗಳೇ ಈ ಪ್ರಕಾರದ ಪರಿಯಟಣವನ್ನು ಕೈಕೊಳ್ಳುವ ಮುಖ್ಯೋದ್ದೇಶವು. ಮೊದಲು ಅಧ್ಯಾಪಕನು ಹೋಗಬೇಕಾಗುವ ಮಾರ್ಗಗಳ ಅಡ್ಡಮಾರ್ಗಗಳ ವಿಷಯವಾಗಿಯೂ ಹಾದಿಗಳ ಮೇಲೆ ಇದ್ದ ಹುಡುಗರಿಗೆ ಮೊದಲೇ ಗೊತ್ತು ಇದ್ದ ಇವಾರತಿಗಳು ಮತ್ತೆ ಬೇರೆ ವಸ್ತುಗಳ ವಿಷಯವಾಗಿಯೂ ಅವರ ಸಂಗಡ ಮಾತಾಡುತ್ತಿರಬೇಕು. ಮತ್ತು ಕರೇ ಹಲಿಗೆಯ ಮೇಲೆ ಅವುಗಳ ನಕಾಶವನ್ನು ತೆಗಿಯಬೇಕು. (ಸಶೇಷ.)

DEPARTENTAL NOTICE.

ನೋಟೀಸುಗಳು.

ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ 'ಬಾಲಮಿತ್ರ'ವೆಂಬ ಕನ್ನಡ ಪುಸ್ತಕವನ್ನು ಮೆಹಬ್ಬಾನ ಡಾಯರೆಕ್ಟರ ಸಾಹೇಬ ಬಹದ್ದೂರ ಪಬ್ಲಿಕ್

ಇನ್‌ಸ್ಪೆಕ್ಶನ್ ಮುಂಬಯಿ ಇವರು ಲಾಯಬ್ರರಿಗಾಗಿಯೂ ಇನಾಮಿಗಾಗಿಬೂ ಉಪಯೋಗಿಸಲಿಕ್ಕೆ ಮಂಜೂರಿಯನ್ನು ಕೊಟ್ಟಿರುತ್ತಾರೆ.

ದಾರವಾಡ
ತಾ. ೧೪-೬-೧೯೧೩ ಇಸ್ವಿ. } B. K. Sahasrabudhe
ಎ. ಇ. ದಕ್ಷಿಣಭಾಗ.

ಪ್ರಕಟನೆ.

ಕಾಲೇಜದ ಯಾವತ್ತು ವಿದ್ಯಾರ್ಥಿಗಳಿಗೆ ತಿಳಿಯಪಡಿಸುವದೇನಂದರೆ:—ಕಾಲೇಜದ ಯಾವ ವಿದ್ಯಾರ್ಥಿಗಳು ಇನ್ನು ಮುಂದೆ ಚಿತ್ರಕಲೆಯ ಎನೇ ಗ್ರೇಡಿನ ಸರಟಿಫಿಕೇಟನ್ನೂ ಬಡಿಗತನದ ಮ್ಯಾನ್ಯುಅಲ್ ಟ್ರೇನಿಂಗ ಎಂಬ ಸರಟೀಫಿಕೇಟನ್ನೂ ಪಡೆಯುವರೋ ಅವರಿಗೆ ಮೆ॥ ಎ॥ ಇ॥ ದಕ್ಷಿಣ ಭಾಗ ಇನಿಸರು ಅವರು, ಪಡೆದ ಕಾಲೇಜದ ಸರಟೀಫಿಕೇಟಿನಿಂದ ಪಡೆಯುವ ಸಂಬಳಕ್ಕಿಂತ ಹೆಚ್ಚು ಸಂಬಳವನ್ನು ಆ ರೇಲಭೆವಲ್ಲಿಯೇ ಕೊಡುವರು.

ಟ್ರೇನಿಂಗ ಕಾಲೇಜ ಧಾರವಾಡ
ತಾ॥ ೨೪-೬-೧೯೧೩ } S. K. Rodda.
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

(ಗತಿಸಿ ನೇ ಪುಟದಿಂದ ಮುಂದೆ ಸಾಗಿದ್ದು)

ಬಡವರಾದ ಬಚ್ಚಲಿಗರಿಗೆ ಬೇಸಾಯದ ಕೆಲಸಕ್ಕೆ ಬೇಕಾಗುವ ಎತ್ತು, ಕಾಳು, ಮುಂತಾದವುಗಳನ್ನು ಕೊಂಡುಕೊಳ್ಳುವದಕ್ಕೆ ಹಣವನ್ನು ತುಸು ಬಡ್ಡಿಯಿಂದ ಸಾಲವಾಗಿ ಕೊಡುವರು. ಹೊಲದ ತೆರಿಗೆಯನ್ನು ಉತ್ಪನ್ನದ ಪಟ್ಟಿಕ್ಕಿಂತ ಹೆಚ್ಚು ತಕೊಳ್ಳುತ್ತಿದ್ದಿಲ್ಲ. ಇದನ್ನಾದರೂ ಕಾಳಿನ ರೂಪದಿಂದ ತಕೊಳ್ಳುವರು. ಒಮ್ಮೊಮ್ಮೆ ಅನುಕೂಲವಿದ್ದಾಗ ಹಣದ ರೂಪದಿಂದ ತಕೊಳ್ಳುವರು.

ದಂಡಿನವ್ಯವಸ್ಥೆ.

ದಂಡಿನಲ್ಲಿ ಕಾಲಾಳುಗಳಿಂತಲೂ ರಾವುತರಿಂತಲೂ ಎರಡು ಭಾಗಗಳಿರುವವು. ಕಾಲಾಳುಗಳಲ್ಲಿ ಹತ್ತು ಮುಂದಿಗ

ಒಬ್ಬ ನಾಯಿಕನಿರುವನು. ಇಂಥ ಐದು ಮಂದಿ ನಾಯಿಕರಿಗೆ ಒಬ ಹವಾಲದಾರನು ಇಬ್ಬರು ಹವಾಲದಾರರ ಮೇಲೆ ಒ ಬ್ಬ ಜಮಾದಾರನು ಹತ್ತು ಮಂದಿ ಜಮಾದಾರರಿಗ ಒಬ್ಬ ಹಜಾರಿ ಎಂಬ ಅಧಿಕಾರಿಯು. ಹಜಾರಿಯೆಂದರೆ ಸಾವಿರ ಮಂದಿಗೆ ಒಡೆಯನೆಂಬ ಅರ್ಥವು ಇಂಥ ೫ ಗುಂಪುಗಳಿಗೆ ಕೂಡಿ ಒಬ್ಬ ಪಾಂಚಹಜಾರಿಯೆಂಬ ಮುಖ್ಯಸ್ಥನು ಇವನ ಹೆಸರಿನಿಂದ ಇವನ ಕೈಕೆಳಗಿನ ದಂಡಾಳುಗಳ ಸಂಖ್ಯೆಯು ತಾನೇ ತಿಳಿಯುವದು, ಇಂಥ ಕೆಲವು ಟೋಳಿಗಳೊಡೆಯನಿ ಗೆ ಸರನೌಬತ್ತೆಂಬ ಬಿರಿದು. ರಾವುತರ ದಂಡಿನಲ್ಲಿ ೨೫ ಮಂದಿ ರಾವುತರಿಗೆ ಒಬ್ಬ ಹವಾಲದಾರನು ಇರುವನು. ಮುಂದೆ ಕಾಲಾಳುಗಳ ದಂಡಿನಲ್ಲಿರುವ ಪದ್ಧತಿಯಿಂತೆಯೇ ರಾವುತರಲ್ಲಿಂದು ತಿಳಿಯಬೇಕು ೨೫ ಮಂದಿ ರಾವುತರಿಗೆ ಒಬ್ಬ ಪಖಾಲಿಯುವನು. ಒಬ್ಬನು ನಾಲುಕಟ್ಟುವನೂ ಇರು ವನು. ಸರನೌಬತ್ತೆಂಬ ಅಧಿಕಾರವ್ಯಕ್ತಿಯ ಕೈಕೆಳಗೆ ಲೆ ಕ್ಕ ಬರೆಯಲಿಕ್ಕೆ ಒಬ್ಬ ಬ್ರಾಹ್ಮಣನಿರುವನು. ಅವನಿಗೆ ಕಾ ರಖಾನನೀಸ ಅಥವಾ ಸಬುನೀಸನೆನ್ನುವರು. ಮತ್ತೊಬ್ಬ ಪ್ರಭುಜಾತಿಯ ಅಧಿಕಾರಿಯು ಸಾಮಗ್ರಿಯುನ್ನು ಸಂಗ್ರಹಿ ಸಿಡುವ ಕೆಲಸವನ್ನು ಮಾಡುವನು ಇದರಂತೆ ಈ ಮೂ ರು ಜಾತಿಯ ಜನರು ಒಂಬೀ ಉದ್ದೇಶದ ಮೂರು ಬೇರೆ ಬೇರೆ ಕೆಲಸಗಳನ್ನು ಮಾಡ ವಂತೆ ಕಟ್ಟು ಮಾಡಿದ್ದನು. ಇ ದರಿಂದ ಮಹಾರಾಷ್ಟ್ರದೊಳಗಿನ ಜೇಕೆ ಜೋಕೆ ಜಾತಿಯಲ್ಲಿ ರಾಷ್ಟ್ರಾಭಿಮಾನವು ನೆಲೆಗೊಳ್ಳಲಿಕ್ಕೆ ಅನುವಾಯಿತು. ಎ ಲ್ಲ ನೌಕರರಿಗೂ ರೋಖ ಸಂಬಳ ನಿಶ್ಚಯಿಸಿದನು. ಇನಾಮುಗ ಳನ್ನು ಕೊಡುವದನ್ನು ಕಟ್ಟು ಮಾಡಿದ್ದನು, ಕಾಲಾಳ ಹ ಜಾರಿಯ ವರ್ಷದ ಸಂಬಳ ಸಾವಿರ ಹೊನ್ನು, ಪಾಂಚಹಜಾ ರಿಯ ಸಂಬಳವು ೨೦೦೦ ಹೊನ್ನು, ರಾವುತರ ಹಜಾರಿಯ ಸಂಬಳವು ೫೦೦೦ ಹೊನ್ನು. ಒಬ್ಬೊಬ್ಬ ಕಾಲಾಳಿಗೆ ೩ ರಿಂದ ೯ ರವರೆಗೆ ತಿಂಗಳಿಗೆ ಸಂಬಳ ನಿಶ್ಚಯಿಸಿದನು. ಸ್ವಾರರಿಗೆ ೬ ರಿಂದ ೨೦ ರುಪಾಯಿಗಳವರೆಗೆ ಸಂಬಳದೊರೆಯುವದು. ಮಳೆಗಾಲವನ್ನು ಬಿಟ್ಟು ಉಳಿದ ಎಂಟು ತಿಂಗಳವರೆಗೆ ಚೌ ಥಾಯಿ ಸರದೇಶಮುಖ ಹಕ್ಕುಗಳಿಗಾಗಿ ದೇಶ ಸಂಚಾರಕ್ಕೆ

ಹೊರಡುವದು. ಈ ಕೆಲಸಕ್ಕೆ ಮುಲಖಗಿರಿಯೆಂಬ ಹೆಸರ
ಮುಲಖಗಿರಿಗೆ ಹೋಗುವದು ಸಂಗಡ ಹೆಂಡರು ಮಕ್ಕ
ನ್ನು ಕರಕೊಂಡು ಹೋಗಬಾರದೆಂದು ಕಟ್ಟುಮಾಡಿದ್ದನ
ಹೊಸದಾಗಿ ದಂಡಿನಲ್ಲಿ ಸೇರಲಿಕ್ಕೆ ಬಯಸುವವನು ಸದ್ಯ
ದಂಡಿನಲ್ಲಿ ದುಡಿಯುತ್ತಿದ್ದ ಬೇರೊಬ್ಬ ಶಿಪಾಯಿಯ ಹೊ
ಯನ್ನು ಕೊಡಬೇಕಾಗುವದು. ಇದರಿಂದ ಫಿತೂರ ನಡಿಸ
ವಂಥ ದುಷ್ಟ ಜನರಿಗೆ ಸೇರಲಿಕ್ಕೆ ಆಸ್ಪದದೊರೆಯುತ್ತಿದ್ದ

ನ್ಯಾಯ ವಿಚಾರಣೆಯ ಪದ್ಧತಿಯು.

ಇವನ ಕಾಲದಲ್ಲಿ ಎಂಟು ಮಂದಿ ಪ್ರಧಾನರಿದ್ದರು. ಒಬ್ಬ
ಬ್ಬನಿಗೆ ಒಂದೊಂದು ಬಾಬಿನ ಕೆಲಸವನ್ನು ಒಪ್ಪಿಸಿದ್ದನು
ಶೇಷವನಿಗೆ ದಿವಾಣೀ ಮುಲಖೀ ಈ ಎರಡೂ ಅಧಿಕಾರಗಳ
ದ್ದವು ಸಿಂಹಾಸನದ ಬಲಗಡಿಗೆ ಕೂಡುವ ಮಾನವು ಇವ
ನಿಗಿತ್ತು. ಸೇನಾಪತಿಗೆ ಎಡಗಡಿಗೆ ಕೂಡುವ ಅಧಿಕಾರವಿತ್ತು.
ಅಮಾತ್ಯನೂ ಸಚಿವನೂ ಶೇಷವನ ಬಲಗಡಿಗೆ ಕೂಡುವರು.
ಇವರ ಬಲಗಡಿಗೆ ಮಂತ್ರಿಯೂ ಪಂಡಿತರಾಯನೂ ಕೂ
ಡುವರು. ನ್ಯಾಯಾಧೀಶನು ಪಂಡಿತರಾಯನು ಇವರಿಬ್ಬರ
ಹೊರ್ತು ಉಳಿದವರಿಗೆಲ್ಲ ಯುದ್ಧ ವಿದ್ಯವು ಬರುತ್ತಿರಬೇ
ಕೆಂದು ನಿರ್ಬಂಧವಿತ್ತು. ಯಾವ ಅಧಿಕಾರವಾದರೂ ವಂಶ
ಪರಂಪರಾಗತವಾಗಿ ನಡೆಯತಕ್ಕದ್ದಲ್ಲ. ಅವರವರ ಯೋ
ಗ್ಯತೆಯಂತೆ ಆಯಾ ಪದಗಳು ದೊರೆಯುತ್ತಿದ್ದವು. ಸುಮಂ
ತನೆಂದರೆ ಪರರಾಷ್ಟ್ರದವರ ಕೂಡ ವ್ಯವಹಾರ ನಡಿಸುವ
ಪ್ರಧಾನಿಯು. ಪಂಡಿತರಾಯನು ರಾಜನಿಗೆ ಯಾವದೊಂದು
ನೀತಿನ ಯೋಗ್ಯಾಯೋಗ್ಯತೆಯನ್ನು ತಿಳಿಸುವ ಮಂತ್ರಿಯು.
ಈಗ ಬ್ರಿತಿಶ ಸರಕಾರದೊಳಗಿನ ಅಡವೊಕೇಟ ಜನರಲ
ನಿಗೆ ಸರಿಯಾದವನು. ನ್ಯಾಯಾಧೀಶನು ವ್ಯಾಜ್ಯತೀರಿಸುವ
ಮಂತ್ರಿಯು. ಈಗಿನ ಹಾಯಕೋರ್ಟನ್ಯಾಯಮುಖ್ಯನ್ಯಾಯಾ
ಧೀಶನಿಗೆ ಇವನನ್ನು ಹೋಲಿಸಬಹುದು. ಅಥವಾ ಪ್ರೀವ್ಹಿ
ಕೌನ್ಸಿಲ್ಲಿನ ಮುಖ್ಯನಿಗೆ ಹೋಲಿಸಬಹುದು.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾಪತ್ರಿಕೆ

ಪದ್ಯಂ.

ಪ್ರಥುವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಸೋತ್ಕರ್ಷಮುಂ।
ಜಯಿಸುತ್ತಂ ಪ್ರತಿಭಾಸದಾದಿಗೊಲವೆಂದೀಪತ್ರಮುಂ ಮುದ್ರಿಸಿ ॥
ಕಯದಿಂದಿತ್ತವಪೋದುಪರ್ಗೆಸುಗುಣಂ ತೋರಲ್ಕೆ ಕೈಕೊಂಬುದೈ।
ಸಯಿಯಿಂಪೋಷವತಿರ್ದ ವೇಳ್ವುದುಧರಜ್ಞಾನಾಭಿವೃದ್ಧಿಪ್ರಿಯರಿಂ ॥

ಪುಸ್ತಕ ೩೯] ಸಪ್ಟಂಬರ ೧೯೦೩. [ಸಂಚಿಕೆ ೯.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಅಲಸಾನಿ ಪೆದ್ದಣ್ಣಾ.

ಭರತಖಂಡದ ಪ್ರಾಚೀನ ಗ್ರಂಥಗಳೆಲ್ಲ ಪದ್ಯಾತ್ಮಕವಾಗಿಯೇ ಇರುತ್ತವೆ. ಅನಾದಿ ಅಪೌರುಷೇಯಗಳಾದ ವೇದಗಳು ಸಹ ಛಂದೋಬದ್ಧ ಗ್ರಂಥಗಳೇ ಆಗಿರುತ್ತವೆ. ಆದ್ದರಿಂದ ಪ್ರಾಚೀನ ಕಾಲದಲ್ಲಿ ಕವಿಗಳಿಗೂ ಕಾವ್ಯಗಳಿಗೂ ಅತಿಶಯ ಮಾನವಿತ್ತೆಂಬದು ಸ್ಪಷ್ಟವಾಗುತ್ತದೆ. ಅಷ್ಟು ದೂರ ಯಾಕೆ? ವಿಕ್ರಮರಾಜನ ಸಭೆಯ 'ನವರತ್ನ' ವೆಂದು ಹೆಸರು ಪಡೆದ ಕವಿಮಂಡಲವೂ, ಭೋಜನ ಕಾವ್ಯೋತ್ತೇಜನವೂ ನಮ್ಮ ಮೇಲಿನ ಮಾತಿಗೆ ಬಲವಾದ ಪ್ರಮಾಣಗಳಾಗಿರುತ್ತವೆ. ಈ ಕವಿಮಂಡಲದಿಂದಲೇ ಸಂಸ್ಕೃತ ಭಾಷೆಯು 'ಸಂಸ್ಕೃತ' ವೆಂಬ ಗೌರವದ ಬಿರುದನ್ನು ಪಡೆದಿರುವದು ಈ ಸಂಸ್ಕೃತ ಕವಿಗಳ ಮುಂದೆ ಕ್ರಮೇಣ ದೇಶಭಾಷೆಗಳಲ್ಲಿಯೂ ಹೊಸ ಹೊಸ ಕವನಗಳನ್ನು ರಚಿಸತೊಡಗಿದರು. ಕಾಳಿದಾಸ, ಭವಭೂತಿ ಮೊದಲಾದವರು ಉತ್ತರಹಿಂದುಸ್ತಾನದಲ್ಲಿ ತಮ್ಮ ಕಾವ್ಯರಸದ ಆಸ್ವಾದನದಿಂದ ವಿದ್ವಜ್ಜನರನ್ನು ಆನಂದಗೊಳಿಸುತ್ತಿರುವಂತೆ, ತಿನ್ನೆ

ತ್ರಪಲ್ಲವನೆಂಬ ಕವಿಯು ತೆಲಗು ದೇಶದ ಜನರಿಗೆ ಸಂಸ್ಕೃತ ಕಾವ್ಯದ ಅಭಿರುಚಿಯನ್ನು ಹಚ್ಚಿದನು. ಮುಂದೆ ಕಾಕಾತ್ಯ ವಂಶದ ರಾಜಪುತ್ರನಾದರೂ ತ್ರಿನೇತ್ರನ ಕಾಯುಕವನ್ನೇ ನಡಿಸಿದನು. ಚಾಲುಕ್ಯ ವಂಶದ ವಿಷ್ಣುವರ್ಧನನೆಂಬ ರಾಜನ ಮಗನಾದ ರಾಜರಾಜನರೇಂದ್ರನೆಂಬವನು ತೆಲಗು ಭಾಷೆಯ ಉದ್ಧಾರಕನೆಂದು ಹೇಳಬಹುದು. ಇವನ ಆಳಿಕೆಯಲ್ಲಿ ನನ್ನಯ ಭಟ್ಟನೆಂಬವನು ಶಾಲಿವಾಹನ ಶಕದ ೧೦೨೮ ರಲ್ಲಿ ತೆಲಗು ಭಾಷೆಗೆ ವ್ಯಾಕರಣ ಬರೆದನು. ಹಾಗೂ ವ್ಯಾಸಕೃತ ಮಹಾಭಾರತವನ್ನು ತೆಲಗಿನಲ್ಲಿ ಭಾಷಾಂತರಿಸತೊಡಗಿದನು. ಅದರಿಂದ ತೆಲಗು ಭಾಷೆಯಾದರೂ ಸಂಸ್ಕಾರವನ್ನು ಹೊಂದಿ ಒಳ್ಳೇ ಹೆಸರಿಗೆ ಬಂತು.

ಈ ಮೇರೆಗೆ ತೆಲಗು ಭಾಷೆಯು ರಾಜಾಶ್ರಯದಿಂದ ಪ್ರಬಲವಾಗುತ್ತ ನಡೆದಿತ್ತು. ಇದೇ ಸಂಧಿಯಲ್ಲಿ ವಿಜಯನಗರದಲ್ಲಿ ಕೃಷ್ಣದೇವರಾಜನು ಪಟ್ಟವೇರಿದನು. ಇವನು ಒಳ್ಳೇ ಹೆಸರಾದ ವಿದ್ಯಾಭಿಮಾನಿಯು. ಕವಿಗಳಿಗೂ, ಪಂಡಿತರಿಗೂ ಇವನು ಜನ್ನಾಗಿ ಆಶ್ರಯ ಕೊಡುವನು. ಇವನು ಸ್ವತಃ ವಿದ್ವಾಂಸನಿದ್ದನು. ಅದರಿಂದ ಇವನಿಗೆ 'ಆಂಧ್ರ ಭೋಜ' ನೆಂಬ ಬಿರುದು ಬಂದಿತ್ತು. ಅಂದರೆ ಉತ್ತರದಲ್ಲಿದ್ದ ಭೋಜರಾಜನಿಗೆ ಇವನನ್ನು ಹೋಲಿಸಿ, ಇವನು ಆಂಧ್ರದೇಶಕ್ಕೆ ಭೋಜಸ್ವರೂಪನೆಂದು ಸರ್ವರೂ ಹೊಗಳುತ್ತಿದ್ದರು. ಇವನ ಸಭೆಯಲ್ಲಿ ಅನೇಕ ಜನ ಕವಿಗಳಿದ್ದರು. ಅವರಲ್ಲಿ ಶ್ರೇಷ್ಠರಾದ ಎಂಟು ಮಂದಿಗೆ 'ಅಷ್ಟದಿಗ್ಗಜ' ವೆಂಬ ಗೌರವದ ಪದವಿತ್ತು. ಅವರು—೧ ಅಲಸಾನಿ ಪೆದ್ದಣ್ಣ, ೨ ಮುಕ್ಕುಟಿಮನ್ನಾ, ೩ ತೆನ್ನಾಲಿ ರಾಮಲಿಂಗ, ೪ ಧೂರ್ಜಟಿ, ೫ ಪಿಂಗಳಿ ಸೂರಣ್ಣಾ, ೬ ಭಟ್ಟವಮೂರ್ತಿ, ೭ ಅಯ್ಯಲರಾಜ, ೮ ರಾಮಭದ್ರ. ಈ ಅಷ್ಟದಿಗ್ಗಜವೆಂಬ ಪದವುಳ್ಳ ಕವಿಮಂಡಲವನ್ನು ವಿಕ್ರಮನ ನವರತ್ನವೆಂಬ ಕವಿಮಂಡಲಕ್ಕೆ ಹೋಲಿಸಬಹುದು. ಇವನು ತೆಲಗು ಭಾಷೆಯ ಉದ್ಧಾರಕ್ಕಾಗಿ ತನ್ನ ತನುಮನಧನಗಳನ್ನು ವೆಚ್ಚ ಮಾಡಿದನು. ಆರಂಭದಲ್ಲಿ ಸಂಸ್ಕೃತ ಗ್ರಂಥಗಳ ಭಾಷಾಂತರಗಳೇ

ಪ್ರಕಟವಾದವು. ಕೇತಣ್ಣ, ಹಾಗೂ ಶ್ರೀನಾಥ ಇವರಿಬ್ಬರು ಕ್ರಮವಾಗಿ 'ಯಾಜ್ಞವಲ್ಕ್ಯಸ್ಮೃತಿ' 'ಸೈಪಧ' ವೆಂಬ ಸಂಸ್ಕೃತ ಗ್ರಂಥಗಳನ್ನು ತೆಲಗಿನಲ್ಲಿ ಭಾಷಾಂತರಿಸಿದರು. ಆದರೆ ನಮ್ಮ ಪೆದ್ದಣ್ಣನು ಈ ಸಂಸ್ಕೃತ ಗ್ರಂಥಗಳ ಭಾಷಾಂತರ ಮಾಡದೆ ಸ್ವತಂತ್ರ ಗ್ರಂಥಗಳನ್ನು ಬರೆದನು.

ಪೆದ್ದಣ್ಣನು ನಿಯೋಗೀ ಬ್ರಾಹ್ಮಣನು. ಇವನ ತಂದೆಯು ಹೆಸರು ಚಿಕ್ಕಣ್ಣನು. ಬಳ್ಳಾರಿ ಜಿಲ್ಲೆಯೊಳಗಿನ ದೋರನಾಳವೆಂಬ ಹಳ್ಳಿಯೇ ಇವನ ಜನ್ಮಗ್ರಾಮವು. ಇವನು ಚಿಕ್ಕಂದಿನಲ್ಲಿ ಅಭ್ಯಾಸ ಮಾಡಿ ಸಂಸ್ಕೃತ ಮತ್ತು ತೆಲಗು ಭಾಷೆಗಳನ್ನು ಚನ್ನಾಗಿ ಕಲಿತನು. ಮುಂದೆ ಇವನು ತನ್ನ ಅಭ್ಯಾಸದ ಯೋಗದಿಂದ ಕಾವ್ಯಗಳನ್ನು ರಚಿಸತೊಡಗಿದನು. ಈಡೆಯಲ್ಲಿ ವಿಜಯನಗರದ ನರಸಿಂಗರಾಯನ ಕಾಲದಲ್ಲಿ ಆ ರಾಜನ ಆಸ್ಥಾನಕವಿಯಾದನು. ಮುಂದೆ ಕೃಷ್ಣರಾಯರು ಪಟ್ಟವೇರಿದ ಬಳಿಕ ಇವನ ವಿದ್ವತ್ತಿಗೆ ಮೆಚ್ಚಿ ತಮ್ಮ ಅಷ್ಟದಿಗ್ಗಜವೆಂಬ ಮಂಡಲದಲ್ಲಿ ಇವನನ್ನು ಸೇರಿಸಿದರು. ಇವನು ಬರೆದ ಸ್ವತಂತ್ರ ಕಾವ್ಯವು ಯಾವದೆಂದರೆ, 'ಸ್ವಾರೋಚಿಷಮನುಚರಿತ್ರ' ವೆಂಬದೇ. ಇದರಲ್ಲಿ ಕೃಷ್ಣರಾಯನು ಮುಸಲ್ಮಾನ ರಾಜರನ್ನು ಗೆದ್ದ ಸಂಗತಿಯನ್ನು ಕವಿಯು ಬಹು ಮನೋವೇಧಕವಾಗಿ ವರ್ಣಿಸಿದ್ದಾನೆ. ಇವನು 'ರಾಮಸ್ತವರಾಜವು' ಎಂಬದೊಂದು ಶ್ರೀ ರಾಮ ಸ್ತುತಿಯ ಗ್ರಂಥವನ್ನು ಬರೆದಿದ್ದಾನೆಂದು ಒಬ್ಬ ಶೋಧಕನು ಹೇಳುತ್ತಾನೆ. ಆದರೆ ಆ ಗ್ರಂಥದ ಸಂಬಂಧದ ವಿಶೇಷ ಸಂಗತಿಯು ಇನ್ನು ಗೊತ್ತಾಗಿಲ್ಲ. ಇವೆರಡು ಗ್ರಂಥಗಳಲ್ಲದೆ 'ಅದ್ವೈತಸಿದ್ಧಾಂತ' 'ಹರಿಕಥಾಸಾರ' 'ರಂಗರಾಳೆಂದ' ಮುಂತಾದ ಗ್ರಂಥಗಳನ್ನು ಬರೆದಿರುವನೆಂದು ತಿಳಿಯುತ್ತದೆ. ಇವನ ಕವಿತೆಗಳು ಬಹು ರಸಭರಿತವಾದವುಗಳಿದ್ದರಿಂದ ಬಹು ಜನರು ಪ್ರೀತಿಯಿಂದ ಓದುವರು. ಒಂದು ದಿವಸ ಕೃಷ್ಣರಾಯನು ಓಲಗದಲ್ಲಿ ಕುಳಿತಾಗ ಇವನು ಕೂತಲ್ಲೇ ರಚಿಸಿದ ಕೆಲವು ಸಂಸ್ಕೃತ ತೆಲಗು ಶ್ಲೋಕಗಳನ್ನು ಅಂದು ತೋರಿಸಿದನು. ಅವುಗಳ ಅರ್ಥ ಗಾಂಭೀರ್ಯಕ್ಕೂ, ಶ್ಲೇ

ಪೆಕ್ಕೊ, ಮಾಧುರ್ಯಕ್ಕೊ, ಅರಸನು ಮೆಚ್ಚಿ ಅವನಿಗೆ 'ಅಂಧ್ರಕವಿತಾಪಿತಾಮಹ' ನೆಂಬ ಪದವಿಯನ್ನು ಕೊಟ್ಟನು.

ತೆಲಗು ಭಾಷೆಯಲ್ಲಿ ಮುಸಲ್ಮಾನೀ ಶಬ್ದಗಳನ್ನು ಸೇರಿಸಲಿಕ್ಕೆ ಹತ್ತಿದವರಲ್ಲಿ ಇವನೇ ಮೊದಲಿಗನು. ಕೃಷ್ಣರಾಯನು ಶಾಲಿವಾಹನ ಶಕದ ೧೪೫೬ ರಲ್ಲಿ ಮಡಿಯಲು, ಇವನು ಕಾವ್ಯರೂಪದಿಂದ ಅರಸನ ಮರಣದಿಂದುಂಟಾದ ವಿಯೋಗದುಃಖವನ್ನು ಬಹು ಸರಸವಾಗಿ ವ್ಯಕ್ತಗೊಳಿಸಿದ್ದಾನೆ. ರಾಜನು ತನಗೆ ಆಶ್ರಯದಾತನಾಗಿದ್ದನೆಂದು ಇವನು ಅವನನ್ನು ಹೊಗಳಿರುವದಿಲ್ಲ. ತೆಲಗು ಭಾಷೆಗೂ, ತೆಲಗೂ ಕವಿಮಂಡಲಕ್ಕೂ, ತೆಲಗು ಪ್ರಜೆಗಳಿಗೂ ರಾಜನು ಮಾಡಿದ ಉಪಕಾರವನ್ನು ನೆನೆನೆನಿಸಿ ಕರುಣಾರಸವು ತುಂಬಿ ಸೂಸುವಂಥ ಈ ವಿಲಾಪ ಕಾವ್ಯವನ್ನು ರಚಿಸಿದನು. ಕೃಷ್ಣರಾಯನ ತರುವಾಯ ಅವರ ಅಳಿಯನಾದ ರಾಮರಾಜನೆಂಬವನು ಪಟ್ಟವೇರಿದನು. ಇವನಾದರೂ ಈ ಕವಿಗೆ ವಿಶೇಷವಾಗಿ ಮಾನಕೊಡುತ್ತಿದ್ದನು. ಕೃಷ್ಣರಾಯರೂ ಈ ರಾಮರಾಜನೂ ಈ ಕವಿಗೆ ಅನೇಕ ಅಗ್ರಹಾರಗಳನ್ನು ಹಾಕಿಕೊಟ್ಟಿದ್ದರು. ಅವುಗಳಲ್ಲಿ ಕೊಕಟವೆಂಬ ಅಗ್ರಹಾರವೇ ಮುಖ್ಯವಾದದ್ದು. ಇವನು ಜನ್ಮತಃ ಸ್ಮಾರ್ತನಿದ್ದರೂ ಅದ್ವೈತಮತಾವಲಂಬಿಯಾಗಿದ್ದನು. ಇವನು ಕೃಷ್ಣರಾಯರು ಮಡಿದ ಸ್ವಲ್ಪ ದಿವಸಗಳಲ್ಲಿಯೇ ಅಂದರೆ ಕ್ರಿಸ್ತಶಕದ ೧೫೬೫ ರಲ್ಲಿ ಬೋರನಾಳೆಂಬ ತನ್ನ ಊರಲ್ಲಿಯೇ ಮರಣ ಹೊಂದಿದನು.

ಚೀನ ದೇಶದಲ್ಲಿ ತಮ್ಮ ಮಕ್ಕಳನ್ನು ಸಾಲಿಗೆ ಹಾಕುವಾಗ ಹುಡುಗನ ಪಾಲಕಶಿಕ್ಷಕರ ನಡುವೆ ನಡೆಯುವ ಸಂಭಾಷಣವು ಒಳ್ಳೇ ಸೋಜಿಗಗೊಳಿಸುವಂಥಾದ್ದಿರುತ್ತದೆ. ಅದರಿಂದ ಅದನ್ನು ಇಲ್ಲಿ ಬರೆದಿದ್ದೇವೆ. ತಂದೆಯು ತನ್ನ ಮಗನನ್ನು ಕರೆದುಕೊಂಡು ಸಾಲೇವನೆಗೆ ಬಂದು ಹೊರಬದಿಯದೊಂದು ಕೋಣೆ ಅಥವಾ ಪಡಸಾಲಿಯಲ್ಲಿ ಕೂತು ಅಧ್ಯಾಪಕನಿಗೆ ತಾನು ಬಂದ ಸುದ್ದಿಯನ್ನು ತಿಳಿಸುವನು. ಕೂಡಲೆ ಮುಖ್ಯಾಧ್ಯಾಪಕನು ಅಲ್ಲಿಗೆ ಬಂದು, ಬಂದ ಗೃಹಸ್ಥನನ್ನು ಆದರಿಸಿ ಅಸನ ಕೊಟ್ಟು ಕುಳ್ಳಿರಿಸಿ ತಾನೂ ಕುಳಿ

ಪುಕೊಳ್ಳುವನು. ಬಳಿಕ ಚಹಾವಾನ, ತಂಬಾಕಸೇವೆ ನಗಳಾದ ಬಳಿಕ ಹುಡುಗನ ತಂದೆಗೆ ಶಿಕ್ಷಕನು ತಮ್ಮ ಸನ್ಮಾನ್ಯ ನಾಮವೇನು? ಎಂದು ಕೇಳುವನು ಅದಕ್ಕೆ ಅವನು—ನನ್ನ ಷ್ಟುಲ್ಲಕ ನಾಮವು ವಂಗ (ಆ ದೇಶದ ಹೆಸರು) ಎಂದು ಹೇಳುವನು. ಬಳಿಕ ಇದೇ ಪ್ರಶ್ನೆಯನ್ನು ಶಿಕ್ಷಕನಿಗೆ ತಂದೆಯು ಇವೇ ಶಬ್ದಗಳಿಂದಲೇ ಕೇಳುವನು. ಉತ್ತರವಾದರೂ ಮೇಲಿನ ಉತ್ತರದ ಶಬ್ದಗಳುಳ್ಳದ್ದೇ ಹೊತಡುವದು. ಪ್ರಶ್ನೆಯು ಕೆಳಗೆ ಬಿದ್ದಂತೆ ಸಂಭಾಷಣವಾಗುವದು.

ಶಿಕ್ಷಕನು—ನೀವು ಎಷ್ಟು ಅಂಕುರಗಳನ್ನು ನೆಟ್ಟಿರುವಿರಿ? (ವಯಸ್ಸೆಷ್ಟೆಂಬ ಅರ್ಥವು).

ತಂದೆಯು—ನಾನು ಮೂವತ್ತು (ಇದ್ದಷ್ಟು) ವರ್ಷಗಳನ್ನು ವ್ಯರ್ಥ ಕಳೆದೆನು.

ತಂದೆಯು—ನಿಮಗೆ ಮಕ್ಕಳೆಷ್ಟು?

ಶಿಕ್ಷಕನು—ನಾಲ್ಕು ಕುನ್ನಿಗಳಿವೆ (ಇದ್ದಷ್ಟು)

ತಂ—ಸಾಲೆಯಲ್ಲಿ ಹುಡುಗರೆಷ್ಟು?

ಶಿ—ಸಾಲೆಯಲ್ಲಿ ನನಗೆ ನೂರು ಮಂದಿ ಸಹೋದರರಿದ್ದಾರೆ. (ಇದ್ದಷ್ಟು)

ಇಷ್ಟಾದ ಬಳಿಕ ಮೂಲೆಯಲ್ಲಿ ಕುಳಿತ ಹುಡುಗನು ಎದ್ದು ಬಂದು ಶಿಕ್ಷಕನಿಗೆ ನಮಸ್ಕರಿಸುವನು. ಬಳಿಕ ಅವನ ಊಟೂಪಚಾರದ ವ್ಯವಸ್ಥೆಯನ್ನು ಗೊತ್ತುಪಡಿಸಿ ಈ ನನ್ನ ಕುನ್ನಿಯನ್ನು ನಿಮ್ಮ ಅಧೀನಕ್ಕೆ ಕೊಡುತ್ತೇನೆ ಎಂದು ಹೇಳಿ ತಂದೆಯು, 'ಹೋಗುತ್ತೇನೆ, ಹೋಗುತ್ತೇನೆ' ಎಂದು ಗಟ್ಟಿಯಾಗಿ ಒದರುತ್ತ ಮನೆಗೆ ಸಾಗುವನು. ಶಿಕ್ಷಕನು ಅವನಿಗೆ ಕೇಳಿಸುವ ತನಕ 'ಮೆಲ್ಲಗೆ ಸಾಗಿರಿ, ಮೆಲ್ಲಗೆ ಸಾಗಿರಿ, ಎಂದು ಒಂದೇ ಸವನೇ ಅನ್ನುತ್ತಲೇ ಇರಬೇಕು.

ನಮ್ಮ ಇಲಾಖೆಯ ಗವರ್ನರರಾದ ಲಾರ್ಡ್ ನಾರ್ಥ್ ಕೋಟ್ ದೊರೆಗಳು ಆಸ್ಟ್ರೇಲಿಯಾದ ಗವರ್ನರ್ ಜನರಲ್ ರಾಗಿ ಹೋಗುವರು. ನಮ್ಮ ಇಲಾಖೆಗೆ ಯಾರು ಒರುವರೆಂಬುದು ಇನ್ನು ಗೊತ್ತಾಗಿಲ್ಲ.

ಪೆಕ್ಕೂ, ಮಾಧುರ್ಯಕ್ಕೂ, ಅರಸನು ಮೆಚ್ಚಿ ಅವನಿಗೆ 'ಅಂಧ್ರಕವಿತಾಪಿತಾಮಹ' ನೆಂಬ ಪದವಿಯನ್ನು ಕೊಟ್ಟನು.

ತೆಲಗು ಭಾಷೆಯಲ್ಲಿ ಮುಸಲ್ಮಾನೀ ಶಬ್ದಗಳನ್ನು ಸೇರಿಸಲಿಕ್ಕೆ ಹತ್ತಿದವರಲ್ಲಿ ಇವನೇ ಮೊದಲಿಗನು. ಕೃಷ್ಣರಾಯನು ಶಾಲಿವಾಹನ ಶಕದ ೧೪೫೬ ರಲ್ಲಿ ಮಡಿಯಲು, ಇವನು ಕಾವ್ಯರೂಪದಿಂದ ಅರಸನ ಮರಣದಿಂದುಂಟಾದ ವಿಯೋಗದುಃಖವನ್ನು ಬಹು ಸರಸಾಗಿ ವ್ಯಕ್ತಗೊಳಿಸಿದ್ದಾನೆ. ರಾಜನು ತನಗೆ ಆಶ್ರಯದಾತನಾಗಿದ್ದನೆಂದು ಇವನು ಅವನನ್ನು ಹೊಗಳಿರುವದಿಲ್ಲ. ತೆಲಗು ಭಾಷೆಗೂ, ತೆಲಗೂ ಕವಿಮಂಡಲಕ್ಕೂ, ತೆಲಗು ಪ್ರಜೆಗಳಿಗೂ ರಾಜನು ಮಾಡಿದ ಉಪಕಾರವನ್ನು ನೆನೆನೆನೆನಿಸಿ ಕರುಣಾರಸವು ತುಂಬಿ ಸೂಸುವಂಥ ಈ ವಿಲಾಪ ಕಾವ್ಯವನ್ನು ರಚಿಸಿದನು. ಕೃಷ್ಣರಾಯನ ತರುವಾಯ ಅವರ ಅಳಿಯನಾದ ರಾಮರಾಜನೆಂಬವನು ಪಟ್ಟವೇರಿದನು. ಇವನಾದರೂ ಈ ಕವಿಗೆ ವಿಶೇಷವಾಗಿ ಮಾನಕೊಡುತ್ತಿದ್ದನು. ಕೃಷ್ಣರಾಯರೂ ಈ ರಾಮರಾಜನೂ ಈ ಕವಿಗೆ ಅನೇಕ ಅಗ್ರಹಾರಗಳನ್ನು ಹಾಕಿಕೊಟ್ಟಿದ್ದರು. ಅವುಗಳಲ್ಲಿ ಕೊಕಟವೆಂಬ ಅಗ್ರಹಾರವೇ ಮುಖ್ಯವಾದದ್ದು. ಇವನು ಜನ್ಮತಃ ಸ್ಮಾರ್ತನಿದ್ದರೂ ಅದ್ವೈತ ಮತವಾದಿಯಾಗಿದ್ದನು. ಇವನು ಕೃಷ್ಣರಾಯರು ಮಡಿದ ಸ್ವಲ್ಪ ದಿವಸಗಳಲ್ಲಿಯೇ ಅಂದರೆ ಕ್ರಿಸ್ತಶಕದ ೧೫೬೫ ರಲ್ಲಿ ದೋರನಾಳೆಂಬ ತನ್ನ ಊರಲ್ಲಿಯೇ ಮರಣ ಹೊಂದಿದನು.

ಚೀನ ದೇಶದಲ್ಲಿ ತಮ್ಮ ಮಕ್ಕಳನ್ನು ಸಾಲಿಗೆ ಹಾಕುವಾಗ ಹುಡುಗನ ಪಾಲಕರಿಪ್ಪರ ನಡುವೆ ನಡೆಯುವ ಸಂಭಾಷಣವು ಒಳ್ಳೇ ಸೋಜಿಗಗೊಳಿಸುವಂಥಾದ್ದಿರುತ್ತದೆ. ಅದರಿಂದ ಅದನ್ನು ಇಲ್ಲಿ ಬರೆದಿದ್ದೇವೆ. ತಂದೆಯು ತನ್ನ ಮಗನನ್ನು ಕರೆದುಕೊಂಡು ಸಾಲೇವನೆಗೆ ಬಂದು ಹೊರಬದಿಯದೊಂದು ಕೋಣೆ ಅಥವಾ ಪಡಸಾಲಿಯಲ್ಲಿ ಕೂತು ಅಧ್ಯಾಪಕನಿಗೆ ತಾನು ಬಂದ ಸುದ್ದಿಯನ್ನು ತಿಳಿಸುವನು. ಕೂಡಲೆ ಮುಖ್ಯಾಧ್ಯಾಪಕನು ಅಲ್ಲಿಗೆ ಬಂದು, ಬಂದ ಗೃಹಸನನು ಆದರಿಸಿ ಅಸನ ಕೊಟ್ಟು ಕುಳ್ಳಿರಿಸಿ ತಾನೂ ಕುಳಿ

ಪುಕೊಳ್ಳುವನು. ಬಳಿಕ ಚೆಹಾಪಾನ, · ತಂಬಾಕಸೇವ
ನಗಳಾದ ಬಳಿಕ ಹುಡುಗನ ತಂದೆಗೆ ಶಿಕ್ಷಕನು ತಮ್ಮ
ಸನ್ಮಾನ್ಯ' ನಾಮವೇನು? ಎಂದು ಕೇಳುವನು ಅದಕ್ಕೆ
ಅವನು—ನನ್ನ ಷ್ಟುಲ್ಲಕ ನಾಮವು ವಂಗ (ಆ ದೇಶದ ಹೆಸ
ರು) ಎಂದು ಹೇಳುವನು. ಬಳಿಕ ಇದೇ ಪ್ರಶ್ನೆಯನ್ನು ಶಿಕ್ಷ
ಕನಿಗೆ ತಂದೆಯು ಇವೇ ಶಬ್ದಗಳಿಂದಲೇ ಕೇಳುವನು. ಉ
ತ್ತರವಾದರೂ ಮೇಲಿನ ಉತ್ತರದ ಶಬ್ದಗಳುಳ್ಳದ್ದೇ ಹೊತ
ಡುವದು. ಪ್ರಶ್ನವಾಯು ಕೆಳಗೆ ಬರೆದಂತೆ ಸಂಭಾಷಣವಾ
ಗುವದು.

ಶಿಕ್ಷಕನು—ನೀವು ಎಷ್ಟು ಅಂಕುರಗಳನ್ನು ನೆಟ್ಟಿರುವಿರಿ?
(ವಯಸ್ಸೆಷ್ಟೆಂಬ ಅರ್ಥವು).

ತಂದೆಯು—ನಾನು ಮೂವತ್ತು (ಇದ್ದಷ್ಟು) ವರ್ಷಗಳ
ನ್ನು ವ್ಯರ್ಥ ಕಳೆದೆನು.

ತಂದೆಯು—ನಿಮಗೆ ಮಕ್ಕಳೆಷ್ಟು?

ಶಿಕ್ಷಕನು—ನಾಲ್ಕು ಕುನ್ನಿಗಳಿವೆ (ಇದ್ದಷ್ಟು)

ತಂ—ಸಾಲಿಯಲ್ಲಿ ಹುಡುಗರೆಷ್ಟು?

ಶಿ—ಸಾಲಿಯಲ್ಲಿ ನನಗೆ ನೂರು ಮಂದಿ ಸಹೋದರರಿದ್ದಾ
ರೆ. (ಇದ್ದಷ್ಟು)

ಇಷ್ಟಾದ ಬಳಿಕ ಮೂಲಿಯಲ್ಲಿ ಕುಳಿತ ಹುಡುಗನು ಎದು
ಬಂದು ಶಿಕ್ಷಕನಿಗೆ ನಮಸ್ಕರಿಸುವನು. ಬಳಿಕ ಅವನ ಊ
ಟಉಪಚಾರದ ವ್ಯವಸ್ಥೆಯನ್ನು ಗೊತ್ತುಪಡಿಸಿ ಈ ನನ್ನ
ಕುನ್ನಿಯನ್ನು ನಿಮ್ಮ ಅಧೀನಕ್ಕೆ ಕೊಡುತ್ತೇನೆ ಎಂದು ಹೇಳಿ
ತಂದೆಯು, 'ಹೋಗುತ್ತೇನೆ, ಹೋಗುತ್ತೇನೆ' ಎಂದು ಗಟ್ಟಿ
ಯಾಗಿ ಒದರುತ್ತ ಮನೆಗೆ ಸಾಗುವನು. ಶಿಕ್ಷಕನು ಅವನಿ
ಗೆ ಕೇಳಿಸುವ ತನಕ · ಮೆಲ್ಲಗೆ ಸಾಗಿರಿ, ಮೆಲ್ಲಗೆ ಸಾಗಿರಿ,
ಎಂದು ಒಂದೇ ಸವನೇ ಅನ್ನುತ್ತಲೇ ಇರಬೇಕು.

ನಮ್ಮ ಇಲಾಖೆಯ ಗವರ್ನರರಾದ ಲಾರ್ಡ್ ನಾರ್ಥ
ಕೋಟ ದೊರೆಗಳು ಆಸ್ಟ್ರೇಲಿಯಾದ ಗವರ್ನರ್ ಜನರಲ್
ರಾಗಿ ಹೋಗುವರು. ನಮ್ಮ ಇಲಾಖೆಗೆ ಯಾರು ಬರುವ
ರೆಂಬುದು ಇನ್ನು ಗೊತ್ತಾಗಿಲ್ಲ.

ಪೆಕ್ಕೂ, ಮಾಧುರ್ಯಕ್ಕೂ, ಅರಸನು ಮೆಚ್ಚಿ ಅವನಿಗೆ 'ಅಂಧ್ರಕವಿತಾಪಿತಾಮಹ' ನೆಂಬ ಪದವಿಯನ್ನು ಕೊಟ್ಟನು.

ತೆಲಗು ಭಾಷೆಯಲ್ಲಿ ಮುಸಲ್ಮಾನೀ ಶಬ್ದಗಳನ್ನು ಸೇರಿಸಲಿಕ್ಕೆ ಹತ್ತಿದವರಲ್ಲಿ ಇವನೇ ಮೊದಲಿಗನು. ಕೃಷ್ಣರಾಯನು ಶಾಲಿವಾಹನ ಶಕದ ೧೪೪೬ ರಲ್ಲಿ ಮಡಿಯಲು, ಇವನು ಕಾವ್ಯರೂಪದಿಂದ ಅರಸನ ಮರಣದಿಂದುಂಟಾದ ವಿಯೋಗದುಃಖವನ್ನು ಬಹು ಸರಸಾಗಿ ವ್ಯಕ್ತಗೊಳಿಸಿದ್ದಾನೆ. ರಾಜನು ತನಗೆ ಆಶ್ರಯದಾತನಾಗಿದ್ದನೆಂದು ಇವನು ಅವನನ್ನು ಹೊಗಳಿರುವದಿಲ್ಲ. ತೆಲಗು ಭಾಷೆಗೂ, ತೆಲಗೂ ಕವಿಮಂಡಲಕ್ಕೂ, ತೆಲಗು ಪ್ರಜೆಗಳಿಗೂ ರಾಜನು ಮಾಡಿದ ಉಪಕಾರವನ್ನು ನೆನೆನೆನಿಸಿ ಕರುಣಾರಸವು ತುಂಬಿ ಸೂಸುವಂಥ ಈ ವಿಲಾಪ ಕಾವ್ಯವನ್ನು ರಚಿಸಿದನು. ಕೃಷ್ಣರಾಯನ ತರುವಾಯ ಅವರ ಅಳಿಯನಾದ ರಾಮರಾಜನೆಂಬವನು ಪಟ್ಟವೇರಿದನು. ಇವನಾದರೂ ಈ ಕವಿಗೆ ವಿಶೇಷವಾಗಿ ಮಾನಕೊಡುತ್ತಿದ್ದನು. ಕೃಷ್ಣರಾಯರೂ ಈ ರಾಮರಾಜನೂ ಈ ಕವಿಗೆ ಅನೇಕ ಅಗ್ರಹಾರಗಳನ್ನು ಹಾಕಿಕೊಟ್ಟಿದ್ದರು. ಅವುಗಳಲ್ಲಿ ಕೊಕಟವೆಂಬ ಅಗ್ರಹಾರವೇ ಮುಖ್ಯವಾದದ್ದು. ಇವನು ಜನ್ಮತಃ ಸ್ಮಾರ್ತನಿದ್ದರೂ ಅದ್ವೈತ ಮತವಾದಿಯಾಗಿದ್ದನು. ಇವನು ಕೃಷ್ಣರಾಯರು ಮಡಿದ ಸ್ವಲ್ಪ ದಿವಸಗಳಲ್ಲಿಯೇ ಅಂದರೆ ಕ್ರಿಸ್ತಶಕದ ೧೫೬೫ ರಲ್ಲಿ ಪೋರನಾಳೆಂಬ ತನ್ನ ಊರಲ್ಲಿಯೇ ಮರಣ ಹೊಂದಿದನು.

ಚೀನ ದೇಶದಲ್ಲಿ ತಮ್ಮ ಮಕ್ಕಳನ್ನು ಸಾಲಿಗೆ ಹಾಕುವಾಗ ಹುಡುಗನ ಪಾಲಕಶಿಕ್ಷಕರ ನಡುವೆ ನಡೆಯುವ ಸಂಭಾಷಣವು ಒಳ್ಳೇ ಸೋಜಿಗಗೊಳಿಸುವಂಥಾದ್ದಿರುತ್ತದೆ. ಅದರಿಂದ ಅದನ್ನು ಇಲ್ಲಿ ಬರೆದಿದ್ದೇವೆ. ತಂದೆಯು ತನ್ನ ಮಗನನ್ನು ಕರೆದುಕೊಂಡು ಸಾಲೇಮನೆಗೆ ಬಂದು ಹೊರಬದಿಯದೊಂದು ಕೋಣೆ ಅಥವಾ ಪಡಸಾಲಿಯಲ್ಲಿ ಕೂತು ಅಧ್ಯಾಪಕನಿಗೆ ತಾನು ಬಂದ ಸುದ್ದಿಯನ್ನು ತಿಳಿಸುವನು. ಕೂಡಲೆ ಮುಖ್ಯಾಧ್ಯಾಪಕನು ಅಲ್ಲಿಗೆ ಬಂದು, ಬಂದ ಗೃಹಸ್ಥನನ್ನು ಆದರಿಸಿ ಆಸನ ಕೊಟ್ಟು ಕುಳ್ಳಿರಿಸಿ ತಾನೂ ಕುಳಿ

ಹುಕೊಳ್ಳುವನು. ಬಳಿಕ ಚಹಾದಾನೆ, · ತೆಂಬಾಕಸೇವೆ ನಗಳಾದ ಬಳಿಕ ಹುಡುಗನ ತಂದೆಗೆ ಶಿಕ್ಷಕನು ತಮ್ಮ ಸನ್ಮಾನ್ಯ ನಾಮವೇನು? ಎಂದು ಕೇಳುವನು ಅದಕ್ಕೆ ಅವನು—ನನ್ನ ಷ್ಟುಲ್ಲಕ ನಾಮವು ವಂಗ (ಆ ದೇಶದ ಹೆಸರು) ಎಂದು ಹೇಳುವನು. ಬಳಿಕ ಇದೇ ಪ್ರಶ್ನೆಯನ್ನು ಶಿಷ್ಟಕನಿಗೆ ತಂದೆಯು ಇವೇ ಶಬ್ದಗಳಿಂದಲೇ ಕೇಳುವನು. ಉತ್ತರವಾದರೂ ಮೇಲಿನ ಉತ್ತರದ ಶಬ್ದಗಳುಳ್ಳದ್ದೇ ಹೊತಡುವದು. ತರುವಾಯ ಕೆಳಗೆ ಬರೆದಂತೆ ಸಂಭಾಷಣವಾಗುವದು.

ಶಿಕ್ಷಕನು—ನೀವು ಎಷ್ಟು ಅಂಕುರಗಳನ್ನು ನೆಟ್ಟಿರುವಿರಿ? (ವಯಸ್ಸೆಷ್ಟೆಂಬ ಅರ್ಥವು).

ತಂದೆಯು—ನಾನು ಮೂವತ್ತು (ಇದ್ದಷ್ಟು) ವರ್ಷಗಳನ್ನು ವ್ಯರ್ಥ ಕಳೆದೆನು.

ತಂದೆಯು—ನಿಮಗೆ ಮಕ್ಕಳೆಷ್ಟು?

ಶಿಕ್ಷಕನು—ನಾಲ್ಕು ಕುನ್ನಿಗಳಿವೆ (ಇದ್ದಷ್ಟು)

ತಂ—ಸಾಲಿಯಲ್ಲಿ ಹುಡುಗರೆಷ್ಟು?

ಶಿ—ಸಾಲಿಯಲ್ಲಿ ನನಗೆ ನೂರು ಮಂದಿ ಸಹೋದರರಿದ್ದಾರೆ. (ಇದ್ದಷ್ಟು)

ಇಷ್ಟಾದ ಬಳಿಕ ಮೂಲಿಯಲ್ಲಿ ಕುಳಿತ ಹುಡುಗನು ಎದುಬಂದು ಶಿಕ್ಷಕನಿಗೆ ನಮಸ್ಕರಿಸುವನು. ಬಳಿಕ ಅವನ ಊಟಉಪಚಾರದ ವ್ಯವಸ್ಥೆಯನ್ನು ಗೊತ್ತುಪಡಿಸಿ ಈ ನನ್ನ ಕುನ್ನಿಯನ್ನು ನಿಮ್ಮ ಆಧೀನಕ್ಕೆ ಕೊಡುತ್ತೇನೆ ಎಂದು ಹೇಳಿ ತಂದೆಯು, 'ಹೋಗುತ್ತೇನೆ, ಹೋಗುತ್ತೇನೆ' ಎಂದು ಗಟ್ಟಿಯಾಗಿ ಒದರುತ್ತ ಮನೆಗೆ ಸಾಗುವನು. ಶಿಕ್ಷಕನು ಅವನಿಗೆ ಕೇಳಿಸುವ ತನಕ · ಮೆಲ್ಲಗೆ ಸಾಗಿರಿ, ಮೆಲ್ಲಗೆ ಸಾಗಿರಿ, ಎಂದು ಒಂದೇ ಸವನೇ ಅನ್ನುತ್ತಲೇ ಇರಬೇಕು.

ನಮ್ಮ ಇಲಾಖೆಯ ಗವರ್ನರರಾದ ಲಾರ್ಡ್ ನಾರ್ಥ್ ಕೋಟ ದೊರೆಗಳು ಆಸ್ಟ್ರೇಲಿಯಾದ ಗವರ್ನರ್ರ ಜನರಲ್ ರಾಗಿ ಹೋಗುವರು. ನಮ್ಮ ಇಲಾಖೆಗೆ ಯಾರು ಒರುವರೆಂಬುದು ಇನ್ನು ಗೊತ್ತಾಗಿಲ್ಲ.

ಕಾಲೇಜದ ವಿದ್ಯಾರ್ಥಿಗಳಲ್ಲಿಯೂ ಪ್ರಾಥಮಿಕ ಶಾಲೆಯ ಶಿಕ್ಷಕರಲ್ಲಿಯೂ ಶಿಕ್ಷಣಕಲೆಯ ನೈಪುಣ್ಯವು ಉಂಟಾಗಬೇಕೆಂದು, ಎರಡು ಸಾವಿರ ರೂಪಾಯಿಗಳನ್ನು ಕೂಡಿಸಿ, ಅವುಗಳ ಬಡ್ಡಿಯಲ್ಲಿ ಎರಡು ಪದಕಗಳನ್ನು ಮಾಡಿಸಿ ಪ್ರತಿವರುಷ ಈ ಕಲೆಯಲ್ಲಿ ಪ್ರಾವೀಣ್ಯವನ್ನು ತೋರಿಸಿದವರಿಗೆ ವಾರಿತೋಷಕವಾಗಿ ಕೊಡಬೇಕೆಂದು ಕಾಲೇಜದ ಪ್ರಿನ್ಸಿಪಾಲರು ಆಲೋಚಿಸುತ್ತಾರೆ.

ಧಾರವಾಡ ಟ್ರೇನಿಂಗ ಕಾಲೇಜದ ಸರಟಿಫಿಕೇಟು ಪರೀಕ್ಷೆಯು ಸಪ್ತಂಬರ ೨೮ನೇ ತಾರೀಖಿಗೂ, ಪ್ರವೇಶ ಪರೀಕ್ಷೆಯು ಹದಿನೇಳನೇ ನವಂಬರದ ದಿವಸವೂ ಆಗುವದು.

ಪಶುಪಕ್ಷಿಗಳ ಆಯುಷ್ಯಮರ್ಯಾದೆಯು—ಈ ಸಂಬಂಧದಿಂದ ಒಬ್ಬ ಪ್ರಾಣಿಶಾಸ್ತ್ರಜ್ಞನು ಅನೇಕ ಶೋಧಗಳಿಂದ ಮಾಡಿದ ನಿರ್ಣಯವು ಹ್ಯಾಗಂದರೆ—ಕುದುರೆಯು ಸುಮಾರು ೩೫ ವರ್ಷ, ಕೋಡುಳ್ಳ ಪ್ರಾಣಿಗಳು ಸರಾಸರಿ ೩೦ ವರ್ಷ, ನಾಯಿಗಳು ೨೫ ವರ್ಷ, ಕುರಿ, ಅಡು, ಬೆಕ್ಕು, ಹಂದಿಗಳು ೧೫ ವರ್ಷ ಬಾಳುವವು. ಶಹಾಮೃಗವು ೩೦ ವರ್ಷ, ಗುಬ್ಬಿ ೨೫ ವರ್ಷ, ಕಾಗಿ ನೂರು ವರ್ಷ ಬಾಳುವವು. ನಮ್ಮ ದೇಶದವರು ಕಾಗಿಗೆ (ತಿತ್ತಿರಿ) ಎಂದು ಹೆಸರು ಇಟ್ಟಿದ್ದಲ್ಲದೆ ಹದ್ದು ಸಾವಿರ ವರ್ಷ ಬಾಳುವವೆಂದು ಹೇಳುತ್ತಾರೆ. ಈ ಪಾಶ್ಚಿಮಾತ್ಯ ಪಂಡಿತನು ಆನೆಗಳು ನೂರು ವರ್ಷಕ್ಕಿಂತ ಹೆಚ್ಚು ಕಾಲ ಬಾಳುತ್ತವೆಂದು ಹೇಳುತ್ತಾನೆ.

ಇಪ್ಪತ್ತನೆಯ ಶತಕದಲ್ಲಿ ಉಂಟಾಗುವ ಹೊಸ ಹೊಸ ಶೋಧಗಳ ನೆಲೆಯೇ ಹತ್ತದಂತಾಗಿದೆ ಫೋನೋಗ್ರಾಫದ ಯೋಗದಿಂದ ಮನುಷ್ಯನ ಧ್ವನಿ, ಮಾತು, ಹಾಡುಗಳ ಪ್ರತಿಧ್ವನಿಯಾಗುತ್ತದೆ. 'ಕ್ಷ' ಕಿರಣಗಳ ಯೋಗದಿಂದ ಪ್ರಾಣಿಶರೀರದ ಒಳಗಿನ ಭಾಗದ ಸ್ಥಿತಿಯನ್ನು ಕಂಡುಕೊಳ್ಳುವದಕ್ಕೆ ಅನುವಾಗಿರುತ್ತದೆ. ಇದರಂತೆ ಅನೇಕಶೋಧಗಳು ಉಂಟಾಗಿರುತ್ತವೆ ಆಗರೆ ಮೊನ್ನೆ ಮೊನ್ನೆ ಇತಲಿ ದೇಶದ ಜೆನೋವಾ ಪಟ್ಟಣದವನಾದ ಕಮ್ಹೇಲಿಯರಪಿನೋ ಎಂಬವನೂ

ಬ್ಬ ಭೌತಿಕ ಶಾಸ್ತ್ರಜ್ಞನು ಸಮುದ್ರದೊಳಗಿಂದ ಮುಣುಗಿ ಸಾಗುವದೊಂದು ಹಡಗವನ್ನು ಈ ಮೊದಲೇ ರಚಿಸಿದ್ದನು. ಈಗ ಇದೇ ಪಂಡಿತನು ಎರಡು ಅದ್ಭುತ ಯಂತ್ರಗಳನ್ನು ರಚಿಸಿದ್ದಾನೆ. ಅವ್ರಗಳಲ್ಲಿ ಒಂದಕ್ಕೆ ಹಾಯಡ್ರೋಸ್ಕೋಪ ವೆಂದೂ ಎರಡನೇದಕ್ಕೆ ಎಲಿವ್ಹೇಟರವೆಂದೂ ಹೆಸರುಗಳುಂ ಟು. ಮೊದಲನೆಯ ಯಂತ್ರವು ದುರ್ಬೀನಿನಂತೆ ಒಂದು ಕೊಳವೆ ಇದ್ದು, ಅದರಲ್ಲಿ ಬೇರೆ ಬೇರೆ ತರದ ಅನೇಕ ಕನ್ನ ಡಿಗಳನ್ನು ಕೂಡಿಸಿದ್ದಾನೆ. ಇದರ ಯೋಗದಿಂದ ಸಮುದ್ರ ದ ತಳದೊಳಗಿನ ಚಿಕ್ಕ ದೊಡ್ಡ ಎಲ್ಲ ಬಿಡವೆಗಳು ದೃಷ್ಟಿ ಗೋಚರವಾಗುತ್ತವೆ. ಈ ಯಂತ್ರವನ್ನು ಹಗಲಲ್ಲಿ ಅಥ ವಾ ಇರುಳಲ್ಲಿ ಉಪಯೋಗಿಸಿಕೊಳ್ಳಬಹುದು. ಇಷ್ಟೇ ಅ ಲ್ಲ, ಒಳಗಿನ ಬಿಡವೆಯ ಆಕಾರ ವರ್ಣಗಳು ಸಹ ಯಥಾ ರ್ಥವಾಗಿ ಕಾಣುತ್ತವೆ. ಮತ್ತು ಇದನ್ನು ಹಡಗಕ್ಕೆ ಜೋ ಡಿಸಿದರೆ ಸಮುದ್ರದೊಳಗಿನ ಮೊರಡಿಗಳು ಸ್ಪಷ್ಟವಾಗಿ ಕಾ ಣುತ್ತವೆ ಕಡಲೊಳಗಿನ ಪದಾರ್ಥಗಳ ಪ್ರತಿಬಿಂಬವನ್ನು ಸಹ ಈ ಯಂತ್ರದ ಸಹಾಯದಿಂದ ಕಂಡುಕೊಳ್ಳಬಹುದು. ಎರಡನೆಯ ಯಂತ್ರದಿಂದ ಮುತ್ತುಗಳಿಂದ ಹಡಗದ ವರೆಗಿ ನ ಯಾವತ್ತು ಚಿಕ್ಕ ದೊಡ್ಡ ಪದಾರ್ಥಗಳನ್ನು ಮೇಲಕ್ಕೆ ತೆಗೆಯಲಿಕ್ಕೆ ಬರುತ್ತದೆ. ಇವುಗಳ ಕರ್ತನು ತನ್ನ ಈ ಯಂತ್ರಗಳ ಪ್ರಯೋಗವನ್ನು ಇತಲಿಯ ರಾಜ್ಯಾಧಿಕಾರಿಗಳಿ ಗೆ ತೋರಿಸಿದನು.

ನವ್ಯ ಬಾದಶಹರಾದ ಎಡ್ವರ್ಡ ದೊರೆಗಳಿಗೂ ಜರ್ಮ ನಿಯ ಬಾದಶಹನಿಗೂ ಇವನು ತನ್ನ ಯಂತ್ರಗಳ ಪ್ರಯೋ ಗವನ್ನು ತೋರಿಸಬೇಕೆಂದು ಹವಣಿಸುವನು. ಈ ಯಂತ್ರ ದಿಂದ ಎರಡು ಸಾವಿರ ವರ್ಷಗಳ ಮೊದಲು ಕಡಲೊಳಗೆ ಮುಳುಗಿದ ಗ್ರೀಕರದೊಂದು ಹಡಗದೊಳಗಿನ ಮೌಲ್ಯ ವಸ್ತುಗಳ ಫೋಟೋಗಳನ್ನು ತೆಗೆದುಕೊಂಡಿದ್ದಾನೆ. ಹಾ ಗೂ ಈ ಹಡಗವನ್ನಾದರೂ ಬೇಗನೇ ಮೇಲಕ್ಕೆ ತೆಗೆಯುವ ವನಿದ್ದಾನೆ. ಈ ಯಂತ್ರಗಳ ಕಾರ್ಯವು ನಿರಾತಂಕವಾಗಿ ಸಾಗಿದರೆ ರತ್ನಾಕರನೆನಿಸುವಂಥ, ಗಾಂಭೀರ್ಯಕ್ಕೆ ಉಪ

ಮೀಯುನೆನಿಸುವಂಥ ಸಮುದ್ರರಾಜನು ಮಾನವನ ಕೈಸೇರಿದನೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ನೋಡಿರಿ ಮಾನವನ ಬುದ್ಧಿಚಾತುರ್ಯವು ಎಷ್ಟು ಘನವಾದದ್ದು! ಈ ಪಂಡಿತನ ವಯಸ್ಸು ೫೦ ವರ್ಷಕ್ಕೆ ಮಿಕ್ಕಿಲ್ಲ.

ಮಹಾಸಾಗರಗಳ ವಿಶಾಲತ್ವವು—ಮಹಾಸಾಗರಗಳಲ್ಲಿ ಅತಿ ವಿಶಾಲವಾದ ಫಾಸಿಫಿಕ ಮಹಾಸಾಗರವು ೬೪ ಕೋಟಿ, ಅಟ್ಲಾಂಟಿಕವು ೩ ಕೋಟಿ, ಉಳಿದ ಮೂರು ಕೂಡಿ ೪–೫ ಕೋಟಿ ಚೌಕ ಮೈಲು ಭೂಪೃಷ್ಠವನ್ನು ವ್ಯಾಪಿಸಿರುತ್ತವೆ. ಫಾಸಿಫಿಕದಲ್ಲಿ ೯೭೦೦ ಪರಾರ್ಧ ಟನ್ ನೀರು ಅದೆ. ಅಟ್ಲಾಂಟಿಕದಲ್ಲಿ ೩೫ ಪರಾರ್ಧ ಟನ್ ನೀರು ಇರುತ್ತದೆ. ಒಂದು ಮೈಲು ಉದ್ದ ಒಂದು ಮೈಲು ಅಗಲ ಒಂದು ಮೈಲು ಆಳವಾಗಿರುವ ಕೆರೆಗಳನ್ನು ಅಗಿಸಿ ಅವುಗಳಲ್ಲಿ ಫಾಸಿಫಿಕ ಮಹಾಸಾಗರದೊಳಗಿನದೊಂದರೊಳಗಿನ ನೀರಿನಿಂದಲೇ ತುಂಬಿಸತ್ತಿದರೆ ನಾಲ್ಕುಸೊರಾನಾಲ್ವತ್ತು ವರ್ಷಗಳು ಹಿಡಿಯುವವು.

ಉದ್ಭಿಜ್ಜ ಪ್ರಾಣಿಜ ವರ್ಗದ ಹಲವು ಒಡವೆಗಳು

ಉದ್ಭಿಜ್ಜ ವರ್ಗವು.

ಸೃಷ್ಟಪದಾರ್ಥಗಳಲ್ಲಿ ಸಚೇತನವೆಂತಲೂ ಅಚೇತನವೆಂತಲೂ ಎರಡು ಮುಖ್ಯ ವರ್ಗಗಳುಂಟು. ಸಚೇತನ ವರ್ಗದಲ್ಲಿ ಉದ್ಭಿಜ್ಜಗಳೆಂತಲೂ ಪ್ರಾಣಿಜಗಳೆಂತಲೂ ಬೇರೆ ಎರಡು ಒಳಭೇದಗಳಿರುತ್ತವೆ. ಅಚೇತನ ವರ್ಗದ ಒಡವೆಗಳಿಗೆ ಜೀವವೂ ಇಂದ್ರಿಯಗಳೂ ಇರುವದಿಲ್ಲ. ಆದರೆ ಸಚೇತನ ವರ್ಗದ ಒಡವೆಗಳು ಸಜೀವ ಸೇಂದ್ರಿಯಗಳಾಗಿರುವವು. ನಾವು ಸದ್ಯಕ್ಕೆ ಅಚೇತನ ವರ್ಗವನ್ನು ಬಿಟ್ಟು ಸಚೇತನ ವರ್ಗದ ಹಲವು ಬಳಿಕೆಯೊಳಗಿನ ಒಡವೆಗಳನ್ನು ಟಿಪ್ಪಿಸಲಾರಂಭಿಸುತ್ತೇವೆ. ಮೊದಲು ಉದ್ಭಿಜ್ಜ ವರ್ಗದ ಕಡೆಗೆ ಹೊರಳುವ.

ವೃಕ್ಷಗಳ ರಚನೆಯೂ ಜೀವನಕಾರ್ಯವೂ ಇದ್ದಂತೆ ಉದ್ಭಿಜ ವರ್ಗದ ಪದಾರ್ಥಗಳ ಸ್ವರೂಪವೂ ಪ್ರಯೋಜನ

ರೂ ಇರುವದರಿಂದ ನಾವು ಮೊದಲು ವೃಕ್ಷಗಳ ಸಂಬಂಧದ
ಕಲವು ಸಾಮಾನ್ಯ ಸಂಗತಿಗಳನ್ನು ಅರಿತುಕೊಳ್ಳುವೆವು ಅವ
ಶ್ಯವು. ಆದ್ದರಿಂದ ಗಿಡಗಳ ಸಾಧಾರಣ ವರ್ಣನೆಯನ್ನು
ನೊದಲಿಗೆ ಬರೆದು ಬಳಿಕ ಬಿಂದೊಂದು ಗಿಡವನ್ನು ಬಣ್ಣಿಸ
ತೊಡಗುವೆವು.

ವೃಕ್ಷಗಳ ಆಕಾರವು—ಉದ್ಭಿಜ್ಜಗಳೆಲ್ಲ ಬಂದೇ ತರದ ಆ
ಕಾರವೂ ಎತ್ತರದವೂ ಇರುವದಿಲ್ಲ. ಕೆಲವು ಹೆಮ್ಮರಗ
ಳಂತೆ ಬಾಂಡಳವನ್ನು ವ್ಯಾಪಿಸಿರುತ್ತವೆ; ಹಲವು ಕುಂಟಿಗಳಾ
ಗಿ ನೆಲವನ್ನು ಮುಚ್ಚಿರುತ್ತವೆ. ಕೆಲವಂತೂ ತೀರ ಹುಲ್ಲಿನಂ
ತಿರುತ್ತವೆ. ಆದ್ದರಿಂದ ಉದ್ಭಿಜ್ಜಗಳಲ್ಲಿ ಮರಪೆಂತಲೂ ಕುಂ
ಟಿಯಿಂತಲೂ ಹುಲ್ಲಿಂತಲೂ ಮೂರು ತರಗಳನ್ನು ಮಾಡಬ
ಹುದು.

ವಾಡಿಕೆಯಾಗಿ ಉದ್ಭಿಜ್ಜಗಳೆಲ್ಲ ಹಸರು ಬಣ್ಣದಿಂದ ಕಂ
ಗೊಳಿಸುತ್ತವೆ. ಅದರೆ ಆಳಂಬಿಯಿಂಥ ಕಲವು ವನಸ್ಪತಿಗ
ಳು ನಸುಗೆಂಪಾಗಿರುತ್ತವೆ, ಇಬಲ್ಲದೆ ಗಿಡಗಳ ಬೊಡ್ಡಿಯ
ಮೇಲೆಯೂ ಗೋಡೆಗಳ ಮೇಲೆಯೂ ಚಪ್ಪರದ ಮೇಲೆ
ಯೂ ಕಾಣಿಸುವ ಪಾವಸಿಯಂಥ ಒಡವೆಯಾದರೂ ಉದ್ಭಿ
ಜ್ಜವರ್ಗದ್ದೇ ಇರುತ್ತದೆ. ಇದು ಒಮ್ಮೆ ಹಸರು, ಒಮ್ಮೆ
ನಸುಗೆಂಪು, ಬೇರೊಂದು ಸಾರೆ ಹಳದಿಯ ಬಣ್ಣದಿಂದ ಕಣ್ಣಿ
ಗೆ ಬೀಳುತ್ತದೆ. ಇದಲ್ಲದೆ ನಮ್ಮ ಒರಿಗಣ್ಣಿಗ ಕಾಣಿಸದ
ಕೇವಲ ಸೂಷ್ಮದರ್ಶಕ ಯಂತ್ರದ ಸಹಾಯದಿಂದಲೇ
ಗೋಚರವಾಗುವ ವನಸ್ಪತಿಗಳೆಷ್ಟೋ ಉಂಟು. ತಂಗಳ
ರೊಟ್ಟಿ ಬುತ್ತಿಗಳೂ ಗಂಟಿನೊಳಗ ಕಟ್ಟಿಟ್ಟ ಅರಿವೆ ಹೊತ್ತಿ
ಗೆಗಳೂ ತಂಪಾದ ಮೂಲೆಯಲ್ಲಿಟ್ಟ ತೊಗಲಿನ ಸಾಮಾನುಗ
ಳೂ ಬೂಸಳುಗಟ್ಟಿದ್ದನ್ನು ಎಲ್ಲರೂ ಬಲ್ಲರು. ಆ ಬೂಸೆ
ವಾದರೂ ಉದ್ಭಿಜ್ಜ ಕೋಟಿಯೊಳಗೇ ಎಣಿಸಲ್ಪಡುತ್ತದೆ
ಆದರೆ ನಾವು ಇಂಥ ಸೂಷ್ಮವನಸ್ಪತಿಗಳ ಗೋಜಿಗೆ ಹೋ
ಗದೆ ವಾಡಿಕೆಯಾಗಿ ಮರಗಳೊಳಗೆ ಎಣಿಸಲ್ಪಡುವ ಉದ್ಭಿ
ಜ್ಜಗಳ ವಿಷಯವಾಗಿಯೇ ಆಲೋಚಿಸುವಾ. ಮರಗಳ ಮೂ

ಖ್ಯಾವಯಗಳು ಏಳುಉಂಟು. ೧ ಜೇರು ೨ ಬೊಡ್ಡಿ ಟೊಂಗೆ ೪ ಎಲೆ ೫ ಹೂವು ೬ ಕಾಯಿ ೭ ಬೀಜ.

ವನಸ್ಪತಿಗಳ ಬಾಳಿಕೆಯು—ಪ್ರಾಣಿಗಳಂತೆ ವನಸ್ಪತಿಗಳಿಗೂ ಹಟ್ಟು, ಬೆಳಿಗೆ, ಎಳೆಯತನ, ಹರೆಯ ಮುಪ್ಪು, ಸಾವು ಮುಂತಾದ ಅವಸ್ಥೆಗಳುಂಟು. ಹಲವು ವನಸ್ಪತಿಗಳು ಒಂದೇ ದಿವಸ ಬಾಳುತ್ತವೆ. ಅಂದರೆ ಅವು ಮುಂಜಾನೆ ಹುಟ್ಟಿ ಸಂಜೆಗೆ ಸಾಯುತ್ತವೆ. ಇವುಗಳಿಗೆ ದಿನಾಯು ವನಸ್ಪತಿಗಳೆಂಬ ಹೆಸರು. ಉ. ಮಶ್ರ್ರ. ಜೇರೆ ಕೆಲವು ನಿಯಮಿತ ಋತುವಿನಲ್ಲಿ ಬಹ್ಮೆ ಹೂವಾಗಿ ಕಾತು ಹಣ್ಣಾದ ಬಳಿಕ ಸಾಯುತ್ತವೆ. ಇವುಗಳಿಗೆ ವರ್ಷಾಯು ವನಸ್ಪತಿಗಳನ್ನುವರು. ಉ. ಗೋಧಿ, ಬತ್ತ, ಕಡ್ಲಿ, ಮು. ಹಲವು ಎರೆಡು ವರ್ಷಗಳ ವರೆಗೆ ಬಾಳುತ್ತವೆ. ಅವುಗಳಿಗೆ ದ್ವಿವರ್ಷಾಯು ವನಸ್ಪತಿಗಳೆನ್ನುವರು. ಉ. ಮೂಲಂಗಿ ಕೆಲವು ನಿಯಮಿತ ಋತುವಿನಲ್ಲಿ ಫಲಿಸುತ್ತ ಬಹು ವರ್ಷ ಬಾಳುವದರಿಂದ ಅವ್ರಗಳಿಗೆ ಬಹುವರ್ಷಾಯುವನಸ್ಪತಿಗಳೆಂದೆನ್ನುವರು, ಉ. ಮಾವು, ಹಲಸು.

ಹವೆ, ನೀರು, ಶಕ್ತಿ, ಬೆಳಕು, ನಿರಿಂದ್ರಿಯ ದ್ರವ್ಯಗಳು ಇವೇ ವನಸ್ಪತಿಗಳ ಜೀವನಕ್ಕೆ ಬೇಕಾದ ಒಡವೆಗಳು ಇವುಗಳ ಹೊರ್ತು ಬದುಕುವ ವನಸ್ಪತಿಯು ಅಪರೂಪ ಉ. ಹಿವುರುಮಹ. ಇದು ಬರ್ಫದ ಮೇಲೆ ಹುಟ್ಟುವದು. ಎಪ್ಪೋ ಜಾತಿಯ ಆಳಂಬಿಗಳು ಕತ್ತಲಲ್ಲಿಯೇ ಬೆಳೆಯುತ್ತವೆ.

ಕೆಲವು ಪ್ರವಾಹಿ ಪದಾರ್ಥಗಳೂ ವಾಯುರೂಪಿ ಪದಾರ್ಥಗಳೂ ಉದ್ಭಿಜ್ಜಗಳಿಗೆ ಆಹಾರವಾಗಿರುತ್ತವೆ. ಉದ್ಭಿಜ್ಜಗಳು ತಮ್ಮ ಬೇರುಗಳಿಗಿರುವ ಸೂಕ್ಷ್ಮಛಿದ್ರಗಳ ಮಾರ್ಗವಾಗಿ ತಮ್ಮ ಆಹಾರವಾದ ವಾಯುರೂಪ ಪದಾರ್ಥವನ್ನೂ ಖನಿಜಪದಾರ್ಥವನ್ನೂ ನೀರನ್ನೂ ನೆಲದೊಳಗಿಂದ ಹಿರೀಕೊಳ್ಳುತ್ತವೆ. ನೀರು ಬೊಡ್ಡಿಗುಂಟ ಏರುತ್ತೇರುತ್ತ ಎಲೆಗಳಿಗೆ ಮುಟ್ಟುತ್ತದೆ. ಎಲೆಗಳು ಹವೆಯೊಳಗಿಂದ ಕಾರ್ಬಾನಿಕ್ ಆಸಿಡ್‌ಗ್ಯಾಸವನ್ನು ಎಳಕೊಂಡು ಸೂರ್ಯಪ್ರಕಾಶದ ಸಹಾಯದಿಂದ ಆ ವಾಯುವನ್ನು ಪ್ರಥಕ್ಕರಿಸಿ ಅದರೊಳಗಿನ

ಕಾರ್ಬೊನ್ನವನ್ನು ಹೀರಿಕೊಳ್ಳತ್ತದೆ. ಈ ಕಾರ್ಬೊನ್ನವು ಎಲೆಯೊಳಗಿನ ನೀರೊಡನೆ ಬೆರೆತುಕೊಂಡು ಸ್ಟಾರ್ಚ್ (ಪಿಷ್ಟ) ಎಂಬ ಹೊಸ ಪದಾರ್ಥವನ್ನು ಹುಟ್ಟಿಸುತ್ತದೆ. ಈ ಹೊಸ ಪದಾರ್ಥವು ಗಿಡಗಳ ಎಲ್ಲ ಭಾಗಗಳಲ್ಲಿಯೂ ಸೇರಿಕೊಂಡು ಗಿಡವನ್ನು ಬಲಿಸುತ್ತದೆ.

ಉದ್ದಿಜ್ಜಗಳ ಪುನರುತ್ಪತ್ತಿಯು ಎರಡು ತರವಾಗಿ ಉಂಟು. ೧ ಬೀಜದಿಂದ, ೨ ಕೊಲಮಿನಿಂದ ಅಥವಾ ಅಲೂಗಡ್ಡೆ ಕಬ್ಬುಗಳ ಮೇಲಿರುವ ಕಣ್ಣಿನಂಥ ಅವಯವದಿಂದ.

ಪ್ರಾಣಿವನಸ್ಪತಿಗಳಲ್ಲಿರುವ ಹೆಚ್ಚು ಕಡಿಮೆಯು—ವನಸ್ಪತಿಗಳು ಏನಿಜ ಪ್ರಾಣಿಜಕೋಟಿಗಳೆರಡರಲ್ಲಿಯೂ ಎಣಿಸಲ್ಪಡುತ್ತವೆ. ಇವುಗಳ ಪೋಷಣವು ನೆಲದಿಂದಾಗುತ್ತದೆ. ನಿರಿಂದ್ರಿಯ ಪದಾರ್ಥಗಳನ್ನು ಹೀರಿಕೊಂಡು ಅವುಗಳನ್ನು ಸೇಂದ್ರಿಯಗಳಾಗಿ ಮಾಡುವ ಶಕ್ತಿಯು ವನಸ್ಪತಿಗಳಿಲ್ಲುಂಟು. ಆದರೆ ಈ ಶಕ್ತಿಯು ಪ್ರಾಣಿಗಳಲ್ಲಿಲ್ಲ.

೬ ವನಸ್ಪತಿಗಳು ನೆಲ ಅಥವಾ ಯಾವದೊಂದು ಒಡವೆಯ ಮೇಲೆ ಹುಟ್ಟಿ ಅಲ್ಲಿಯೇ ನೆಲೆಗೊಂಡು ನಿಂತುಕೊಳ್ಳುತ್ತವೆ. ಅದರಿಂದ ಅವು ನಡೆದಾಡದೆ ನಿಂತಲ್ಲೇ ನಿಂತಕೊಂಡು ತಮ್ಮ ಆಹಾರವನ್ನು ಹವೆನೆಲಗಳೊಳಗಿಂದ ಬಾಹ್ಯಾಂಗಗಳ ದ್ವಾರದಿಂದ ಹೀರಿಕೊಳ್ಳತ್ತವೆ. ಆದರೆ ಪ್ರಾಣಿಗಳು ಆಹಾರಕೋಸ್ಕರ ನಾಲ್ಕೂ ಕಡೆಯಲ್ಲಿ ತೊಳಲಾಡಿ ದೊರಕಿಸಿ, ಅದನ್ನು ತಮ್ಮ ಹೊಟ್ಟೆಯಲ್ಲಿ ಇಟ್ಟುಕೊಳ್ಳತ್ತದೆ.

೭ ಪ್ರಾಣಿಗಳಂತೆ ವನಸ್ಪತಿಗಳಿಗೆ ಅನ್ನಸಂಚಯಕ್ಕಾಗಿ ಅನ್ನಾಶಯವೂ ರುಧಿರಾಭಿಸರಣಕ್ಕಾಗಿ ಹೃದಯವೂ ರಕ್ತವಾಹಿನಿಗಳೂ ಇರುವದಿಲ್ಲ.

೮ ವನಸ್ಪತಿಗಳು ಹವೆಯೊಳಗಿಂದ ಕಾರ್ಬಾನಿಕ್ ಆಸಿಡ್ ಗ್ಯಾಸವನ್ನು ಶೋಷಿಸಿಕೊಂಡು ಅದರೊಳಗಿನ ಕಾರ್ಬೊನ್ನವನ್ನು ನುಂಗಿ ಆಕ್ಸಿಜನವನ್ನು ಹೊರಬಿಡುತ್ತವೆ. ಆದರೆ ಪ್ರಾಣಿಗಳು ಇದಕ್ಕೆ ವಿಪರೀತವಾದ ಕಾರ್ಯವನ್ನು ಸಾಗಿಸುತ್ತವೆ.

೯ ವನಸ್ಪತಿಗಳಲ್ಲಿ ಕಾರ್ಬೊನ್ನು, ಆಕ್ಸಿಜನ್, ಹೈಡ್ರೋ

ಜನ್ ಎಂಬೀ ಮೂರು ಮೂಲತತ್ವಗಳಿರುತ್ತವೆ. ಆದರೆ ಪ್ರಾಣಿ ಶರೀರದಲ್ಲಿ ಈ ಮೂರಲ್ಲದೆ ನೈತ್ರೋಜನವೆಂಬ ನಾಲ್ಕನೇದೊಂದು ತತ್ವವಿರುತ್ತದೆ.

ಗಿಡಗಳ ಬೇರೆ ಬೇರೆ ಭಾಗಗಳೂ ಅವುಗಳ ಉಪಯೋಗವೂ:—೧ ಬೇರು, ೨ ಬೊಡ್ಡಿ, ೩ ಎಲೆ, ೪ ಹೂವು, ೫ ಹಣ್ಣು, ೬ ಬೀಜ ಇವೇ ಆರು ಗಿಡಗಳ ಮುಖ್ಯಭಾಗಗಳು ಇವುಗಳಿಗೆ ಗಿಡಗಳ ಇಂದ್ರಿಯಗಳಿಂತಲೂ, ಅವಯವವೆಂತಲೂ ಅನ್ನುವರು. ಬೇರಿನಿಂದ ಗಿಡಗಳು ನೆಲದ ಮೇಲೆ ಗಟ್ಟಿಯಾಗಿ ನಿಲ್ಲುತ್ತವೆ; ಮತ್ತು ಭೂಮಿಯೊಳಗಿನ ಪೋಷಕ ಪದಾರ್ಥಗಳನ್ನು ಶೋಷಿಸಿಕೊಳ್ಳುತ್ತವೆ. ಬೊಡ್ಡಿಯು ಗಿಡಗಳ ಸರ್ವಭಾಗಕ್ಕೂ ಆಧಾರಭೂತವಾಗಿರುತ್ತದೆ. ಮತ್ತು ಮೇಲೆ ಕೆಳಗೆ ಹರಿದಾಡುವ ಪೋಷಕ ರಸಕ್ಕೆ ದಾರಿಯಾಗಿರುತ್ತವೆ. ಎಲೆಗಳು ಹವೆಯೊಳಗಿನ ವಾಯುವನ್ನು ಶೋಷಿಸಿ ಬೇಕಾದದ್ದನ್ನಿಟ್ಟುಕೊಂಡು ಬೇಡವಾದದ್ದನ್ನು ಹೊರದೂಡುತ್ತವೆ ಹೂಗಳು ಗಿಡಗಳನ್ನು ಅಂದಗೊಳಿಸುವವಲ್ಲದೆ ಬೀಜವನ್ನು ಹುಟ್ಟಿಸುತ್ತವೆ. ಹಣ್ಣು ಬೀಜವನ್ನು ಪಕ್ವಗೊಳಿಸುತ್ತದೆ ಬೀಜವು ಗಿಡವನ್ನು ಮತ್ತೆ ಹುಟ್ಟಿಸುತ್ತದೆ.

ಈ ಅವಯವಗಳಿಂದುಂಟಾಗುವ ಕ್ರಿಯೆಗಳಿಗೆ ಕಾರ್ಯವೆಂಬ ಹೆಸರು. ಈ ಕಾರ್ಯವು ಎರಡು ತರದ್ದುಂಟು. ೧ ಸಲಹೋಣ, ಮತ್ತು ಬೆಳಿಸೋಣ, ೨ ಮರಳಿ ಹುಟ್ಟಿಸೋಣ. ಬೇರು, ಬೊಡ್ಡಿ, ಎಲೆಗಳು ಸಲಹುವ ಕಾರ್ಯವನ್ನೂ ಬಲಿಸುವ ಕಾರ್ಯವನ್ನೂ ಮಾಡುವ ಇಂದ್ರಿಗಳು ಹೂವು ಗಿಡಗಳ ಎಲ್ಲ ಭಾಗಗಳನ್ನು ಮರಳಿ ಹುಟ್ಟಿಸುವ ಇಂದ್ರಿಯವು.

ಬೇರುಗಳು—ಗಿಡಗಳ ಬೇರುಗಳು ನೆಲದೊಳಗಿರುತ್ತವೆ. ಅವುಗಳಲ್ಲಿ ಒಂದು ದೊಡ್ಡ ಬೇರು ಇರುತ್ತದೆ. ಅದಕ್ಕೆ ಗಂಡು ಬೇರು ಅಥವಾ ಹೆಬ್ಬೇರೆನ್ನುವರು. ಆ ಬೇರಿಗೆ ಅನೇಕ ಟಿಸಿಲುಗಳು ಇರುತ್ತವೆ. ಈ ಟಿಸಿಲುಗಳು ಗಿಡವು ದೊಡ್ಡದಾಗುತ್ತ ನಡೆದಂತೆ ಸುತ್ತು ಕಡೆಯಲ್ಲಿ ಹಬ್ಬಿಕೊಂಡು ಭೂ

ವೈಪಿದ ಒಳಬದಿಯನ್ನು ಗಟ್ಟಿಯಾಗಿ ಹಿಡುಕೊಂಡಿರುತ್ತವೆ
ಗಂಡು ಬೇರು ಮಾತ್ರ ತೆಳಕ್ಕಿಳಿಯುತ್ತ ನಡೆದಿರುತ್ತದೆ
ಈ ಎಲ್ಲ ಬೇರುಗಳ ಆಧಾರದಿಂದಲೇ ಗಿಡವು ಗಟ್ಟಿಯಾಗಿ
ನಿಂತಿರುತ್ತದೆ. ಆಲ, ಅರಳಿ, ಮಾವು, ಹಲಸು ಮುಂತಾದ
ಗಿಡಗಳ ಬೇರುಗಳು ಸಾವಿರಾರು ಖಂಡಗ ಭಾರವನ್ನು ತಾ
ಳುವಷ್ಟು ಬಲವಾಗಿರುತ್ತವೆ. ಈ ಬೇರುಗಳು ಒಮ್ಮೊ
ಮ್ಮೆ ಕಲ್ಲು ಗಚ್ಚುಗಳಿಂದ ಕಟ್ಟಿದ ಕೋಟೆಯ ಗೋಡೆಗ
ಳಂಥ ದಪ್ಪಾದ ಗೋಡೆಯನ್ನು ಒಡೆದು ಪಾರಾಗಿ ಹೊರಬಿ
ದ್ದಿರುತ್ತವೆ. ಈ ಅಡ್ಡ ಬೇರುಗಳು ಹೊಡೆದ ಗುಡಾರದ
ಹಗ್ಗಗಳಂತೆ ಗಿಡವನ್ನು ಹೊಯ್ದಾಡಗೊಡುವದಿಲ್ಲ. ಆದ
ರಿಂದ ಗಿಡಗಳು ನೆಲದ ಮೇಲೆ ನೆಲೆಗೊಂಡು ನಿಂತಿರುತ್ತವೆ.
ಗಿಡವು ಮೇಲ್ಬದಿಗೆ ಎಷ್ಟು ಹರವಾಗಿರುವದೋ ಅಷ್ಟು ಹ
ರವಾಗಿ ನೆಲದೊಳಗೆ ಅದರ ಬೇರುಗಳು ಹಬ್ಬಿರುತ್ತವೆಂದು
ಹಿರಿಯರು ಹೇಳುವ ಮಾತು ಸುಳ್ಳಲ್ಲ. ಗಿಡಗಳ ಅಡ್ಡ ಬೇ
ರುಗಳು ನೆಲದೊಳಗೆ ಕೆಳಗಡಿಗೆ ಹೋಗದೆ ಅಡ್ಡ ಬದಿಗೆ
ಮಾತ್ರ ಬಹುದೂರದ ವರೆಗೆ ಹೋಗುತ್ತವೆ. ಗಂಡು ಬೇ
ರು ಮಾತ್ರ ತಳದ ಕಡೆಗೆ ಹೋಗುತ್ತದೆಂದು ಮೇಲೆ ಹೇ
ಳಿದ್ದೇವೆ. ಆದರೆ ಅದಾದರೂ ಓಂ ಓಂ ಮೊಳಗಳಾಚೆಯ
ತಳವನ್ನು ಮುಟ್ಟಿರುವದಿಲ್ಲ. ಈ ಗಂಡು ಬೇರಿನ ಮತ್ತು
ಅಡ್ಡ ಬೇರುಗಳ ಕಸುವು ಬಹಳಿರುತ್ತದೆ. ಬಿರುಗಾಳಿಯು
ಅಥವಾ ಕಸುವುಳ್ಳ ಧನವು ಯಾವದೊಂದು ಮರವನ್ನು ಬು
ಮ್ಮಿಗೇ ಕೆಡವಲಾರದು. ಬೇರುಗಳು ಆಕರ್ಷಣ ಕ್ರಿಯೆ
ಯನ್ನಲ್ಲದೆ ಶೋಷಣ ಕ್ರಿಯೆಯನ್ನಾದರೂ ನಡಿಸಿರುತ್ತವೆ.
ಗಂಡು ಬೇರು ಮತ್ತು ಅಡ್ಡ ಬೇರಿನ ತುದಿಯೆಲ್ಲಿ ಓಂಸು ಜಾ
ಳಿಗಿ ಇರುತ್ತದೆ. ಆ ಜಾಳಿಗೆಗೆ ಸ್ಪಂಜದಂತೆ ಅನೇಕ ಛಿದ್ರ
ಗಳಿರುತ್ತವೆ. ಆ ಛಿದ್ರಗಳಿಂದಲೇ ನೆಲದೊಳಗಿರುವ ಹಸಿ
ಮುಂತಾದ ಜೀವರಕ್ಷಣದ ಪದಾರ್ಥಗಳನ್ನು ಶೋಷಿಸಿಕೊ
ಳ್ಳುತ್ತವೆ. ಆ ಪೋಷಕ ಪದಾರ್ಥಗಳು. ಗಿಡದ ಎಲ್ಲ ಅವಯ
ವಗಳಲ್ಲಿ ಕೇರಿ ರಸಾಯನವ್ಯಾಪಾರದಿಂದ ಪಚನವಾಗಿ ಒಂ
ದು ತರದ ರಸದ ರೂಪವನ್ನು ಹೊಂದುತ್ತವೆ. ಈ ರಸವು

ಕೆಳಗ ಮೋರ ಮಾಡಿಕೊಂಡು ಗಿಡಗಳೊಳಗಿನ ರಸವಾಹಿನಿಗಳಿಂದ ಬೊಡ್ಡೀಕಡೆಗೆ ಬರುತ್ತದೆ. ಈ ರಸದಿಂದಲೇ ಕಟ್ಟಿಗೆಯು ಉಂಟಾಗುತ್ತದೆ. ಕೆಲವು ಗಿಡಗಳ ಜೇರಿನ ನೆರೆಯಲ್ಲಿ ಆ ಗಿಡಗಳಿಗೆ ಬೇಕಾದ ಪೋಷಕ ದ್ರವ್ಯವು ಕೂಡ ಬೀಳುತ್ತಿರುತ್ತದೆ.

(ಸಶೇಷ)

KINDER GARTON 2ND GIET

ಕಿಂಡರಗಾರ್ಟನ್ ೨ನೇ ಇನಾಮು.

(೧೪೫ನೇ ಪುಟದಿಂದ ಮುಂದೆ ಸಾಗಿದ್ದು)

ಕೆಳಗಿನ ಆಕೃತಿಯಲ್ಲಿ ಸರಳ ಗೆರೆಯು ಬಿಳಿ ಗುಂಡಿನ ಮಾರ್ಗಕ್ರಮಣವನ್ನೂ, ಡೊಂಕ ಗೆರೆಯು ಕರೀ ಗುಂಡಿನ ಮಾರ್ಗಕ್ರಮಣವನ್ನೂ ತೋರಿಸುವವು—

೩ನೇ ಆಕೃತಿಯನ್ನು ನೋಡಿರಿ.



* ಆಟ ಮಡೆದಾಗಿ ಹಾಡತಕ್ಕ ಪದ.

ರಾಗ—ಶಂಕರಾಭರಣ, ತಾಳ—ರೂಪಕ ತಾಪ

ಇದು ನೋಡಿರಿ ನೀವ್, ಗುಂಡು ಉರುಳುವವು।
ಎದುರಿಲಿ ಬರುವಾಗ, ಹೂಡಿಯೊಡುವವು ॥ ಪಲ್ಲ ॥
ಕರಿಯು ಗುಂಡಿನ ಬಣ್ಣ, ಕಾಗೆಯಂತಿಹುದು।
ಅರಳಿದು ಹೋಲ್ವುದೀ, ಬಿಳಿದಾದ ಗುಂಡು ॥ ೧ ॥
ಹಳ್ಳಿಯ ಅಜ್ಜಿತಾ, ಹಾಸುಹೊಯ್ಯುವಳು।
ಕಳೆಯುದೆ ಹೊತ್ತನ್ನು, ಕಾಸುಗಳಿಸುವಳು ॥ ೨ ॥

---

* (೧) ಕೆಳಗಿನ ಪದ್ಯದಲ್ಲಿಯೂ ಬರೆಯಲ್ಪಡುವ ಪದ್ಯಗಳಲ್ಲಿಯೂ ಯತಿ ಇರುವಲ್ಲಿ ಅಲ್ಪವಿರಾಮವು ಹಾಕಲ್ಪಟ್ಟಿದೆ.

(೨) ಅಕ್ಷರದ ತಲೆಯ ಮೇಲೆ ಸಣ್ಣ ಟಿವ್ಮು ಇದ್ದರೆ ಅಲ್ಲಿ ಸಂಧಿಯುಂಟೆಂದು ತಿಳಿಯುವದು.

೩ನೇ ಆಟ—ಎಲ್ಲ ಹುಡುಗರು ಬಂದೇ ಸಾಲಿನಲ್ಲಿ ಕುಳಿತು ಕೆಲವು ಅಂತರದ ಮೇಲೆ ದೊಡ್ಡ ಗೋಲವನ್ನು ಎದುರಿಗೆ ಇಟ್ಟು ಅದಕ್ಕೆ ತಾಕುವಂತೆ ನಿರತಿನಿಂದ ಬಬ್ಬೊಬ್ಬರೆ ತಮ್ಮ ತಮ್ಮ ಗೋಲವನ್ನು ಉರುಳಿಸಬೇಕು. ಆಗ್ಗೆ ಹಾಡತಕ್ಕ ಪದ.

ರಾಗ—ಬ್ಯಾಂಡ ನೋಟು

ಒಬ್ಬ ಹೊಡೆಯುವಂ, ಇನೊಬ್ಬ ತಪ್ಪುವಂ।
ಒಬ್ಬರಿಂದ ಒಬ್ಬರಾಗಿ, ಆಡುತಿರ್ಪೆವೈ॥

೪ನೇ ಆಟ—ತಾಬಾಣದಲ್ಲಿ ಗುಂಡು ಇಟ್ಟು ಉರುಳಾಡಿಸುವದು; ಇದರಿಂದ ಗೋಲವು ವರ್ತುಲಾಕಾರವಾಗಿ ತಿರುಗುತ್ತದೆಂಬದು ಹುಡುಗರಿಗೆ ಗೊತ್ತಾಗುವದು. ಆಗ್ಗೆ ಹಾಡತಕ್ಕ ಪದ.

ರಾಗ—ಬ್ಯಾಂಡ (ನೋಟು.)

ಎಡಗಡೆಯಿಂದಂ ಬಲಗಡೆಗೆ, ಬಲಗಡೆಯಿಂದಂ ಎಡಗಡೆಗೆ।
ಹುಡುಗರೆ ತಿರುವಿರಿ ಮುದದಿಂದ, ಬಿಡದೇ ಹೊರಳ್ವುದು ಬಲುಚೆಂದ॥

ಗೋಲದ ಗುಣಧರ್ಮಗಳನ್ನು ತಿಳಿಸಿ ಆಟಗಳನ್ನಾಡಿಸಿದ ಬಳಿಕ * ಫಲನದ ಬಗ್ಗೆ ಕಲಿಸಲಾರಂಭಿಸಬೇಕು.

ಫಲದ ಗುಣ ಧರ್ಮಗಳು.

ಡ್ರಿಲ್—ವರ್ಗದ ಕೊಣೆಯಿಂದ ಬಾಲೋದ್ಯಾನ ಮುಂದಿರಕ್ಕೆ ಬರುವಾಗ್ಗೆ ಹುಡುಗರು ಕೆಳಗಿನ ಸ್ವರಪಂಜರವನ್ನೂ ಪದವನ್ನೂ ರಾಗದ ಪೆಟ್ಟಿಗೆ ಅಥವಾ ಪಿಟಿಲಿನ ಸ್ವರದೊಂದಿಗೆ ಸುಸ್ವರದಿಂದ ಹಾಡುತ್ತ ಏಕತಾಳದಿಂದ ಕಾಲಿಕ್ಕುತ್ತ ಬರುವಂತೆ ಮಾಡಬೇಕು.

---

* ಗೋಲವನ್ನು ಕಲಿಸಿದ ಬಳಿಕ ಕೆಲವು ಮಟ್ಟಿಗೆ ಆದರಂತೆ ಇರುವ ಸಿಲಿಂದರದ ಬಗ್ಗೆ ಯಾಕೆ ಕಲಿಸಬಾರದೆಂದು ಕೆಲವರು ಆಕ್ಷೇಪಿಸಬಹುದು; ಆದರೆ ವೈಷಮ್ಯ ವಿರೋಧಗಳಿಂದಲೇ ಶಿಕ್ಷಣವನ್ನು ನಡಿಸಿದರೆ ಅದು ಸ್ಮರಣದಲ್ಲಿ ಉಳಿಯುವದೆಂಬ ತತ್ವಕ್ಕನುಸರಿಸಿ ಫಲನವು ಮೊದಲು ತೆಗೆದುಕೊಳ್ಳಲ್ಪಟ್ಟಿದೆ.

ಸ,ರಿಪಂಜರ—ಪಾಸಾ । ಪಾಸಾ । ರೀಗಾಮಗರೀ । ಗಮು ಪಾ । ಸಾಗರಿಸನಿಸಾಸಾಸಾ; । ಪಾಧಪಾಮ । ಗಮುಪಧಪಾ ಪಾ । ಧಾಧಾ । ಪಮುಗರಿ । ಸಾ । ನೀಪಾ; । ಸಾನಿಸರೀ । ಸರಿಗಾ । ರಿಗಮಾ । ಗಮುಪಾ । ಸಾಗರಿಸನಿಸಾಸಾಸಾ ॥ ೧ ॥

ಬ್ಯಾಂಡ (ಸೋಟು)

ಪದ—ಗುಂಡಿನ ಚಂಡಿನ ಆಟಗಳನ್ನು ಬಿಡದೇ ।
ನಾವರಿತೆವು ಬಲು ಬೇಗ ॥
ಚೆಂಡಿನಿಂಡಲಿ ಬಣ್ಣಗಳನ್ನು, ಮೋದದೆ ಅರಿತೆವು
ನಾವೀಗ ।
ಉರುಳುವವೈ ಚೆಂಡೂ ಗುಂಡೂ ತ್ವರದಿಂ, ಇದನ
ತೆವು ನಾವೀಗ ॥ ೧ ॥

ವಿಶೇಷ ಉಪಕರಣಗಳು—ಮೇಲೆ ಹೇಳಿದ ಉಪಕರಣಗ ಲ್ಲದೆ, ಮೂರು ಮೂಲ ಬಣ್ಣದ ಕಾಗದಗಳನ್ನು ಎದುರೆದು ರಿನ ಮೈಗೆ ಹಚ್ಚಿದಂಥ ಫಿನಗಳು ವರ್ಗದೊಳಗಿನ ಪ್ರತಿ ಒಬ್ಬ ಹುಡುಗನಿಗೆ ಒಂದೊಂದರಂತೆ, ಫಿನದ ಪಿಣುಗಳನ್ನು ಅಳಿಯುವದಕ್ಕೆ ಕಡ್ಡಿಗಳು, ಮೈಗಳನ್ನು ಅಳಿಯುವದಕ್ಕೆ ಒರೆಸು ಕಾಗದದ ತುಂಡುಗಳು, ನೂಲಿಗಳನ್ನು ಅಳಿಯು ವದಕ್ಕೆ ಕಾಟಿಕೋನಗಳು.

ಸೂಚನೆ—ಮೇಜಿನ ಮೇಲೆ ಗೋಲವನ್ನೂ ಫಿನವನ್ನೂ ಹೊಂದಿಸಿಟ್ಟು ಸಾಮ್ಯ ವೈಷಮ್ಯಗಳಿಂದ ಶಿಕ್ಷಣವನ್ನು ನಡಿಸುವದು.

ಸಾಮ್ಯ.

(೧) ಗೋಲ ಫಿನ ಇವೆರಡೂ ಕಟ್ಟಿಗೆಯವು (ಕಟ್ಟಿಗೆಯ ಬೇರೆ ಪದಾರ್ಥಗಳನ್ನು ಕೇಳಿರಿ)

(೨) ಇವೆರಡುಗಳ ಬಣ್ಣವೊಂದೇ (ಯಾವ ಬಣ್ಣವೆಂಬ ದನ್ನು ಕೇಳಿರಿ.)

(೩) ನೆಲದ ಮೇಲೆ ಬಿದ್ದರೆ ಎರಡರಿಂದಲೂ ಸಪ್ಪಳವಾ ಗುತ್ತದೆ. (ಕೆಳಗೆ ಚಲ್ಲಿರಿ)

(೪) ಎರಡೂ ಬಿರಸು ಅವೆ; ಆದರೆ ನುಣುಪಾಗಿವೆ. (ಬಿರಸು ಮಿದುವು ಎಂಬ ಶಬ್ದಗಳ ಜ್ಞಾನವನ್ನು ಕಲ್ಸು,

ಶರಳಿ ಮುಂತಾದ ಪದಾರ್ಥಗಳಿಂದ ಮಾಡಿಕೊಡತಕ್ಕದ್ದು: ಹುರಬರಕು, ನುಣುಪು ಎಂಬ ಶಬ್ದಗಳ ಅರ್ಥವನ್ನು ಥ್ಯಾಂಡಸೇಪರ ಪುಲಸ್ಕೇಪಪೇಪರಗಳಿಂದ ತಿಳಿಸಿರಿ.)

ವೈಷಮ್ಯ.

(೫) ಗೋಲವು ಉರುಳುತ್ತದೆ; ಘನವು ಉರುಳುವದಲ್ಲ; (ಆದರೆ ಮುಂದಕ್ಕೆ ಸರಿಯುತ್ತದೆ.)

(೬) ಗೋಲವು ಗುಂಡಗೆ ಅದೆ, ಘನಕ್ಕೆ ಏಣುಗಳಿವೆ. ಗೋಲವನ್ನು ಕೈಯಲ್ಲಿ ಹಿಡಿದು ಹಿಚುಕಲಿ, ಅದರಂತೆ ಘನವನ್ನು ಹಿಚುಕಲಿ, ಘನವನ್ನು ಹಿಚುಕಿದರೆ ಕೈಗೆ ಒತ್ತುತ್ತದೆ.)

(೭) ಘನಕ್ಕೆ ೧೭ ಏಣುಗಳಿವೆ; ಗೋಲಕ್ಕೆ ಇಲ್ಲ. (ಘನದ ಒಂದು ಮೂಲೆಯಲ್ಲಿ ಬೆರಳು ಇಟ್ಟು ಅದನ್ನು ಸರಿಸುತ್ತ ಹೋದರೆ ೭ನೇ ಮೂಲಿ ಬರುವದು. ಇದಕ್ಕೆ ಒಂದು ಏಣು ಅನ್ನುವರು ಇಂಥ ೧೭ ಏಣು ಇರುವವೆಂಬದನ್ನು ಎಣಿಸುತ್ತ ಹೇಳಲಿ.)

(೮) ಘನಕ್ಕೆ ೮ ಮೂಲೆಗಳು ಇರುತ್ತವೆ; ಗೋಲಕ್ಕೆ ಇಲ್ಲ. (ಸೂಲೆಯ ಮೂಲೆಯನ್ನು ಪ್ರತ್ಯಕ್ಷ ತೋರಿಸಿ ಮೂಲೆಯ ಜ್ಞಾನವನ್ನು ಮಾಡಿಕೊಡಿರಿ. ಹಾಗು ೬ ಬೇರೆ ಬೇರೆ ಚೌಕಸಗಳನ್ನು ಹೊಂದಿಸಿ ಘನವನ್ನು ಮಾಡಿ ಮೂರು ಚೌರಸಗಳು ಕೂಡಿದಲ್ಲಿ ಮೂಲೆಯಾಗುವದನ್ನು ತೋರಿಸಿರಿ. ಪ್ರತಿ ಒಂದು ಬದಿಗೆ ಮೇಲೊಂದು ಕೆಳಗೊಂದು ಹೀಗೆ ಎರಡು ಮೂಲೆಗಳಿರುವವು. ಒಟ್ಟಿಗೆ ೮ ಮೂಲೆಗಳಿರುತ್ತವೆಂಬದನ್ನು ಎಣಿಸಿ ಹೇಳಲಿ.)

(೯) ಘನಕ್ಕೆ ೬ ಮೈಗಳಿರುತ್ತವೆ. (ನಾಲ್ಕು ಮೂಲೆ ನಾ

---

* ಹುಡುಗರು ತೀರ ಚಿಕ್ಕವರಿದ್ದು ೧೨ ಏಣುಗಳನ್ನು ಎಣಿಸುವದು ಶ್ರಮಕರವೆಂದು ತೋರಿದರೆ ಬಹಳ ಏಣುಗಳಿವೆ ಎಂದು ತಿಳಿಸಿ ಮುಂದಿನ ಪಾಠವನ್ನು ನಡಿಸಬಹುದು. ಸಾಧಾರಣ ಪ್ರತಿಯ ಹುಡುಗರಿದ್ದರೆ ಮೇಲಿನ ಮೈಗೆ ೪ ಏಣು, ಕೆಳಗಿನ ಮೈಗೆ ೪ ಏಣು, ನಿಂತದವು ೪ ಏಣು ಅಂತೂ ೧೨ ಇರುತ್ತವೆಂದು ತಿಳಿಸಬಹುದು.

ಲ್ಲು ಏಣು ಇವುಗಳ ನಡುವಿನ ಸ್ಥಳದ ಮೇಲೆ ಕೈಯಾಡಿಸಿ "ಇದು ಒಂದು ಮೈ" ಎಂದು ಹೇಳಿರಿ. ಇದರಂತೆ ೬ ಮೈಗಳಿರುವವು. ಎದುರೆದುರಿನ ಮೈಗಳಿಗೆ ಒಂದೇ ಬಣ್ಣದ ಕಾಗದ ಹಚ್ಚಿದ ಘನಗಳನ್ನು ಹುಡುಗರ ಕೈಯಲ್ಲಿ ಕೊಟ್ಟು ೬ ಮೈಗಳಿರುತ್ತವೆಂದು ತಿಳಿಸಿರಿ; ಅಥವಾ ಘನವನ್ನು ದೂರ ಇಟ್ಟು ಅದರ ಒಂದೊಂದು ಮೈಗೆ ತಾಕುವಂತೆ ಗೋಲವನ್ನು ಉರುಳಿಸುತ್ತ ತಾಕಿದ ಮೈಗೆ ಖಡುವಿನಿಂದ ಗುರುತು ಮಾಡುತ್ತ ಮೈಗಳನ್ನು ಎಣಿಸಿದರೂ ಅಡ್ಡಿಯಿಲ್ಲ.) ಗೋಲಕ್ಕೆ ಒಂದೇ ಮೈ ಇರುವದು.

೧೦ (ಅ) ಘನಕ್ಕೆ ೧೭ ಏಣುಗಳಿವೆ; ಅವೆಲ್ಲ ಒಂದಕ್ಕೊಂದು ಸರಿಯುವೆ. (ದಾರದಿಂದ ಅಥವಾ ಕಡ್ಡಿಯಿಂದ ಅಳೆದು ಪರೀಕ್ಷಿಸತಕ್ಕ)

(ಬ) ಘನಕ್ಕೆ ೬ ಮೈಗಳಿವೆ. ಅವೆಲ್ಲ ಒಂದಕ್ಕೊಂದು ಸರಿಯುವೆ. (ಒಂದು ಮೈಗೆ ಸರಿಯಾದ ಅಳತೆಯದೊಂದು ಕಾಗದವನ್ನು ಕತ್ತರಿಸಿ, ಅದರಷ್ಟೇ ಅಳತೆಯ ಎಲ್ಲ ಮೈಗಳಿರುತ್ತವೆಂಬದನ್ನು, ಆ ಕಾಗದವನ್ನು ಬೇರೆ ಬೇರೆ ಮೈಗಳ ಮೇಲೆ ಇಟ್ಟು ಮನವರಿಕೆ ಮಾಡಿಕೊಡಿರಿ.)

(ಈ) ಘನಕ್ಕೆ ೮ ಮೂಲೆಗಳು ಇರುವವು; ಅವೆಲ್ಲ ಒಂದಕ್ಕೊಂದು ಸರಿ ಇರುವವು. (ಕಾಟಕೋನದಿಂದ ಅಳೆದು ನೋಡಲಿ.)

(ಡ) ಘನದ ಪ್ರತಿ ಒಂದು ಬದಿಗೆ "ಚಚ್ಚೌಕು" ಅಥವಾ "ಚೌರಸ" ಅನ್ನುತ್ತಾರೆ. ಈ ಚೌರಸದ ಎಲ್ಲ ಮೂಲೆಗಳು ಒಂದಕ್ಕೊಂದು ಸರಿ ಅವೆ; ಹಾಗೂ ಎಲ್ಲ ಏಣುಗಳು ಒಂದಕ್ಕೊಂದು ಸರಿ ಅವೆ.

ರಾಗ—ನೋಟು (ಬ್ಯಾಂಡ್.)

ಗೋಲ ಘನಗಳಿಂದ ಅರಿತ, ಗುಣವನೋಳ್ವವ್ವಾ ।
ಎಲ್ಲಗುಣವ ಪ್ರೀತಿಯಿಂದ, ನಾವು ಅರಿತೆವ್ವೆ ॥ ಪಲ್ಲ ॥
ಒಂದು ಮೈಯು ಚಂದದಿಂದ, ಒಪ್ಪುತಿರುವದ್ಯೆ ।
ಒಂದು ಮೋರೆಯಿಂದ ಗೋಲ, ಮೆರೆಯು ತಿರುವದ್ಯೆ ॥

ಆರು ಮೈಗಳಿಂದ ಘನವು, ಎಸೆಯುತಿರುವೆದ್ದೈ ।
ಆರು ಮೈಗಳೆಲ್ಲ ಒಂದೆ, ಸವನೆ ಇರುವನ್ನೈ ॥ ೨ ॥
ಎಂಟು ಮೂಲೆಯಿಂದ ಘನವು, ಎಸೆಯುತಿರುವುದ್ದೈ ।
ಎಂಟು ಮೂಲೆಯಿಲ್ಲ ತಾವು, ಸವನೆ ಇರುವನ್ನೈ ॥ ೩ ॥
ಘನವು ಮೇಲಿನಿಂದ ಒಂದೆ, ಮೈಯ್ಯತೋರ್ಪುದ್ದೈ ।
ಘನವ ಎದುರಿನಿಂದ ನೋಡೆ, ಎರಡು ಕಾಂಬವ್ವೈ ॥೪॥
ಘನಕೆ ಏಣು ಹತ್ತರಿಂದ, ಎರಡು ಹೆಚ್ಚಿಗ್ಯೈ ।
ಹನುಮನೋಡೊ ಅವುಗಳೆಲ್ಲ, ಸವನೆ ಇರುವನ್ನೈ ॥೫॥
ಘನವ ಮೂಲೆಯಿಂದ ನೋಡೆ, ಮೂರು ಕಾಂಬವ್ವೈ ।
ಘನಕೆ ಎದರು ಬದರು ಮೂರು, ಜೋಡು ಮೈಗಳ್ಳೈ
॥ ೬ ॥

ಘನವ ಬೆರಳಿನಿಂದನೂಕೆ, ಮುಂದೆ ಸರಿವುದ್ದೈ ।
ಹನುಮ ನೋಡೊ ಗೋಲ ತಾನು, ಉರುಳು ತಿರುವು
ದ್ದೈ ॥ ೭ ॥

ಘನದ ಬಗ್ಗೆ ತಕ್ಕಷ್ಟು ಕಲಿಸಿದ ಬಳಿಕ ಸಿಲಿಂದರದ ಬ
ಗ್ಗೆ ಕಲಿಸಿರಿ.

ಉಪೋ:—ಗೋಲವು ಉರುಳುತ್ತದೆ; ಘನವು ಸ್ಥಿರವಾಗಿ ನಿಲ್ಲುತ್ತದೆ. ಇದು ನೋಡಿರಿ, ಇದು ಈ ಎರಡು ಮೈಗಳ ಮೇಲೆ ನಿಲ್ಲುತ್ತದೆ; ಈ ಮೈಯಿಂದ ಉರುಳುತ್ತದೆ. ಇದು ಈ ಮೈಯಿಂದ ಉರುಳುವ ಕಾರಣ ಇದಕ್ಕೆ "ಉಳಕ" ಎಂಬ ಹೆಸರು.

ಗುಣಧರ್ಮಗಳು.

(೧) ಇದು ಗೋಲದಂತೆ ಉರುಳುತ್ತದೆ; ಯಾಕಂದರೆ ಗೋಲದಂತೆ ಒಂದು ಮೈಯು ದುಂಡಗೆ ಅದೆ.

(೨) ಇದು ಘನದಂತೆ ಸ್ಥಿರವಾಗಿ ನಿಲ್ಲುತ್ತದೆ; ಯಾಕಂದರೆ ೨ ಮೈಗಳು ಸಪಾಟ ಅವೆ.

(೩) ಗೋಲವು ಒಂದು ಬಿಂದುವಿನ ಮೇಲೆ (ತೀರ ಅಲ್ಪವಾದ ಸ್ಥಳದ ಮೇಲೆ) ನಿಲ್ಲುವದು, ಘನವು ಒಂದು ಮೈಮೇಲೆ ನಿಲ್ಲುವದು, ಸಿಲಿಂದರವು ಒಂದು ಗೆರೆಯ ಮೇಲೆ ನಿಲ್ಲುವದು,)

ಈ ಸಂಗತಿಯನ್ನು ತಿಳಿಸಬೇಕಾದರೆ ಒಂದೊಂದಕ್ಕೆ ನೀ
ರು ಹಚ್ಚಿ ಸ್ಲೇಟಿನ ಮೇಲೆ ಇಡಿರಿ. ಅಲ್ಲಿ ಮೂಡಿದ ಗುರು
ತಿನ ಮೇಲಿಂದ ಬಿಂದು, ರೇಖೆ, ಚಚ್ಚೌಕು ಎಂಬುದನ್ನು ತಿಳಿ
ಸಿರಿ.

(೪) ಸಿಲಿಂದರಕ್ಕೆ ೨ ವೆಕ್ರ ಏಣುಗಳಿರುತ್ತವೆ, (ಫೈನ್ ಸಿಲಿಂದರಗಳ ಏಣುಗಳನ್ನು ತೋರಿಸಿರಿ.)

(ಸಶೇಷ.)

DEPARTMENTAL NOTICES.

ನೋಟೀಸುಗಳು.

ಧಾರವಾಡ ಟ್ರೇನಿಂಗಕಾಲೇಜಿನ ಪ್ರವೇಶ ಪರೀಕ್ಷೆಯು ಬರುವ ನವ್ಹಂಬರ ತಿಂಗಳ ೧೩ನೇ ತಾರೀಖು ಮಂಗಳವಾರ (ಕಾರ್ತಿಕ ವದ್ಯ ೧೫) ಕನ್ನಡ ೩ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಇಲ್ಲವೆ ಯುನಿವ್ಹರ್ಸಿಟೀ ಪರೀಕ್ಷೆಯಲ್ಲಿ ಪಾಸಾದವರು (ಅಂದರೆ ಫಾಯನಲ್, ಮೆಟ್ರಿಕ್ಯೂಲೇಶನ್ ಪರೀಕ್ಷೆಯನ್ನು ಕೊಟ್ಟವರು) ಸಶಕ್ತರೂ, ವ್ಯಂಗರಹಿತರೂ, ತಕ್ಕಮಟ್ಟಿಗೆ ಎತ್ತರ ಇರುವಂಥವರೂ, ೧೩ರ ಮೇಲೆ ೨೦ರ ಒಳಗೆ ವಯಸ್ಸುಳ್ಳವರೂ ಇರಬೇಕು. ಅವರು ವಯಸ್ಸಿನ ದಾಖಲೆಯನ್ನೂ, ಮುಲ್ಕಿ ಸರ್ಟಿಫಿಕೇಟನ್ನೂ ಸಂಗಡ ತೆಗೆದುಕೊಂಡು ತಾರೀಖು ೧೫ನೇ ನವ್ಹಂಬರ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವರರೇ ಇರಲಿ ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ಜನರನ್ನು ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು

೨. ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ೩ನೇ ಇಯತ್ತೆಯ ಅಂಕಲಿಪಿ ಮೊದಲ್ಗೊಂಡು ೩ನೇ ಇಯತ್ತೆಯ ವರೆಗೆ ಇರುವ ಯಾವತ್ತು ಪುಸ್ತಕಗಳನ್ನು ಚನ್ನಾಗಿ ಶುದ್ಧಿ ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ

ಕೇರಿಸಿಕೊಳ್ಳಲ್ಪಟ್ಟವರು ದಸ್ತೈವಜುಗಳನ್ನು ಬರಕೊಡಬೇಕಾಗುತ್ತದಷ್ಟೇ ಅದಕ್ಕೆ [illegible] ರೂಪಾಯಿಗಳ ಲಾಯಖಿ ಉಳ್ಳ ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು. ಅಂದರೆ ಕಾಲೇಜದಲ್ಲಿ ಸೇರಿಸಿಕೊಂಡ ಕೂಡಲೆ ಕಾಲೇಜದ ನಿಯಮಗಳಿಗನುಸರಿಸಿ ಕರಾರಪತ್ರ ಬರಕೊಡಲಿಕ್ಕೆ ಅನುಕೂಲವಾಗುವದು. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯಮದಂತೆ ಅಡವ್ಹಾನ್ಸು ೧೦ ರೂ. ಸ್ಟ್ಯಾಂಪಿಗಾಗಿ ೧-೮-೦ ಡ್ರಾಯಿಂಗ ಸಾಮಾನಕ್ಕಾಗಿ ೧ರೂ. ಇಷ್ಟು ಹಣವನ್ನು ಕೊಡಬೇಕಾಗುವದು. ಈ ಹಣವನ್ನೂ ತಮ್ಮ ಖರ್ಚು ವೆಚ್ಚಕ್ಕಾಗಿ ಬೇಕಾಗುವ ಹಣವನ್ನೂ ತೆಗೆದುಕೊಂಡು ಬರಬೇಕು.

೩. ಹೊತ್ತುಕೊಳ್ಳಲಿಕ್ಕೂ ಹಾಸಿಕೊಳ್ಳಲಿಕ್ಕೂ ತರುವ ಅರಿವೆಗಳಲ್ಲಿ ೨ ಬೆಚ್ಚಗಾದ ಉಣ್ಣೀ ಅಂಗಿಗಳೂ ೧ ಜಡವಾದ ಹಚ್ಚಡವೂ ೨ ಕಂಬಳಿಗಳೂ ಅವಶ್ಯವಾಗಿ ಇರಬೇಕು. ಉಣ್ಣೀ ಅಂಗಿಗಳನ್ನು ಬೇಕಾದವರಿಗೆ ನಾವು ಇಲ್ಲಿ (ಅವರು ಯೋಗ್ಯ ಖರ್ಚು ಕೊಟ್ಟಲ್ಲಿ) ಮಾಡಿಸಿಕೊಡುವೆವು. ಅವರಿಗೆ ಕ್ಲಾಸಿನಲ್ಲಿ ಹಾಕಲಿಕ್ಕೆ ಯೋಗ್ಯವಾದ ಪೋಷಾಕ ಇರಬೇಕು. ಖರ್ಚು ಕೊಟ್ಟರೆ ಇಂಥ ಪೋಷಾಕಗಳನ್ನು ಮಾಡಿಕೊಡುವೆವು ತಿಳಿಯುವದು.

ಧಾರವಾಡ ಟ್ರೇ. ಕಾಲೇಜ,
ತಾ. ೧೫-೮-೧೯೦೨. } S. K. Rodda,
ಪ್ರಿನ್ಸಿವಾಲ

II

ಕಾಲೇಜದ ವಾರ್ಷಿಕ ಪರೀಕ್ಷೆಯು ತಾರೀಖು ೨೮ ನೇ ಸಪ್ಟಂಬರ ಸೋಮವಾರದ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರಲಪೇಕ್ಷಿಸುವ ಜನರು ಮೆ. ಎಜ್ಯುಕೇಶನಲ್ ಇ. ದಕ್ಷಿಣಭಾಗ ಇವರ ಅಪ್ಪಣೆ ಪಡಕೊಂಡು ಪರೀಕ್ಷೆಗಿಂತ ಒಂದೆರಡು ದಿವಸ ಮುಂಚಿತವಾಗಿ ಇಲ್ಲಿ ಬಂದು ನನಗೆ ಭೆಟ್ಟಿಯಾಗಬೇಕು, ತಿಳಿಯುವದು.

ತಾ॥ [illegible]-೮-೧೯೦೨. } S. K. Rodda,
ಪ್ರಿನಿಪಾಲ

ನೀರು ಎರಡನೇ ಭಾಗ.

೩ನೇ ಇಯತ್ತೆ.

ಉಪಕರಣಗಳು—ಒಂದೇ ಆಕಾರದ (ಕಟ್ಟಿಗೆ, ಬೂಜು, ಕಲ್ಲು, ಕಬ್ಬಿಣ) ಮುಂತಾದವುಗಳ ತುಂಡಗಳು, ನೀರು, ಕಾಗದದ ಹಡಗ, ಎರಡು ಸಣ್ಣ ಪಂಚಪಾತ್ರೆಗಳು, ಅಥವಾ ಸತುವಿನ ಪಾತ್ರೆಗಳು ಈ ಪಾತ್ರೆಗಳಿಗೆ ಒಂದು ತೂತು ಬುಡಕ್ಕೆ ಮತ್ತೊಂದು ಮಗ್ಗಲಿಗೆ ತೆಗಿಯಬೇಕು.

ಪ್ರಯೋಗ.	ಫಲಿತ.	ಸಿದ್ಧಾಂತ.
ಕಟ್ಟಿಗೆ, ಬೂಜು, ಕಲ್ಲು, ಕಬ್ಬಿಣ ಮುಂತಾದವುಗಳ ತುಂಡುಗಳನ್ನು ಕಾಗದದ ಹಡಗನ್ನು ನೀರಲ್ಲಿ ಬಿಟ್ಟು ನೋಡಬೇಕು.	ಕಟ್ಟಿಗೆ, ಬೂಜು, ಕಾಗದದ ಹಡಗ ತೇಲಹತ್ತಿದವು ಕಲ್ಲು, ಕಬ್ಬಿಣದ ತುಂಡುಗಳು ಮುಳಗಿದವು	ಕೆಲವು ಪದಾರ್ಥಗಳು ತೇಲುತ್ತವೆ. ಕೆಲವು ಮುಳುಗುತ್ತವೆ.
(೫) ಮೇಲೆ ಹೇಳಿದ ಒಂದೇ ಆಕಾರದ ತುಂಡುಗಳನ್ನು ಕೈಯಲ್ಲಿ ತೆಗೆದುಕೊಂಡು ಒಂದೊಂದೆ ಎತ್ತಿ ಭಾರ ಪರಿಕ್ಷಿಸೋಣ.	ಕಟ್ಟಿಗೆ, ಬೂಜು, ಕಾಗದದ ಹಡಗ, ಹಗುರ ಇರುತ್ತವೆ. ಕಬ್ಬಿಣ, ಕಲ್ಲು ಜಡವಿರುತ್ತವೆ.	ಹಗುರ ಪದಾರ್ಥಗಳು ತೇಲ್ಲುತ್ತವೆ ಜಡಪದಾರ್ಥಗಳು ಮುಳುಗುತ್ತವೆ.

(೨) ಪುನಃ ಕಟ್ಟಿಗೆ ಬೂಚು ನೀರಲ್ಲಿ ಜಲ್ಲಿ ಇವೆರಡರಲ್ಲಿ ಹೆಚ್ಚು ಕೆಳಗೆ ಹೋಗುವದನ್ನು ನೋಡಿ ಹೇಳುವದು.	ಬೂಚಿಗಿಂತಲು ಕಟ್ಟಿಗೆ ಹೆಚ್ಚು ನೀರೊಳಗೆ ಮುಳಗಿತು.	ತೇಲುವ ಪದಾರ್ಥಗಳಲ್ಲಿಯೂ ಕೆಲವು ನೀರೊಳಗೆ ಹೆಚ್ಚಿಗೆ ಮುಳಗುತ್ತವೆ.
(೩) ಬೂಚು, ಕಟ್ಟಿಗೆ, ಕೈಯಲ್ಲಿ ತೆಗೆದುಕೊಂಡು ಭಾರ ಪರೀಕ್ಷಿಸೋಣ.	ಬೂಚಿಗಿಂತಲೂ ಕಟ್ಟಿಗೆ ಹೆಚ್ಚು ಜಡವದೆ.	
(೪) ನೀರೊಳಗೆ ಬೂಚನ್ನು ಮುಳಗಿಸಿ ಅದರ ಬುಡವನ್ನು ಹತ್ತೊತ್ತಿ ಹಿಡಿ ಹತ್ತೊತ್ತುವಾಗ ಅದು ಜೋರು ಮಾಡುವದನ್ನು ನೆನಪಿನಲ್ಲಿ ಹಿಡಿ ಕಡೆಗೆ ಕೈಬಿಟ್ಟು ನೋಡು.	ಬೂಚು ಮೇಲೆ ಬರಲಿಕ್ಕೆ ಹವಣಿಸಹತ್ತಿತ್ತು ಕೈ ಬಿಟ್ಟ ಕೂಡಲೇ ಮೇಲೆಬಂತು.	ನೀರಲ್ಲಿ ಎತ್ತಿ ಹಿಡಿಯುವ ಶಕ್ತಿ ಇರುತ್ತದೆ.
(೫) ಹುಡುಗರಿಗೆ ಕೈ ಉದ್ದ ಮಾಡಹೇಳಿ ಕೈಮೇಲೆ ಹೆಚ್ಚು ಭಾರ ಇಡಬೇಕು.	ಹೆಚ್ಚು ಭಾರದಿಂದ ಕೈಯು ಕೆಳಗೆ ಒತ್ತಲ್ಪಡುತ್ತದೆ ಅಂದರೆ ಕಟ್ಟಿಗೆ, ಕಲ್ಲು, ಕಬ್ಬಿಣ ಕೆಳಗೆ ಒತ್ತುತ್ತವೆ.	ಜಡಪದಾರ್ಥಗಳು ಬಹಳೇ ಕಸುವಿನಿಂದ ಕೆಳಗೆ ಒತ್ತುತ್ತವೆ.
(೬) ಇದರಂತೆ ಬೂಚು, ಕಟ್ಟಿಗೆ, ಕಲ್ಲು, ಕಬ್ಬಿಣಗಳನ್ನು ಕೈಮೇಲೆ ಒಂದೊಂದೆ ಇಟ್ಟುಕೊಂಡು ನೋಡಬೇಕು.	ಇವು ಆದರೂ ಕೆಳಗೆ ಒತ್ತುತ್ತವೆ. ಅಷ್ಟು ಭಾರದಿಂದಲ್ಲ.	ಹಗುರ ಪದಾರ್ಥಗಳು ತೀರ ಕಡಿಮಿ ಶಕ್ತಿಯಿಂದ ಒತ್ತುತ್ತವೆ. ಪದಾರ್ಥಗಳು ತೇಲುವ ಕಾರಣವೇ

		ನಂದರೆ ಅವುಗಳ ಒತ್ತುವಿಕೆಯು ಮೇಲಿಂದ ಕೆಳಗೆ ಎಷ್ಟು ಇರುವದೊ ಅದಕ್ಕಿಂತ ಹೆಚ್ಚು ಶಕ್ತಿಯಿಂದ ನೀರು ಎತ್ತಿ ಹಿಡಿಯುತ್ತದೆ. (ಮೇಲ್ಗಡೆಗೆ ಒತ್ತುತ್ತದೆ.)
(೫) ಬುಡಕ್ಕೆ ತೂತುಳ್ಳ ಪಂಚಪಾತ್ರೆಗೆ ನೀರು ಹಾಕಬೇಕಾದರೆ ಮೊದಲು ತೂತಿಗೆ ಬೆರಳಿಟ್ಟು ನೀರು ಹಾಕಿ ಆ ಮೇಲೆ ಬೆರಳು ತೆಗಿಯಬೇಕು.	ನೀರು ಚಲ್ಲಹತ್ತಿದವು.	ನೀರು ಕೆಳಮುಗ್ಗಲು ಒತ್ತುತ್ತದೆ.
(೬) ಮುಗ್ಗಲಿಗೆ ತೂತುಳ್ಳ ಪಂಚಪಾತ್ರೆಯಲ್ಲಿ ನೀರು ಹಾಕಬೇಕಾದರೆ ಮೊದಲು ತೂತಿಗೆ ಬೆರಳಿಟ್ಟು ನೀರು ಹಾಕಿ ಆಮೇಲೆ ಬೆರಳು ತೆಗಿಯಬೇಕು.	ಬೆರಳು ತೆಗಿದ ಕೂಡಲೇ ನೀರು ಬೀಳಹತ್ತಿದವು.	ನೀರಿನಲ್ಲಿ ಬುಡಕ್ಕೂ ಮುಗ್ಗಲಿಗೂ ಒತ್ತುವ ಗುಣವದೆ.
ಉಪಸಂಹಾರ—	ನೀರಮೇಲೆ ತೇಲುವ ಪದಾರ್ಥಗಳು. ಮುಳಗುವ ಪದಾರ್ಥಗಳು.	ಕಟ್ಟಿಗೆ, ಬೂಚು, ಕಾಗದದ ಪಡಗ ಮುಂತಾದವುಗಳು. ಕಲ್ಲು, ಕಬ್ಬಿಣ ಮುಂತಾದವುಗಳು.

ನೀರಿನಲ್ಲಿ ಮುಗ್ಗಲಿಗೂ ಬುಡಕ್ಕೂ ಸುತ್ತಲು ಒತ್ತುವ ಗುಣವದೆ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಕೋತ್ಕರ್ಷಮುಂ
ಜಯಸುತ್ತಂ ಪ್ರತಿಪಾದಿಸಲ್ವಿಧಿಗೊಲಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತವೆಪ್ಪೋಜುಪಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ಪಯೆದುಂದೋಷವತಿದ್ದವೇಳ್ವುದುಧರಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೩೯] ಅಕ್ಟೋಬರ ೧೯೦೩. [ಸಂಚಿಕೆ ೧೦

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಗವರ್ನರರಾದ ಲಾರ್ಡ್ ನಾರ್ಥ್ ಕೋಟ್ ದೊರೆಗಳು, ಇಲಾಖೆಯ ಕಾರಭಾರವನ್ನು ಬಿಟ್ಟು ಹೋಗುವಾಗ ಪ್ರಾಥಮಿಕ ಶಿಕ್ಷಣಕ್ಕೆ ಸುಮಾರು ಆರು ಲಕ್ಷ ರೂಪಾಯಿಗಳು ವರುವರುಷಕ್ಕೆ ಸಲ್ಲುವಂತೆ ವ್ಯವಸ್ಥೆಯನ್ನು ಮಾಡಿ ತಮ್ಮ ನೇಲಾದ ವಿದ್ಯಾಪಕ್ಷಪಾತಿತ್ವವನ್ನು ವ್ಯಕ್ತ ಪಡಿಸಿರುವರು. ಇದರಿಂದ ಇವರ ಹೆಸರು ಚಿರಕಾಲವಾಗಿ ಸ್ಮರಣದಲ್ಲಿ ಉಳಿಯುವದೆಂಬದಕ್ಕೆ ಸಂದೇಹವಿಲ್ಲ. ನಮ್ಮ ಕರ್ಣಾಟಕಭಾಗದ ಪಾಲಿಗೆ ಬಂದ ಹಣದ ವಿವರವು ಹೇಗಂದರೆ:—ಧಾರವಾಡ ಜಿಲ್ಲೆ, ೨೪೩೧; ಕಾರವಾರ ೫೫೬೬; ಬೆಳಗಾವ ೧೧೪೨, ಬಿಜಾಪೂರ ೧೨೦೫, ರತ್ನಾಗಿರಿ ೭೯೪೫; ಕುಲಾಬಾ ೯೪೭೫; ಅಂತು ೬೯೪೭ ರೂಪಾಯಿಗಳು ಲೋಕಲ್‌ಬೋರ್ಡ ಸಾಲೆಗಳಿಗೆ ಕೊಡಲ್ಪಟ್ಟಿರುವವು. ಇದಲ್ಲದೆ ಮ್ಯುನಸಿಪಲ್ ಸ್ಕೂಲಬೋರ್ಡುಗಳಿಗೆ ಕೊಟ್ಟದ್ದು ಹೇಗಂದರೆ—ಧಾರವಾಡ ೨೦೪೦; ಹುಬ್ಬಳ್ಳಿ ೩೦೧೭; ಬೆಳಗಾವ ೨೪೦೦; ಅಥಣಿ ೬೨೪; ಗದಗ ೧೩೪೦; ಹಾವೇರಿ ೨೩೪; ನವಲಗುಂದ ೩೪೪; ರಾಣಿಬೆನ್ನೂರ ೪೩೬; ಬ್ಯಾಡಗಿ ೪೨೦; ನರಗುಂದ ೪೬೪; ಬಾಗಲಕೋಟೆ ೯೦೪; ಇಳಕ

ಲ್ ೨೬೬; ಕಾರವಾರ ೪೬೬; ಕುಮಟಾ ೧೦೫, ೨೨೯
೫೫೦; ಹಳ್ಯಾಳ ೨೧೯; ಗೋಕಾಕ ೫೪೦; ಸೌದತ್ತಿ ೯೬
ಯಂಕನಮರಡಿ ೧೦೪; ಬಿಜಾಪೂರ ೧೪೬೦; ಗುಳೇದಗುಡ
೪೬೪; ಭಟಕಳ ೫೦೪; ಹೊನ್ನಾವರ ೨೪೪, ಇತ್ಯಾದಿ.

ಆಯಾ ಜಿಲ್ಲೆಯ ಕಲೆಕ್ಟರ ದೊರೆಗಳೂ ವಿದ್ಯಾಖಾತೆಯ
ಅಧಿಕಾರಿಗಳೂ, ಮ್ಯುನಿಸಿಪಾಲಿಟಿಗಳ ಅಧಿಕಾರಿಗಳೂ ಒ
ಟ್ಟಾಗಿ ಸೇರಿ ತಮ್ಮ ತಮ್ಮ ಪಾಲಿಗೆ ಬಂದ ಹಣದ ಯೋಗ್ಯ
ವಿನಿಯೋಗವನ್ನು ಮಾಡುವದಾಗಿ ತಿಳಿಯುತ್ತದೆ. ಮುಖ್ಯ
ವಾಗಿ ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಬೆಳಿಸಬೇ
ಕೆಂತಲೂ, ಈಗಿರುವ ಶಾಲೆಗಳು ಸರಸಾಗಿ ನಡೆಯಲಿಕೆ
ಅನುವಾಗಬೇಕೆಂತಲೂ ಈ ಹಣವನ್ನು ಕೊಟ್ಟಿರುವರು
ಇದ್ದರಿಂದ ಇನ್ನು ಮೇಲೆ ಆಯಾ ಜಿಲ್ಲೆಯಲ್ಲಿ, ಸಾಲಿಗಳ ಸಂ
ಖ್ಯೆಯು ಹೆಚ್ಚಾಗಬಹುದೆಂತಲೂ, ಅಧ್ಯಾಪಕರ ಸಂಬಳವು
ಹೆಚ್ಚಿಸಲ್ಪಡಬಹುದೆಂತಲೂ, ವಸ್ತುಪಾಠಗಳ ಉಪಕರಣಾ
ಳನ್ನು ತಕ್ಕಷ್ಟಾದರೂ ಒದಗಿಸಿಕೊಡಬಹುದೆಂತಲೂ, ಇವು
ರತುಗಳಲ್ಲಿ ಸುಧಾರಣೆಯುಂಟಾದೀತೆಂತಲೂ, ಊಹಿಸಲಿಕ್ಕೆ
ಅಡ್ಡಿ ಇಲ್ಲ. ಇನ್ನು ಮುಂದೆ ಒಡವರಾದ ಅಧ್ಯಾಪಕರ
ತೊಂದರೆಗಳು ಕೆಂಚಿತ್ತಾದರೂ ಕಡಿಮೆಯಾಗಬಹುದು.

ಪಾಶ್ಚಮಾತ್ಯ ರಾಷ್ಟ್ರದವರು ಆಗಾಗ್ಗೆ ಗೊತ್ತು ಹಚ್ಚುವ
ಹೊಸ ಹೊಸ ಕೋಧಗಳನ್ನು ಕೇಳಿದರೆ ನಮಗೆ ಪರಮಾಶ್ಚ
ರ್ಯವಾಗುತ್ತದೆ. ಮೊನ್ನೆ ಮೊನ್ನೆ ಲಂಡನ ಪಟ್ಟಣದಲ್ಲಿರು
ವ ಡಾಕ್ಟರ ರಿಚರ್ಡಸನ್‌ನೆಂಬ ಎಮ್. ಡಿ, ಪದವಿಯನ್ನು
ಪಡೆದ ಅಮೇರಿಕೆಯವನೊಬ್ಬ ಪಂಡಿತನು ತಾನು ಇಂದಿನವ
ರೆಗೆ ಕಷ್ಟಬಟ್ಟು ಸಿದ್ಧಿಗೆ ಒಯ್ದ ಮಾನಸಶಾಸ್ತ್ರದ್ವಿಂದು ಪ್ರ
ಯೋಗವನ್ನು ಮಾಡಿತೋರಿಸಿದನು. ಹ್ಯಾಗಂದರೆ—ಇವನ
ತಾನು ಲಂಡನದೊಳಗೆ ಕುಳಿತುಕೊಂಡು ನಾಟೆಂಗ್ಹಮ್ ಶಹ
ರದಲ್ಲಿರುವ ತನ್ನ ಸಹಾಧ್ಯಾಯಿಯಾದ ಫಾಕ್ಸನೆಂಬವನಿಗೆ
ಏನೊಂದು ಸಾಧನವಿಲ್ಲದೆ ವರ್ತಮಾನವನ್ನು ತಿಳಿಸಿದನು.

ಪ್ರೇಕ್ಷಕರು ಇವರ ನಿಜತ್ವವನ್ನು ಮನಗಾಣುವದಕ್ಕಾಗಿ ಇವನನ್ನು ಒಂದು ಕೋಣೆಯಲ್ಲಿ ಕೂಡ್ರಿಸಿ, 'ನೀನು ಫಾಕ್ಸನಿಗೆ ಖಿಔ ಈ ಅಂಕಿಯನ್ನು ತಿಳಿಸೆಂದು ಹೇಳಿದರು. ನಾಟಕದಲ್ಲಿಯೂ ಇದೇ ವೇರೆಗೆ ಫಾಕ್ಸನನ್ನು ಕೋಣೆಯಲ್ಲಿ ಕೂಡಿ ಪ್ರೇಕ್ಷಕರು ಕುಳಿತಿದ್ದರು. ಇವೆರಡು ನಗರಗಳ ನಡುವೆ ೧೧೦ ಮೈಲು ಅಂತರವಿದೆ. ತುಸು ಹೊತ್ತಿನಲ್ಲಿ ಫಾಕ್ಸನು ತನಗೆ ರಿಚರ್ಡಸನ್‌ನು ಖಿಔ ಈ ಅಂಕಿಯನ್ನು ತಿಳಿಸಿದನೆಂದು ಬಳಿಯಲ್ಲಿದ್ದವರಿಗೆ ಹೇಳಿದನು. ಆಗ ಲಂಡನದವರು ಇದನ್ನು ಗಟ್ಟಿಗೇ ಹಚ್ಚಬೇಕೆಂದು ಸಂಜೆಯ ಐದು ಗಂಟೆಗೆ ಫಾಕ್ಸನಿಗೆ—ನೀನು ರಿಚರ್ಡಸನ್ನನಿಗೆ ಖಿಔ ಈ ಅಂಕಿಯನ್ನು ತಿಳಿಸೆಂದು ತಾರ ಮಾಡಿದರು. ಹಾಗೂ ಈ ಕಾರ್ಯವು ಏಳುವರಿ ಬಡಿಯುವದರೊಳಗಾಗಿ ಸಾಂಗವಾಗಬೇಕೆಂದು ಕಟ್ಟು ಮಾಡಿದ್ದರು. ಅದರಂತೆ ಫಾಕ್ಸನು ತನಗೆ ಖಿಔ ಈ ಅಂಕಿಯನ್ನು ತಿಳಿಸಿದನೆಂದು ನಿಯಮಿಸಿದ ಅವಧಿಯೊಳಗೇ ರಿಚರ್ಡಸನ್‌ನು ಪ್ರೇಕ್ಷಕರಿಗೆ ಹೇಳಿದನು. ಈ ಬಗೆಯ ಶೋಧಗಳಿಂದ ನಮ್ಮ ಪ್ರಾಚೀನ ಕಾಲದ ಋಷಿಗಳ ಪರೋಕ್ಷ ಜ್ಞಾನದ ಅಸ್ತಿತ್ವವು ನಿರಾಧಾರವಲ್ಲೆಂದು ಅನುಮಾನವಾಗುತ್ತದೆ.

ಹಿಂದುಸ್ತಾನ ಸರಕಾರದವರು ವಿದ್ಯಾಖಾತೆಯವನೊಬ್ಬ ಅಧಿಕಾರಿಯಾದ ಡಾಕ್ಟರ ಸ್ಟೀನನೆಂಬ ಶೋಧಕನನ್ನು ಮಧ್ಯ ಏಸಿಯದೊಳಗಿನ ಪ್ರಾಚೀನ ರಾಜ್ಯಗಳ ಇತಿಹಾಸಗಳ ಶೋಧಕ್ಕಾಗಿ ಸನ್ ೧೯೦೧ ನೇ ಇಸವಿಯಲ್ಲಿ ನೇಮಿಸಿ ಕಳುಹಿಸಿದ್ದರು. ಈ ಶೋಧಕನು ಕಾಶ್ಮೀರ, ಅಸ್ಕೋರ, ಗಿಲಿಜಿತ, ಹುಂಜಾ, ಕಾಶಗರ ಮುಂತಾದ ನಗರಗಳನ್ನು ಶೋಧಿಸುತ್ತ ಶೋಧಿಸುತ್ತ ಖೋತಾನ ಪ್ರಾಂತಕ್ಕೆ ತಲ್ಪಿದನು ಪ್ರಸಿದ್ಧ ಚೀನ ಪ್ರವಾಸಿಯಾದ ಹುಯೆನ್‌ತ್ಸಾಂಗನು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ 'ನಿಯಾ' ನಗರವನ್ನು ಶೋಧಿಸಿದನು ಪ್ರಸ್ತುತಕ್ಕೆ ಆ ನಗರವು ನಾಮಶೇಷವಾಗಿದೆ. ಅದು ಇರುವ ಸ್ಥಳವನ್ನು ಆ ಗ್ರಂಥದ ಹಾಗು ಇತರ ಸಾಧನಗಳಿಂದ ಗೊತ್ತುಹಚ್ಚಿ ಕೆಲವೆಡೆಯಲ್ಲಿ ನೆಲವನ್ನು ಶೋಧಿಸಲಾಗಿ, ಆ

ವನೆಗೆ ನೊರಾರು ಕಟ್ಟಗೇ ಹಲಿಗೆಯ ಮೇಲೆ ಒಳ್ಳೇ ಕರೇ ಮಸಿಯಿಂದ ಬರೆದ ಲೇಖಗಳು ಶಿಕ್ಕವು. ಇದಲ್ಲದೆ ಇಬ್ರಾಹಿಮನೆಂಬ ಒಬ್ಬ ಮನುಷ್ಯನ ಬಳಿಯಲ್ಲಿ ಇದೇ ಮಾದರಿಯದೊಂದು ಹಲಿಗೆಯು ದೊರೆಯಿತು. ಹೆಚ್ಚಿಚ್ಚು ಶೋಧಿಸಲು ಸುಮಾರು ಇನ್ನೂತು ಹಲಿಗೇ ಮೇಲಿನ ಲೇಖಗಳೂ ಕರೀ ಹಾಸಿದ ಕುರಿಯ ಚರ್ಮದ ಮೇಲೆ ಬರೆದ ಇಪ್ಪತ್ತು ನಾಲ್ಕು ಲೇಖಗಳೂ ದೊರೆತಿರುವವು, ಈ ಲೇಖಗಳೆಲ್ಲ 'ಖರೋಷ್ಠಿ' ಎಂಬ ಭಾಷೆಯಲ್ಲಿರುವವು. ಈ ಭಾಷೆಯು ಸಂಸ್ಕೃತದ ಪ್ರಾಕೃತ ಭಾಷೆಗೆ ಹೋಲುತ್ತದೆ. ಈ ಲೇಖಗಳಲ್ಲಿ ಕೆಲವು ರಾಜಶಾಸನಗಳುಂಟು, ಆ ಶಾಸನಗಳ ಶಿರೋಭಾಗದಲ್ಲಿ " महान्त आव महाराय लिहति " ಎಂಬ ವಾಕ್ಯವಿದೆ. ರಾಜಮುದ್ರೆಯು ಒಂದು ತರದ ಜಿಗಟು ಮಣ್ಣಿನಲ್ಲಿ ಒಂದು ದೇವತೆಯ ಪ್ರತಿಮೆಯುಳ್ಳದ್ದಿರುವದು ಇದರಿಂದ ಇವು ಪಂಜಾಬದ ಉತ್ತರದಲ್ಲಿ ಗ್ರೀಕರಕಾಲದಲ್ಲಿ ಹೆಸರಾದ ತೆಕ್ಸಿಲಾ ಅಥವಾ ತಕ್ಷಶಿಲಾ ಎಂಬಲ್ಲಿ ಆಳಿದ ಅರಸನು ತನ್ನ ರಾಯಭಾರಿಗೆ ಬರೆದ ಆಜ್ಞಾಪತ್ರೆಗಳೆಂದು ತಿಳಿಯುತ್ತವೆ. ಇವೆಲ್ಲ ಸಂಗತಿಗಳಿಂದ ಪ್ರಾಚೀನದ ಭಾರತೀಯರು ಖೋತಾನ ಪ್ರಾಂತದವರೆಗೆ ತಮ್ಮ ಅಧಿಕಾರವನ್ನು ನೆಲೆಗೊಳಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

ಕಳೆದ ತಿಂಗಳಲ್ಲಿ ಧಾರವಾಡ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡ ಚೇಅರಮನ್ನರು, ಬಕ್ಷೀಸ ಸಮಾರಂಭವನ್ನು ಒಳ್ಳೇ ಸಡಗರದಿಂದ ನೆರವೇರಿಸಿದರು ಅದರೆ ಈ ಸಾರೆ ನರುಷದಂತೆ ಬರೇ ಮೆಚ್ಚು ಗೊಡುವ ಸಮಾರಂಭವೊಂದೇ ಸೆಡೆಯಲಿಲ್ಲ. ಚೇಅರಮನ್ನರು ಹಲಜನ ಹೊರಗಿನ ಅಧ್ಯಾಪಕರನ್ನೂ ಸದ್ಗೃಹಸ್ಥರನ್ನೂ ಕರಿಸಿ ತಮ್ಮ ನಗರದೊಳಗಿನ ಅಧ್ಯಾಪಕರಿಂದ ಅವರು ಮೊದಲೇ ಸಿದ್ಧ ಮಾಡಿಕೊಂಡಿದ್ದ ಕಾಲ್ಕೆಂಟು ವಿಷಯಗಳನ್ನು ಕಲಿಸಿಸಿ ತೋರಿಸಿದರು. ಸಪ್ಟೆಂಬರ ತಿಂಗಳ ೧೯ನೇ ತಾರೀಖಿನ ದಿವಸ ಮುಂಜಾನೆ ಹಂಜೆ ಎರಡೂ ಹೊತ್ತು ಈ ಶಿಕ್ಷಣಕಾರ್ಯವು ಟ್ರೇನಿಂಗ

ಕಾಲೇಜಿನ ೧ನೇ ಅ. ವರ್ಷ. ಮು॥ ಶಾ॥ ರಾಮಚಂದ್ರರಾವ ಕುಲಕರ್ಣಿ ಎಲ್. ಸಿ. ಈ. ಇವರ ಅಧ್ಯಕ್ಷತೆಯ ಕೆಳಗೆ ನಡಿಸಲ್ಪಟ್ಟಿತು. ರಾತ್ರಿ ೪ - ೪॥ ಗಂಟೆಯವರೆಗೆ, ಕೆಲಜನರ ಭಾಷಣಗಳಾದವು. ಒಟ್ಟಿಗೆ ಶಿಕ್ಷಕರು ಬಳಿತಾಗಿ ಸಿದ್ಧವಾಡಿಕೊಂಡು ಕಲಿಸುವರೆಂದು ಹೇಳಬಹುದು. ಈಗಿರುವ ಚೇಅರಮನ್ನರು, ಪದವಿಧರರೂ ತರುಣರೂ ಇರುವದರಿಂದ ಶಿಕ್ಷಣಕಾರ್ಯಕ್ಕೆ ಹೆಚ್ಚು ಮೆಚ್ಚುಕ್ತಾರೆಂಬದು ಸಂತೋಷದ ಸಂಗತಿಯು. ಇಷ್ಟೇ ಮೇರೆಗೆ ಉಳಿದ ಮ್ಯುನಿಸಿಪಾಲಿಟಿಯವರೂ ತಮ್ಮಲ್ಲಿರುವ ಅಧ್ಯಾಪಕರಿಗೆ ಉತ್ತೇಜನಕೊಟ್ಟು ಶಿಕ್ಷಣ ಸುಧಾರಣಾ ಕಾರ್ಯವನ್ನು ಭರದಿಂದ ನಡಿಸುವರೆಂದು ನಂಬುತ್ತೇವೆ

ಪ್ರಾಕ್ಟಿಸಿಂಗಸ್ಕೂಲ ಹೆಡ್ ಮಾಸ್ತರರಾದ ಮಿ. ದೇಶಪಾಂಡೆಯವರು ಬಿನ್ ಇಯತ್ತೆ ಹಾಗೂ ಪೊದಲನೆಯ ಇಯತ್ತೆಗಳಿಗಾಗಿ 'ವಸ್ತುಪಾಠ ಶಿಕ್ಷಣಕ್ರಮವೆಂಬ' ಪುಸ್ತಕವನ್ನು ರಚಿಸಿರುವದು ಸರ್ವರಿಗೂ ಗೊತ್ತಿರುವದಷ್ಟೇ, ಈ ಪುಸ್ತಕವನ್ನು ಶಾಲಾಧಿಕಾರಿಗಳು ಮಂಜೂರ ಮಾಡಿದ ನೋಟೀಸು ಇದೇ ಸಂಚಿಕೆಯಲ್ಲಿ ಮುದ್ರಿಸಿದೆ. ಈ ಪುಸ್ತಕವನ್ನು ಇವರು ಒಳ್ಳೇ ಶ್ರಮದಿಂದ ಸಶಾಸ್ತ್ರವಾಗಿ ರಚಿಸಿರುವರು. ಚಿಕ್ಕಮಕ್ಕಳಲ್ಲಿ ಅಂಕುರ ರೂಪವಾಗಿರುವ ಮಾನಸಿಕ ಪ್ರವೃತ್ತಿಗಳನ್ನು ಕ್ರಮವಾಗಿ ಬಲಪಡಿಸುವಂಥ ಪಾಠಗಳನ್ನು ಕ್ರಮಗೊಳಿಸಿ ಒಟ್ಟುಗೂಡಿಸಿದ್ದಾರೆ ಇದೊಂದೇ ಪುಸ್ತಕವನ್ನು ಅಧ್ಯಾಪಕರು ಲಕ್ಷವಿಟ್ಟು ಓದಿಕೊಂಡರೆ ಬಹುಶಃ ವಿಷಯೋಪನ್ಯಾಸಕ್ಕೆ ಸಾಧನವಾದ ಟಿಪ್ಪಣಿಯನ್ನು ರಚಿಸಿಕೊಳ್ಳಲಿಕ್ಕೆ ಅನುವಾಗುವದೆಂದು ನಮ್ಮ ನಂಬಿಗೆಯುಂಟು.

ಈ ಸಾರೆಯ ಕನ್ನಡ ಮುಲಕೀ ಪರೀಕ್ಷೆಗೆ ೧೯೩ ವಿದ್ಯಾರ್ಥಿಗಳೂ ಇಂಗ್ಲೀಷ ಮುಲಕೀ ಪರೀಕ್ಷೆಗೆ ೪೫೫ ವಿದ್ಯಾರ್ಥಿಗಳೂ ಬಂದಿದ್ದರು. ಇವರಲ್ಲಿ ಕ್ರಮವಾಗಿ ೧೪೨, ೨೮೪ ಉಳಿದಿರುವದಾಗಿ ತಿಳಿಯುವದು.

ಉದ್ಭಿಜ್ಜ ಪ್ರಾಣಿಜ ವರ್ಗದ ಪಲವು ಒಡವೆಗಳು

ಉದ್ಭಿಜ್ಜ ವರ್ಗವು.

ಬೊಡ್ಡಿ :—ನೆಲದಿಂದ ಅಡ್ಡ ಟೊಂಗೆಗಳು ಒಡೆಯುವವರೆಗೆ ಹೋದಂಥ ಗಿಡದ ಭಾಗಕ್ಕೆ ಬೊಡ್ಡಿಯೆಂಬ ಹೆಸರನ್ನು ಕೊಟ್ಟಿದ್ದೇವೆ. ಈ ಬೊಡ್ಡಿಯು ತಳದಿಂದ ಮೇಲ್ಮಡಿಗೆ ಸಣ್ಣಾಗುತ್ತ ಹೋಗಿರುತ್ತದೆ. ಇದನ್ನು ಅಡ್ಡ ಕೊರೆದರೆ ಇದರೊಳಗೆ ಮೂರು ಭಾಗಗಳುಂಟೆಂದು ಒಡೆದು ಕಾಣುತ್ತದೆ. ೧ ಬೆಂಡು, ೨ ಕಟ್ಟಿಗೆ, ೩ ತೋಟಿ (ತೊಗಟೆ), ಬೊಡ್ಡಿಯಲ್ಲಿ ನಟ್ಟ ನಡುವೆ ಇರುವಂಥ ಬೆಳ್ಳಗಾಗಿಯೂ, ಹಗುರಾಗಿಯೂ, ಮೆತ್ತಗಾಗಿಯೂ ತೋರುವಂಥ ಭಾಗವೇ ಬೆಂಡೆಂದು ತಿಳಿಯಬೇಕು. ಇದು ಕೆಲವು ಗಿಡಗಳಲ್ಲಿ ಹೆಚ್ಚಿರುವದು ಕೆಲವ್ವಗಳಲ್ಲಿ ಕಡಿಮೆ ಇರುವದು. ಗಿಡವು ಸಣ್ಣನಿದ್ದಾಗ ಪೋಷಕರಸವನ್ನು ಬಯ್ಯುವ ಹರಿಗಳು ಅಥವಾ ಕೊಳವೆಗಳು ಇನ್ನೂ ಸಿದ್ಧವಾಗಿರುವದಿಲ್ಲ. ಆಗ ಪೋಷಕರಸವು ಈ ಬೆಂಡಿನ ದ್ವಾರದಿಂದ ಗಿಡಕ್ಕೆಲ್ಲ ಮುಟ್ಟುತ್ತಿರುತ್ತದೆ. ಗಿಡವು ಬಲಿಯುತ್ತ ನಡೆದಂತೆ ಈ ಬೆಂಡು ಒಣಗುತ್ತ ಹೋಗಿ ಕಡೆಯಲ್ಲಿ ಕೆಲಸಕ್ಕೆ ಬಾರದಂತಾಗುತ್ತದೆ. ಆಗ ಅದನ್ನು ತೆಗೆದರೂ ಹೊಗೆದರೂ ಗಿಡಕ್ಕೆ ಕೇಡು ತಪ್ಪದು.

ಈ ಬೆಂಡಿನ ಸುತ್ತಲೆ ಕಟ್ಟಿಗೆ ಇರುವದು. ಅದು ಗಟ್ಟಿಯಾಗಿಯೂ ಜಿಗಟಾಗಿಯೂ ಇರುವ ತಂತುಗಳು ಒಟ್ಟಾಗಿ ಕೂಡಿರುವದರಿಂದ ಆಗಿರುತ್ತದೆ. ಈ ತಂತುಗಳು ಉದ್ದಕ್ಕೆ ಒಂದಕ್ಕೊಂದು ಗಟ್ಟಿಯಾಗಿ ಅಂಟಿಕೊಂಡಿರುತ್ತವೆ. ಈ ತಂತುಗಳ ಹೊಂದಿಕೆಗೆ ಕಟ್ಟಿಗೆಯು ಎಳೆಯನ್ನುವರು. ಕಟ್ಟಿಗೆಯನ್ನು ಅಡ್ಡ ಕೊಯ್ದರೆ ಈ ಎಳೆಗಳ ಹೊಂದಿಕೆಯು ಕಣ್ಣಿಗೆ ಬೀಳುವದು. ಉದ್ದಕ್ಕೆ ಸೀಳಿದರೆ ಈ ಎಳೆಗಳು ಒಂದರಿಂದೊಂದು ಬೇರೆಯಾಗುವವವು ಕೆಲವು ಗಿಡಗಳ ಬೊಡ್ಡಿಗಳು ಈ ಬೆಂಡಿನ ಸುತ್ತು ಮುತ್ತು ಹೊರಗಿಂದ ಬೆಳೆಯುತ್ತವೆ. ಅಂಥ ಗಿಡಗಳಿಗೆ ಬಹಿರ್ವರ್ಧಿಷ್ಣುವೆಂಬ ಹೆಸರು. ಕೆಲವು ಗಿಡಗಳ ಬೊಡ್ಡಿಗಳು ಒಳಗಿಂದ ಬೆಳೆಯುತ್ತ

ತ್ತವೆ. ಅಂಥ ಗಿಡಗಳಿಗೆ ಅಂತರ್‌ವರ್ಧಿಷ್ಣುವೆಂಬ ಹೆಸರು. ಕಬ್ಬು, ಬಾಳೆ, ಬಿದುರು, ತಾಳೆ, ಮುಂತಾವುಗಳು ಅಂತರ್ವರ್ಧಿಷ್ಣುವಿನ ಉದಾಹರಣೆಗಳು. ಮಾವು, ಹಲಸು, ಹುಣಸೆ ಮುಂತಾವುಗಳು ಬಹಿರ್‌ವರ್ಧಿಷ್ಣುವಿನ ಉದಾಹರಣೆಗಳು. ಅಂತರ್‌ವರ್ಧಿಷ್ಣು ವೃಕ್ಷಗಳ ಬೊಡ್ಡಿಯು ತಳದಿಂದ ತುದಿತನಕ ಒಂದೇ ಸವನೆ ಗಡುತರವಾಗಿಯೂ, ದುಂಡಾಗಿಯೂ ಇರುತ್ತದೆ. ಇವುಗಳಲ್ಲಿ ಮೊದಲು ಒಂದು ಪೊಳ್ಳುಗಣೆಯು ಹುಟ್ಟಿ ತುಸು ದೂರ ಮೇಲಕ್ಕೆ ಹೋದ ಬಳಿಕ ಅದರ ಒಳ ಬದಿಯಿಂದ ತೋಟಿಯು ತರದಲ್ಲಿ ಬೇರೊಂದು ಹೊಸಕರವು ಉತ್ಪನ್ನವಾಗುತ್ತದೆ. ಈ ಮಾದರಿಯ ಗಿಡಗಳಿಗೆ ಕೊಂಬೆಗಳುಂಟಾಗುವ ಸ್ಥಳವಿಲ್ಲದಿರುವದರಿಂದ ಇವುಗಳಿಗೆ ಕೊಂಬೆಗಳು ಇರುವದಿಲ್ಲ. ಆದರೂ ಬೊಡ್ಡಿಗಿರುವ ಕೆಲವು ಗನ್ನುಗಳಲ್ಲಿ ಮೊಳಿಕೆ ಒಡೆಯುತ್ತವೆ. ಈ ತರದ ಗಿಡಗಳ ಮೇಲಕ್ಕೆ ಹೋದ ನಡುವಿನ ಮೊಳಿಕೆಯು ಮಾತ್ರ ಕ್ರಮವಾಗಿ ಬೆಳೆಯುತ್ತ ಸಾಗುತ್ತದೆ. ಮತ್ತು ಎಲೆ ಹಣ್ಣುಗಳಾದರೂ ಅದಕ್ಕೇ ಆಗುತ್ತವೆ. ವಾಡಿಕೆಯಾಗಿ ಎಲ್ಲ ತಾಳುಗನ್ನುಗಳ ಸಸಿಗಳೂ ಹುಲ್ಲು, ಅದಿಕೆ, ಬಾಳೆ, ತಾಳೆ, ಕಬ್ಬು, ಬಿದರು ಮುಂತಾದ ವನಸ್ಪತಿಗಳೂ ಒಳಗಿಂದ ಬೆಳೆಯುವ ಬೊಡ್ಡಿಯುಳ್ಳ ಅಂದರೆ ಅಂತರ್ವರ್ಧಿಷ್ಣು ಕುಲದೊಳಗೆ ಬರುತ್ತವೆ. ಈ ಕುಲದ ಗಿಡಗಳ ಬೊಡ್ಡಿಗೆ ತೊಗಟೆ ಇರುವದಿಲ್ಲ. ಇವುಗಳ ಹೊರಮೈ ಬಿರುಸಾಗಿಯೂ ಒಳಮೈ ಮೆತ್ತಗಾಗಿಯೂ ಇರುತ್ತದೆ

ಹೊರಗಿಂದ ಬೆಳೆಯುವ ಬೊಡ್ಡಿಗಳುಳ್ಳ ಗಿಡಗಳ ರಚನೆಯು ಇದಕ್ಕೂ ತೊಡಕುಳ್ಳದ್ದು. ಬೆಂಡಿನ ಸುತ್ತು ಮುತ್ತು ವರ್ತುಳಾಕಾರವಾದ ಅಸಂಖ್ಯ ತರಗಳು ಇರುತ್ತವೆ. ಅದಕ್ಕೆ ನಾವು ಕಾಷ್ಠ ಇಲ್ಲವೆ ಕಟ್ಟಿಗೆ ಎನ್ನುತ್ತೇವೆ. ಈ ಕಟ್ಟಿಗೆಯ ಸುತ್ತು ಮುತ್ತು ತೋಟೆ ಇರುತ್ತದೆ. ಬೆಂಡಿನ ಸುತ್ತು ಮುತ್ತು ಸರ್ವಗೊಮ್ಮೆ ಇಲ್ಲವೆ ವರ್ಷಕ್ಕೊಮ್ಮೆ ಕಟ್ಟಿಗೆಯ ಹೊಸ ತರವು ಉಂಟಾಗುತ್ತದೆ. ಈ ಹೊಸ ತರವು ಸಿದ್ಧವಾದ ಕೂಡಲೆ ಒಳಗಿನ ತರವು ಒತ್ತಲ್ಪಡುವದರಿಂದ

ಅದಕ್ಕೆ ಅಡ್ಡ ಬೆಳೆಯಲಿಕ್ಕೆ ಹಾದಿ ಕಟ್ಟುವಾಗಿ ಉದ್ದಕ್ಕೆ ಬೆಳೆಯುತ್ತ ಸಾಗುತ್ತದೆ. ಹೀಗಾಗುವದರಿಂದಲೇ ಗಿಡವು ಉದ್ದವೂ ಅಡ್ಡವೂ ಒಮ್ಮೆಲೇ ಬೆಳೆಯುತ್ತ ಹೋಗುತ್ತದೆ. ಬೊಡ್ಡಿಯು ಉದ್ದ ಬೆಳೆಯುತ್ತ ನಡೆದಂತೆ ಈ ಕಟ್ಟಿಗೆಯ ತರಗಳು ಕಡಿಮೆಯಾಗುತ್ತ ಹೋಗಿ ಕಡೆಗೆ ಕಟ್ಟಾಗುತ್ತವೆ. ಕೆಲವೊಂದು ಬೊಡ್ಡಿಯ ತುಂಡನ್ನು ಅಡ್ಡಕೊರೆದು, ಕೊರೆದಲ್ಲಿ ಕಣ್ಣಿಟ್ಟು ನೋಡಿದರೆ ಆ ಕಟ್ಟಿಗೆಯಲ್ಲಿ ವರ್ತುಳಾಕಾರದ ಪರದೆಗಳು ನಿಚ್ಚಳವಾಗಿ ಕಾಣುತ್ತವೆ. ಈ ವರ್ತುಳಾಕಾರವಾದ ಪರದೆಗಳು ಸ್ಥೂಲವಾನದೀದ ಒಂದೊಂದು ವರ್ಷದ ಬೆಳಿಗೆಯನ್ನು ತೋರಿಸುತ್ತವೆ. ಆದ್ದರಿಂದ ಈ ವರ್ತುಳಗಳನ್ನು ಎಣಿಸಿ ಗಿಡವು ಎಷ್ಟು ವರ್ಷದ್ದೆಂಬದನ್ನು ಅನುಮಾನ ಮಾಡಬಹುದು. ತೀರ ಹೊದಲನೇ ವರ್ಷದ ಕಟ್ಟಿಗೆಯು ಬೆಂಡಿನ ಹೊರಬದಿಗೆ ಅದಕ್ಕೆ ಹೊಂದಿಕೊಂಡಿರುವದು. ಇದರ ಹೊರಬದಿಗೆ ಹೊಂದಿಕೊಂಡು ಎರಡನೇ ವರ್ಷದ ವರ್ತುಳವು ಇರುವದು ಇದೇ ಮೇರೆಗೆ ವರುವರುಷ ಹೊತ ವರ್ತುಳಾಕಾರವಾದ ತರಗಳು ಮೆಲ್ಲ ಮೆಲ್ಲನೆ ಆ ಗಿಡವನ್ನು ಬಲಿಸುತ್ತ ಸಾಗುವವು ಗಿಡವು ಸಣ್ಣದು ಮತ್ತು ಸ್ವಲ್ಪ ದಿವಸದ್ದು ಇದ್ದರೆ ಈ ವರ್ತುಳಗಳಾದರೂ ಸ್ವಲ್ಪವೇ ಇರುವವು.

ಚಿಕ್ಕಂದಿನಲ್ಲಿ ಪ್ರಾಣಿಗಳು ಭಕ್ಷದಿಂದ ಬೆಳೆಯುವಂತೆ ಎಳೆ ಗಿಡಗಳಾದರೂ ಭರ್ತಕದಿಂದ ಬೆಳೆಯುತ್ತವೆ. ಗಿಡಗಳು ಬಹಿತ ಬಳಿಕ ಅವುಗಳ ಬೆಳಿಗೆಯು ಕಡಿಮೆಯಾಗುತ್ತದೆ. ಇಲ್ಲವೆ ಕಟ್ಟಾಗುತ್ತದೆ. ಆದ್ದರಿಂದ ತೀರ ಒಳಗಿರುವ ಪರ್ವ ವರ್ತುಳಗಳು ತಮ್ಮ ಹೊರಬದಿಯ ವರ್ತುಳಗಳಿಗಿಂತ ಹೆಚ್ಚು ದಪ್ಪಾಗಿರುತ್ತವೆ. ಹಲವು ಗಿಡಗಳೊಳಗಿನ ಪರ್ವ ವರ್ತುಳಗಳು ಹೆಚ್ಚು ಕಡಿಮೆ ದಪ್ಪಾಗಿಯೂ ಬೇರೆ ಕೆಲವು ಗಿಡಗಳೊಳಗಿನ ವರ್ಷ ವರ್ತುಳಗಳು ಒಂದೇ ಸಮನಾಗಿಯೂ ಇರುತ್ತವೆ. ಈ ವರ್ತುಳಾಕಾರದ ಪರದೆಗಳು ತೀರ ಗಟ್ಟಿಯಾದವೆಂದರೆ ಕಟ್ಟಿಗೆಯು ಹಳೆಯದಾಯಿತೆನ್ನು

ತ್ತಾರೆ. ಬೇರೆ ಬೇರೆ ಜಾತಿಯ ಗಿಡಗಳೊಳಗಿನ ಕಟ್ಟಿಗೆಯು ಹಳಯದಾಗಲಿಕ್ಕೆ ೫ ರಿಂದ ೫೦ ವರ್ಷಗಿಳ್ಳು ಬೇಕಾಗುತ್ತ ವೆ. ಕಟ್ಟಿಗೆಯು ಹಳೆದಾಗುವ ಮೊದಲು ಬೆಳ್ಳಗಿರುತ್ತದೆ. ಗಿಡಗಳಲ್ಲಿ ತೀಗ ಹಳಗಟ್ಟಿಗೆಯು ಜೊಡ್ಡಿಡು ನಟ್ಟನಡುವೆ ಇರುತ್ತದೆ. ಅದಕ್ಕೆ ಬಲಿತಕಟ್ಟಿಗೆಯೆಂತಲೂ, ಕೆಚ್ಚೆಂತ ಲೂ ಹೆಸರು, ಈ ಕೆಚ್ಚಿಗೂ ಹೊರದೋಟೆಗೂ ನಡುವಿರು ವ ಕಟ್ಟಿಗೆಗೆ ರಸಕಾಷ್ಠವೆಂತಲೂ, ಎಳೆಗಟ್ಟಿಗೆಯೆಂತಲೂ ಅನ್ನುವರು. ಈ ಕಟ್ಟಿಗೆಯು ಮಾರ್ಗವಾಗಿಯೇ ಬೇರೊಳಗಿ ನ ರಸವು ಎಲೆಗಳಿಗೆ ಮುಟ್ಟುತ್ತಿರುತ್ತದೆ. ಗಿಡವು ಬಲಿಯು ತ್ತ ಹೋದಂತೆ ಈ ರಸಕಾಷ್ಠ ಅಥವಾ ಎಳೆಗಟ್ಟಿಗೆಯು ಕೆ ಚ್ಚಾಗುತ್ತದೆ. ಎಲೆಯಿಂದ ತೋಟೆಗುಂಟ ಇಳಿಯುವ ಮುಂದವಾದ ರಸವು ಅಡ್ಡ ಬದಿಗೆ ಇರುವ ವಾಹಿನಿಗಳೊಳ ಗಿಂದ ಹರಿಯುತ್ತ ಎಳೆಗಟ್ಟಿಗೆಗೆ ಮುಟ್ಟುತ್ತದೆ. ಅದರಿಂದ ಆ ಭಾಗದೊಳಗಿನ ಪೊಳ್ಳೆಲ್ಲ ತುಂಬಿ ಹೋಗಿ ಕಟ್ಟಿಗೆಗೆ ಕ ಪ್ಪು ಬಣ್ಣವು ಬರುತ್ತದೆ. ಜಾಲಿ, ಓಕ ಮುಂತಾದ ಜಾತಿ ಯ ಹಲವು ಗಿಡಗಳಲ್ಲಿ ತೋಟೆಯೊಳಗಿಂದ ಕಟ್ಟಿಗೆಯ ಕ ಡೆಗೆ ಹೋಗಿರುವ ರಸವಾಹಿನಿಗಳು ದೊಡ್ಡವಿರುವದರಿಂದ ನಿಚ್ಚಳವಾಗಿ ಕಾಣುತ್ತವೆ ಆದರೆ ಬೇರೆ ಹಲವು ಗಿಡಗ ಳೊಳಗಿನ ವಾಹಿನಿಗಳು ಚಿಕ್ಕವಿರುವದರಿಂದ ಬರಿಗಣ್ಣಿಗೆ ಕಾಣಿಸುವದಿಲ್ಲ.

ತಾಳಿಕೆಯೂ, ಗಟ್ಟಿತನವೂ ಬೇಕಾದಲ್ಲಿ ಬಲಿತ ಕಟ್ಟಿಗೆ ಅಥವಾ ಕೆಚ್ಚನ್ನು ಉಪಯೋಗಿಸುತ್ತಾರೆ. ಒಳಿತಾಗಿ ಬಲಿತ ಗಿಡವನ್ನೇ ಕಡಿದು ಅದರ ಕಟ್ಟಿಗೆಯಿಂದ ಮನೆಗಳನ್ನು ಕಟ್ಟ ಬೇಕು; ಯಾವ ಗಿಡಗಳೊಳಗಿನ ಕಟ್ಟಿಗೆಯು ಚನ್ನಾಗಿ ಬ ಲಿತಿರುವದೋ ಯಾವ ಗಿಡವು ಒಳಗೆ ಇನ್ನೂ ಕೊಳೆಯಹ ತ್ತಿರುವದಿಲ್ಲವೋ ಅಂಥ ಗಿಡದ ಕಟ್ಟಿಗೆಗಳನ್ನು ಸಂಗ್ರಹಿಸಿ ಮನೆಕಟ್ಟಿದರೆ ಆ ಮನೆಗಳು ಬಹು ದಿವಸ ತಾಳುವವು. ನಮ್ಮ ದೇಶದೊಳಗೆ ಭಾದ್ರಪದ ಅಥವಾ ಆಶ್ವೀನ ಮಾಸಗ ಳಲ್ಲಿ ಗಿಡ ಕಡಿಯುವದು ಒಳಿತೆಂದು ತಿಳಿಯುತ್ತಾರೆ. ಗಿಡ ವನು ಕಡಿದ ಬಳಿಕ ನಿಕೃಷ್ಟ ಪಕ್ಷಕ್ಕೆ ಎರಡು ವರ್ಷಗಳ

ಉದ್ಭಿಜ್ಜ ಪ್ರಾಣಿಜ ವರ್ಗದ ಹಲವು ಒಡವೆಗಳು

ಉದ್ಭಿಜ್ಜ ವರ್ಗವು.

ಬೊಡ್ಡಿ :—ನೆಲದಿಂದ ಅಡ್ಡ ಬೊಂಗೆಗಳು ಒಡೆಯುವವಲ್ಲಿ ಹೋದಂಥ ಗಿಡದ ಭಾಗಕ್ಕೆ ಬೊಡ್ಡಿಯೆಂಬ ಹೆಸರನ್ನು ಕೊಟ್ಟಿದ್ದೇವೆ. ಈ ಬೊಡ್ಡಿಯು ತಳದಿಂದ ಮೇಲ್ಮಡಿಗೆ ಸಣ್ಣಗುತ್ತ ಹೋಗಿರುತ್ತದೆ. ಇದನ್ನು ಅಡ್ಡ ಕೊರೆದರೆ ಇದರ ಒಳಗೆ ಮೂರು ಭಾಗಗಳುಂಟೆಂದು ಒಡೆದು ಕಾಣುತ್ತದೆ. ೧ ಬೆಂಡು, ೨ ಕಟ್ಟಿಗೆ, ೩ ತೋಪಿ (ತೊಗಟೆ), ಬೊಡ್ಡಿಯಲ್ಲಿ ಕಟ್ಟಿ ನಡುವೆ ಇರುವಂಥ ಬೆಳ್ಳಗಾಗಿಯೂ, ಹಗುರಾಗಿಯೂ, ಮೆತ್ತಗಾಗಿಯೂ ತೋರುವಂಥ ಭಾಗವೇ ಬೆಂಡೆಂದು ತಿಳಿಯಬೇಕು. ಇದು ಕೆಲವು ಗಿಡಗಳಲ್ಲಿ ಹೆಚ್ಚಿರುವದು ಕೆಲವುಗಳಲ್ಲಿ ಕಡಿಮೆ ಇರುವದು. ಗಿಡವು ಸಣ್ಣದಿದ್ದಾಗ ಪೋಷಕರಸವನ್ನು ಬಯ್ಯುವ ಹರಿಗಳು ಅಥವಾ ಕೊಳವೆಗಳು ಇನ್ನೂ ಸಿದ್ಧವಾಗಿರುವದಿಲ್ಲ. ಆಗ ಪೋಷಕರಸವು ಈ ಬೆಂಡಿನ ದ್ವಾರದಿಂದ ಗಿಡಕ್ಕೆಲ್ಲ ಮುಟ್ಟುತ್ತಿರುತ್ತದೆ. ಗಿಡವು ಬಲಿಯುತ್ತ ನಡೆದಂತೆ ಈ ಬೆಂಡು ಒಣಗುತ್ತ ಹೋಗಿ ಕಡೆಯಲ್ಲಿ ಕೆಲಸಕ್ಕೆ ಭಾರದಂತಾಗುತ್ತದೆ. ಆಗ ಅದನ್ನು ತೆಗೆದರೂ ಗಿಡಕ್ಕೆ ಕೇಡು ತಪ್ಪದು.

ಈ ಬೆಂಡಿನ ಸುತ್ತಲೆ ಕಟ್ಟಿಗೆ ಇರುವದು. ಅದು ಗಟ್ಟಿಯಾಗಿಯೂ ಜಿಗಟಾಗಿಯೂ ಇರುವ ತಂತುಗಳು ಒಟ್ಟಾಗಿ ಕೂಡಿರುವದರಿಂದ ಆಗಿರುತ್ತದೆ. ಈ ತಂತುಗಳು ಉದ್ದಕ್ಕೆ ಒಂದಕ್ಕೊಂದು ಗಟ್ಟಿಯಾಗಿ ಅಂಟಿಕೊಂಡಿರುತ್ತವೆ. ಈ ತಂತುಗಳ ಹೊಂದಿಕೆಗೆ ಕಟ್ಟಿಗೆಯು ಎಳೆಯನ್ನುವರು ಕಟ್ಟಿಗೆಯನ್ನು ಅಡ್ಡ ಕೊಯ್ದರೆ ಈ ಎಳೆಗಳ ಹೊಂದಿಕೆಯು ಕಣ್ಣಿಗೆ ಬೀಳುವದು. ಉದ್ದಕ್ಕೆ ಸೀಳಿದರೆ ಈ ಎಳೆಗಳು ಒಂದರಿಂದೊಂದು ಬೇರೆಯಾಗುವವೆವು ಕೆಲವು ಗಿಡಗಳ ಬೊಡ್ಡೆಗಳು ಈ ಬೆಂಡಿನ ಸುತ್ತು ಮುತ್ತು ಹೊರಗಿಂದ ಬೆಳೆಯುತ್ತವೆ. ಅಂಥ ಗಿಡಗಳಿಗೆ ಬಹಿರ್ವರ್ಧಿಷ್ಣುವೆಂಬ ಹೆಸರು. ಕೆಲವು ಗಿಡಗಳ ಬೊಡ್ಡೆಗಳು ಒಳಗಿಂದ ಬೆಳೆಯು

ಕ್ತವೆ. ಅಂಥ ಗಿಡಗಳಿಗೆ ಅಂತರ್‌ವರ್ಧಿಷ್ಣುವಂಬು ಯಸಲು. ಕಬ್ಬು, ಬಾಳೆ, ಬಿದುರು, ತಾಳೆ, ಮುಂತಾವುಗಳು ಅಂತರ್ ವರ್ಧಿಷ್ಣುವಿನ ಉದಾಹರಣೆಗಳು. ಮಾವು, ಹಲಸು, ಹುಣಸೆ ಮುಂತಾವುಗಳು ಬಹಿರ್‌ವರ್ಧಿಷ್ಣುವಿನ ಉದಾಹರಣೆಗಳು. ಅಂತರ್‌ವರ್ಧಿಷ್ಣು ವೃಕ್ಷಗಳ ಬೊಡ್ಡಿಯು ತಳದಿಂದ ತುದಿತನಕ ಒಂದೇ ಸವನೆ ಗಡುತರವಾಗಿಯೂ, ದುಂಡಾಗಿಯೂ ಇರುತ್ತದೆ. ಇವುಗಳಲ್ಲಿ ಹೊಡಲು ಒಂದು ಪ್ರೌಢಾವಸ್ಥೆಯು ಹುಟ್ಟಿ ತುಸು ದೂರ ಮೇಲಕ್ಕೆ ಹೋದ ಬಳಿಕ ಅದರ ಒಳ ಬದಿಯಿಂದ ತೋಟೆಯು ತಲದಲ್ಲಿ ಜೇರೊಂದು ಹೊಸತರವು ಉತ್ಪನ್ನವಾಗುತ್ತದೆ. ಈ ಮೂಡರಿಯು ಗಿಡಗಳಿಗೆ ಕೊಂಬೆಗಳುಂಟಾಗುವ ಸ್ಥಳವಿಲ್ಲದಿರುವದರಿಂದ ಇವುಗಳಿಗೆ ಕೊಂಬೆಗಳು ಇರುವದಿಲ್ಲ. ಆದರೂ ಬೊಡ್ಡೆಗಿರುವ ಕೆಲವು ಗಣ್ಣುಗಳಲ್ಲಿ ಮೊಳಿಕೆ ಒಡೆಯುತ್ತವೆ. ಈ ತರದ ಗಿಡಗಳ ಮೇಲಕ್ಕೆ ಹೋದ ನಡುವಿನ ಮೊಳಿಕೆಯು ಮಾತ್ರ ಕ್ರಮವಾಗಿ ಬೆಳೆಯುತ್ತ ಸಾಗುತ್ತದೆ. ಮತ್ತು ಎಲೆ ಹಣ್ಣುಗಳಾದರೂ ಅದಕ್ಕೇ ಆಗುತ್ತವೆ. ವಾಡಿಕೆಯಾಗಿ ಎಲ್ಲ ತಾಳುಗಳ ಸಸಿಗಳೂ ಹುಲ್ಲು, ಅದಿಕೆ, ಬಾಳೆ, ತಾಳೆ, ಕಬ್ಬು, ಬಿದರು ಮುಂತಾದ ವನಸ್ಪತಿಗಳೂ ಒಳಗಿಂದ ಬೆಳೆಯುವ ಬೊಡ್ಡೆಯುಳ್ಳ ಅಂದರೆ ಅಂತರ್‌ವರ್ಧಿಷ್ಣು ಕುಲದೊಳಗೆ ಬರುತ್ತವೆ. ಈ ಕುಲದ ಗಿಡಗಳ ಬೊಡ್ಡಿಗೆ ತೊಗಟೆ ಇರುವದಿಲ್ಲ. ಇವುಗಳ ಹೊರಮೈ ಬಿರುಸಾಗಿಯೂ ಒಳಮೈ ಮೆತ್ತಗಾಗಿಯೂ ಇರುತ್ತವೆ

ಹೊರಗಿಂದ ಬೆಳೆಯುವ ಬೊಡ್ಡಿಗಳುಳ್ಳ ಗಿಡಗಳ ರಚನೆಯು ಇದಕ್ಕೆ ತೊಡಕುಳ್ಳದ್ದು. ಬೆಂಡಿನ ಸುತ್ತು ಮುತ್ತು ವರ್ತುಳಾಕಾರವಾದ ಅಸಂಖ್ಯ ತರಗಳು ಇರುತ್ತವೆ. ಅದಕ್ಕೆ ನಾವು ಕಾಷ್ಠ ಇಲ್ಲವೆ ಕಟ್ಟಿಗೆ ಎನ್ನುತ್ತೇವೆ. ಈ ಕಟ್ಟಿಗೆಯ ಸುತ್ತು ಮುತ್ತು ತೋಟೆ ಇರುತ್ತದೆ. ಬೆಂಡಿನ ಸುತ್ತು ಮುತ್ತು ಸರ್ತಿಗೊಮ್ಮೆ ಇಲ್ಲವೆ ವರ್ಷಕ್ಕೊಮ್ಮೆ ಕಟ್ಟಿಗೆಯ ಹೊಸ ತರವು ಉಂಟಾಗುತ್ತದೆ. ಈ ಹೊಸ ತರವನ್ನು ಸಿದವಾದ ಕೂಡಲೆ ಒಳಗಿನ ತರವು ಬತ್ತಲ್ಪಡುವದರಿಂ

ಅದಕ್ಕೆ ಅಡ್ಡ ಬೆಳೆಯಲಿಕ್ಕೆ ಹಾಧಿ ಕಟ್ಟುಗಿ ಉದ್ದಕ್ಕೆ ಬೆಳೆಯುತ್ತ ಸಾಗುತ್ತದೆ. ಹೀಗಾಗುವದರಿಂದಲೇ ಗಿಡವು ಉದ್ದವೂ ಅಡ್ಡವೂ ಒಮ್ಮೆಲೇ ಬೆಳೆಯುತ್ತ ಹೋಗುತ್ತದೆ. ಬೊಡ್ಡಿಯು ಉದ್ದ ಬೆಳೆಯುತ್ತ ನಡೆದಂತೆ ಈ ಕಟ್ಟಗೆಯ ತರಗಳು ಕಡಿಮೆಯಾಗುತ್ತ ಹೋಗಿ ಕಡೆಗೆ ಕಟ್ಟಾಗುತ್ತವೆ. ಕೆಲವೊಂದು ಬೊಡ್ಡಿಯ ತುಂಡನ್ನು ಅಡ್ಡ ಕೊರೆದು ಕೊರೆದಲ್ಲಿ ಕಣ್ಣಿಟ್ಟು ನೋಡಿದರೆ ಆ ಕಟ್ಟಗೆಯಲ್ಲಿ ವರ್ತುಳಾಕಾರದ ಪರದೆಗಳು ನಿಚ್ಚಳವಾಗಿ ಕಾಣುತ್ತವೆ. ಈ ವರ್ತುಳಾಕಾರವಾದ ಪರದೆಗಳು ಸ್ಥೂಲವಾನದೀದ ಒಂದೊಂಪು ವರ್ಷದ ಬೆಳಿಗೆಯನ್ನು ತೋರಿಸುತ್ತವೆ. ಆದ್ದರಿಂದ ಈ ವರ್ತುಳಗಳನ್ನು ಎಣಿಸಿ ಗಿಡವು ಎಷ್ಟು ವರ್ಷದ್ದೆಂಬದನ್ನು ಅನುಮಾನ ಮಾಡಬಹುದು. ತೀರ ಹೊದಲನೇ ವರ್ಷದ ಕಟ್ಟಗೆಯು ಬೆಂಡಿನ ಹೊರಬದಿಗೆ ಅದಕ್ಕೆ ಹೊಂದಿಕೊಂಡಿರುವದು. ಇದರ ಹೊರಬದಿಗೆ ಹೊಂದಿಕೊಂಡು ಎರಡನೇ ವರ್ಷದ ವರ್ತುಳವು ಇರುವದು ಇದೇ ಮೇರೆಗೆ ವರುಷರುಷ ಹೊತ ವರ್ತುಳಾಕಾರವಾದ ತರಗಳು ಮೆಲ್ಲ ಮೆಲ್ಲನೆ ಆ ಗಿಡವನ್ನು ಬಲಿಸುತ್ತ ಸಾಗುವವು ಗಿಡವು ಸಣ್ಣದು ಮತ್ತು ಸ್ವಲ್ಪ ದಿವಸದ್ದು ಇದ್ದರೆ ಈ ವರ್ತುಳಗಳಾವರೂ ಸ್ವಲ್ಪವೇ ಇರುವವು.

ಚಿಕ್ಕಂದಿನಲ್ಲಿ ಪ್ರಾಣಿಗಳು ಭರದಿಂದ ಬೆಳೆಯುವಂತೆ ಎಳೆ ಗಿಡಗಳಾವರೂ ಭರ್ತರದಿಂದ ಬೆಳೆಯುತ್ತವೆ. ಗಿಡಗಳು ಬಿತ ಬಳಿಕ ಅವುಗಳ ಬೆಳಿಗೆಯು ಕಡಿಮೆಯಾಗುತ್ತದೆ ಇಲ್ಲವೆ ಕಟ್ಟಾಗುತ್ತದೆ. ಆದ್ದರಿಂದ ತೀರ ಒಳಗಿರುವ ಹೊರ್ವ ವರ್ತುಳಗಳು ತಮ್ಮ ಹೊರಬದಿಯ ವರ್ತುಳಗಳಿಗಿಂತ ಹೆಚ್ಚು ದಪ್ಪಾಗಿರುತ್ತವೆ. ಹಲವು ಗಿಡಗಳೊಳಗಿನ ವರ್ಷ ವರ್ತುಳಗಳು ಹೆಚ್ಚು ಕಡಿಮೆ ದಪ್ಪಾಗಿಯೂ ಬೇಕೆ ಕೆಲವು ಗಿಡಗಳೊಳಗಿನ ವರ್ಷ ವರ್ತುಳಗಳು ಒಂದೇ ಸವನಾಗಿಯೂ ಇರುತ್ತವೆ. ಈ ವರ್ತುಳಾಕಾರದ ಪರದೆಗಳು ತೀರ ಗಟ್ಟಿಯಾದವೆಂದರೆ ಕಟ್ಟಗೆಯು ಹಳೆಯದಾಯಿತೆನ್ನು

ತ್ತಾರೆ. ಬೇರೆ ಬೇರೆ ಜಾತಿಯ ಗಿಡಗಳೊಳಗಿನ ಕಟ್ಟಿಗೆಯು
ಹಳಯುದಾಗಲಿಕ್ಕೆ ೫ ರಿಂದ ೫೦ ವರ್ಷಗಿಳ್ಳು ಬೇಕಾಗುತ್ತ
ತೆ. ಕಟ್ಟಿಗೆಯು ಹಳಿದಾಗುವ ಮೊದಲು ಬೆಳ್ಳಗಿರುತ್ತದೆ.
ಗಡಗಳಲ್ಲಿ ತೀರ ಹಳಗಟ್ಟಿಗೆಯು ಬೊಡ್ಡಿಯು ನಟ್ಟನಡುವೆ
ಇರುತ್ತದೆ. ಅದಕ್ಕೆ ಬಲಿತಕಟ್ಟಿಗೆಯಿಂತಲೂ, ಕೆಚ್ಚೆಂತ
ಲೂ ಹೆಸರು. ಈ ಕೆಚ್ಚಿಗೂ ಹೊರದೋಟಿಗೂ ನಡುವಿರು
ವ ಕಟ್ಟಿಗೆಗೆ ರಸಕಾಷ್ಠವೆಂತಲೂ, ಎಳಿಗಟ್ಟಿಗೆಯಿಂತಲೂ
ಕರೆಯುವರು. ಈ ಕಟ್ಟಿಗೆಯ ಮಾರ್ಗವಾಗಿಯೇ ಬೇರೊಳಗಿ
ನ ರಸವು ಎಲೆಗಳಿಗೆ ಮುಟ್ಟುತ್ತಿರುತ್ತದೆ. ಗಿಡವು ಒಲಿಯು
ತ್ತ ಹೋದಂತೆ ಈ ರಸಕಾಷ್ಠ ಅಥವಾ ಎಳಿಗಟ್ಟಿಗೆಯು ಕೆ
ಚ್ಚಾಗುತ್ತದೆ. ಎಲೆಯಿಂದ ಕೋಟೆಗುಂಟ ಇಳಿಯುವ
ಯುಂದವಾದ ರಸವು ಅಡ್ಡ ಬದಿಗೆ ಇರುವ ವಾಹಿನಿಗಳೊಳ
ಗಂದ ಹರಿಯುತ್ತ ಎಳಿಗಟ್ಟಿಗೆಗೆ ಮುಟ್ಟುತ್ತದೆ. ಅದರಿಂದ
ಈ ಭಾಗದೊಳಗಿನ ಪೊಳ್ಳೆಲ್ಲ ತುಂಬಿ ಹೋಗಿ ಕಟ್ಟಿಗೆಗೆ ಕ
ಪ್ಪು ಬಣ್ಣವು ಬರುತ್ತದೆ. ಜಾಲಿ, ಓಕ ಮುಂತಾದ ಜಾತಿ
ಯ ಹಲವು ಗಿಡಗಳಲ್ಲಿ ತೋಟೆಯೊಳಗಿಂದ ಕಟ್ಟಿಗೆಯ ಕ
ಪ್ಪಿಗೆ ಹೋಗಿರುವ ರಸವಾಹಿನಿಗಳು ದೊಡ್ಡವಿರುವದರಿಂದ
ಅಚ್ಚೆಳವಾಗಿ ಕಾಣುತ್ತವೆ ಆದರೆ ಬೇರೆ ಹಲವು ಗಿಡಗ
ಳೊಳಗಿನ ವಾಹಿನಿಗಳು ಚಿಕ್ಕವಿರುವದರಿಂದ ಬರಿಗಣ್ಣಿಗೆ
ಕಾಣಿಸುವದಿಲ್ಲ.

ತಾಳಿಕೆಯೂ, ಗಟ್ಟಿತನವೂ ಬೇಕಾದಲ್ಲಿ ಬಲಿತ ಕಟ್ಟಿಗೆ
ಯವಾ ಕೆಚ್ಚನ್ನು ಉಪಯೋಗಿಸುತ್ತಾರೆ. ಒಳಿತಾಗಿ ಬಲಿತ
ಗಡವನ್ನೇ ಕಡಿದು ಅದರ ಕಟ್ಟಿಗೆಯಿಂದ ಮನೆಗಳನ್ನು ಕಟ್ಟು
ವೀಕು; ಯಾವ ಗಿಡಗಳೊಳಗಿನ ಕಟ್ಟಿಗೆಯು ಚನ್ನಾಗಿ ಬ
ತಿರುವದೋ ಯಾವ ಗಿಡವು ಒಳಗೆ ಇನ್ನೂ ಕೊಳೆಯಹ
ತ್ತಿರುವದಿಲ್ಲವೋ ಅಂಥ ಗಿಡದ ಕಟ್ಟಿಗೆಗಳನ್ನು ಸಂಗ್ರಹಿಸಿ
ಮನೆಕಟ್ಟಿದರೆ ಆ ಮನೆಗಳು ಬಹು ದಿವಸ ಕಾಳುವವು.
ನ್ನು ದೇಶದೊಳಗೆ ಭಾದ್ರಪದ ಅಥವಾ ಆಶ್ವೀನ ಮಾಸಗ
ಳಲ್ಲಿ ಗಿಡ ಕಡಿಯುವದು ಒಳಿತೆಂದು ತಿಳಿಯುತ್ತಾರೆ. ಗಿಡ
ವನ್ನು ಕಡಿದ ಬಳಿಕ ನಿಕೃಷ್ಟ ಪಕ್ಷಕ್ಕೆ ಎರಡು ವರ್ಷಗಳ

ಪೆರೆಗೆ ಬೈಲೊಳಗೆ ಚೆಲ್ಲುವದರಿಂದ ಕಟ್ಟಗೆಯು ಬಿಣಿಗಿಗೆ ಟ್ಟಿಯಾಗುತ್ತದೆ. ಆದರೆ ಗಿಡಗಳನ್ನು ಕಡಿದ ಕೂಡಲೆ ಕೊರೆದು ಮನೆಗೆ ತಾಕಿದರೆ ಆ ಕಟ್ಟಗೆಯು ಹುಳಿಯುವದು ಇಲ್ಲವೆ ಮಣಿಯುವದು. ಚೆನ್ನಾಗಿ ಬಿಣಿಗಿದ ಬಲಿತ ಕಟ್ಟಗೆಯು ಸೋಪು ಬಿಡುಳ ದಿವಸ ತಾಳುತ್ತದೆ ನೀರೊಳಗೆ ಪೂರ್ಣವಾಗಿ ಮುಳುಗಿಸಿಟ್ಟ ಕಟ್ಟಗೆಯ ತಾಳಿಕೆಯು ಕಡಿಮೆಯಾಗುತ್ತದೆ. ಇದಲ್ಲದೆ ಒಮ್ಮೆ ಬಿಣ ಒಮ್ಮೆ ಹೆಸಿ ಹೆವೆಯನ್ನು ಬಡಿಸಿಕೊಂಡ ಕಟ್ಟಗೆಯು ಬೇಗವಾಗಿಯಾಗಲಿ ತಡವಾಗಿ ದಾಗಲಿ ಹುಳಿಯುವೆ ಇರದು.

ಕಟ್ಟಗೆಯೊಳಗಿನ ಎಳೆಗಳು ಯಾವನಿಟ್ಟಿಗೆ ಹರಿಬಿದ್ದಿರುವವೋ ಆ ಕಡೆಯಲ್ಲಿ ಭಾರಹೊರುವ ಶಕ್ತಿಯು ಅಂದರೆ ದಾಷ್ಟ್ಯವು ಹೆಚ್ಚಿರುತ್ತದೆ. ಮತ್ತು ಈ ಬದಿಯಲ್ಲಿ ಬೇಕಾದಷ್ಟು ಭಾರಹಾಕಿ ಒತ್ತಿದರೂ ಕಟ್ಟಗೆಯು ಅಳುಂಚಿತವಾಗುವದಿಲ್ಲ. ಈ ಎಳೆ ಹರಿದ ದಿಕ್ಕಿಗೆ ಲಂಬವಾದ ದಿಕ್ಕಿನಿಂದ ಆ ಕಟ್ಟಗೆಯ ಮೇಲೆ ಭಾರವನ್ನು ಹೇರಿದರೆ ಅದು ತಾಳಲಾರದೆ ಮಣಿಯುವದು ಇಲ್ಲವೆ ಮುರಿದು ಹೋಗುವದು.

ಟೊಂಗೆ--ಗಿಡಗಳ ಬೊಡ್ಡಿಗೆ ಟೊಂಗೆಗಳಿರುತ್ತವೆ. ಬೊಡ್ಡಿಯು ಬರಬರುತ್ತ ಸಂಣ್ಣಾಗಿ ಮೇಲಕ್ಕೆ ಸಾಗಿರುತ್ತದೆ. ಮತ್ತು ಅದಕ್ಕೆ ಬೇರೆ ಬೇರೆ ಕಡೆಯಲ್ಲಿ ಕವಲುಗಳು ಉಂಟಾಗಿರುತ್ತವೆ. ಸುರುವಿನ ಗಿಡದ ಜಾತಿಯು ಹೊರತು ಗಿಡಗಳ ಬೊಡ್ಡಿಯು ಕವಲಿಲ್ಲದೆ ನೆಟ್ಟಗೆ ಸಂಣ್ಣಾಗಿರುತ್ತ ಹೋಗಿರುತ್ತದೆ. ಮತ್ತು ಅವುಗಳ ನಿಯಮಿತ ಅಂತರಗಳಲ್ಲಿ ಸಂಣ ಸಂಣ ಟೊಂಗೆಗಳು ಒಡೆದಿರುತ್ತದೆ. ಅಲ, ಅರಳಿ. ಮಾವು ಮುಂತಾದ ಗಿಡಗಳ ಬೊಡ್ಡಿಗೆ ಅನೇಕ ಕೊಂಬೆಗಳು ಒಡೆದು ನಾಲ್ಕೂ ದಿಕ್ಕಿಗೆ ಹೋಗಿರುವದಲ್ಲದೆ ಆ ಟೊಂಗೆಗಳಿಗೆ ಸಹ ಸಂಣ ಸಂಣ ಟಿಸಿಲುಗಳು ಒಡೆದಿರುತ್ತವೆ ಯಾವಗಿಡದ ಬೊಡ್ಡಿಯಾದರೂ ತಳದಲ್ಲಿ ಗಡುತರಾಗಿ ಬೆಳೆ ಬೆಳೆದಂತೆ ಸಂಣ ಸಂಣ್ಣಾಗಿರುತ್ತದೆ.

ಎಲೆಗಳು— ಟೊಂಗೆಗಳಿಗೆ ಹಲಿಚೆಯಾದ ತೆಂಣಗಾದ ಹೆಸರೆಲೆಗಳು ಇರುತ್ತವೆ. ಈ ಎಲೆಗಳಲ್ಲಿ ಅನೇಕ ಶಿರಗ

ಳು ಜೋಳಿಗೆಯಂತಿರುತ್ತವೆ. ಎಷ್ಟೋ ಜಾತಿಯ ಎಲೆಗಳಲ್ಲಿ ಈ ಶಿರಗಳು ಅಥವಾ ನರಗಳು ಜೋಳಿಗೆಯಂತಿದ್ದರೂ ಬೇರೆ ಕೆಲವು ಜಾತಿಯ ಎಲೆಗಳಲ್ಲಿ ಸಮಾಂತರವಾಗಿರುತ್ತವೆ. ತಾಳೀ ಮರದ ಜಾತಿಯ ಗಿಡಗಳು ಹುಲ್ಲು ಜೋಳ, ಗೋಧಿ ಮೊದಲಾದ ಧಾನ್ಯಗಳ ಸಸಿಗಳು ಮುಂತಾದ ವನಸ್ಪತಿಗಳಿಗೆ ಈ ಎರಡನೇ ತರದ ಎಳಿಗಳಿರುತ್ತವೆ. ಈ ಎಳೆಗಳ ನಡುವೆ ಹೆಡಸಿನಂತ ಪದಾರ್ಥವಿರುತ್ತದೆ. ಮತ್ತು ಅಲ್ಲಲ್ಲಿ ಪೊಳ್ಳು ಪ್ರದೇಶಗಳಿದ್ದು ಅವು ನಾಲ್ಕೂ ಕಡಿಗೆ ಹೋಗಿರುತ್ತವೆ. ಈ ಶಿರಗಳ ಮೇಲೆ ಎಲೆಯು ಎರಡೂ ಮಗ್ಗಲಿಗೆ ತಿಳುವಾದ ಪರಿ ಇರುತ್ತದೆ. ಎಲೆಗಳ ಕೆಳಬದಿಯ ಮತ್ತು ಮೇಲ್ಪದಿಯ ಪರೆಯಲ್ಲಿ ಅನೇಕ ರಂಧ್ರಗಳು ಇರುತ್ತವೆ ಈ ರಂಧ್ರಗಳಿಂದಲೇ ವನಸ್ಪತಿಗಳು ಉಸುರಾಡಿಸುತ್ತವೆ. ಆದ್ದರಿಂದ ಇವುಗಳಿಗೆ ಉಸುರಾಡಿಸುವ ದಾರಿಗಳೆನ್ನುವರು. ಒಂದೊಂದು ಎಲೆಗೆ ತುಂಬಿರುವದು. ಈ ತುಂಬಿನಿಂದಲೇ ಹಸಿ ಎಲೆಗಳು ಟೊಂಗಿಗೆ ಅಂಟಿಕೊಂಡಿರುತ್ತವೆ. ತುಂಬುಗಳು ಟೊಂಗಿಗೆ ಹೊಂದಿಕೊಂಡಿರುವಲ್ಲಿಯೇ ಹೊಸ ಮೊಳಿಕೆಗಳು ಮೊಗ್ಗೆಗಳೂ ಆಗುವದುಂಟು.

ಎಲೆಗಳಿಂದ ಗಿಡಗಳೊಳಗಿನ ಪೋಷಕ ರಸದೊಳಗಿನ ನೀರಿನ ಭಾಗವು ಕಡಿಮೆಯಾಗಿ ಆ ರಸವು ಮಂದವಾಗುತ್ತದೆ ಸೂರ್ಯ ಪ್ರಕಾಶದಿಂದಲೂ ಹವೆಯಿಂದಲೂ ಆ ರಸದಲ್ಲಿ ಪೋಷಕ ಗುಣವು ಉಂಟಾಗಿ ಹೊಸ ಪೋಷಕ ಘಟಕ ಪದಾರ್ಥಗಳು ಹುಟ್ಟುತ್ತವೆ. ಎಲೆಗಿರುವ ತೂತಿನಿಂದ ಹವೆಯು ಒಳಗೂ ಹೊರಗೂ ಸುಳಿದಾಡುತ್ತದೆ.

ಜೀವನವು ಅಥವಾ ಪೋಷಕ ಕಾರ್ಯವು—ಗಿಡಗಳು ಬೆಳೆಯುತ್ತಿರುವಾಗ ಅವುಗಳ ಬೇರೆ ಬೇರೆ ಭಾಗಗಳ ಕಾರ್ಯವು ಹ್ಯಾಗೆ ಸಾಗುತ್ತಿರುತ್ತದೆಂಬುದನ್ನು ಇದರಡಿಯಲ್ಲಿ ತುಸು ಹೇಳಿದ್ದೇವೆ. ಬೇರುಗಳ ತುದಿಯು ನೆಲದೊಳಗಿಳಿದು ಖನಿಜ ಮುಂತಾದ ಪೋಷಕ ಪದಾರ್ಥದೊಳಗಿನ ದ್ರವವನ್ನು ಹೀರಿಕೊಳ್ಳುತ್ತದೆ. ಈ ದ್ರವವು ರಸಕಾಷ್ಠ ಅಥವಾ ಎಳೆಗಳ ಕೊಳವೆಯೊಳಗಿಂದ ಹರಿದು ಹೋಗಿ ಎಲೆಗಳಿಗೆ ಮುಟ್ಟುತ್ತವೆ.

ಆಗ ಆ ಎಲೆಗಳಿಗೆ ತಾಕುವ ಹವೆಯಿಂದಲೂ ಸೂರ್ಯನ ಶಾಖದಿಂದಲೂ ನೀರಿನ ದೊಡ್ಡ ಭಾಗವು ಉಗಿಯಾಗಿ ಹೊರಬಿದ್ದು ಹೋಗುತ್ತದೆ. ಎಲೆಗಳ ಜೆನ್ನಿಗಿರುವ ತೂತುಗಳೊಳಗಿಂದ ಹವೆಯು ಒಳಸೇರಿ ಉಳಿದ ನೀರನ್ನು ಸಹ ಉಗಿ ಮಾಡಿ ಬಿಡುತ್ತದೆ. ಈತೆರನಾಗಿ ವನಸ್ಪತಿಗಳ ಜೀವನಕ್ಕೆ ಬೇಕಾದ ಪೋಷಕ ಪದಾರ್ಥವು ಉಂಟಾಗುವದರಿಂದ ಗಿಡವು ಬೆಳಿಯಲಿಕ್ಕೆ ಅನುಕೂಲವಾಗುತ್ತದೆ.

ಹೂವು ಹಣ್ಣುಗಳ ಬೆಳವಣಿಗೆಗೆ ಬೇಡಾದ ಈ ರಸದ ಭಾಗವು ತೋಟಿಯೊಳಗಿಳಿದು ಬೆಂಡಿನ ಕಡಿಗೆ ಹರಿಯುತ್ತಾ ಸಾಗಿ ಕೆಚ್ಚಿನಲ್ಲಿ ನಿಲ್ಲುತ್ತದೆ

ವನಸ್ಪತಿಗಳಿಂದ ಒವ್ವೊಂದೆ ಔಷಧದ ಪದಾರ್ಥಗಳೂ ಅಥವಾ ಬೇರೆ ಬಗೆಯ ಪ್ರಯೋಜನಕರವಾದ ಸೋಜಿಗದ ಪದಾರ್ಥಗಳೂ ಹುಟ್ಟುತ್ತವೆ ಅಂಥ ಒಡವೆಗಳನ್ನು ಹೇರಳವಾಗಿ ದೊರಕಿಸುವದಕ್ಕೆ ನಾವು ಮೇಲೆ ಹೇಳಿದ ಮಾತಿನ ಜ್ಞಾನವು ಉಪಯೋಗಕ್ಕೆ ಬರುವದೆಂದು ಸ್ಪಷ್ಟವದೆ. ಬೇರುಗಳು ನೆಲದೊಳಗಿಂದ ಹೀರಿಕೊಂಡ ರಸವು ಮೊದಲು ಮೊದಲು ನೀರಿನಂತೆ ತೀರ ತಿಳುವಾಗಿ ಇರುತ್ತದೆ ಅದರಲ್ಲಿ ಆಗ ವಿಶೇಷ ಗುಣಗಳ್ಯಾವೂ ಇರುವದಿಲ್ಲ. ಆದರೆ ಆದೇ ರಸವು ಎಲೆಗಳಲ್ಲಿ ಶೇರಿಕೊಂಡ ಬಳಿಕ ಬೇರೆ ರೂಪವನ್ನು ಹೊಂದಿ ಒಂದು ಬಗೆಯ ವಿಶೇಷ ಧರ್ಮವುಳ್ಳದ್ದಾಗಿರುತ್ತದೆ ಆದ್ದರಿಂದಲೇ ಔಷಧಕ್ಕೂ ಬೇರೆ ಕೆಲಸಕ್ಕೂ ಎಲೆಗಳನ್ನು ಉಪಯೋಗಿಸುತ್ತಾರೆ. ಟಕಹದ ಎಲೆ, ನೆಲ ಆವರಿಯು ತೊಪ್ಪಲ, ತುಲಸಿಯು ದಳ ಮುಂತಾದವುಗಳನ್ನು ಔಷಧಕ್ಕಾಗಿ ಉಪಯೋಗಿಸುವದನ್ನು ಎಲ್ಲರೂ ಬಲ್ಲರು. ಈ ಮೇರೆಗೆ ವಿಕಾರ ಹೊಂದಿದ ಎಲೆಯೊಳಗಿನ ರಸವು ಎಳೆಗಟ್ಟಿಗೆಯಾಗುಂಟು ಕೆಳಗಿಳಿದು ತೋಟಿಯಲ್ಲಿ ಜಮೆಯಾಗಿ ಹೊಸತರದ ಉಪಯುಕ್ತ ಪದಾರ್ಥವನ್ನುಂಟು ಮಾಡುತ್ತದೆ ಆದ್ದರಿಂದ ತೋಟಿಯೂ ಔಷಧಗಳಿಗೂ ಕಲಾಕೌಶಲ್ಯದ ಕೆಲಸಕ್ಕೂ ಬರುತ್ತದೆ.

(ಸಶೇಷ).

KINDER GARTON 2ND GIET

ಕಿಂಡರಗಾರ್ಟನ್ ೨ನೇ ಇನಾಮು

(ಎಗಳನೇ ಪುಟದಿಂದ ಮುಂದೆ ಸಾಗಿದ್ದು)

೫ ಸಿಲಿಂಡರಕ್ಕೆ ೩ ಮೈಗಳಿವೆ. (ಹುಡುಗರು ೩ ಮೈಗಳನ್ನು ತೋರಿಸಲಿ.) ಅವುಗಳಲ್ಲಿ ಎರಡು ಸಪಾಟ ಅವೆ, ಒಂದು ಡೊಂಕೆ ಅದೆ. (ಹುಡುರು ಉರುಳಿಸಿ ವಕ್ರ ಮೇಲ್ಮೈಯನ್ನೂ, ನಿಲ್ಲಿಸಿ ಸರಳ ಮೇಲ್ಮೈಗಳನ್ನೂ ತೋರಿಸಲಿ.

೬ ಸಿಲಿಂಡರಕ್ಕೆ ಮೂಲೆಗಳಿಲ್ಲ.

ಗುಣಧರ್ಮಗಳನ್ನು ತಿಳಿಸಿದ ಬಳಿಕ, ಉಳಕದ ಆಕಾರದ ಪದಾರ್ಥವನ್ನು ಕೇಳಿರಿ; ಹಾಗು ಅವು ಉಳಕವನ್ನು ಯಾಕೆ ಹೋಲುತ್ತವೆಂದು ಪ್ರಶ್ನ ಮಾಡಿರಿ:

ಆಟಗಳು

೧ನೇ ಆಟ—ಹೋಳಿಗಿ ಲಟ್ಟಿಸುವದೂ ಹಪ್ಪಳ ಲಟ್ಟಿಸುವದೂ (ಹುಡುಗರು ಮಣಿಯಮೇಲೆ ಉಳಕವನ್ನು ಇಟ್ಟು ಲಟ್ಟಿಸುವ ಭಾವವನ್ನು ತೋರಿಸುವಂತೆ ಉರುಳಿಸಲಿ.)

೨ನೇ ಆಟ—ಹೆತ್ತಿ ಅರಿಯುವದು.

ಉಳಕದ ಗುಣಗಳನ್ನು ವರ್ಣಿಸುವ ಪದಗಳು

"ಘನಶ್ಚ ತ್ರಯಾಶ್ರೀ ತ್ರಯಶ್ರಸ್ತ್ರಿಕೋಣಾ" ಈ ಧಾಟಿಯುಂತೆ

ಉಳಕದ ಲಕ್ಷಣ ಕೇಳುವೆವೀಗ।
ಗೆಳೆಯರೆ ಲಾಲಿಸಿ ಕೇಳಿರಿಬೇಗ ॥ ಪಲ್ಲಾ ॥
ಉಳಕಕೆ ಇರುವವು ಮೈಗಳು ಮೂರು।
ಗೆಳೆಯರೆ ಎಣಿಸಿರಿ ಬೆರಳಿನ ಗೆಣ್ಣು ॥ ೧ ॥
ಉಳಕದ ಎರಡೂ ಬದಿಗಳ ಮೈಗಳು।
ಹಲ್ಲಿಯ ನಿಲ್ಲವೆ ಬಿಲ್ಲಿಯು ಹೋಲ್ವವು ॥ ೨ ॥
ಉಳಿದದ್ದೊಂದು ಮೈಯದು ತಾನು।
ಕೊಳಿವೆಯ ತೆರದಿಂ ದುಂಡಗೆ ಇರುವದು ॥ ೩ ॥
ದುಂಡನೆ ಮೈಯ್ಯಿಂ ಉರುಳುತ್ತಿರುವದು।
ಬಂಡಿಯು, ನೋಡಿವು ಕೂಡುವ ಮೈಗಳು. ॥ ೪ ॥
ಮೂಲೆಗಳಿಲ್ಲವು, ಏಣುಗಳೆರಡೈ।
ಎಲ್ಲರು ಅರಿಪರು ಹಃದಿಯ ತೂಲ್ಕೈ ॥ ೫ ॥

ಹಿಟ್ಟಿನ ಉಳ್ಳಿಯ ಹಪ್ಪಳ ಮಾಳ್ಪರು ।
ಲಟ್ಟಿಯ ನಾಡಿಸಿ ಪಾಳಿಯು ಮೇಲೆ ॥ ೬ ॥

ಅಥವಾ

ಪ್ರೀತಿಲೆ ಅಕ್ಕನು ಹಪ್ಪಳ ಮಾಳ್ಪಳ್ ।
ಲತ್ತಿಯ ಗುಣಮಿಂ ಹಿಟ್ಟಿನ ಉಳ್ಳಿಯು ॥ ೭ ॥
ಹಳ್ಳಿಯ ಅಜ್ಜಿಯು ಹತ್ತಿಯ ಅರಿವಳು ।
ಉಳಕವ ಹೋಲುವ ಕಬ್ಬಿಣ ಕುಡದಿಂ ॥ ೮ ॥

ಗೋಲಫಿನ ಸಿಲಿಂದರಗಳ ಗುಣಧರ್ಮಗಳನ್ನು ತಿಳಿಸಿದ ಬಳಿಕ "ಬೋರಬಗರಿಯ" ಆಟವನ್ನು ಆಡಿಸಿರಿ.

ಗೋಲಫಿನ ಸಿಲಿಂದರಗಳ ಉಂಗುರದೊಳಗೆ ದಾರಕೋಣಿಸಿ, ಎರಡೂ ಚುಂಗು ಸರಯಾದ ಬಳಿಕ ಬಲಗೈಯಿಂದ ಎಡಕೆ ತಿರುವಿ ಹರಿಬೀಳುವಂತೆ ಮಾಡಿರಿ; ತರುವಾಯ ಆ ಚುಂಗುಗಳನ್ನು ಎರಡೂ ಕೈಬೆರಳುಗಳಿಂದ ಹಿಡಿದು ಜಗ್ಗುತ್ತ ಹೋಗಿರಿ. ಆಗ್ಗೆ ಕಾಣಿಸುವ ಆಕಾರವನ್ನು ಲಕ್ಷದಲ್ಲಿಡಲಿ

೧ ಗೋಲದ ಆಕಾರದಲ್ಲಿ ಏನೂ ಹೆಚ್ಚು ಕಡಿವೆ ಕಾಣುವದಿಲ್ಲ.

೨ ಫಿನದ ಮೈಯೊಳಗೆ ದಾರಕೋಣಿಸಿ ಜಗ್ಗಿದರೆ ಉಳಕದ ಆಕಾರ ತೋರುವದು. (೧ನೇ ಆಕೃತಿ)

೩ ಮೂಲೆಯಲ್ಲಿ ಕೋಣಿಸಿ ಜಗ್ಗಿದರೆ ಭರಣಿಯೊಳಗೆ ೨ ಶಂಕುಗಳು ಕಾಣಿಸುವವು. (೨ನೇ ಆಕೃತಿ)

೪ ಏಣಿನಲ್ಲಿ ಪೋಣಿಸಿ ತಿರುವಿದರೆ ಗಡಿಗೆಯೊಳಗೆ ಎರಡು ಶಂಕುಗಳು ಕಾಣಿಸುವವು. (೩ನೇ ಆಕೃತಿ)

೫ ಸಿಲಿಂದರದ ಉಬ್ಬಿದ ಮೈಯಲ್ಲಿ ದಾರಕೋಣಿಸಿ ಜಗ್ಗಿದರೆ ಗೋಲವು ತೋರುವದು. (೪ನೇ ಆಕೃತಿ)

೬ ಏಣಿನಲ್ಲಿ ಕೋಣಿಸಿ ಜಗ್ಗಿದರೆ ಗೋಲದೊಳಗೆ ೨ ಶಂಕುಗಳು, ಅವುಗಳೊಳಗೆ ಪುನಃ ಗೋಲವೂ ಕಾಣಿಸುವವು.

೫ನೇ ಆಕೃತಿ

ಈ ಬಗೆಬಗೆಯ ಚಮತ್ಕಾರಗಳನ್ನು ತೋರಿಸಿ, ಕಲಿಸಿ, ಹಾಡಿನೊಡನೆ ಅಭಿನಯಪೂರ್ವಕ ಆಟವಾಡುವದಕ್ಕೆ ಅಭ್ಯಾಸ ಮಾಡಿಸಿರಿ.

ಚಿತ್ರ (ಎ)

ಚಿತ್ರ (ಬಿ)

ಚಿತ್ರ (ಸಿ)

ಚಿತ್ರ (ಡಿ)



ಚಿತ್ರ (ಇ)

ಚಿತ್ರ (ಎಫ್)

ನಿದಾರ್ಥಗಳು ತಿಳಿಯುವಾಗ್ಗೆ ಅವುಗಳ ಮೂಲ ಆಕಾರದ
ಬದಲಾಗಿ ತೋರುವದು, ಎಂಬ ಸಂಗತಿಯನ್ನು ಪ್ರತ್ಯಕ್ಷ
ನ ತಿಳಿಸಿರಿ.

ಪದ— " ಮೊಯಿಯನ್ನೆ " ಇದರಂತೆ

ೀರಬಗರಿ ಆಟವನ್ನು ನಾವು ಆಡುವಾ ।
ೀರ ಮುತ್ತಿನಂತೆ ತೋರ್ವ ಗೋಲ ತೋರುವಾ ॥ಪಲ್ಲ॥
ನೆನವನಿಟ್ಟು ನಡುವೆ ದಾರ ಭರದಿ ಪೋಣಿಸಿ ।
ರುನವನಿಟ್ಟು ತಿರುಹಲದನು ಉಳಕ ತೋರ್ವುದು ॥ ೧ ॥
ನೂಲೆಯೊಳಗೆ ದಾರಕಟ್ಟಿ ತಿರುಹಲಾಕ್ಷಣ ।
ಬಾಲನೋಡೊ, ಭರಣಿಯೊಳಗೆ ಶಂಕುಲಕ್ಷಣ ॥ ೨ ॥
ಏಣಿನಲ್ಲಿ ದಾರಕಟ್ಟಿ ತಿರುಹಲಾಕ್ಷಣ ।
ಕಾಣಿಸುವದು ಗಡಿಗೆಯೊಳಗೆ ಶಂಕುಲಕ್ಷಣ ॥ ೩ ॥
ಉಳಕವನ್ನು ಅಡ್ಡನಿಟ್ಟು ದಾರಕಟ್ಟುತಾ ।
ಬಲದ ಕರದಿ ಭರದೊಳದನು ಎಡಕೆ ತಿರುಹುತ ॥ ೪ ॥
ಎರಡು ಕೈಗಳಿಂದ ಎರಡು ಚಿಮ್ಮಂಗು ಜಗ್ಗಲು ।
ರದಿ ಗೋಲ ಮುರಿಯೊಳಡಗಿ ಮೆರೆಯುತಿರುವದು ॥ ೫ ॥
ಏಣಿನಲ್ಲಿ ದಾರಕಟ್ಟಿ ದಾರ ಕಟ್ಟಿ ತಿರುಹಲಾಕ್ಷಣ ।
ಕಾಣಿಸುವದು ಗೋಲದೊಳಗೆ ಶಂಕುಲಕ್ಷಣ ॥ ೬ ॥

ಿರುವಾಯೆ ಈ ಅಕೃತಿಯಲ್ಲಿ ತೋರಿಸಿದಂತೆ ಗೋಲಘನ
ುಲಿಂದರಗಳನ್ನು ಅಡಕಲದಂತೆ ಒಂದರಮೇಲೊಂದು ಏರಿಸಿ
ುವ್ವ ತೋರಿಸಿರಿ. ಈ ರಚನೆಯಲ್ಲಿ ಸ್ಥಿರತ್ವದ ಕಲ್ಪನೆಯೂ
ಸೌಂದರ್ಯವೂ ಸಾಧಿಸಲ್ಪಟ್ಟವೆ,

ಸೂಚನೆ— ಮೊದಲನೇ ಕರಣದ ಕೊನೆಯಲ್ಲಿ ಹೇಳಿ
ರಂತೆ ಈ ಇನಾಮಿನ ಸಹಾಯದಿಂದಾದರೂ ದೇವರ ಕಲ್ಪ
ನೆಯನ್ನೂ ಆತನ ಅಗಾಧ ಮಹಿಮೆಯನ್ನೂ ಕುರಿತು ಪ್ರ
ಶ್ನಿಪಿಸುವದು ಅವಶ್ಯವದೆ.

ಎನೇ ಕರಣ ಅಥವಾ ಇನಾಮು.

ಉ. ಕ.–ಎನೇ ಕರಣದ ಕೆಟ್ಟಿಗೆಗಳು ಪ್ರತಿಯೊಬ್ಬ ಹು
ಡುಗನಿಗೆ ಒಂದೊಂದರಂತೆ; ಉದ್ದವಾದ ಕಡ್ಡಿಗಳ.

ಉಪೋ:—ಚಿಕ್ಕ ಮಗುವಿನ ಕೈಯಲ್ಲಿ ಬಂದು ಗೊಂಬೆ ಯನ್ನು ಕೊಟ್ಟರೆ ಅದು ಕೆಲಹೊತ್ತಿನ ವರೆಗೆ ಅದರ ಬಾಹ್ಯಸ್ವರೂಪವನ್ನು ಅವಲೋಕಿಸಿದ ಬಳಿಕ ಅದನ್ನು ಮುರಿದು ಒಳಗಿನ ಭಾಗವನ್ನು ನೋಡಲಿಚ್ಛಿಸುವದು: ಆದರೆ ಒಮ್ಮೆ ಮುರಿದ ಬಳಿಕ ಪುನಃ ಹೊಂದಿಸಲಿಕ್ಕೆ ಬಾರದೆ ಇರುವದನ್ನು ಕಂಡು ಅಸಮಾಧಾನ ಪಡುವದು * ಈ ಸ್ವಾಭಾವಿಕ ಬಲವಿನ ಅನುರೋಧದಿಂದ ಫ್ರೊಬೆಲ್ಲನು ತಿನೇ ಇನಾಮನ್ನು ರಚಿಸಿರುವನು. ಈ ಇನಾಮಿನಲ್ಲಿ ಎರಡಿಂಚಿನದೊಂದು ಘನದೊಳಗೆ ೮ ಘನಗಳು ಬಂದೊಂದಿಂಚಿನವು ಮಾಡಲ್ಪಟ್ಟಿದ್ದು, ಆ ಭಾಗಗಳನ್ನು ಸುಲಭವಾಗಿ ಬೇರೆ ಮಾಡಲಿಕ್ಕೂ ಪುನಃ ಮೊದಲಿನಂತೆ ಹೊಂದಿಸಲಿಕ್ಕೂ ಆ ಭಾಗಗಳಿಂದ ಬೇರೊಂದು ಹೊಸ ಆಕೃತಿಯನ್ನು ರಚಿಸಲಿಕ್ಕೂ ಬರುವದರಿಂದ ಹುಡುಗರ ಕುತೂಹಲವು ಎಲ್ಲ ವಿಧದಿಂದಲೂ ಪೂರ್ಣವಾಗುವದು.

ಬಾಲಕರಿಗೆ ಎಲ್ಲಕ್ಕೂ ಮೊದಲು ಚೆಂಡು, ತರುವಾಯ ಅದರಂತೆ ಇರುವ ಗುಂಡು ಅಥವಾ ಗೋಲ ಇವು ಕೊಡಲ್ಪಟ್ಟವು; ಬಳಿಕ ಘನವು ಕೊಡಲ್ಪಟ್ಟಿತು. ಗುಂಡು ಆ ಮೇಲೆ ಚೆಂಡುಗಳಿಂದ ತೀರ ಭಿನ್ನವಾದದ್ದಾದರೂ ಅವೆರಡುಗಳ ಮಧ್ಯಸ್ಥಿತಿಯಲ್ಲಿರುವ ಸಿಲಿಂದರವು ಕೊಡಲ್ಪಟ್ಟಿತು. ಹಾಗೂ ಇವುಗಳ ಸಹಾಯದಿಂದ ಪರಸ್ಪರ ಆಕಾರದ ಸಾಮ್ಯವೈಪಮ್ಯಗಳ ಕಲ್ಪನೆಯನ್ನು ಹುಡುಗರ ಮನಸಿನೊಳಗೆ ತಂದು ಕೊಡೋಣವಾಯಿತು.

ಆದರೆ ಈಗ ಹುಡುಗರ ಕೈಯಲ್ಲಿ ಕೊಡಲ್ಪಡುವ ಇನಾಮು ಇವೆಲ್ಲವುಗಳಿಗಿಂತ ವಿಶೇಷ ಚಮತ್ಕಾರದ್ದಿರುವದು;

---

* ಮಳೆ ಬಿದ್ದು ಹೊರವಾಯಿತೆಂದರೆ ಹುಡುಗರು ಓಣಿಯೊಳಗೆ ಹರಿದು ಹೋದ ಉಸುಬನ್ನು ಕೂಡಿಸಿ ಗುಬ್ಬೀಗೂಡು ಕಟ್ಟುವದನ್ನೂ, ಅದನ್ನು ಕೂಡಲೆ ಮುರಿಯುವದನ್ನೂ ಬಹು ಜನರು ನೋಡಿರಬಹುದು. ಅಡೋಣ ಕೆಡಿಸೋಣ ಇವು ಹುಡುಗರ ಸ್ವಾಭಾವಿಕ ಪ್ರವೃತ್ತಿಗಳು.

ನಾಕೆಂದರೆ ಅದರ ಪೂರ್ಣ ಆಕಾರವು ಘನವಾಗಿರುವದು ಹಾಗೂ ಅದರಲ್ಲಿ ಮಾಡಲ್ಪಟ್ಟ ಭಾಗಗಳ ಆಕಾರವೂ ಘನವಾಗಿರುವದು. ಇಡೀ ಘನಕ್ಕೂ ಅದರ ಭಾಗಗಳಿಗೂ ಇರುವ ವ್ಯತ್ಯಾಸ ಕಡಿಮೆಯುಂದರೆ ಅದರ ಪರಿಮಿತಿಯು, ಆದರೆ ಎಲ್ಲ ಭಾಗಗಳು ಆಕಾರದಿಂದಲೂ ಪರಿಮಿತಿಯಿಂದಲೂ ಒಂದೇ ತೆರನೆ ಇರುವವು.

ಉದ್ದೇಶ—ಈ ಇನಾಮು ನೋಡುತ್ತಲೆ ಪೂರ್ಣ ಪದಾರ್ಥ ಹಾಗೂ ಅದರ ಭಾಗಗಳ ಕಲ್ಪನೆಯೂ ಪರಸ್ಪರ ಆಕಾರದ ಪ್ರಮಾಣವೂ ಹುಡುಗರ ಮನಸಿನೊಳಗೆ ಬರುವವು. ಈ ವಿಚಾರಗಳಿಗೆ ತಕ್ಕ ಚಾಲನೆಕೊಟ್ಟ ಬಳಿಕ ಅದರ ಭಾಗಗಳ(ಸಂಖ ಘನಗಳ) ಪರಸ್ಪರ ಸ್ಥಿತಿಗತಿಗಳ ಸಂಬಂಧವನ್ನು ತಿಳಿಸಿ, ಮೇಲೆ ಕೆಳಗೆ ಹಿಂದೆ ಮುಂದೆ ಎಡಬಲ ಮುಂತಾದದಿಗ್ವಾಚಕ ಶಬ್ದಗಳ ಜ್ಞಾನವನ್ನು ಆಟದೊಂದಿಗೆ ಮಾಡಿಕೊಡತಕ್ಕದ್ದಿರುತ್ತದೆ. ಆಟಕ್ಕಾಗಿ ರಚಿಸತಕ್ಕ ಆಕೃತಿಗಳಲ್ಲಿ ೧ ವ್ಯವಹಾರೋಪಯುಕ್ತ ೨ ಜ್ಞಾನಸಂವರ್ಧಕ ೩ ಸೌಂದರ್ಯದ್ಯೋತಕ ಎಂಬದಾಗಿ ೩ ಭಾಗಗಳು ಮಾಡಲ್ಪಟ್ಟವೆ. ಹುಡುಗರು ನಿತ್ಯನೋಡುವ ವ್ಯವಹಾರದೊಳಗಿನ ಪದಾರ್ಥಗಳ ಆಕೃತಿಗಳು (ಅಂದರೆ ಮನುಷ್ಯರ ಕಲಾಚಾತುರ್ಯಗಳನ್ನು ತೋರಿಸುವಂಥ ಒಡವೆಗಳ ಆಕೃತಿಗಳು) ಮೊದಲನೇದರಲ್ಲಿ ಬರುತ್ತವೆ. ಸಂಖ್ಯಾಕ್ರಮ ಪ್ರಮಾಣ ಮೊದಲಾದವುಗಳು ೨ನೇದರಲ್ಲಿಯೂ ಮಾದರಿಯು ಆಕೃತಿಗಳೆಂದರೆ ವ್ಯವಸ್ಥಿತವಾಗಿಯೂ ಅಂದವಾಗಿಯೂ ಇರುವಂಥವುಗಳು ೩ನೇಯುದರಲ್ಲಿಯೂ ಸಮಾವೇಶವಾಗುತ್ತವೆ. ೩ನೇ ಪ್ರಕಾರದ ಆಕೃತಿಗಳ ರಚನೆಯಿಂದ ಸೌಂದರ್ಯದ ತತ್ವಗಳು ಅಂದರೆ ವ್ಯವಸ್ಥೆಯೂ ಪದಾರ್ಥರಚನಾಕೌಶಲ್ಯವೂ ಗೊತ್ತಾಗುತ್ತವೆ.

ಸೃಷ್ಟಿಯೊಳಗಿನ ವಸ್ತುಗಳನ್ನು ನೋಡಿ ಅವುಗಳನ್ನು ಒಂದಕ್ಕೊಂದು ಹೋಲಿಸುತ್ತ ಅವುಗಳ ಗುಣಧರ್ಮಗಳನ್ನು ತಿಳುಕೊಂಡು ಅವುಗಳಲ್ಲಿರುವ ಸೌಂದರ್ಯದ ಬಗ್ಗೆ ಪ್ರೀತಿ ಬಡುವ ಚಟವನ್ನು ಹುಡುಗರಲ್ಲಿ ಉಂಟು ಮಾಡುವದೇ ಈ ಇನಾಮಿನ ಮುಖ್ಯ ಉದ್ದೇಶವಾಗಿರುತ್ತದೆ.

ವ್ಯವಸ್ಥೆ— ಒಂದು ಉದ್ದ ಮೇಜಿನ ಪ್ರತಿಯೊಂದು ಬದಿಗೆ ೫।೫ ಹುಡುಗರು ನಿಲ್ಲುವಂತೆ ಸ್ಥಳವನ್ನು ಗೊತ್ತು ಮಾಡಿ, ಅದರಲ್ಲಿ ಇಂಚಿನ ಮನೆಗಳನ್ನು ಕೊರೆಯಬೇಕು. ಮೇಜಿನ ಅಡ್ಡ ಬದಿಗೆ ಶಿಕ್ಷಕನು ನಿಂತು ಶಿಕ್ಷಣವನ್ನು ನಡಿಸಬೇಕು.

ಅಂಥ ಮೇಜು ದೊರೆಯಲಿಕ್ಕೆ ಅಸ್ಪದವಿಲ್ಲದಿದ್ದರೆ ದೇವದಾರೀ ಕಟ್ಟಿಗೆಯ ಮಣಿಗಳನ್ನು ಮಾಡಿಸಿ, ಅವುಗಳ ಮೇಲೆ ಹಿಂದೆ ಹೇಳಿದಂತೆ ಇಂಚಿನ ಗುರುತು ಹಾಕಿ, ಹುಡುಗರನ್ನು ಎದರುಬದರಾಗಿ ಎರಡು ಸಾಲು ಕುಳ್ಳಿರಿಸಿ, ಶಿಕ್ಷಕನು ಅಡ್ಡ ಬದಿಗೆ ಕೂತು ಸ್ವತಃ ಲಿಕ್ಕತಿಗಳನ್ನು ರಚಿಸುತ್ತ ಹುಡುಗರಿಗೆ ಕಲಿಸಬಹುದು.

ಡ್ರಿಲ್— ೧. ಹುಡುಗರು ತಮ್ಮ ವರ್ಗದ ಕೋಣೆಯಿಂದ ಬಾಲೋದ್ಯಾನ ಮಂದಿರಕ್ಕೆ ರಾಗದ ಕಟ್ಟಿಗೆಯ ವಾದ್ಯದೊಂದಿಗೆ ತಾಳಕ್ಕನುಸರಿಸಿ, ಕಾಲಿಕ್ಕುತ್ತ ಬಬ್ಬರಹಿಂದೊಬ್ಬರು ಸಾಲುಗೊಂಡು ವ್ಯವಸ್ಥೆಯಿಂದ ಹೋಗುವಂತೆ ಮಾಡತಕ್ಕದ್ದು.

೨. ಬಳಿಕ ವರ್ಗದ ಹಿರೀಮುಣಿಯು ಕಪಾಟಿನೊಳಗಿಂದ ಒಂದೊಂದೇ ಕಟ್ಟಿಗೆಯನ್ನು ತೆಗೆದು ತನ್ನ ಹತ್ತರ ನಿಂತಿರುವ ಗೆಳೆಯನ ಕೈಯಲ್ಲಿ ಕೊಡಬೇಕು; ಅವನು ತನ್ನ ಕೆಳಗಿನ ನಂಬರದವನ ಕೈಯಲ್ಲಿ ಕೊಡಬೇಕು; ಹೀಗೆಯೇ ಅದು ಕಡೇ ಹುಡುಗನಿಗೆ ಮುಟ್ಟುವಂತೆ ಸಾಗಿಸುತ್ತ ಹೋಗಬೇಕು. ಇಷ್ಟರೊಳಗೆ ಹಿರೀ ಮುಣಿಯು ಪುನಃ ಒನ್ನೇ ಕಟ್ಟಿಗೆಯನ್ನು ತೆಗೆದು ಅದು ಕಡೇ ನಂಬರದ ಮೇಲಿನವನಿಗೆ ಮುಟ್ಟುವ ವರೆಗೆ ಪ್ರತಿಯಬ್ಬರು ಮುಂದಕ್ಕೆ ಸಾಗಿಸಬೇಕು. ಇದೇ ಕ್ರಮದಿಂದ ಎಲ್ಲರಿಗೂ ಕಟ್ಟಿಗೆಗಳು ಮುಟ್ಟಿದ ಬಳಿಕ ಅವರು ತಮ್ಮ ಮುಂದೆ ಇರುವ ಮನೆಯ ಮೇಲೆ ಅಥವಾ ಮಣಿಯ ಮೇಲೆ ನಟ್ಟ ನಡುವೆ ಒಮ್ಮೆಲೆ ಇಡಬೇಕು.

೩ ತರುವಾಯ ಪ್ರತಿಯಬ್ಬ ಹುಡುಗನು ಕೈಯಲ್ಲಿ ಕಡ್ಡಿಯನ್ನು ತೆಗೆದುಕೊಂಡು ಶಿಕ್ಷಕನ ಅಪ್ಪಣೆಯ ಮೇರೆಗೆ ತಮ್ಮ ಮುಂದೆ ಇರುವ ಚೌರಸದ ಎಡ ಬಲ ಹಿಂದ

ಮುಂದೆ, ಕೆಳಗೆ, ಹೇಲೆ ಎಂಬ ಭಾಗಗಳನ್ನು ತೋರಿಸುತ್ತ ಹೋಗಬೇಕು.

೪ ಆಟವು ಮುಗಿದ ಬಳಿಕ ಎಲ್ಲರೂ ತಮ್ಮ ತಮ್ಮ ಘನಗಳನ್ನು ಶಿಕ್ಷಕನ ಸಂಜ್ಞೆಗಳಿಗನುಸರಿಸಿ ಪೆಟ್ಟಿಗೆಯೊಳಗಿಟ್ಟು ಆ ಪೆಟ್ಟಿಗೆಗಳನ್ನು ಮೊದಲಿನ ಕ್ರಮದಿಂದಲೇ ಕಪಾಟಿನೊಳಗಿರಿಸಿ, ರಾಗದ ಪೆಟ್ಟಿಗೆಯ ವಾದ್ಯದೊಡನೆ ತಾಳಕ್ಕನುಸರಿಸಿ, ಶಿಕ್ಷಕನಿಗೆ ನಮಸ್ಕರಿಸುತ್ತ ಹೋಗಬೇಕು.

ಶಿಕ್ಷಣ— ಬಾಲಕರು ತಮ್ಮ ತಮ್ಮ ಪೆಟ್ಟಿಗೆಗಳನ್ನು ತೆಗೆದುಕೊಂಡು ಯೋಗ್ಯಸ್ಥಾನದಲ್ಲಿ ಕುಳಿತ ಬಳಿಕ (ಅಥವಾ ನಿಂತ ಬಳಿಕ) ಕೆಳಗೆ ಹೇಳಿದಂತೆ ಶಿಕ್ಷಣವನ್ನು ನಡಿಸತಕ್ಕದ್ದು.

ಈ ಪೆಟ್ಟಿಗೆಯ ಆಕಾರವು ಹಿಂದೆ ತಲಿಸಿದ ಗೋಲಘನ ಸಿಲಿಂದರಗಳಲ್ಲಿ ಯಾತರಂತೆ ಇರುತ್ತದೆ? (ಘನದಂತೆ) ಇದಕ್ಕೆ ಎಷ್ಟು ಮೈಗಳಿವೆ? ಎಷ್ಟು ಎಣುಗಳಿವೆ ಎಂಬ ಪ್ರಶ್ನೆಗಳಿಂದ ಘನದ ಗುಣಧರ್ಮಗಳ ಪುನರಾವರ್ತನವನ್ನು ಮಾಡಿಸುತ್ತ ಈ ಪೆಟ್ಟಿಗೆಯು ಘನದಂತೆ ಇರುತ್ತದೆಂಬುದನ್ನು ಹೊರಡಿಸಿರಿ (ತಪ್ಪಿದರೆ ಹಿಂದೆ ತಿಸೇಗಿಫ್ಟಿನಲ್ಲಿ ಹೇಳಿದಂತೆ ಮುತ್ತೊಮ್ಮೆ ತಲಿಸಿ ಗಟ್ಟಿಮಾಡಿಸಿರಿ.)

* ಬಳಿಕ "ಒಂದು" ಅಂದಕೂಡಲೆ ಹುಡುಗರು ಪೆಟ್ಟಿಗೆಯನ್ನು ತಿರುವಿ ಇಟ್ಟು "ಎರಡು" ಅಂದ ಕೂಡಲೆ ಮುಚ್ಚಳವನ್ನು ಹೊರಗೆ ಎಳೆದು, "ಮೂರು" ಅಂದ ಕೂಡಲೆ ಪೆಟ್ಟಿಗೆಯನ್ನು ಮೆಲ್ಲಗೆ ಮೇಲಕ್ಕೆತ್ತಲಿ.

---

* ಬಾಲಕರು ಇದಕ್ಕೂ ಮೊದಲು ಎರುಡು ಇನಾಮುಗಳೊಳಗಿನ ಆಟಗಳನ್ನು ಕಲಿತಿರುವ ಕಾರಣ ಇದರೊಳಗಿನ ಕೃತಿಗಳನ್ನು ಅಚ್ಚುಕಟ್ಟಾಗಿಯೂ ನಿಯಮಿತ ಕ್ರಮದಿಂದಲೂ ಮಾಡುವದು ಅವಶ್ಯವದೆ. ಬಾಲೋದ್ಯಾನ ಶಿಕ್ಷಣದಿಂದ ಬಾಲಕರಲ್ಲಿ ಒಪಣವಶ್ಯತೆ ಅಚ್ಚುಕಟ್ಟುತನ ಸೌಂದರ್ಯದಲ್ಲಿ ಆಸ್ಥೆ ಮುಂತಾದ ಗುಣಗಳನ್ನು ನೆಲೆಗೊಳಿಸುವದೇ ಮುಖ್ಯ ಉದ್ದೇಶವಾಗಿರುತ್ತದೆಂಬುದನ್ನು ಈ ಶಿಕ್ಷಣ ಕೊಡುವವರು ಲಕ್ಷದಲ್ಲಿಟ್ಟು ತಮ್ಮ ಕೆಲಸವನ್ನು ನಡಿಸತಕ್ಕದ್ದು.

ಈಗ ಏನು ಕಾಣುತ್ತದೆ? (ಘನ)- ಇದಕ್ಕೆ ೬ ಮೈಗ ಳೂ ೧೨ ಏಣುಗಳೂ ೮ ಮೂಲೆಗಳೂ ಇರುತ್ತವೆ; ಹಾ ಗೇ ಮೈಗಳೆಲ್ಲ ಬಿಂದಕ್ಕೊಂದು ಸರಿಇರುತ್ತವೆ; ಏಣುಗಳೆ ಲ್ಲ ಬಿಂದಕ್ಕೊಂದು ಸರಿಯಿರುತ್ತವೆ; ಮೂಲೆಗಳೆಲ್ಲ ಬಿಂದ ಕ್ಕೊಂದು ಸರಿ ಇರುತ್ತವೆ; ಆದದರಿಂದ ಇದು ಘನವಿರುತ್ತ ದೆ. ಎಂಬ ಸ್ವಾಗತಿಯನ್ನು ಹೊರಡಿಸಿರಿ.

ತರುವಾಯ ಆ ಘನಕ್ಕೆ ೧ ಕೆಟ್ಟು ಹೊಡೆದು ಎಲ್ಲ ಭಾಗ ಗಳು ಬೇರೆಬೇರೆ ಆಗುವಂತೆ ಶಿಕ್ಷಕರು ಮಾಡಲಿ. ಹುಡುಗ ರು ಸಹ ಹಾಗೇ ಮಾಡಲಿ. ಆ ಮೇಲೆ ಪ್ರತಿ ಬಿಂದು ಭಾಗ ವು ಘನವಿರುತ್ತದೆಂಬುದನ್ನು ಹುಡುಗರು ಪರೀಕ್ಷಿಸಲಿ. (ಈ ಭಾಗಗಳಿಗೆ ಸಹ ಘನದ ಲಕ್ಷಣವಿರುತ್ತದೆಂಬದನ್ನು ಪ್ರ ಶ್ನೆಗಳಿಂದ ಹೊರಡಿಸಿರಿ.) ತರುವಾಯ ಆ ಎಲ್ಲ ಭಾಗಗಳ ನ್ನು ಕೂಡಿಸಿ ಪುನಃ ಬಿಂದು ಘನವನ್ನು ಮಾಡಿಸಬೇಕು. ಘನದೊಳಗೆ ಹಲವು ಭಾಗಗಳನ್ನು ಮಾಡಲಿಕ್ಕೂ ಆ ಭಾ ಗಗಳನ್ನು ಕೂಡಿಸಿ ಪುನಃ ಘನವನ್ನುಂಟು ಮಾಡಲಿಕ್ಕೂ ಚ ನ್ನಾಗಿ ಬಿಂದ ಬಳಿಕ ಮುಂದಿನ ಕೃತಿಗಳನ್ನು ಕಲಿಸತ ಕ್ಕದ್ದು.

ಬಿಂದು ಆಟವು ಮುಗಿದ ಬಳಿಕ "ಬಿಂದು" ಎಂಬ ಸಂ ಜ್ಞೆಯಿಂದ ಮುಚ್ಚಳವನ್ನು ಡಬ್ಬಿ ಇಟ್ಟು "ಎರಡು" ಎಂಬ ಸಂಜ್ಞೆಯಿಂದ ಅದರ ಮೇಲೆ ಘನವನ್ನಿಟ್ಟು "ಮೂ ರು" ಎಂಬ ಸಂಜ್ಞೆಯಿಂದ ಕೆಟ್ಟಿಗೆಯನ್ನು ಘನದ ಮೇಲೆ ಡಬ್ಬಿ ಹಾಕಿ, "ನಾಲ್ಕು" ಎಂಬ ಸಂಜ್ಞೆಯಿಂದ ಕೆಟ್ಟಿಗೆ ದುನ್ನು ಮುಚ್ಚಳ ಸಹಿತ ಎತ್ತಿ ತಿರುವಿ (ಯಥಾಸ್ಥಿತ) ಇಟ್ಟು "ಐದು" ಎಂಬ ಸಂಜೆಯಿಂದ ಮುಚ್ಚಳವನ್ನು ಸ ರಿಯಾಗಿ ಕೂಡಿಸಬೇಕು. "ಆರು" ಎಂಬ ಸಂಜ್ಞೆಯಿಂ ದ ಎಲ್ಲರೂ ಸಿದ್ಧರಾಗಿ ನಿಂತು ತಮ್ಮ ಕೆಟ್ಟಿಗೆಗಳನ್ನು ಕಪ್ಪಾ ಟನಲ್ಲಿರಿಸುವದಕ್ಕೆ ಹಿರೀಮಣಿಯ ಕೈಯಲ್ಲಿ ಮೊದಲು ಹೇಳಿದ ಕ್ರಮದಿಂದ ಎಲ್ಲರೂ ರಾಗದ ಕೆಟ್ಟಿಗೆಯ ಸ್ವರ ದೊಂದಿಗೆ ಕಾಲಿಕ್ಕುತ್ತ ಕೆಳಗಿನ ಪದ್ಯವನ್ನು ಸುಸ್ವರದಿಂದ

ಹೊಡೆತ್ತ ಒಬ್ಬರ ಹಿಂದೊಬ್ಬರು ಶಿಕ್ಷಕನಿಗೆ ಅಭಿವಂದಿಸುತ್ತ, ವಿಶ್ರಾಂತಿಗೋಸ್ಕರ ತಮ್ಮ ತೋಟಕ್ಕೆ ಹೋಗಬೇಕು.

ಆಗ್ಗೆ ಹಾಡತಕ್ಕ ಪದ— ಬ್ಯಾಂಡ (ನೋಟು)

ಇಂದು ಒಂದು ಆಟವನ್ನು ನಾವು ಕಲಿತೆವ್ಯೆ।
ಚಂದದಿಂದ ಸೊಲುಗೊಂಡು ನಡೆಯುತಿರುವೆವ್ಯೆ ॥ ೧ ॥
ಆಟವನ್ನು ಕಲಿಸಿದಂಥ ಗುರುವಪಂದಿಸಿ।
ತೋಟವನ್ನು ಕುರಿತು ನಾವು ತೀವ್ರ ಪೋಪೆವ್ಯೆ

DEPARTMENTAL NOTICES.

ನೋಟೀಸುಗಳು.

ಧಾರವಾಡ ಪ್ರೊಕ್ಟೆಸಿಂಗಸ್ಕೂಲ ಸೂಪ್ತರರಾದ ಮಿ. ಗೋವಿಂದ ವೆಂಕಟೇಶ ದೇಶಪಾಂಡೆ ಇವರು ರಚಿಸಿದ "ಪಸ್ತುಪಾಠ ಶಿಕ್ಷಣಕ್ರಮ" ವೆಂಬ ಪುಸ್ತಕವನ್ನು ಮೆಹರ್ಬಾನ ಡಾಯರೆಕ್ಟರ ಸಾಹೇಬರವರು ಲಾಯಬ್ರರಿಗಾಗಿ ಮಂಜೂರು ಮಾಡಿದ್ದಾರೆ.

ಧಾರವಾಡ
ತಾ. ೨೬-೯-೧೯೦೩ ಇಸ್ವಿ. } B. R. Sahasrabudhe
ಎ. ಇ. ದಕ್ಷಿಣಭಾಗ.

II

ಇನ್ನು ಮುಂದೆ ಮುಲಖೀ ಪರೀಕ್ಷೆಗ ಬರುವ ಉಮೇದವಾರರು ತಾವು ಮೊದಲು ಹೆಚ್ಚಿದ ತಮ್ಮ ವಯಸ್ಸಿನಲ್ಲಿ ಯೋಗ್ಯಕಾರಣದಿಂದ ಹೆಚ್ಚು ಕಡಿಮೆ ಮಾಡಬೇಕೆಂದು ಬಯಸುತ್ತಿದ್ದರೆ ಅವರು ಪರೀಕ್ಷೆಗಿಂತ ಮೂರು ತಿಂಗಳು ಮೊದಲೇ ನಮ್ಮ ಕಡಿಗೆ ತತ್ಸಂಬಂಧವಾಗಿ ಅರ್ಜಿಯನ್ನು ಕಳಿಸಬೇಕು ಆಗ್ಗೆ ಯೋಗ್ಯ ಕಂಡರೆ ವಯದಲ್ಲಿ ಹೆಚ್ಚು ಕಡಿಮೆಯನ್ನು ಮಾಡಬಹುದು. ಹೀಗೆ ಮಾಡದೆ ಪರೀಕ್ಷೆಯ ವೇಳೆಯಲ್ಲಿ ಯೀ ಜನ್ಮ ಪತ್ರಿಕೆಯನ್ನು ಅಥವಾ ಶಿಕ್ಷಿಸ್ತರವನ್ನು ತೋರಿಸಿ ವರೂ ವಯದಲ್ಲಿ ಬದಲು ಮಾಡಲಿಕ್ಕೆ ಒಪ್ಪಲಾರೆವು.

ಧಾರವಾಡ
ತಾ. ೧೬-೯-೧೯೦೩. } B. R. Sahasbudhe
ಎಜ್ಯುಕೇಶನಲ್ ಇನ್ಸ್‌ಪೆಕ್ಟರ ದಕ್ಷಿಣಭಾಗ.

ಈಗ ಏನು ಕಾಣುತ್ತದೆ? (ಘನ)– ಇದಕ್ಕೆ ೬ ಮೈಗ ಳೂ ೧೨ ಏಣುಗಳೂ ೮ ಮೂಲೆಗಳೂ ಇರುತ್ತವೆ; ಹಾ ಗೇ ಮೈಗಳೆಲ್ಲ ಬಂದಕ್ಕೊಂದು ಸರಿಇರುತ್ತವೆ; ಏಣುಗಳೆ ಲ್ಲ ಬಂದಕ್ಕೊಂದು ಸರಿಯಿರುತ್ತವೆ; ಮೂಲೆಗಳೆಲ್ಲ ಬಂದ ಕ್ಕೊಂದು ಸರಿ ಇರುತ್ತವೆ; ಆದದರಿಂದ ಇದು ಘನವಿರುತ್ತ ದೆ. ಎಂಬ ಸಂಗತಿಯನ್ನು ಹೊರಡಿಸಿರಿ.

ತರುವಾಯ ಆ ಘನಕ್ಕೆ ೧ ಕೆಟ್ಟು ಹೊಡೆದು ಎಲ್ಲ ಭಾಗ ಗಳು ಬೇರೆಬೇರೆ ಆಗುವಂತೆ ಶಿಕ್ಷಕರು ಮಾಡಲಿ. ಹುಡುಗ ರು ಸಹ ಹಾಗೇ ಮಾಡಲಿ. ಆ ಮೇಲೆ ಪ್ರತಿ ಬಿಂದು ಭಾಗ ವು ಘನವಿರುತ್ತದೆಂಬುದನ್ನು ಹುಡುಗರು ಪರೀಕ್ಷಿಸಲಿ. (ಈ ಭಾಗಗಳಿಗೆ ಸಹ ಘನದ ಲಕ್ಷಣವಿರುತ್ತದೆಂಬುದನ್ನು ಪ್ರ ಶ್ನೆಗಳಿಂದ ಹೊರಡಿಸಿರಿ.) ತರುವಾಯ ಆ ಎಲ್ಲ ಭಾಗಗಳ ನ್ನು ಕೂಡಿಸಿ ಪುನಃ ಬಿಂದು ಘನವನ್ನು ಮಾಡಿಸಬೇಕು. ಘನದೊಳಗೆ ಹಲವು ಭಾಗಗಳನ್ನು ಮಾಡಲಿಕ್ಕೂ ಆ ಭಾ ಗಗಳನ್ನು ಕೂಡಿಸಿ ಪುನಃ ಘನವನ್ನುಂಟು ಮಾಡಲಿಕ್ಕೂ ಚೆ ನ್ನಾಗಿ ಬಂದ ಬಳಿಕ ಮುಂದಿನ ಕೃತಿಗಳನ್ನು ಕಲಿಸತ ಕ್ಕದ್ದು.

ಬಿಂದು ಆಟವು ಮುಗಿದ ಬಳಿಕ "ಬಿಂದು" ಎಂಬ ಸಂ ಜ್ಞೆಯಿಂದ ಮುಚ್ಚಳವನ್ನು ಡಬ್ಬಿ ಇಟ್ಟು "ಎರಡು" ಎಂಬ ಸಂಜ್ಞೆಯಿಂದ ಅದರ ಮೇಲೆ ಘನವನ್ನಿಟ್ಟು "ಮೂ ರು" ಎಂಬ ಸಂಜ್ಞೆಯಿಂದ ಕೆಟ್ಟಿಗೆಯನ್ನು ಘನದ ಮೇಲೆ ಡಬ್ಬಿ ಹಾಕಿ. "ನಾಲ್ಕು" ಎಂಬ ಸಂಜ್ಞೆಯಿಂದ ಕೆಟ್ಟಿಗೆ ಯನ್ನು ಮುಚ್ಚಳ ಸಹಿತ ಎತ್ತಿ ತಿರುವಿ (ಯಥಾಸ್ಥಿತ) ಇಟ್ಟು "ಐದು" ಎಂಬ ಸಂಜೆಯಿಂದ ಮುಚ್ಚಳವನ್ನು ಸ ರಿಯಾಗಿ ಕೂಡಿಸಬೇಕು. "ಆರು" ಎಂಬ ಸಂಜ್ಞೆಯಿಂ ದ ಎಲ್ಲರೂ ಸಿದ್ಧರಾಗಿ ನಿಂತು ತನ್ನ ಕೆಟ್ಟಿಗೆಗಳನ್ನು ಕಪಾ ಟಿನಲ್ಲಿರಿಸುವದಕ್ಕೆ ಹಿರೀಮಣಿಯ ಕೈಯಲ್ಲಿ ಮೊದಲು ಹೇಳಿದ ಕ್ರಮದಿಂದ ಎಲ್ಲರೂ ರಾಗದ ಕೆಟ್ಟಿಗೆಯ ಸ್ವರ ದೊಂದಿಗೆ ಕಾಲಿಕ್ಕುತ್ತ ಕೆಳಗಿನ ಪದ್ಯವನ್ನು ಸುಸ್ವರದಿಂದ

ಹಾಡುತ್ತ ಒಬ್ಬರ ಹಿಂದೊಬ್ಬರು ಶಿಕ್ಷಕನಿಗೆ ಅಭಿವಂದಿಸುತ್ತ, ವಿಶ್ರಾಂತಿಗೋಸ್ಕರ ತಮ್ಮ ತೋಟಕ್ಕೆ ಹೋಗಬೇಕು.

ಆಗ್ಗೆ ಹಾಡತಕ್ಕ ಪದ— ಬ್ಯಾಂಡ (ನೋಟು)

ಇಂಪು ಒಂದು ಆಟವನ್ನು ನಾವು ಕಲಿತಿವ್ಯೆ ।
ಛಂದದಿಂದ ಸಾಲುಗೊಂಡು ನಡೆಯುತಿರುವೆವ್ಯೆ ॥ ಗ ॥
ಆಟವನ್ನು ಕಲಿಸಿದಂಥ ಗುರುವಪಂದಿಸಿ ।
ತೋಟವನ್ನು ಕುರಿತು ನಾವು ತೀವ್ರ ಪೋಗಿವ್ಯೆ

DEPARTMENTAL NOTICES.

ನೋಟೀಸುಗಳು.

ಧಾರವಾಡ ನ್ಯಾರ್ಮಲ್ ಸ್ಕೂಲ ಸೂಪ್ರಿಂಟೆಂಡೆಂಟರಾದ ಮಿ. ಗೋಪಿಂದ ವೆಂಕಟೇಶ ದೇಶಪಾಂಡೆ ಇವರು ರಚಿಸಿದ "ಪಸ್ತುವಾಡ ಶಿಕ್ಷಣಕ್ರಮ" ವೆಂಬ ಪುಸ್ತಕವನ್ನು ಮೆಹರ್ಬಾನ ಡಾಯರೆಕ್ಟರ ಸಾಹೇಬರವರು ಲಾಯಬ್ರರಿಗಾಗಿ ಮಂಜೂರು ಮಾಡಿದ್ದಾರೆ.

ಧಾರವಾಡ
ತಾ. ೯।೯।೧೯೦೩ ಇಸ್ವಿ. } B. R. Sahasrabudhe
ಎ. ಇ. ದಕ್ಷಿಣಭಾಗ.

II

ಇನ್ನು ಮುಂದೆ ಮುಲಖೀ ಪರೀಕ್ಷೆಗ ಬರುವೆ ಉಮೇದವಾರರು ತಾವು ಮೊದಲು ಹೆಚ್ಚಿದ ತಮ್ಮ ವಯಸ್ಸಿನಲ್ಲಿ ಯೋಗ್ಯಕಾರಣದಿಂದ ಹೆಚ್ಚು ಕಡಿಮೆ ಮಾಡಬೇಕೆಂದು ಬಯಸುತ್ತಿದ್ದರೆ ಅವರು ಪರೀಕ್ಷೆಗಿಂತ ಮೂರು ತಿಂಗಳು ಮೊದಲೇ ನಮ್ಮ ಕಡಿಗೆ ತತ್ಸಂಬಂಧವಾಗಿ ಅರ್ಜಿಯನ್ನು ಕಳಿಸಬೇಕು ಆಗ್ಗೆ ಯೋಗ್ಯ ಕಂಡರೆ ವಯದಲ್ಲಿ ಹೆಚ್ಚು ಕಡಿಮೆಯನ್ನು ಮಾಡಬಹುದು. ಹೀಗೆ ಮಾಡದೆ ಪರೀಕ್ಷೆಯ ವೇಳೆಯಲ್ಲಿ ಮೀ ಜನ್ಮ ಪತ್ರಿಕೆಯನ್ನು ಅಥವಾ ರಿಜಿಸ್ತರವನ್ನು ತೋರಿಸಿ ವರೂ ವಯದಲ್ಲಿ ಬದಲು ಮಾಡಲಿಕ್ಕೆ ಒಪ್ಪಲಾರೆವು.

ಧಾರವಾಡ
ತಾ. ೧೬-೯-೧೯೦೩. } B. R. Sahasbudhe
ಎಜ್ಯುಕೇಶನಲ್ ಇನ್ಸ್‌ಪೆಕ್ಟರ ದಕ್ಷಿಣಭಾಗ

III

ಹೆಣ್ಣು ಮಕ್ಕಳ ಟ್ರೇನಿಂಗಕ್ಲಾಸಿನ ಪ್ರವೇಶ ಪರೀಕ್ಷೆಯು ನವಂಬರ ತಿಂಗಳ ೨೩ನೇ ತಾರೀಖಿನ ದಿವಸ ಪ್ರಾತಃಕಾಲದ ೧೧ ಗಂಟೆಗೆ ಸರಿಯಾಗಿ ಆ ಕ್ಲಾಸ ಇರುವ ಇಮಾರತಿಯಲ್ಲಿ ನಡೆಯುವದು. ಮಾಸ್ತರರು ಅದಷ್ಟು ಪ್ರಯತ್ನ ಮಾಡಿ ಸಮುಜೂತಕೊಟ್ಟು ವಿದ್ಯಾರ್ಥಿನಿಯರನ್ನು ಕಳಿಸ ಬೇಕು.

ಧಾರವಾಡ
ತಾ. ೧೬-೧೧-೧೯೦೩. } B. R. SAHASRABUDHE,
ಎ. ಇ. ದಕ್ಷಿಣ ಭಾಗ.

IV

ಜಾವಕ ನಂಬರ ೧೪೦

ಮೆಹರ್ಬಾನ್ ಕ್ಯುರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ, ಮುಂಬಯಿ ಇವರ ಕಡೆಯಿಂದ ತಿಳಿಸುವದೇನಂದರೆ:—ಸನ್ ೧೯೦೩ ನೇ ಇಸವಿಯ ಅಗಷ್ಟ ತಿಂಗಳಕೊನೆಯವರೆಗೆ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ ಪುಸ್ತಕಗಳ ವಿವರವು,

ಪುಸ್ತಕಗಳ ಹೆಸರು.	ಬೆಲೆ ರೂ.	ಆ.	ಪೈ.
ಕನ್ನಡ ಸಂಸ್ಕೃತ ಮೊದಲನೇ ಪುಸ್ತಕ	೦	೪	೬
ವಸ್ತುಪೆಟಿಗೆ (ಪಾಠಗಳ ಪಟ್ಟಿ)	೦	೩	೦
ಕನ್ನಡ ಅಂಕಲಿಪಿ	೦	೧	೬
ಕನ್ನಡ ಹಂಟರಸಾಹೇಬರ ಹಿಂದುಸ್ಥಾನದ ಇತಿಹಾಸವು	೦	೧೦	೦
ಕನ್ನಡ ಮೂರನೇ ಪುಸ್ತಕ	೦	೪	೦

ಈ ಮೇರೆಗೆ ಪುಸ್ತಕಗಳು ಮಾರಾಟಕ್ಕೆ ಸಿದ್ಧವಾಗಿವೆ.

ಮುಂಬಯಿ
ತಾ. ೩೦-೮-೧೯೦೩. } G. J. Agashe.
ಕ್ಯೂರೇಟರ, ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ.

ವಿಜ್ಞಾಪನೆ

ಮಾನವತ್ತ ಪ್ರಾಥಮಿಕ ಶಿಕ್ಷಣಾಭಿಮಾನಿಗಳಿಗೂ ದಕ್ಷಿಣ

ಭೂಗದೊಳಗಿನ ಧಾರವಾಡ ಟ್ರೇನಿಂಗಕಾಲೇಜದ ಅಭಿಮಾನಿಗಳಿಗೂ ವಿನಯಪೂರ್ವಕ ವಿಜ್ಞಾಪನೆ ಏನಂದರೆ:—

ಇನಾಮುಗಳು ಸಂಖ್ಯೆಯಲ್ಲಿ ಸ್ವಲ್ಪ ಇದ್ದು ಬೆಲೆಯುಳ್ಳ ವುಗಳಾಗಿರಬೇಕು. ಇನಾಮುಗಳನ್ನು ಸ್ವೀಕರಿಸತಕ್ಕವನು ಅಪ್ರತಿಮ ಸಹಾಸಪಟ್ಟು ಉತ್ತಮ ನೈಪುಣ್ಯವನ್ನು ಹೊಂದಿದ ಮಾತ್ರ ಇನಾಮಿಗೆ ಪಾತ್ರನಾಗುವನು. ಈ ಮಹತ್ವಾದ ತತ್ವಗಳನ್ನನುಸರಿಸಿ ಧಾರವಾಡ ಟ್ರೇನಿಂಗಕಾಲೇಜದಲ್ಲಿ ಪ್ರತಿವರ್ಷ ನಾಲ್ಕು ಬೆಲೆಯುಳ್ಳ ಪದಕಗಳ ಇನಾಮುಗಳನ್ನು ಕೊಡಬೇಕೆಂಬ ಯೋಚನೆ ಮಾಡಿದ್ದೇವೆ. ಅವುಗಳ ವಿವರ—

(ಅ) ಎರಡು ಇನಾಮುಗಳು ಶಿಕ್ಷಣಶಾಸ್ತ್ರ ಮತ್ತು ಶಿಕ್ಷಣ ಕಲೆಯಲ್ಲಿ ಅತಿಪ್ರಯಾಸಪಟ್ಟು ಅತಿಉತ್ತಮ ನೈಪುಣ್ಯ ಹೊಂದಿದ ವಿದ್ಯಾರ್ಥಿಗಳಿಗೆ ಕೊಡಲ್ಪಡುವವು.

(ಬ) ಒಂದು ಇನಾಮು ಚಿತ್ರಕಲೆಯಲ್ಲಿಯೂ ಕೈಗಾರಿಕೆ ಹೋರೆ (ಬಡಿಗಿತನ) ಯಲ್ಲಿಯೂ ಪ್ರವೀಣ್ಯತೆಯನ್ನು ಹೊಂದಿದ ವಿದ್ಯಾರ್ಥಿಗೆ

(ಕ) ಟ್ರೇನಿಂಡ ಮಾಸ್ತರರಾಗಿ ಹೋಗಿ ತಮ್ಮ ಶಿಕ್ಷಣ ವ್ಯವಸಾಯದಲ್ಲಿ ಸುರಿತು ಅತಿಕುಶಲತೆಯನ್ನು ಶಿಕ್ಷಣ ಶಾಸ್ತ್ರಾಭ್ಯಾಸನನ್ನು ಕೈಕೊಂಡ ಮಾಸ್ತರರಿಗೆ ಒಂದು.

ಈ ಮೇರೆಗೆ ನಾಲ್ಕು ಬೆಲೆಯುಳ್ಳ ಇನಾಮುಗಳನ್ನು ಕೊಡುವ ಯೋಚನೆಯುಂಟು. ಈ ಉದ್ದೇಶವು ನೆರವೇರುವದಕ್ಕೆ ೫೦೦ ಅಥವಾ ೬೦೦ ಈ ರೂಪಾಯಿಗಳುಬೇಕು ಕಾರಣ ಈ ವಿಜ್ಞಾಪನಾ ಪತ್ರದಿಂದ ಎಲ್ಲ ವಿದ್ಯಾಪಕ್ಷಪಾತಿಗಳು ತಮ್ಮ ತಮ್ಮ ಇಚ್ಛಾನುಸಾರವಾಗಿ ದ್ರವ್ಯ ಸಹಾಯ ಮಾಡಬೇಕೆಂದು ಕೋರುತ್ತೇವೆ. ಹಣ ಕಳಿಸುವವರು ಕೆಳಗೆ ಒರೆದವರ ವಿಳಾಸಕ್ಕೆ ಕಳಿಸಬೇಕು. ಅದರ ಸ್ವೀಕಾರವನ್ನು ಶಾಲಾಪತ್ರಿಕೆಯಲ್ಲಿ ಇಲ್ಲವೆ ಇತರ ರಸೀದಿ ಮೂಲಕವಾಗಿ ತಿಳಿಸುವೆವು.

S. K. Rodda,
ಪ್ರಿನ್ಸಿಪಾಲ

ಕಾಲೇಜ್-ಧಾರವಾಡ.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಿಕದ ಏಡಿಟರ ಸ್ವಾಮಿ ದಕ್ಷಿಣಭಾಗ ಇವರ ಚರಣದ್ವಯ ಕಮಲಗಳಿಗೆ:—

ವಿನಂತಿ ವಿಶೇಷ ಕೆಳಗೆ ಬರೆದ ಮಜಕೂರು ಅವಶ್ಯ ಪ್ರಸಿದ್ಧ ಆಗಬೇಕೆಂದು ಅಪೇಕ್ಷೆಯುಂಟು.

ಹಲ್ಲಿಯಾಳ ಗರ್ಲಸ್ಕೂಲ ಶಾಲೆಗೆ ತಾರೀಖು ೧೩-೩-೧೯ನೇ ಇಸವಿ ದಿವಸ ಬೆಳಗಿನ ೮ ಗಂಟೆಕ್ಕೆ ರಾವಸಾಹೇಬ ಮಾಮುಲೇದಾರ ವ್ಹಾಯಿಸ ಪ್ರೆಸಿಡೆಂಟ; ಸ್ಕೂಲಬೋರ್ಡ ಚೇಅರಮನ್; ಡಾಕ್ಟರ; ಕೃಷ್ಣರಾವ ದೇಶಪಾಂಡೆವಗೈರೇರು ಶಾಲೆಗೆ ಹೋಗಿ ಶಾಲೆ ತಪಾಸಮಾಡಿದರು. ಹಾಜರಿಗೆ ೪೦ ಹುಡಿಗೆಯರಿದ್ದು ೩೫ ಹುಡಿಗೆಯರು ಹಾಜರು ಇದ್ದರು ರಾಮಚಂದ್ರ ಬಾಳಕೃಷ್ಣ ನರಗುಂದಕರ ಎಂಬವರೊಬ್ಬರು ಹೆಡ್ ಮಾಸ್ತರರು ಇದ್ದು ಇವರೊಬ್ಬರಿಂದಲೆ ಕೆಲಸ ನಡಿಯಹತ್ತಿದೆ ಶಾಲೆಯು ಅತ್ಯುತ್ತಮ ಸ್ಥಿತಿಯನ್ನು ನೋಡಿ ಸಂತೋಷ ಪಟ್ಟರು. ಮತ್ತು ಸದರ ಶಾಲೆಯ ೩ ಬಡಹುಡಿಗೆಯರಿಗೆ ಪಾಟಿ ಇನಾಮು ಮತ್ತು ೩ ಬಡಹುಡಿಗೆಯರಿಗೆ ಬುಕ್ಕು ಇನಾಮುಕೊಟ್ಟು ಬಾಕಿ ಉಳಿದ ಎಲ್ಲ ಹುಡಿಗೆಯರಿಗೆ ಮಿಠಾಯಿ ಹಂಚಿದರು. ಈ ಖರ್ಚಿನ ಹಣಾ ಫಾರೆಷ್ಟ ಖಾತೇದವರು ಪೂರೈಸಿರುತ್ತಾರಾಗಿ ಶರಾ ಬರದಿರುತ್ತಾರೆ. ಸದರಿಯವರು ಮಾಡಿದ ಸ್ತುತ್ಯಕಾರ್ಯವನ್ನು ನೋಡಿ ಮನಸ್ಸಿಗೆ ಆನಂದವಾಯಿತು.

ಮು. ಹಲ್ಲಿಯಾಳ
ತಾ॥ ೨೭-೩-೧೯೦೩.

ಜಿ. ಬಿ. ಪುಣೇಕರ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ।
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥ಗ

ಪುಸ್ತಕ ೩೯]　　ನವಂಬರ ೧೯೦೩.　　[ಸಂಚಿಕೆ ೧೧.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಇಲಾಖೆಯ ಆಕ್ಟಿಂಗ ಗವರ್ನರರಾದ ನೇಕನಾಮದಾರ ಸರ ಜೇಮ್ಸ ಮಾಂಟೀಥ ಸಾಹೇಬರು ಈನೇ ತಾರೀಖಿನ ದಿವಸ ಸಾಯಂಕಾಲದ ೫॥ ಗಂಟೆಗೆ ಧಾರವಾಡಕ್ಕೆ ಬಂದರು. ಕಲೆಕ್ಟರರೂ ದೊಡ್ಡ ದೊಡ್ಡ ಯುರೋಪಿಯನ ಹಾಗೂ ಹಿಂದೂ ಅಧಿಕಾರಿಗಳೂ ಊರೊಳಗಿನ ಸಭ್ಯಗೃಹಸ್ಥರೂ ದೊರೆಗಳನ್ನು ಆದರಪೂರ್ವಕವಾಗಿ ಕರತರುವದಕ್ಕೆ ಸ್ಟೇಶನಕ್ಕೆ ಬಂದಿದ್ದರು. ಸಾಹೇಬರು ಗಾಡಿಯನ್ನು ಇಳಿದ ಕೂಡಲೆ ಬ್ಯಾಂಡಿನ ಸ್ವರದಿಂದ ಪೋಲೀಸರು ಮಾಡಿದ ಸಲಾಮನ್ನು ತೆಗೆದುಕೊಂಡು, ಜಿಲ್ಲಾಧಿಕಾರಿಗಳ ರಥದೊಳಗಿಂದ ಅವರ ಬಂಗ್ಲೆಗೆ ದಯಮಾಡಿಸಿದರು. ಆ ದಿನ ರಾತ್ರಿ ೯॥ ಗಂಟೆಗೆ ಕೆಲ ಜನ ಹಿಂದೂ ಗೃಹಸ್ಥರಿಗೂ ಎಲ್ಲ ಯುರೋಪಿಯನ್ನ ಅಧಿಕಾರಿಗಳಿಗೂ ಫಲಾಹಾರದ ಸಮಾರಂಭವನ್ನು ಕಲೇಕ್ಟರ ದೊರೆಗಳು ತಮ್ಮ ಬಂಗಲೆಯಲ್ಲಿ ಮಾಡಿಸಿದ್ದರು. ಮರುದಿನ ೮॥ ಗಂಟೆಗೆ ದರ್ಬಾರ ಹಾಲಿನಲ್ಲಿ ದರ್ಬಾರವು ನೆರೆಯಿತು. ಮ್ಯುನಸಿಪಾಲಟಿಯವರು ಊರವರ ವತಿಯಿಂದ ನಾನುದಾರರವರಿಗೆ ಮಾನ

ಪತ್ರವನ್ನು ಕೊಟ್ಟರು. ಅದರಲ್ಲಿ ಮುಖ್ಯವಾಗಿ ವಿದ್ಯಾಭಿವೃದ್ಧಿಗೆ ಸಂಬಂಧಿಸಿದ ಮಾತುಗಳು ಮೂರು ಇದ್ದವು.

(೧) ಪ್ರಾಥಮಿಕ ಶಿಕ್ಷಣಕ್ಕೆ ಸರಕಾರದವರು ಹೆಚ್ಚು ಹಣವನ್ನು ಕೊಟ್ಟರುವದಕ್ಕೆ ಕೃತಜ್ಞರಾಗಿದ್ದೇವೆಂಬದು.

(೨) ಈ ಊರಲ್ಲಿ ಫೀಮೇಲ ಟ್ರೇನಿಂಗಸ್ಕೂಲ ಸ್ಥಾಪಿಸಿರುವದಕ್ಕಾಗಿ ಸಂತುಷ್ಟರಾಗಿದ್ದೇವೆಂಬದು.

(೩) ಈ ಊರಲ್ಲಿ ಒಂದು ಇಂಗ್ಲಿಷ ಕಾಲೇಜವನ್ನು ಸ್ಥಾಪಿಸಬೇಕೆಂಬದು. ಹಾಗೂ ಸ್ಕೂಲ ಫಾಯನಲ್ ಪರೀಕ್ಷೆಯು ಈ ಊರಲ್ಲಿ ತೆಗೆದುಕೊಳ್ಳತಕ್ಕದ್ದೆಂಬದು.

ಮಾನಪತ್ರವು ಓದಿದ ಬಳಿಕ ದೊರೆಗಳು ಎದ್ದು ನಿಂತು ಮೊದಲಿನವೆರಡು ಮಾತುಗಳಿಗೆ ಪ್ರಜಗಳು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಕ್ಕೆ ನಾವು ತುಂಬಾ ಸಂತುಷ್ಟರಾಗಿದ್ದೇವೆಂತಲೂ ಕಡೆಯ ಮಾತಿಗೆ ಸಾವಕಾಶವಾಗಿ ವಿಚಾರ ಮಾಡುವೆವೆಂತಲೂ ಉತ್ತರ ಕೊಟ್ಟರು. ಬಳಿಕ ತಾಂಬೂಲ ಪರಿಮಳ ದ್ರವ್ಯಗಳಿಂದ ಸಭಿಕರನ್ನು ಮನ್ನಿಸಿದ ಬಳಿಕ ಜಯಘೋಷದೊಡನೆ ದರ್ಬಾರ ಸಮಾರಂಭವು ಸಮಾಪ್ತವಾಯಿತು. ಆಮೇಲೆ ದೊರೆಗಳು ಚಕ್ರವರ್ತಿಗಳ ರಾಜ್ಯಾರೋಹಣದ ಸ್ಮರಣಕ್ಕಾಗಿ ಧಾರವಾಡದ ನಾಗರೀಕರು ಸಿದ್ಧಮಾಡಿದ ತೋಟಕ್ಕೆ ಹೋಗಿ, ತೋಟದ ಉತ್ಪಾದಕರಿಂದ ಆದರಾತಿಥ್ಯವನ್ನು ಕೈಕೊಂಡು ಕಿಲ್ಲೆಯೊಳಗಿನ ಸಾರ್ವಜನಿಕ ಔಷಧಾಲಯಕ್ಕೆ ಹೋದರು. ಅಲ್ಲಿಂದ ಮರಳಿ ಬರುವಾಗ ಹೈಸ್ಕೂಲನ್ನು ಪ್ರವೇಶಿಸಿ ಅಲ್ಲಿ ನಡೆದಿರುವ ಕೆಲಸಗಳಿಂದ ಸಂತುಷ್ಟರಾಗಿ ಸಪರಿವಾರ ಕಾಲೇಜವನ್ನು ಹೊಕ್ಕರು. ಅಲ್ಲಿ ಒಂದನೇ ಎರಡನೇ ಮೂರನೇ ವರ್ಷಗಳ ವರ್ಗಗಳನ್ನು ಹೊಕ್ಕು, ಆಯಾ ವರ್ಗದಲ್ಲಿ ವಿದ್ಯಾರ್ಥಿಗಳು ಅಂದ ಕವಿತ್ವಗಳನ್ನು ಆಲಿಸುತ್ತ, ಹುಡುಗರ ವಿನಯವನ್ನೂ ಸೌಜನ್ಯವನ್ನೂ ಉಲ್ಲಾಸವನ್ನೂ ಕಂಡು ಹಿಗ್ಗುತ್ತ, ಫ್ರಿನ್ಸಿ

ಪೊಲರೂ ಎಜ್ಯುಕೇಶನಲ್ ಇನಸ್ಪೇಕ್ಟರರೂ ತೋರಿಸಿದ ಹಾದಿಯಿಂದ ಬಡಿಗತನ, ಕಂಬಾರಿಕೆಯ ವರ್ಗಗಳಿಗೆ ಬಂದರು. ಅಲ್ಲಿ ಭಿನ್ನ ಭಿನ್ನ ಜಾತಿಯ ವಿದ್ಯಾರ್ಥಿಗಳು ಕೈಕೆಲಸಗಳಲ್ಲಿ ತೋರಿಸುವ ಜಾಣ್ಮೆಯನ್ನೂ ಕೈಚಳಕವನ್ನೂ ಓರಣವನ್ನೂ ಕಂಡು ಉಬ್ಬುತ್ತ, ಪ್ರಿನ್ಸಿಪಾಲರೊಡನೆ ತಾಲೀಮು ಖಾನೆಗೆ ಬಂದರು, ಅಲ್ಲಿ ಕೈಲವಾನರನ್ನು ಸಹ ನಾಚಿಸುವಂತೆ ಅಂಗಸಾಧಕವನ್ನು ಮಾಡುವ ವಿದ್ಯಾರ್ಥಿಗಳನ್ನು ನೋಡಿ ಸಂತುಷ್ಟರಾಗಿ, ಪ್ರಾಕ್ಟಿಸಿಂಗಸ್ಕೂಲಿಗೆ ಬಿಜಯ ಮಾಡಿದರು. ಅಲ್ಲಿ ಒಂದೊಂದು ವರ್ಗದ ಕೋಣೆಯನ್ನು ಹೊಕ್ಕು ಆಯಾ ವರ್ಗದಲ್ಲಿ ನಡೆಯುತ್ತಿದ್ದ ಬಾಲೋದ್ಯಾನ ಶಿಕ್ಷಣಕರಣದ ಪ್ರಯೋಗಗಳನ್ನೂ, ಸಾಭಿನಯ ಗೀತಗಳನ್ನೂ, ವಸ್ತುಪಾಠ ಶಿಕ್ಷಣವನ್ನೂ, ಶಾಸ್ತ್ರೀಯ ಪ್ರಯೋಗಗಳನ್ನೂ ನೋಡುತ್ತ ಅತ್ಯಾನಂದಭರಿತರಾಗಿ ಆ ಶಾಲೆಯ ನಡುಮನೆಯನ್ನು ಹೊಕ್ಕರು. ಅಲ್ಲಿ ತೀರ ಚಿಕ್ಕ ಮಕ್ಕಳು ಗೆಜ್ಜೆ ಪಚ್ಚೆದ ಉಣಿಗಳನ್ನು ಕೈಯಲ್ಲಿ ಹಿಡಿದುಕೊಂಡು ಸ್ವರಮೇಳದಿಂದ ಶಿಕ್ಷಕನು ತೋರಿಸಿದ ಆಕೃತಿಯಂತೆ ಸಾಲ್ಗೊಂಡು ಹಾಡಿದ ಹಾಡುಗಳನ್ನು ಕೇಳಿ ಪರಮಾಹ್ಲಾದದಿಂದ ಭರಿತರಾಗಿ ಆಸನದಲ್ಲಿ ವಿಶ್ರಮಿಸಿದರು. ತುಸು ಹೊತ್ತಿನ ಮೇಲೆ ಎದ್ದು ಸಾಲೆಯಿಂದ ಹೊರಬಿದ್ದು ಇಬ್ಬದಿಯಲ್ಲಿ ಸಾಲಾಗಿ ನಿಂತ ಕಾಲೇಜದ ವಿದ್ಯಾರ್ಥಿಗಳ ನಡುವಿನಿಂದ ಜಯಘೋಷದ ಅಬ್ಬರದೊಳಗಿಂದ ಕಾಲೇಜದ ಮಹಾದ್ವಾರಕ್ಕೆ ಬಂದರು. ಅಲ್ಲಿ ಪ್ರಿನ್ಸಿಪಾಲರನ್ನು ಕರೆದು "ಈ ವಿದ್ಯಾಪೀಠವನ್ನು ಕಂಡು ನಮಗೆ ಪರಮಾನಂದವಾಯಿತು"ಎಂದು ಒಡನುಡಿದು ಪ್ರಿನ್ಸಿಪಾಲರ ನಿರೂಪವ ತೆಗೆದುಕೊಂಡರು. ಬಳಿಕ ನೆರೆಮನೆಗೆ ಹೋಗಿ ಅಲ್ಲಿರುವ ಜನರನ್ನು ನೋಡಿ ತಿರಿಗಿ ತಮ್ಮ ಬಿಡಾರಕ್ಕೆ ಹೋದರು. ಅದೇ ದಿನ ಸಾಯಂಕಾಲದ ೪½ ಗಂಟೆಗೆ ದೊರೆಗಳು ಬೆಳಗಾವಿಗೆ ದಯಮಾಡಿಸಿದರು.

ಈ ದೊರೆಗಳು ಕಾಲೇಜದ ವ್ಹಿಜಿಟ್ಸ್ ಬುಕ್ಕಿನಲ್ಲಿ ಈ ಸಂಸ್ಥೆಯನ್ನು ನೋಡಿ ಪರಮಾವಧಿ ಸಂತೋಷವಾ

ಯಿತೆಂತಲೂ, ಚಿಕ್ಕ ಮಕ್ಕಳಿಗೆ ಇಲ್ಲಿ ಕೊಡಲ್ಪಡುವ ಶಿಕ್ಷೆಣವು ದಕ್ಷಿಣ ಭಾಗಕ್ಕೆಲ್ಲ ಮಾದರಿಯಾಗಿರುವದರಿಂದ ಬಹು ಪ್ರಯೋಜನಕರವಾಗಿರುವದೆಂತಲೂ ಬರೆದಿದ್ದಾರೆ. ಇದಲ್ಲದೆ ಹಸ್ತಶಿಕ್ಷಣದಲ್ಲಿ ಒಳಿತಾಗಿ ಜಾಣ್ಮೆಯನ್ನು ತೋರಿಸುವ ವಿದ್ಯಾರ್ಥಿಗಳಿಗೆ ಉತ್ತೇಜನಪಾಗಬ್ಯೇಕೆಂದು ಕಲೆಕ್ಟರ ಧೊರೆಗಳ ಮುಖಾಂತರವಾಗಿ ಒಂದೂವರಿನೂರು ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿದ್ದಾರೆ. ಈ ಧೊರೆಗಳು ಹಿಂದು ಸ್ಥಾನದ ಸಿವಿಲಿಯೆನ್ನರೂ, ಕರ್ನಾಟಕದಲ್ಲಿಯೇ ಬಹು ದಿವಸಗಳನ್ನು ಕಳಿದವರೂ ಇರುವದರಿಂದ ಈ ಕರ್ನಾಟಕವ ಸಂಸ್ಥೆಗೆ ಉತ್ತೇಜನ ಕೊಟ್ಟು ತಮ್ಮ ಉದಾರತ್ವವನ್ನು ವ್ಯಕ್ತಗೊಳಿಸಿದರು. ಇದು ಅವರಿಗೆ ಭೂಷಣವೇ ಸರಿ.

ಕಾಲೇಜದ ವಿದ್ಯಾರ್ಥಿಗಳು ಬಡಿಗತನದಲ್ಲಿಯೂ, ಚಿತ್ರಕಲೆಯ ಎರಡನೇ ಗ್ರೇಡಿನಲ್ಲಿಯೂ, ತೇರ್ಗಡೆಯನ್ನು ಹೊಂದಿದರೆ ಅವರಿಗೆ ಮಿಕ್ಕವರಿಗಿಂತ ಆರಂಭದಿಂದಲೇ ಹೆಚ್ಚು ಸಂಬಳ ಕೊಡುವೆವೆಂದು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರು ಈ ಮೊದಲೇ ತಿಳಿಸಿರುವಂತೆ ಎರಡೂ ವಿಷಯದಲ್ಲಿ ಪ್ರಭು, ಎಂಬ ವಿದ್ಯಾರ್ಥಿಯು ಪಾಸಾಗಿರುವನು. ಇದಲ್ಲದೆ ಕಾಲೇಜದ ಡ್ರಾಯಿಂಗ ಮಾಸ್ತರರೂ, ಇನ್ನೊಬ್ಬ ವಿದ್ಯಾರ್ಥಿಯೂ ಮ್ಯಾನುಯಲ್ ಟ್ರೇನಿಂಗ ಎಂಬ ಪರೀಕ್ಷೆಯಲ್ಲಿ ಪಾಸಾಗಿರುವರು.

ಹೆಣ್ಣುಮಕ್ಕಳ ಟ್ರೇನಿಂಗ ಕ್ಲಾಸಿನ ವಾರ್ಷಿಕ ಪರೀಕ್ಷೆಯು ಮುಗಿಯಿತು. ಪರೀಕ್ಷೆಗೆ ಕುಳಿತ ಎಂಟು ಮಂದಿ ವಿದ್ಯಾರ್ಥಿನಿಯರಲ್ಲಿ ಇಬ್ಬರಿಗೆ ಇಪ್ಪತ್ತು ರೂಪಾಯಿದ ಸರಟಿಫಿಕೇಟುಗಳೂ ಆರು ಮಂದಿಗೆ ಹದಿನೈದು ರೂಪಾಯಿಯ ಸರಟಿಫಿಕೇಟುಗಳೂ ದೊರೆತವು. ಈ ವರ್ಗವು ೧೮೯೫ ರಲ್ಲಿ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಇದುವರೆಗೆ ೭೫ ಮಂದಿ ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ

ಬೇರೆ ಬೇರೆ ಜಿಲ್ಲೆಯಲ್ಲಿ ಶಿಕ್ಷಕಿಯರಾಗಿ ಕೆಲಸ ಮಾಡುತ್ತಲಿದ್ದಾರೆ. ಅವರಲ್ಲಿ ಕೆಲವರು ಸರಸಾಗಿ ಕೆಲಸ ಮಾಡುತ್ತಾರೆಂದು ಕೇಳಿ ನಮಗೆ ಸಂತೋಷವಾಗುತ್ತದೆ.

ಸರಕಾರದವರು ಈಗಿರುವ ಹೆಣ್ಣುಮಕ್ಕಳ ಟ್ರೇನಿಂಗ ಕ್ಲಾಸವು ಈಗ ಎಂಟು ವರ್ಷದಿಂದ ಚೆನ್ನಾಗಿ ನಡಿಯುವದನ್ನು ನೋಡಿ ವರ್ಗಕ್ಕೆ ಬದಲಾಗಿ ಶಾಲೆಯನ್ನು ಸ್ಥಾಪಿಸಬೇಕೆಂದು ಗೊತ್ತುಪಡಿಸಿದ್ದಾರೆ. ಇನ್ನುಮೇಲೆ ಹೆಣ್ಣುಮಕ್ಕಳ ಟ್ರೇನಿಂಗಸ್ಕೂಲ ಅಂದರೆ ಶಿಕ್ಷಕಿ ಶಿಕ್ಷಕ ಶಾಲೆಯು ಸ್ವಲ್ಪ ದಿವಸದಲ್ಲಿಯೇ ಪ್ರಾರಂಭವಾಗುವದು. ವರುವರುಷ ಹೊಸದಾಗಿ ಹೆಣ್ಣುಮಕ್ಕಳನ್ನು ತೆಗೆದುಕೊಳ್ಳುವರು. ಈ ಲಾಭಕರವಾದ ಪ್ರಸಂಗವನ್ನು ಶಿಕ್ಷಕರು ಕಳಕೊಳ್ಳಬಾರದು. ಈ ಶಾಲೆಯು ಚೆನ್ನಾಗಿ ನಡೆದು ಬೇಗನೆ ಕಾಲೇಜದ ಸ್ವರೂಪವನ್ನು ಹೊಂದಲೆಂದು ತುಂಬಾ ಅಪೇಕ್ಷಿಸುತ್ತೇವೆ.

ವಂಡ್ಯಾಡ ಪ್ರಾಂತವನ್ನು ನಿಜಾಮನ ಕಡೆಯಿಂದ ತೆಗೆದು ಕೊಂಡು ಕಾರಭಾರದ ವ್ಯವಸ್ಥೆಗೆ ಅದನ್ನು ಮುಧ್ಯಪ್ರಾಂತಕ್ಕೆ ಸೇರಿಸಿದ್ದಾರೆ

ಟ್ರೇನಿಂಗ ಕಾಲೇಜದಲ್ಲಿ ಕನ್ನಡ ವಿಷಯವನ್ನು ಕಲಿಸುತ್ತಿದ್ದ ಮು ರಾ. ಮುಳಬಾಗಲ ಮಾಸ್ತರರು ಮಾಡಿದ ಬಳಿಕ ವರುಷ ಎರಡು ವರುಷ ಭಾಷಾಭ್ಯಾಸವು ಅಂತೂ ಇಂತೂ ಸಾಗಿತು ಕಡೆಯಲ್ಲಿ ಮೈಸೂರಿಂದ ಮು. ರಾ. ತಿಮ್ಮಪ್ಪಶಾಸ್ತ್ರಿಗಳೆಂಬ ಕನ್ನಡ ಪಂಡಿತರನ್ನು ಕರೆಸಿದ್ದರು. ಅವರು ವಿದ್ವಜ್ಜನರಿಗೂ ವಿದ್ಯಾರ್ಥಿಗಳಿಗೂ ಸಮಾಧಾನವಾಗುವಂತೆ ಶಿಕ್ಷಣವನ್ನು ನಡಿಸುತ್ತಿರುವದರೊಳಗಾಗಿಯೇ ಗೃಹಕೃತ್ಯದ ಅನಿವಾರ್ಯತೊಂದರೆಗಳಿಂದ ಕೆಲಸಬಿಟ್ಟು ಹೋದರು. ಈಗ ಪುನಃ ಮೈಸೂರಿಂದ ಕನ್ನಡ ಪಂಡಿತರನ್ನು ತರಿಸುವ ಪ್ರಸಂಗ ಬಂದದೆ ನಮ್ಮ ಮುಂಬೈ ಕರ್ನಾಟಕದಲ್ಲಿ ಈ ಕೆಲಸಕ್ಕೆ

ತಕ್ಕ ಭಾಷಾಕೋವಿದರು ಸದ್ಯಕ್ಕೆ ದೊರೆಯದಂತೆ ಆದದ
ಒಹುಖೇದದ ಸಂಗತಿಯು ಆದ್ದರಿಂದ ಕರ್ನಾಟಕದ ಅಭಿಮಾ
ನಿಗಳೂ, ಭಾಷಾಸೇವೆಯನ್ನು ಮಾಡಬೇಕೆಂಬ ಲವಲವಿ
ಯುಳ್ಳವರೂ ಮೈ ಸೂರಲ್ಲಿ ನಡೆಯುವ ಪಂಡಿತ ಪರೀಕ್ಷೆಯ
ಅಭ್ಯಾಸವನ್ನು ನಡಿಸಲೆಂಬ ಉದ್ದೇಶದಿಂದ ಅದರ ವಿಷಯಗ
ಳನ್ನೂ ಪರೀಕ್ಷೆಯ ಪ್ರಶ್ನೆಗಳನ್ನೂ ಅದರ ನಿಯಮಗಳನ್ನೂ
ಇದರ ಅಡಿಯಲ್ಲಿ ಮುದ್ರಿಸಿದ್ದೇವೆ. ಅನುಕೂಲವಿದ್ದವರ
ಈ ಪರೀಕ್ಷೆಯನ್ನು ಕೊಟ್ಟು ಬರಬಹುದು. ಅದರಿಂ
ನಾಡಿನ ಹಿತವಾಗುವಲ್ಲದೆ ಭಾಷಾಸೇವೆಯನ್ನು ಮಾಡಿ
ಸತ್ಕೃತ್ಯಕ್ಕೂ ಪಾತ್ರರಾಗುವರು. ಈ ಪಂಡಿತ ಪರೀಕ್ಷೆಗ
ನಾಲ್ಕು ವರ್ಷಕೊಮ್ಮೆ ಹೊಸ ಗ್ರಂಥಗಳನ್ನು ಗೊತ್ತು
ಪಡಿಸುತ್ತಾರೆ. ಕೆಳಗೆ ಹೇಳಿದ ಗ್ರಂಥಗಳು ೧೯೦೪ ರ
ವರೆಗೆ ಗೊತ್ತು ಪಡಿಸಲ್ಪಟ್ಟಿವೆ.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ ಡಿ. ನಂಬರು 34 ಸಿ 1900 ನೇ ಇಸವಿ

ಫೇಬ್ರುವರಿ ತಾರೀಖು 7.

ಕರ್ನಾಟಕ ಪಂಡಿತ ಪರೀಕ್ಷೆ.

1. ಕರ್ನಾಟಕ ಪಂಡಿತ ಪರೀಕ್ಷೆಯು ಮೈಸೂರಿನಲ್ಲಿ
ಪ್ರತಿ ವರ್ಷವೂ ನವಂಬರು ತಿಂಗಳು 15 ನೇ ತಾರೀಖು
ಅಥವಾ ಆ ದಿವಸ ಭಾನುವಾರವಾದ ಪಕ್ಷದಲ್ಲಿ ನವಂಬರು
16 ನೇ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ
ಮುಂದಿನ ದಿವಸಗಳಲ್ಲಿಯೂ ನಡೆಯಿಸಲ್ಪಡುವದು.

2. ಈ ಪರೀಕ್ಷೆಗೆ ಸೇರಬೇಕೆಂಬವರಿಗೆ "ದೇಶೀಯೋ
ಪಾಧ್ಯಯ ಪರೀಕ್ಷೆ" "ಅಪ್ಪರ್ ಸೆಂಕಡರಿ ಪರೀಕ್ಷೆ" "ಮ
ದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್" ಪರೀಕ್ಷೆ, ಇ
ವುಗಳಲ್ಲಿ ಯಾವದಾದರೂ ಒಂದು ಪರೀಕ್ಷೆಯಾಗಿರಬೇಕು.
ಅಲ್ಲದೆ ಈ ಪರೀಕ್ಷೆಯಾದ ಕಾಲಕ್ಕೂ ಅವರು ಹೋಗ

ಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆಯು ನಡೆಯುವ ಕಾಲಕ್ಕೂ ದರಿದ್ರಪಕ್ಷ ಎರಡು ವರ್ಷ ಅಂತರವಿರಬೇಕು.

3. ಈ ಪರೀಕ್ಷೆಗೆ ಸೇರಬೇಕೆಂಬುವರು ಬೆಂಗಳೂ ರಲ್ಲಿರುವ ದೇಶೀಯ ಪರೀಕ್ಷೆಗಳ ವ್ಯಾನೇಜರವರಿಗೆ ಆಗ ಸ್ಟ 15 ನೇ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ ದರ ಖಾಸ್ತುಗಳನ್ನು ಬರದುಕೊಳ್ಳಬೇಕು. ಈ ದರಖಾಸ್ತಿನ ಜೊತೆಯಲ್ಲಿ ಒಬ್ಬೊಬ್ಬ ಪರೀಕ್ಷ್ಯನೂ (Candidate) ತನ ಗೆ ದೇಶೀಯೋಪಾಧ್ಯಾಯ ಪರೀಕ್ಷೆ, ಅಪ್ಪರ್ ಸೆಕಂಡರಿ ಪ ರೀಕ್ಷೆ, ಮದ್ರಾಸ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇರ್ಷ ನ್ ಪರೀಕ್ಷೆ, ಇವುಗಳಲ್ಲಿ ಯಾವದಾದರೂ ಒಂದು ಆಗಿರುವ ಬಗ್ಗೆ ಕೊಟ್ಟಿರುವ ನಿರ್ಣಯ ಪತ್ರಿಕೆ (ಸರ್ಟಿಫಿಕೇಟು) ಯು ನ್ನು ಕೂಡ ಕಳುಹಿಸಬೇಕು.

4. ಈ ಪರೀಕ್ಷೆಗೆ ಸೇರಿಸಿಕೊಳ್ಳುವ್ರದಕ್ಕಾಗಿ ಕೊಡತ ಕ್ಕ ವೇತನ ರೂಪಾಯಿಗಳು 5.

5. ಪರೀಕ್ಷ್ಯರು ಕೆಳಗೆ ಹೇಳುವ ವಿಷಯಗಳಲ್ಲಿ ಪ ರೀಕ್ಷಿಸಲ್ಪಡುವರು.

I. ಕರ್ನಾಟಕ ಭಾಷೆ ಮತ್ತು ಸಾಹಿತ್ಯ.

(*a*) ಕನ್ನಡ ವ್ಯಾಕರಣ,—

ಶಬ್ದಮಣಿದರ್ಪಣ, ಎಲ್ಲಾ	ಅಂಕಗಳು (Marks) ಒಂದು ಪತ್ರಿಕೆ 120
ಶಬ್ದಾನುಶಾಸನ, ಎಲ್ಲಾ ವ್ಯಾಖ್ಯಾನವಿಲ್ಲ	
ಭಾಷೂನಾಥರಾಯರ ವ್ಯಾಕರಣೋಪ	
ನ್ಯಾಸ, ಎಲ್ಲಾ.	

(*b*) ಕನ್ನಡ ಛಂದಸ್ಸು ಮತ್ತು ಅಲಂಕಾರ—

(1) ನಾಗವರ್ಮ ಛಂದಸ್ಸು	ಅದೇ 80
(2) ಅಪ್ರತಿಮವೀರ ಚರಿತ, ಪ್ರಕರಣ ಗಳು I ಮತ್ತು II	
(3) ಲಿಂಗರಾಜರ ನೇರವತಿ ಚರಿತ	
(4) ಶೃಂಗಾರ ರತ್ನಾಕರ	

(*c*) ಕನ್ನಡ ಪ್ರಬಂಧರಚನೆ—

ಪರೀಕ್ಷಕರಿಂದ ನಿಯಮಿತವಾದ ಎರಡು ವಿಷಯಗಳೊಳಗೆ ಯಾವದಾದರೂ ಒಂದನ್ನು ಕುರಿತು ಒಂದು ಉಪನ್ಯಾಸ	ಅದೇ 100

d ಕೆಳಗೆ ಹೇಳುವ ಗ್ರಂಥಗಳು—

(1)	ಮಲ್ಲಿನಾಥ ಪುರಾಣ, ಆಶ್ವಾಸಗಳು 1—8 ಜೈಮಿನಿ ಭಾರತ, ಸಂಧಿಗಳು 1—4	ಅದೆ 100
(2)	ಕಾದಂಬರಿ, ಎರಡನೇ ಭಾಗ ಜಗನ್ನಾಥವಿಜಯ, ಆಶ್ವಾಸಗಳು 4—6	ಅದೇ 100
(3)	ಶಬರಶಂಕರ ವಿಲಾಸ ಚಿಕ್ಕದೇವರಾಜ ವಂಶಾವಳಿ	ಅದೇ 100
(4)	ಲೀಲಾವತಿ, ಆಶ್ವಾಸಗಳು 1—3 ಪಾರ್ವತೀ ಪರಿಣಯ ಶಾಕುಂತಳ	ಅದೇ 100

II. ಸಂಸ್ಕೃತಭಾಷೆ ಮತ್ತು ಸಾಹಿತ್ಯ.

(a) ಸಂಸ್ಕೃತ ವ್ಯಾಕರಣ—

ಲಘು ಕೌಮುದಿ	ಅದೇ 80

(b) ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ—

ಶತಬೋಧ ಪ್ರತಾಪ ರುದ್ರೀಯ; ಅರ್ಥಾಲಂಕಾರ ಪ್ರಕರಣವಿಲ್ಲ ಕುವಲಯಾನಂದ	ಅದೇ 120

(c) ಕೆಳಗೆ ಹೇಳುವ ಗ್ರಂಥಗಳು—

ಮಾಳವಿಕಾಗ್ನಿ ಮಿತ್ರ ಮುದ್ರಾರಾಕ್ಷಸ	ಒಂದು ಪತ್ರಿಕೆ 100
ಕಾದಂಬರಿ, ಚಂದ್ರಾಪೀಠನ ಪಟ್ಟಾಭಿಷೇಕದಿಂದ 1ನೇ ಭಾಗದ ಕಡೆವರೆಗೆ.	100

III. ಭಾಷಾಂತರೀಕರಣ.

ಕನ್ನಡದಿಂದ ಸಂಸ್ಕೃತಕ್ಕೆ 60 ಅಂಕುಗಳು ಸಂಸ್ಕೃತದಿಂದ ಕನ್ನಡಕ್ಕೆ 40 ಅಂಕುಗಳು	ಅದೇ 100

6 ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ ವಿಷಯ ಕ್ರಮಾನುಸಾರವಾಗಿ ಪರೀಕ್ಷೆಯು ನಡೆಯುವದು.

ದಿನ.	ಘಂಟೆ	ವಿಷಯ.	ಅಂಕುಗಳು.	
ಮೊದಲನೇ ದಿನ.	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ...	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ... ...	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ...	10—1	ಅದೇ ಮೂರನೇ ,, ...	100	
	2—5	ಅದೇ ನಾಲ್ಕನೇ ,, ...	100	
ನಾಲ್ಕನೇ ದಿನ ...	10—1	ಕನ್ನಡ ಪ್ರಬಂಧರಚನ	100	
	2—5	ಭಾಷಾಂತರೀಕರಣ	100	
ಐದನೇ ದಿನ ...	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ... ...	120	
ಆರನೇ ದಿನ ...	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ. ...	100	200
	2—5	,, ಎರಡನೇ ,, ...	100	

7. ಪರೀಕ್ಷಾ ವಿಷಯಗಳ ಒಂದೊಂದು ಸಮುದಾಯದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವರು.

ಪರೀಕ್ಷಾ ವಿಷಯಗಳು ಕೆಳಗೆ ಕಾಣಿಸಿರುವಂತೆ 6 ಸಮುದಾಯಗಳಾಗಿ ಮಾಡಲ್ಪಟ್ಟಿವೆ;—

(1) I *a* ಮತ್ತು *b*	(3) I *d*	(5) II *c*.
(2) I *c*.	(4) II *a* ಮತ್ತು *b*.	(6) III.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ, ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

8. ಕರ್ನಾಟಕ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ "ಅಸ್ಸರ್ ಸೆಕೆಂಡರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಯೂ ಕೂಡ ಆಗಿದ್ದು ಪಕ್ಷದಲ್ಲಿ ಕಾಲೇಜುಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಕನ್ನಡ ಮುನಿಷಿಗಳ ಕೆಲಸವನ್ನೂ, ತಾಲೂಕು ಕನ್ನಡ ಸ್ಕೂಲ್‌ಗಳಲ್ಲಿ ಪಂಡಿತೋಪಾಧ್ಯಾಯರುಗಳ ಕೆಲಸವನ್ನೂ ಕೊಡುವಾಗ ಇತರ ದರ್ಖಾಸ್ತುದಾರರಿಗಿಂತ ಇವರಿಗೆ ಹೆಚ್ಚು ಪ್ರಾಮುಖ್ಯವು ಕೊಡಲ್ಪಡುವುದು.

ಹೆಚ್. ಜಿ. ಭಾಭಾ,
ಇನಸ್ಪೇಕ್ಟರ ಜನರಲ್ ಆಫ್ ಎಜ್ಯುಕೇಷನ್

Question Paper of the Pandits' Examination of Mysore.

ಮೈಸೂರ ದೇಶ್ಯ ಪಂಡಿತ ಪರೀಕ್ಷೆ.

೧೯೦೧

ತಾರೀಖು ೧೫ನೆಯ ನವಂಬರ

ಕಾಲ ೧೦ ರಿಂದ ೧ ಘಂಟೆಯವರಿಗೆ

ಕರ್ನಾಟಕ ವ್ಯಾಕರಣ.

೧ (ಅ) ಸ್ವರ, ವ್ಯಂಜನ, ದೀರ್ಘ, ಲಿಂಗ, ವಿಭಕ್ತಿ ಇವುಗಳ ವ್ಯುತ್ಪತ್ತಿಯೆಂತು?

(ಬ) ಅಟ್ಟೂ ದೇಶಕ್ಕೆ ಸಾಸಿಗಳಾವುವು?

(ಕ) ಲಳ ಟ, ರಱ ಇವುಗಳ ಪ್ರಾಸ ವಿಷಯದಲ್ಲಿ ದರ್ಪಣಶಾಸನಕಾರರ ಅಭಿಪ್ರಾಯಗಳೇನು?

(ಡ) "ಅತ್ವದಿನಿವರ್ಣದಿಂ ಮತ್ತೊತ್ವದಿ" "ಅವತರಿಸಿಕ್ಕುವ್ವಮು ವರ್ಣದ ಬುು ವರ್ಣದದೋತ್ವತ್ವದ" ಎಂದು ಯತ್ವವತ್ವವಿಧಾಯಕ ಸೂತ್ರಗಳಿರಡರಲ್ಲಿಯೂ ದರ್ಪಣಕಾರನು ಓಕಾರವಂ ಗ್ರಹಿಸಿದ್ದಾನೆ ವಿಷಯ ಭಾಗವೆಂತು?

(ಅ) ನೆಲಪ್ವಾದಿ ಲಘುಪಾಂತಾ ಲೋಗದವಚೋ ವೈತಾ. ಈ ಸೂತ್ರಾರ್ಥೋದಾಹರಣೆಗಳನ್ನೂ ಪದಪ್ರಯೋಜನವನ್ನೂ ಕನ್ನಡದಲ್ಲಿ ಬರೆಯಿರಿ.

(ಬ) ಅತಬುಪ್ಪೋ, ಓನಿನಾತೇ, ಅದೇ ಎಂಬ ಸೂತ್ರಾರ್ಥೋದಾಹರಣೆಗಳಲ್ಲಿ ದರ್ಪಣಕಾರರ ಸಂಧಿ ಯೆಂತಾಗುವದು.

(ಕ) ಬಹುಳಂ — ಎಂಬುದರ ಕ್ವಚಿತ್ತ್ವವೃತ್ತ್ಯಾದಿ ನಾಲ್ಕು ಭೇದಗಳನ್ನೂ ಯಾವುದಾದರೂ ಒಂದು ಸೂತ್ರಾರ್ಥದಲ್ಲಿ ಉದಾಹರಿಸಿ ತೋರಿಸಿರಿ.

(ಅ) "ನಮೋಸ್ತುಗಳಿರ್ವಂತಿರ್ದ್ವರಃ" ಇಲ್ಲಿ ನಮೋಸ್ತುಗಳ್ ಎಂಬದಕ್ಕೆ ಲಿಂಗ ಸಂಜ್ಞೆ ಹ್ಯಾಗೆ ಬಂದಿತು?

(ಬ) ಬರ್ಪಿಡಿ, ಮಾರ್ಕಟ್ಟಳೆ, ಕಡುಚಾಗಿ, ಕಾಲಿಜ್ಜ, ತವಿಕಟ್ಟು ಇವುಗಳಲ್ಲಿ ಪರಪದದಾದಿಗೆ ತೃತೀಯ ವರ್ಣಾದೇಶವೇಕಿಲ್ಲ?

(ಗ) 'ಅದು ವಿದುದಾವುದು' ಎಂಬ ಸರ್ವನಾಮಗಣದಲ್ಲಿ ದರ್ಪಣಕಾರನು ಹೇಳಿದ ಏ ಅದು, ಏನ್ ಎಂಬ ಶಬ್ದಗಳನ್ನು ಶಾಸನಕಾರನು ಬಿಟ್ಟಿದ್ದಾನೆ. ಕಾರಣವೇನು? ಅವನ್ನು ಮತ್ತೆಲ್ಲಿ ಸೇರಿಸಿರುವನು?

(ಘ) ಸಂಸ್ಕೃತ ಋಕಾರಾಂತಗಳು ಕನ್ನಡದಲ್ಲಿ ಲಿಂಗವಾಗುವಾಗ ಆವಾವ ವಿಕಾರಂಗಳಂ ಪಡೆವುವು? ಉದಾಹರಿಸಿರಿ.

೫ (ಗ) ಅಲ್, ಎಂಬ ಪ್ರತ್ಯಯವು ಆವಾವ ಅರ್ಥದಲ್ಲಿ ವಿಧಿಸಲ್ಪಟ್ಟಿರುವದು? ಸೋದಾಹರಣವಾಗಿ ನಿರೂಪಿಸಿರಿ.

(ಘ) 'ಕೃತಿ' ಎಂಬ ಸೂತ್ರದಿಂದ ಸ್ವರಾದಿ ಕೃತ್ತದ್ಧಿತ ಸಮಾಸ್ಯದಲ್ಲಿ ನಿಷೇಧಿಸಿದ ದ್ವಿತ್ವವನ್ನು ದರ್ಪಣಕಾರನು "ಧಾತುಗಲುಂ ಪರಮಾದೊಡಚಾತಂ ದ್ವಿತಂ" ಎಂದು ಅಲ್ಮಾತ್ರದಲ್ಲಿ ನಿಷೇಧಿಸಿರುವನು. ತಿನ್ನತ್ತುಂ ಬಳವಿ, ಬೆಳಸು ಮುಂತಾದ ಮಿಕ್ಕಿಶ ಕೃದಂತ ರೂಪಗಳಲ್ಲಿ ದರ್ಪಣ ಪ್ರಕಾರ ದ್ವಿತ್ವನಿಷೇಧವೆಂತು?

(ಙ) ವಿಭಾಷಾ, ವ್ಯವಸ್ಥಿತ ವಿಭಾಷಾ ಎಂಬಿವುಗಳಿಗೆ ಭೇದವೇನು? ಉದಾಹರಣೆಗಳಲ್ಲಿ ವಿಶದಪಡಿಸಿರಿ.

೬ (ಅ) 'ಬ' ಡೋರ್ದ್ವೋರಣಂ ವ್ಯಂಜನೇ, ಎಂಬಲ್ಲಿ ಈ ಗ್ರಹಣಕ್ಕೆ ಪ್ರಯೋಜನವೇನು? ತುಳುಗಾಡು, ಕುಡುಗೋಲ್ ಇವುಗಳಲ್ಲಿ ಈ ಸೂತ್ರವೇಕೆ ಪ್ರವರ್ತಿಸಲಿಲ್ಲ?

(ಬ) ಇವುಗಳಿಗೆ ನಿಷ್ಪತ್ತಿ ಪ್ರಕಾರಂಗಳಂ ವಿವರಿಸಿರಿ. ಮಾಂಗುಲಿ, ತೂಗುಂಬಕೊಡರ್, ಕಾಲುರಿಚೆ, ಬೆಳ್ಳುಂಬಟ್ಟೆ, ಪಲ್ಲಿಲಿ, ಉಂಟು.

೭ (ಅ) ಗೆ ಪ್ರತ್ಯಯಕ್ಕೆ 'ಕೆ' ಆದೇಶವೆಂದೂ ಕೆ ಪ್ರತ್ಯಯಕ್ಕೆ 'ಗೆ' ಆದೇಶವೆಂದೂ ವಿಧಿಸುವ ಶಾಸನದರ್ಪಣ ಪ್ರಕಾರಗಳಲ್ಲಿ ಅವುದರಲ್ಲಿ ಸಾಕರ್ಯ? ಹೇಗೆ? ವಿವರಿಸಿರಿ.

(ಬ) ಸಮುಚ್ಚಯಾರ್ಥಕವಾದ ಅಮ್, ಉಮ್, ಎಂಬಿವುಗಳಿಗೆ ಪ್ರಯೋಗ ವಿಷಯದಲ್ಲಿ ಏನು ತಾರತಮ್ಯ? ಉದಾಹರಿಸಿರಿ.

(ಙ) ಈ ಪದಂಗಳ ವಿಷಯದಲ್ಲಿ ದರ್ಪಣ ಶಾಸನಕಾರನಿಗೆ ಇರುವ ಭಿನ್ನಾಭಿಪ್ರಾಯಗಳೇನು? ಇವೆರಡು ಪಕ್ಷಗಳಲ್ಲಿ ಅವುದುಯುಕ್ತ? ಸಕಾರಣವಾಗಿ ವಿವರಿಸಿರಿ.

ದೌಹಿತ್ರನೆಂ, ಪಂಡಿತರಿರ್, ಅಂಗಯ್, ಬಂಡುಣಿ.

(೧) ಶಾಸನಕಾರನು ಕೃದಂತಗಳೆಂದು ಹೇಳುವ ಕೆಲವನ್ನು ದರ್ಪಣಕಾರನು ತದ್ಧಿತ ಪ್ರಕರಣದಲ್ಲಿಯೂ ದರ್ಪಣಕಾರನು ಕೃದಂತುಗಳೆಂದು ಹೇಳುವ ಕೆಲವನ್ನು ಶಾಸನಕಾರನು ತದ್ಧಿತ ಪ್ರಕರಣದಲ್ಲಿಯೂ ನಿರೂಪಿಸಿರುವರು. ಅಂತಹ ನಾಲ್ಕು ಪದಗಳನ್ನು ಬರೆಯಿರಿ

ಈ ಎರಡು ಮತಗಳಲ್ಲಿ ಅವ್ವದು ಸಮಂಜಸ? ಸಕಾರಣವಾಗಿ ಉತ್ತರವನ್ನು ಬರೆಯಿರಿ.

(೭) "ಅನುಕೃತಿಪದಕಂ ಮುಂದನು ಕೃತಿಸ್ವರಂ ನಿಲೆಯತ್ವಂ" ಅನುಕೃತಿಗಂ ಸ್ವರಮವು ಪರಮಿರೆಯತ್ವಕ್ಕಮಂತೆ ಸಂಧಿವಿಕಲ್ಪಂ" ಇವೆರಡನ್ನು ಸಮನ್ವಯಮಾಡುವದೆಂತು?

(೧) ಹೊಸಗನ್ನಡ, ಹಳೆಗನ್ನಡ ಎಂಬವುಗಳ ನಿಜವಾದ ಅರ್ಥವೇನು? ಇವೆರಡಕ್ಕೂ ಇರುವ ಮುಖ್ಯ ವ್ಯತ್ಯಾಸಗಳಾವುವು? ಸಂಗ್ರಹವಾಗಿ ಬರೆಯಿರಿ.

(೭) ದ್ರವಿಡ ಭಾಷೆಗಳು ಸಂಸ್ಕೃತದಿಂದ ಹುಟ್ಟಿದುವುಗಳಲ್ಲವೆಂಬುದಕ್ಕೆ ನಿದರ್ಶನವೇನು?

KINDER GARTON 3RD GIET.

ಕಿಂಡರಗಾರ್ಟನ್ ೩ನೇ ಇನಾಮು.

(೨೯೯ ಪುಟದಿಂದ ಮುಂದೆ ಸಾಗಿದ್ದು)

ಗ. ವ್ಯವಹಾರೋಪಯುಕ್ತ ಆಕೃತಿಗಳು.

ಈ ಸಂಬಂಧದಿಂದ ಮೂಲ ಇಂಗ್ಲಿಶ ಪುಸ್ತಕದಲ್ಲಿ ಕೊಡಲ್ಪಟ್ಟ ಆಕೃತಿಗಳು ನಮ್ಮ ಹುಡುಗರಿಗೆ ಅಪರಿಚಿತವಾದ ಪದಾರ್ಥಗಳನ್ನು ತೋರಿಸುವದರಿಂದ ಅವುಗಳನ್ನು ಬಿಟ್ಟು ನಮ್ಮಲ್ಲಿ ರೂಢವಾಗಿರುವ ಪದಾರ್ಥಗಳ ಹೋಲಿಕೆಯನ್ನು ತೋರಿಸುವ ಆಕೃತಿಗಳು ಮಾತ್ರ ಮುಂದೆ ಕೊಡಲ್ಪಟ್ಟವೆ. ಅವುಗಳನ್ನು ರಚಿಸುವಾಗ್ಗೆ ಶಿಕ್ಷಕರು ಹುಡುಗರಿಗೆ ಮು

ನೋರಂಜನವಾಗುವಂತೆಯು ವ್ಯವಹಾರ ಜ್ಞಾನವುಂಟಾಗು
ವಂತೆಯೂ ನೋಡಿದ ಪದಾರ್ಥಗಳ ನೆನಪು ಆಗುವಂತೆ
ಯು ತಕ್ಕ ಕಥೆಗಳನ್ನು ಅಥವಾ ಮಾತುಗಳನ್ನು ಕಲ್ಪಿಸಿ
ಹೇಳುತ್ತ ಹೋಗುವದು ಅವಶ್ಯವದೆ ಆದರೆ ಪ್ರತಿಬಿಂದು
ಆಕೃತಿಯು ಅಥವಾ ಕಲ್ಪನೆಯು ಸ್ವತಂತ್ರವಾಗಿರದೆ ಪರಸ್ಪ
ರ ಸಂಬಂಧವರ್ಶಕವಾಗಿರುವದು ಹಿತಕರವು ಆಕೃತಿ
ಗಳನ್ನು ರಚಿಸುವ ಬಗೆಯನ್ನೂ ಮಾತುಕಥೆಗಳನ್ನು ಹೊಂ
ದಿಸುವ ತೆರವನ್ನು ಮುಂದೆ ವಿವರಿಸಿದ್ದೇವೆ. ಆಕೃತಿಗಳ
ನ್ನು ರಚಿಸುವವರು ಕೆಳಗೆ ಬರೆಯಲ್ಪಟ್ಟ ಸೂಚನೆಗಳನ್ನು
ಅನುಸರಿಸತಕ್ಕದ್ದು.

೧. ಬಿಂದು ಆಕೃತಿಯಿಂದ ಮತ್ತೊಂದನ್ನು ರಚಿಸುವಾಗ್ಗೆ
ಅದನ್ನು ಪೂರ್ಣ ಕೆಡಿಸದೆ, ಸ್ವಲ್ಪ ಹೆಚ್ಚು ಕಡಿಮೆಯಿಂದ
ಹೊಸ ಆಕೃತಿಯುಂಟಾಗುವಂತೆ ಮಾಡುವದು.

೨. ಘನದಿಂದ ಆರಂಭಮಾಡಿ ಹಲವು ಆಕೃತಿಗಳನ್ನು
ರಚಿಸುತ್ತ ಕಡೆಗೆ ಪುನಃ ಘನವನ್ನುಂಟು ಮಾಡುವದು.

೩. ಆಕೃತಿಗಳನ್ನು ಬಿಂದಕ್ಕೊಂದು ಸಂಬಂಧಿಸಿ ರಚಿಸು
ವದು; ಅಂದರೆ ಬಿಂದು ಆಕೃತಿಯಿಂದ ಮತ್ತೊಂದಕ್ಕೆ ಸಂ
ಬಂಧ ಹತ್ತುವಂತೆ ಕಥೆಗಳನ್ನು ಕಲ್ಪಿಸಿ ಆಕೃತಿಗಳನ್ನು
ಅದಕ್ಕೆ ತಕ್ಕಂತೆ ಮಾಡುವದು.

ಆಕೃತಿಗಳ ರಚನಾಕ್ರಮವು.

ಮೊದಲನೇ ಪ್ರಕಾರ.

ಹಿಂದೆ ಹೇಳಿದಂತೆ ಘನೇ ಇನಾಮಿನ ಚಿಟ್ಟಿಗೆಯನ್ನು ತೆರೆ
ದ ಬಳಿಕ ಕೆಳಗೆ ವಿವರಿಸಿದ ಕಲ್ಪಿತ ಕಥೆಯನ್ನು ಹೇಳುತ್ತ
ಆಕೃತಿಗಳನ್ನು ರಚಿಸುತ್ತ ಹೋಗಬೇಕು.

ಬಿಂದು ಘನವನ್ನು ಮುಂದೆ ಇಟ್ಟು ಇವನು ತಿರುಕನೆಂ
ದು ತಿಳಿಯುವ. ಇವನು ಬಿಕ್ಕೆ ಬೇಡಲಿಕ್ಕೆ ಹೊರಡಲು
ಒಬ್ಬ ಕುರುಡ ತಿರುಳನು ಇವನಿಗೆ (ಘನೇ ಘನವನ್ನು
ಗನೇದರ ಹಿಂದೆ ಇಡಿರಿ.) ಗಂಟು ಬಿದ್ದು ಹಿಂಬಾಲಿಸಿದನು:
ಈಗ ಇಬ್ಬರಾದರು. ಇಷ್ಟರೊಳಗೆ ಇನ್ನೊಬ್ಬನು ಬಂದು

ಕೊಡಿದನು; (೩ನೇ ಫನೆವನ್ನು ಹೊಂದಿಸಿಡಿರಿ.) ಈಗ ಮೂವರಂದರು ಮತ್ತೆ ನಾಲ್ಕನೆಯವನೊಬ್ಬನು ಬಂದನು. (೪ನೇ ಫನವನ್ನು ಹೊಂದಿಸಿಡಿರಿ) ಈಗ ನಾಲ್ವರಾದರು. ಇದೇ ಮೇರೆಗೆ ಎಂಟೂ ಫನಗಳು ತೀರುವವರೆಗೆ ಬಲದಿಂದ ಎಡಕ್ಕೆ ಅಥವಾ ಎಡದಿಂದ ಬಲಕ್ಕೆ ೧ನೇ ಆಕೃತಿಯಲ್ಲಿ ತೋರಿಸಿದಂತೆ ಫನಗಳನ್ನು ಇಡುತ್ತ ಹೋಗತಕ್ಕದ್ದು ಈ ಫನಗಳ ಸಾಲು ಮುಂದೆ ಸರಿಯುವಂತೆ ದೂಡಿರಿ; ಈಗ ಉಗೆ ಬಂಡಿಯು ಹೋಗುವಂತೆ ಕಾಣುತ್ತದೆ. (ಹುಡುಗರು ಶಿಳ್ಳು ಹೊಡೆಯಲಿ.)

೨ನೇ ಪ್ರಕಾರ.

ಈ ಎಲ್ಲ ತಿರುಕರು ಕೂಡಿ ಕಾಳು ತಿರಿದು ತಂದು ಒರಿದು ಗಂಟು ಕಟ್ಟಿ ತಾವಿರುವ ಸ್ಥಳಕ್ಕೆ ಹೋಗುವಾಗ್ಗೆ ಆ ಗಂಟು ಕಣ್ಣಿದ್ದವನ ತಲೆಯ ಮೇಲೆ ಹೊರಿಸಿ ಅವನ ಬೆನ್ನ ಗುಂಟ ನಡೆದರು (ಕಡೆಯ ಫನವನ್ನು ೧ನೇ ಫನದಮೇಲೆ ಇಡಿರಿ; ೨ನೇ ಆಕೃತಿ ೫) ಈಗ ೭ ಮಂದಿ ತಿರುಕರು ಉಳದರು ೧ನೆಯವನ ತಲೆಯ ಮೇಲೆ ಕಾಳಿನ ಗಂಟು ಇರುವದು ಮನೆಯೊಳಗಿನ ಕಾಳುಗಳನ್ನು ಗಡಿಗೆಯೊಳಗೆ ಅಥವಾ ಡಬ್ಬಿಯೊಳಗೆ ಹಾಕಿ ಬಂದರಮೇಲೊಂದು ಏರಿಸಿ ಇಡುವರು. ಅದಕ್ಕೆ ಅವಕಾಳವೆನ್ನುವರು. ಈಗ ನಾವು ಈ ಫನಗಳು ಗಡಿಗೆಗಳೆಂದು ತಿಳಿಯುವ. ಎಲ್ಲಕ್ಕೂ ಕೆಳಗಿನದರಲ್ಲಿ ಅಕ್ಕಿ, ಅದರ ಮೇಲಿನದರಲ್ಲಿ ಬೇಳೆ, ಮೂರನೆಯದರಲ್ಲಿ ಕಣಕ ಹಾಕಿದೆಂದು ಕಲ್ಪಿಸಿ, ೨ನೇ ೩ ಆಕೃತಿಯಲ್ಲಿ ತೋರಿಸಿದಂತೆ ಬಂದರ ಮೇಲೊಂದು ಎಂಟೂ ಫನಗಳು ತೀರುವವರೆಗೆ ಏರಿಸಿಡುವ.

೩ನೇ ಪ್ರಕಾರ.

ಈ ಆಕೃತಿಯು ಸ್ಟೇಶನದ ಹತ್ತರ ಇರುವ ನಿಶಾನೆಯ ಕಂಬ (Sign Post) ದಂತೆ ಕಾಣುವದು. ಇದರಲ್ಲಿ ಸರಿಯಾಗಿ ಎರಡು ಭಾಗಗಳನ್ನು ಮಾಡಿದೆನು. ಈಗ ಪ್ರತಿಬಿಂದು, ತಾರಾಯಂತ್ರದ ಕಂಬದಂತೆ ಕಾಣುವದು. (೩ನೇ ಆಕೃತಿ) ಪುನಃ ಪ್ರತಿಯೊಂದರಲ್ಲಿ ಸರಿಯಾಗಿ ಎರಡುಭಾಗ ಮಾಡಿದೆನು. ಇವು ಲೈನಮಾರ್ಗದ ಮೇಲಿಂದ ಲೋಹ

ಮಾರ್ಗವು ಹಾದು ಹೋಗುವ ಸ್ಥಳದಲ್ಲಿ ನಿಲ್ಲಿಸಲ್ಪಟ್ಟ ಕಂಬ (ಗೇಟಿನ ಕಂಬ) ಗಳಂತೆ ಕಾಣುತ್ತವೆ; (೪ನೇ ಆಕೃತಿ). ಈ ನಾಲ್ಕು ಕಂಬಗಳನ್ನು ಕೂಡಿಸೋಣ; (೫ನೇ ಆಕೃತಿ) ಈಗ ಇದು ಪುನಃ ಘನವಾಯಿತು.

೪ನೇ ಪ್ರಕಾರ.

ಈ ಘನವು ಅರಸನು ಮಲಗುವ ಎರಡಂತಸ್ತಿನ ಮಹಾಲು ಇರುತ್ತದೆಂದು ಕಲ್ಪಿಸುವ. ಇದರೊಳಗಿನ ಎರಡು ಘನಗಳನ್ನು ತೆಗೆದು (೩ನೇ ಆಕೃತಿಯಲ್ಲಿ ತೋರಿಸಿದಂತೆ) ಹಿಂದೆ ಇಟ್ಟರೆ ಇದು ಅರಸನು ಕೂಡುವ ಕುರ್ಚಿಯಾಯಿತು. ಇದರೊಳಗೆ (೩ನೇ ಆಕೃತಿಯಂತೆ) ಎರಡು ಭಾಗ ಮಾಡಿದರೆ ಅರಸನಿಗೊಂದು ರಾಣಿಗೊಂದು ಹೀಗೆ ಎರಡು ಕುರ್ಚಿಗಳಾದವು. ಈ ಕುರ್ಚಿಗಳನ್ನು (೪ನೇ ಆಕೃತಿಯಂತೆ) ಮೇರೆಗೆ ಮೇರೆ ಹೊಂದಿಸಿಟ್ಟರೆ ಮೂರಂತಸ್ತಿನ ಅರಮನೆಯಾಯಿತು. ನಡುವಿನ ಬೈಲೊಳಗೆ ಅರಸನೂ ರಾಣಿಯೂ ಬೇಸಿಗೆಯ ರಾತ್ರಿಯಲ್ಲಿ ಕುಳಿತು ವಿಶ್ರಾಂತಿ ತಕ್ಕೊಳ್ಳುವರು, ಈ ಅರಮನೆಯಿಂದ ಅರಸನೂ ರಾಣಿಯೂ ಅಡ್ಡಾಡುವದಕ್ಕೆ (೯ನೇ ಆಕೃತಿಯಲ್ಲಿ ತೋರಿಸಿದ) ಓಣಿಗುಂಟ ಹೋಗುತ್ತಾರೆಂದು ತಿಳಿಯುವ. ಓಣಿಯ ಎರಡೂ ಮಗ್ಗಲಿಗೆ ಮನೆಗಳ ಸಾಲು ಎಷ್ಟು ಚಂದಕಾಣುತ್ತವೆ! ಹೀಗೇ ಮುಂದೆ ಹೋಗುತ್ತಿರಲು (೧೦ನೇ ಆಕೃತಿಯಲ್ಲಿ ತೋರಿಸಿದಂತೆ) ಪಟ್ಟಣದ ಮಧ್ಯಭಾಗದಲ್ಲಿರುವ ಪಗಡಿಬಾಜಾರವು ಕಂಗೊಳಿಸುವದು. ಮತ್ತೆ ಹಾಗೇ ಮುಂದಕ್ಕೆ ಹೋದರೆ ತೋಟವು ಬರುವದು (೧೧ನೇ ಆಕೃತಿ) ತೋಟದೊಳಗೆ ವಿಶ್ರಾಂತಿಗಾಗಿ ಕೂಡ್ರುವದಕ್ಕೆ (೧೨ನೇ ಆಕೃತಿಯಲ್ಲಿ ತೋರಿಸಿದಂತೆ) ಬೆಂಚುಗಳಿರುವವು. ಅಲ್ಲಿ ನೀರು ತುಂಬುವಹೌದು (೧೩ನೇ ಆಕೃತಿ) ಇರುವದು. ಆ ಹೌದಿಗೆ ನೀರು ಪೂರಯಿಸುವ ಬಾವಿಯನ್ನು (೧೪ನೇ ಆಕೃತಿ) ನೋಡಿ ಇಬ್ಬರೂ ಹೊರಗೆ ಬರುವಾಗ್ಗೆ ಬಾಗಿಲುಗಳು ಹತ್ತುವವು.

(ಸಶೇಷ).

ภาพที่ 13

ภาพที่ 14

ภาพที่ 15

ภาพที่ 16

ภาพที่ 17

ภาพที่ 18

೧ನೆಯ ಇಯತ್ತೆ.

ವಸ್ತು ಪಾಠ.

ವಿಷಯ—ಘರ್ಷಣೆ.

ವೇಳೆ—೪೫ ಮಿನಿಟು.

ಉಪಕರಣ—ದಾರ ಕಟ್ಟಿದ ಘನ, ಎರಡು ಕಾಜಿನ ಹಾಳಿಗಳು, ಎರಡು ಉಸುಬಿನ ಕಾಗದಗಳು (ಸ್ಯಾಂಡ್‌ಪೇಪರ), ಹೆರಿಮಣಿ, ಗೋಲ, ಒಂದು ಕಟ್ಟಿಗೆಯ ತುಂಡು, ಕರಗಸ, ಒಂದು ಸಣ್ಣ ಪೆಟ್ಟಿಗೆ, ಎರಡು ರೂಲು ಕಟ್ಟಿಗೆಗಳು, ಸೀಸಿನ ತಗಡು, ಹುಡುಗರು ಆಡುವ ಸಣ್ಣ ಬಂಡಿ, ಎಣ್ಣಿ, ಒಂದು ಕಬ್ಬಿಣದ ಹಾರಿ ಹಾಗು ಅದರಂಥ ಆಕಾರದ ಒಂದು ಕಟ್ಟಿಗೆಯ ಕೋಲು, ಉಸುಬು, ನೀರು.

ಉಪೋದ್ಘಾತ—ಒಂದು ಘನಕ್ಕೆ ದಾರವನ್ನು ಕಟ್ಟಿ ಅದನ್ನು ಕಾಜಿನ ಹಾಳಿಯ ಮೇಲಿಂದಲೂ, ಉಸುಬಿನ ಕಾಗದದ ಮೇಲಿಂದಲೂ ಎಳೆಯ ಹೇಳಿ, ಉಸುಬಿನ ಕಾಗದದ ಮೇಲಿಂದ ಎಳೆಯುವಾಗ ಯಾಕೆ ಜಡ ಬರುತ್ತದೆಂಬದನ್ನೂ ಅದರಿಂದ ವ್ಯವಹಾರದಲ್ಲಿ ಆಗುವ ಲಾಭ ಹಾನಿಗಳನ್ನೂ ಕುರಿತು ಈಗ ವಿಚಾರ ಮಾಡತಕ್ಕದ್ದದೆ; ಎಂದು ಹೇಳಿ, ಪಾಠವನ್ನು ಆರಂಭಿಸುವದು.

ก๓

ก๔

ก๕

ก๖

ก๗

ก๘

೫೫ನೆಯ ಪಾಠ.

ವಸ್ತು ಪಾಠ.

ವಿಷಯ—ಘರ್ಷಣೆ.

ವೇಳೆ—೪೫ ನಿಮಿಷ.

ಉಪಕರಣ—ದಾರ ಕಟ್ಟಿದ ಘನ, ಎರಡು ಕಾಜಿನ ಹಾಳೆಗಳು, ಎರಡು ಉಸುಬಿನ ಕಾಗದಗಳು (ಸ್ಯಾಂಡ ಪೇಪರ), ಹೆರಿ ಮಣಿ, ಗೋಲ, ಒಂದು ಕಟ್ಟಿಗೆಯ ತುಂಡು, ಕರಗಸ, ಒಂದು ಸಣ್ಣ ಪೆಟ್ಟಿಗೆ, ಎರಡು ರೂಲು ಕಟ್ಟಿಗೆಗಳು, ಸೀಸಿನ ತಗಡು, ಹುಡುಗರು ಆಡುವ ಸಣ್ಣ ಬಂಡಿ, ಎಣ್ಣೆ, ಒಂದು ಕಬ್ಬಿಣದ ಹಾರಿ ಹಾಗು ಅದರಂಥ ಆಕಾರದ ಒಂದು ಕಟ್ಟಿಗೆಯ ಕೋಲು, ಉಸುಬು, ನೀರು.

ಉಪೋದ್ಘಾತ—ಒಂದು ಘನಕ್ಕೆ ದಾರವನ್ನು ಕಟ್ಟಿ ಅದನ್ನು ಕಾಜಿನ ಹಾಳೆಯ ಮೇಲಿಂದಲೂ, ಉಸುಬಿನ ಕಾಗದದ ಮೇಲಿಂದಲೂ ಎಳೆಯ ಹೇಳಿ, ಉಸುಬಿನ ಕಾಗದದ ಮೇಲಿಂದ ಎಳೆಯುವಾಗ ಯಾಕೆ ಜಡ ಬರುತ್ತದೆಂಬದನ್ನೂ ಅದರಿಂದ ವ್ಯವಹಾರದಲ್ಲಿ ಆಗುವ ಲಾಭ ಹಾನಿಗಳನ್ನೂ ಕುರಿತು ಈಗ ವಿಚಾರ ಮಾಡತಕ್ಕದ್ದದೆ; ಎಂದು ಹೇಳಿ, ಪಾಠವನ್ನು ಆರಂಭಿಸುವದು.

ಪ್ರಯೋಗ	ಫಲಿತ.	ಸಿದ್ಧಾಂತ.
(೧) (ಅ) ಉಸುಬಿನ ಕಾಗದದ ಮೇಲೆ ಕೈ ಎಳೆಯಿರಿ. (ಬ) ಹೆರಿಮಣಿಯ ಮೇಲೆ ಕೊಬ್ಬರಿಯನ್ನು ಹರಿಯಿರಿ; ಹಾಗು ಅದರ ಹಲ್ಲುಗಳ ಮೇಲೆ ಕೈ ಯಾಡಿಸಿ ನೋಡಿರಿ. (ಕ) ಗೋಲವನ್ನು ಕಾಜಿನ ಹಾಳಿಯ ಮೇಲಿಂದಲೂ, ಉಸುಬಿನ ಕಾಗದದ ಮೇಲಿಂದಲೂ ಉರುಳಿಸಿರಿ.	ಉಸುಬಿನ ಕಣಗಳು ಕೈಯನ್ನು ಬೇಗ ಮುಂದಕ್ಕೆ ಸಾಗಗೊಡುವದಿಲ್ಲ; ಅಂದರೆ ಅದಕ್ಕೆ ಅಡ್ಡಿ ಮಾಡುತ್ತವೆ. ಕೊಬ್ಬರಿಯ ಸಣ್ಣ ಸಣ್ಣ ಚೂರುಗಳು ಕೆಳಗೆ ಬಿದ್ದವು; ಯಾಕಂದರೆ ಹೆರಿಮಣಿಯ ಹದನವಾದ ಹಲ್ಲುಗಳು ಕೊಬ್ಬರಿಯನ್ನು ಕೊರೆದವು. ಕಾಜಿನ ಹಾಳಿಯ ಮೇಲಿಂದ ದೂರ ಹೋಯಿತು; ಉಸುಬಿನ ಕಾಗದದ ಮೇಲಿಂದ ಅಷ್ಟು ದೂರ ಹೋಗಲಿಲ್ಲ.	ಒಂದು ವಸ್ತುವು ಮತ್ತೊಂದು ವಸ್ತುವಿನ ಮೇಲಿಂದ ಸರಿಯುತ್ತ ಇಲ್ಲವೆ ಉರುಳುತ್ತ ಹೋಗುವಾಗ್ಗೆ ಅಡ್ಡಿಯುಂಟಾಗುತ್ತದೆ. ಈ ಅಡ್ಡಿಗೆ ಘರ್ಷಣವೆನ್ನುತ್ತಾರೆ.

ಟೀಪು — ವಸ್ತುವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ್ಗೆ ಮಾರ್ಗದಲ್ಲಿ ಏನಾದರೊಂದು ಅಡ್ಡಿಯುಂಟಾದರೆ, ಅದು ಘರ್ಷಣವಲ್ಲ. ಉದಾ—ನಾವು ಒಂದು ಚಂಡನ್ನು ಒಗೆಯಲು ಮಾರ್ಗದಲ್ಲಿ ಗೋಡೆ, ಗಿಡ ಮುಂತಾದವು ಏನೇನಾದರೂ ಇದ್ದರೆ ಅವು ಅದನ್ನು ತಡೆದು, ಮುಂದಕ್ಕೆ ಹೋಗಗೊಡುವದಿಲ್ಲ. ಈ ತರದ ಅಡ್ಡಿಯು ಘರ್ಷಣವಲ್ಲ.

(೨) (ಅ) ಹೆರಿಮಣ್‌ಯ ಮೇಲೆ ಕೊಬ್ಬರಿಯನ್ನು ಹೆರಿಯಿರಿ; ಹೆರಿಮಣ್‌ ಹಾಗು ಕೊಬ್ಬರಿ ಇವುಗಳ ಮೇಲೆ ಕೈಯಾಡಿಸಿ ಯಾವದು ಹುರುಬರಕಾಗಿದೆ ನೋಡಿರಿ	ಕೊಬ್ಬರಿಯು ಜೂಡುಗಳು ಕೆಳಗೆ ಉದುರಿದವು; (ಕೆಳಗಿನ) ಹೆರಿಮಣ್‌ಯು ಹುರುಬರಕಾಗಿದೆ.	ಘರ್ಷಣವಾಗಲಿಕ್ಕೆ ಎರಡು ವಸ್ತುಗಳು ಬೇಕು. ಒಂದರಮೇಲೊಂದು ಸರಿಯುವ ಅಥವಾ ಉರಳುವ ಎರಡು ವಸ್ತುಗಳಲ್ಲಿ ಯಾವದಾದರೊಂದು ಅಥವಾ ಎರಡೂ ಹುರುಬರಕಾಗಿದ್ದರೆ, ಘರ್ಷಣ ಉಂಟಾಗುತ್ತದೆ. ಎರಡೂ ತೀರ ನುಣುಪಾಗಿದ್ದರೆ ಘರ್ಷಣವು ಅಗಲಾರದು.
(ಬ) ಒಂದು ನುಣುಪಾದ ಕಟ್ಟಿಗೆಯ ತುಂಡನ್ನು ಕರಗಸದಿಂದ ಕೊರೆಯಿರಿ; ಕಟ್ಟಿಗೆ ಕರಗಸಗಳ ಮೇಲೆ ಕೈಯಾಡಿಸಿ ಯಾವದು ಹುರುಬರಕಾಗಿದೆ ನೋಡಿರಿ.	ಕಟ್ಟಿಗೆಯು ಕೊರೆಯಲ್ಪಟ್ಟಿತು. (ಮೇಲಿನ) ಕರಗಸವು ಹುರುಬರಕಾಗಿದೆ.	
(ಕ) ಉಸುಬಿನ ಎರಡು ಕಾಗದಗಳನ್ನು ಒಂದರಮೇಲೊಂದು ಎಳೆಯಿರಿ; ಎರಡರ ಮೇಲೆಯೂ ಕೈಯಾಡಿಸಿ ಯಾವದು ಹುರುಬರಕು ಅದೆ ನೋಡಿರಿ.	ಎಳೆಯಲಿಕ್ಕೆ ಜಡ ಬರುತ್ತದೆ ಕರಕರವೆಂದು ಸಪ್ಪಳವಾಗುತ್ತವೆ. ಎರಡೂ ಹುರುಬರಕಾಗಿವೆ.	
(ಡ) ಎರಡು ಕಾಜಿನ ಹಾಳಿಗಳನ್ನು ಒಂದರಮೇಲೊಂದು ಎಳೆಯಿರಿ ಎರಡರ ಮೇಲೆಯೂ ಕೈಯಾಡಿಸಿರಿ.	ಒಂದರಮೇಲೊಂದು ಸುಲಭವಾಗಿ ಮುಂದಕ್ಕೆ ಸರಿಯುತ್ತವೆ. ಎರಡೂ ನುಣುಪಾಗಿವೆ.	

(೩) (ಅ) ಒಂದು ಕಬ್ಬಿಣದ ಹಾರಿಯನ್ನೂ, ಅಂಥಾದ್ದೇ ಒಂದು ಕಟ್ಟಿಗೆಯ ಕೋಲನ್ನೂ ಕೈಯಿಂದ ಎತ್ತಿ ನೋಡಿರಿ.	ಹಾರಿಯು ಜಡವದೆ	ಜಡವಾದ ವಸ್ತುಗಳಿಂದ ಘರ್ಷಣವು ಹೆಚ್ಚು ಆಗುತ್ತದೆ.
(ಬ) ಅವೆರಡನ್ನೂ ಮೇಜಿನ ಮೇಲಿಂದ ನೂಕಿರಿ.	ಹಾರಿಯನ್ನು ನೂಕಲಿಕ್ಕೆ ಹೆಚ್ಚು ಶಕ್ತಿ ಬೇಕಾಗುತ್ತದೆ.	

ಟೀಪು—ಬಂಡಿಗಳ ಮೇಲೆ ಹೆಚ್ಚು ಭಾರವನ್ನು ಹೇರಿದಾಗ ಎಳೆಯಲಿಕ್ಕೆ ಹೆಚ್ಚು ಎತ್ತುಗಳನ್ನು ಹೂಡಬೇಕಾಗುತ್ತದೆಂಬದು ಎಲ್ಲರಿಗೂ ಗೊತ್ತುಂಟು.

(೪) ಹುಡುಗರು ಆಡುವ ಬಂಡಿಯನ್ನು ಮೊದಲು ಹಾಗೇ ಎಳೆಯಿರಿ ಆಮೇಲೆ ಅಚ್ಚಿಗೆ ಎಣ್ಣೆಯನ್ನು ಪಾಕಿ ಎಳೆಯಿರಿ.	ಎಣ್ಣೆ ಹಾಕಿದ ಮೇಲೆ ಎಳೆಯಲಿಕ್ಕೆ ಹಗುರು ಬರುತ್ತದೆ.	ಎಣ್ಣೆ, ನೆಣ ಮುಂತಾದ ಸ್ನಿಗ್ಧ ಪದಾರ್ಥಗಳಿಂದ ಘರ್ಷಣವು ಕಡಿಮೆ ಆಗುತ್ತದೆ

ಟೀಪು—ನೀರು ಜಗ್ಗುವ ಗಡಗಡಿಗಳಿಗೂ, ಬೇರೆ ಬಗೆಯ ಯಂತ್ರಗಳಿಗೂ ಎಣ್ಣೆಯನ್ನು ಹಾಕುವದರಿಂದ ಘರ್ಷಣವು ಕಡಿಮೆ ಆಗಿ, ಯಂತ್ರಗಳ ಕೆಲಸವು ಸುಲಭವಾಗಿ ಸಾಗುವದು; ಮತ್ತು ಅವು ಹೆಚ್ಚು ಸವೆಯುವದಿಲ್ಲ.

(೫) (ಅ) ಒಂದು ರೂಲುಕಟ್ಟಿಗೆಯನ್ನು ಮೇಜಿನ ಮೇಲಿಟ್ಟು, ಉದ್ದಕ್ಕೆ ನೂಕಿರಿ; ಮತ್ತು ಅದನ್ನು ಅಡ ನೂಕಿರಿ.	ಸ್ವಲ್ಪ ಮುಂದಕ್ಕೆ ಹೋಯಿತು. ಹೆಚ್ಚು ದೂರ ಉರುಳಿತು.	ಉರುಳುವ ಪದಾರ್ಥಗಳಿಂದ ಘರ್ಷಣವು ಕಡಿಮೆ ಆಗುತ್ತದೆ.

(ಬ) ಸೀಸನ ತಗಡನ್ನು ಮೇಜಿನ ಮೇಲಿಟ್ಟು ನೂಕಿರಿ; ಬಳಿಕ ಅದನ್ನು ಸುರುಳಿ ಮಾಡಿ ಉರುಳಿಸಿರಿ.	ಸುರುಳಿ = ದಾಗ ದೂರ ಉರುಳಿಕು.
(ಕ) ಒಂದು ಸಣ್ಣ ಪೆಟ್ಟಿಗೆಯನ್ನು ಮೇಜಿನ ಮೇಲಿಟ್ಟು ನೂಕಿರಿ; ಬಳಿಕ ಮೇಜಿನ ಮೇಲೆ ಎರಡು ರೂಲುಕಟ್ಟಿಗೆಗಳನ್ನಿಟ್ಟು, ಅವುಗಳ ಮೇಲಿಂದ ನೂಕಿರಿ	ರೂಲು ಕಟ್ಟಿಗೆಗಳ ಮೇಲಿಂದ ಸುಲಭವಾಗಿ ದೂರ ಹೋಯಿಕು.

ಟೀಪು—ದೊಡ್ಡ ದೊಡ್ಡ ತೊಲೆಗಳನ್ನೂ, ಕಲ್ಲುಗಳನ್ನೂ ಒಯ್ಯುವಾಗ ಬುಡದಲ್ಲಿ ಉಳಕಗಳೆಂಬ ಉರಳುವ ಕಟ್ಟಿಗೆಗಳನ್ನು ಹಾಕಿ, ಅವುಗಳ ಮೇಲಿಂದ ನೂಕಿಸುತ್ತ ಒಯ್ಯುವರು. ಅದರಿಂದ ಬಹು ಭಾರವಾದ ವಸ್ತುಗಳನ್ನು ಸುಲಭವಾಗಿ ಒಯ್ಯಲಿಕ್ಕೆ ಬರುವದು. ಇದೇ ಕಾರಣದಿಂದ ಬಂಡಿಗಳಿಗೂ, ರಥಗಳಿಗೂ ಉರುಳುವ ಗಾಲಿಗಳನ್ನು ಹಚ್ಚಿರುತ್ತಾರೆ. ಅದರಿಂದ ಘರ್ಷಣವು ಕಡಿಮೆಯಾಗಿ ಭಾರವನ್ನು ಎಳೆಯಲಿಕ್ಕೆ ಹಗುರಾಗುತ್ತದೆ.

(೬) (ಅ) ಒಂದು ಪೆಟ್ಟಿಗೆಯನ್ನು ಮೇಜಿನ ಮೇಲಿಂದಲೂ, ನೆಲದ ಮೇಲಿಂದಲೂ ಎಳೆಯಿರಿ.	ಮೇಜಿನ ಮೇಲಿಂದ ಎಳೆಯಲಿಕ್ಕೆ ಸ್ವಲ್ಪ ಶಕ್ತಿ ಬೇಕು. ನೆಲದ ಮೇಲೆಂದ ಎಳೆಯಲಿಕ್ಕೆ ಹೆಚ್ಚು ಶಕ್ತಿ ಬೇಕು.	ವಸ್ತುಗಳು ಸುಣುಪಾದ ವಸ್ತುವಿನ ಮೇಲಿಂದ ಹೋಗುವಾಗ್ಗೆ ಘರ್ಷಣವು ಕಡಿ

(ಬ) ಮೇಜಿನ ಮೇಲೆಯೂ ನೆಲದ ಮೇಲೆಯೂ ಕೈಯಾಡಿಸಿ ನೋಡಿರಿ.	ಮೆ ಆಗುತ್ತದೆ; ಹುರುಬಿಲ್ಲದ ವಸ್ತುವಿನ ಮೇಲಿಂದ ಹೋಗುವಾಗ್ಗೆ ಘರ್ಷಣವು ಹೆಚ್ಚು ಆಗುತ್ತದೆ.

ಟೀಪು—(೧) ಕೆಲವು ಪ್ರಸಂಗಗಳಲ್ಲಿ ಘರ್ಷಣವನ್ನು ಕಡಿಮೆ ಮಾಡುವದರಿಂದ ಉಪಯೋಗವಾಗುತ್ತದೆ. ಉದಾ—ಉಗೆ ಬಂಡಿಗಳನ್ನು ನುಣುವಾದ ಕಂಬಿಗಳ ಮೇಲೆ ನಡಿಸುವದರಿಂದ ಕಡಿಮೆ ಶಕ್ತಿಯಿಂದ ಹೆಚ್ಚು ಕೆಲಸವಾಗುತ್ತದೆ. ಉಗೆಬಂಡಿಯ ಸ್ಟೇಶನುಗಳಲ್ಲಿ ನೂರಾರು ಮಣ ಭಾರ ತುಂಬಿದ ದೊಡ್ಡ ದೊಡ್ಡ ಬಂಡಿಗಳನ್ನು ಕಂಬಿಗಳ ಮಾರ್ಗದ ಮೇಲಿಂದ ಒಬ್ಬನೇ ಮನುಷ್ಯನು ಸುಲಭವಾಗಿ ಎಳೆಯುವದನ್ನು ಬಹು ಜನರು ನೋಡಿರುವರು. ಅದೇ ಬಂಡಿಯನ್ನು ನೆಲದಮೇಲಿಂದ ಎಳೆಯಬೇಕಾದರೆ ಹತ್ತೆಂಟು ಎತ್ತುಗಳು ಬೇಕಾಗುವವು. ಇದೇ ಮೇರೆಗೆ ಮುಂಬಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಟ್ರಾಮು ಗಾಡಿಗಳನ್ನು ನುಣುವಾದ ಲೋಹಮಾರ್ಗಗಳ ಮೇಲೆ ನಡಿಸುವದರಿಂದ ೨೦|೩೦ ಜನರು ಕೂತಿರುವ ದೊಡ್ಡ ಬಂಡಿಗಳನ್ನು ಒಂದೇ ಕುದುರೆಯು ಸುಲಭವಾಗಿ ಎಳೆದುಕೊಂಡು ಹೋಗುವದು. ಮು.

(೨) ಕೆಲವು ಪ್ರಸಂಗಗಳಲ್ಲಿ ಘರ್ಷಣವನ್ನು ಹೆಚ್ಚು ಮಾಡುವದರಿಂದ ಉಪಯೋಗವಾಗುತ್ತದೆ. ಉದಾ—ಜಾರಿಕೆಯಾದ ನೆಲದ ಮೇಲೆಯೂ, ಹಾಂಸೆಗಟ್ಟಿದ ಸಳದ ಮೇಲೆಯೂ ಉಸುಬು, ಗರಸು ಮುಂತಾದವುಗಳನ್ನು ಹಾಕಿ, ಘರ್ಷಣವನ್ನು ಬೆಳಿಸುವದರಿಂದ ನಡೆಯಲಿಕ್ಕೆ ಬರುತ್ತದೆ. ದೀಪದ ಪೆಟ್ಟಿಗೆಯ ಒಂದು ಮಗ್ಗಲಿಗೆ ಉಸುಬು

ಹಚ್ಚಿ, ಘರ್ಷಣವನ್ನು ಬಿಳಿಸಿರುವದರಿಂದ ಅದು ಬೀಳಲೆ ಕೊರೆಯುವ ಕಲ್ಲಿಗೆ ಬಲ ಕಡಿಮೆ ಆಗುತ್ತದೆ. ಬೀಸುವ ಕಲ್ಲಿಗೆ ಹೊಳೆ ಹೊಯಿಸಿ ಘರ್ಷಣವನ್ನು ಹೆಚ್ಚಿಸುವದರಿಂದ ಬೀಸಲಿಕ್ಕೆ ಬರುತ್ತದೆ. ಮು.

(೭) (ಅ) ಒಂದು ಕಾಜಿನ ಹಾಳಿಯ ಮೇಲೆ ಉಸುಬು ಹರಡಿ ಅದರ ಮೇಲೆ ನೀರು ಹಾಕಿರಿ. (ಬ) ನೀರು ತುಂಬಿದ ಪಾತ್ರೆಯ ಮೇಲೆ ಬೀಸಣಿಕೆಯಿಂದ ಗಾಳಿ ಬೀಸಿರಿ.	ಮೇಜು ನುಣುಪಾಗಿದೆ. ಸೆಲವ ಹುರುಬರುಕಾಗಿದೆ. ಉಸುಬಿನಲ್ಲಿ ಕೊರಕಲು ಬಿತ್ತು. ನೀರಿನಲ್ಲಿ ತೆರೆಗಳು ಹುಟ್ಟಿದವು.	ಘನಪದಾರ್ಥಗಳಂತೆ ದ್ರವಾಹಿ, ವಾಯುರೂಪ ಪದಾರ್ಥಗಳಿಂದಾದರೂ ಘರ್ಷಣ ಉಂಟಾಗುತ್ತದೆ.

ಟೀಪು—(೧) ನೀರಿನ ಘರ್ಷಣದಿಂದ ಹೊಲದೊಳಗಿನ ಕೊರಕಲುಗಳೂ, ಹೊಳೆ, ಹಳ್ಳಗಳ ಪಾತ್ರೆಗಳೂ ಉಂಟಾಗಿರುತ್ತವೆ

(೨) ವಾಯುವಿನ ಘರ್ಷಣದಿಂದ ಸಮುದ್ರದಲ್ಲಿ ದೊಡ್ಡ ದೊಡ್ಡ ತೆರೆಗಳುಂಟಾಗುತ್ತವೆ.

ಉಪಸಂಹಾರ—ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿ, ಅರಿತುಕೊಂಡ ಸಿದ್ಧಾಂತಗಳನ್ನು ಅವರಿಂದ ಹೊರಡಿಸಬೇಕು.

ಕಳೆದ ಸಂಚಿಕೆಯಲ್ಲಿ ಕಾಲೇಜದ ಪ್ರಿನ್ಸಿಪಾಲರು ಬಿ
ವಿಜ್ಞಾಪನಾಪತ್ರಿಕೆಯನ್ನು ಎಲ್ಲರೂ ಓದಿರಬಹುದು.
ಪತ್ರದಲ್ಲಿ ಸೂಚಿಸಿದ ಫಂಡಿಗೆ ಇಂದಿನವರಿಗೆ ಬಂದ ಹ
ವಿವರವು :—

೧೫೦ ನೇಕ ನಾಮದಾರ ಮುಂಬೈ ಗವರ್ನರ ದಿ
ಗಳಾದ ಸರ ಜೇಮ್ಸು ಮಾಂಟೀಥ ಪ್ರಭುಗಳು.
೬೫ ಮೆ. ಕಲೆಕ್ಟರಾದ ಗಿಬ್ಬ ದೊರೆಗಳು.
೬೫ ಡಾ. ಲಾಯಮ್ಸ್ಸ.
೧೦ ಮೆ. ಥಾಮಸನ್ನ ಸಾಹೇಬ ಇನಸ್ಪೆಕ್ಟರ ಆ
ಟೆಕ್ನಿಕಲ್ ಎಜ್ಯುಕೇಶನ್.
೫೦ ಮ. ರಾ. ಸಣ್ಣಪ್ಪನಾಯಿಕ ಉರ್ಫ ಗೋಪ
ನಾಯಿಕ ಹಲಗೇರಿ.
೫೦ ರಾ. ಸಾ. ಶ್ರೀನಿವಾಸರಾವ ರೊದ್ದ.
೫ ರಾ. ಚನ್ನಪ್ಪಾ ಹೊಸೂರ.
೫ ಮಲ್ಲಪ್ಪಾ ಗೋಡಿಕಟ್ಟಿ.
೫ ಶ್ರೀಮಂತ ಜಹಾಗೀರದಾರ ಬ್ರಹ್ಮಾವರ್ತ.
೪ ಮ ರಾ. ರಾಮಚಂದ್ರರಾವ ಎಲ್. ಸಿ. ಈ. ಗ
ತ ಮಾಸ್ತರ.
೧ ರಾ. ನೇರ್ಲೆಕರ ಡ್ರಾಯಿಂಗ ಮಾಸ್ತರ.
೩ ಮೆ. ಜೆಮಸೇಡ್ಜಿ ಬಾಟ್ಲಿವಾಲಾ.
೧ ರಾ. ವಿನಾಯಕರಾವ ಸಾಟೆ.
೧ ರಾ. ವೆಂಕಟರಾವ ಮೈಜರಕರ.
೧।।≡ ರೇಲ್ವೆ ಆಫೀಸ ಚಿಲ್ಲರ.
೦೫ ಮೆ. ಬರ್ಜೋರ್ಜಿ ಪಟೇಲ.
೧೫ ರಾ. ಬ. ಶ್ರೀನಿವಾಸರಾವ ಚಿಟಗುಬ್ಬಿ.
೨ ಮೆ. ಮಹಮ್ಮದ ಮುಗುಟಖಾನ ನೇಗಿನಹಾ
ಬೀಡಿ ಸ್ಕೂಲ ಮಾಸ್ತರ.
.।≡ ಥರಮಾಜಿ ಗವಳಿ.

೨೯।≡

S. K. Rodda.
Principal.

ಶಾಲಾಪತ್ರಕ

ಪದ್ಯಂ.

ಶ್ರೀಯುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಾಂ
ಯಸುತ್ತಂ ಪ್ರತಿಪೂಸದಾದಿಗೊಲವಿಂದೀಪತ್ರಮಂ ಪುಟ್ರಿಸಿ ॥
ಸಯದಿಂವಿತ್ತವೆವೋದುವರ್ಗೆಸುಗುಣಂ ತೋರಲ್ಕೆ ಕೈಕೊಂಟುದೈ |
ದಯೆಯಿಂದೋಷವತಿದ್ದ ವೇಳ್ಪುದುಖುಧರ್ಜ್ಞಾನಾಭಿವೃದ್ಧಿಪ್ರಯರಿಗಾ

ಪುಸ್ತಕ ೩೯] ದಶಂಬರ ೧೯೦೩. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು

ಸನ್ ೧೮೯೬ ಹಾಗು ೧೯೦೦ ನೇ ಇಸವಿಗಳಲ್ಲಿ ಧಾರವಾ
ಡದಲ್ಲಿ ವಿದ್ಯಾಭಿವೃದ್ಧಿನಿಗಳ ಪರಿಷತ್ತು ಕೂಡಿದ್ದು ಅಧ್ಯಾಪಕ
ರಿಗೆ ಗೊತ್ತೇ ಇರುವದು. ಇದಲ್ಲದೆ ಆಯಾಕಾಲದ ಶಾಲಾಪ
ತ್ರಿಕೆಗಳಲ್ಲಿ ಆಯಾಕಾಲದಲ್ಲಿ ನೆರೆದ ಸಭೆಯ ಸಂಬಂಧದಿಂದ
ಬರೆದ ಸಾಗ್ರವೃತ್ತವಾದರೂ ಇವರ ಸ್ಮರಣದಲ್ಲಿರಬಹುದು.
ಪರಿಷತ್ತುಗಳಲ್ಲಿ ಅನೇಕ ಜನ ಅನುಭವಿಕರಾದ ಶಿಕ್ಷಕರೂ
ಬೇರೆ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ವಿದ್ಯಾಪಕ್ಷಪಾತಿಗಳಾ
ದ ಅಧಿಕಾರಿಗಳೂ ಇತರ ಸುಖವಸ್ತುಗಳಾದ ಸಭ್ಯಗೃಹಸ್ಥ
ರೂ ತಮತಮಗೆ ಸರಿಬೋರಿದ ಸೂಚನೆಗಳನ್ನು ಅಧ್ಯಕ್ಷರ
ಮುಂದಿಟ್ಟರು. ಅಧ್ಯಕ್ಷರಂತೂ ದಕ್ಷಿಣಭಾಗದ ವಿದ್ಯಾಧಿ
ಕಾರಿಗಳಾದ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರೇ
ಇದ್ದರೆಂದು ಬೇರೆ ಹೇಳುವ ಪ್ರಯೋಜನವಿಲ್ಲ. ಅವರು
ಅವೆಲ್ಲ ಸೂಚನೆಗಳನ್ನು ಮೇಹಬರ್ಬಾನ್ ಡಾಯರೆಕ್ಟರ
ದೊರೆಗಳ ಅಧ್ಯಕ್ಷತೆಯಿಂದ ನೆರೆದ ಇನಸ್ಪೇಕ್ಟರ ಪ್ರಿನ್ಸಿಪಾ
ಲ ಮೊದಲಾದ ವಿದ್ಯಾಖಾತೆಯ ಮೇಲ್ತರದ ಅಧಿಕಾರಿಗಳ
ಸಭೆಯ ಮುಂದಿಟ್ಟರು. ಆ ಸಭೆಯಲ್ಲಿ ಹಲವು ಭವತಿನಭ

ಪತಿಗಳಾಗಿ ಕಡೆಗೆ ಗೊತ್ತಾದ ನಿಯಮಗಳಿಗನುಸರಿಸಿ ಕ್ರಿ
ಯಾಕಪುಸ್ತಕಗಳನ್ನು ಸುಧಾರಿಸುವ ಕೆಲಸವು ಸಭ್ಯಕ್ಕೆ ನ
ಡೆದದೆ. ಈ ಕೆಲಸಕ್ಕಾಗಿ ನಮ್ಮಾ ಇಲಾಖೆಯ ಸಿಂಧ, ಗು
ಜರಾಥ, ಮಹಾರಾಷ್ಟ್ರ, ಕರ್ನಾಟಕಗಳೆಂಬ ನಾಲ್ಕು ಭಾ
ಗಗಳೊಳಗಿಂದ ಭಾಗಕ್ಕೊಬ್ಬರಂತೆ ಒಳ್ಳೇ ಅನುಭವಿಕರೂ
ವಿದ್ವಾಂಸರೂ, ಭಾಷಾಕೋವಿದರೂ ಆದಂಥ ೪ ಜನ ಸದ್ಗೃ
ಹಸ್ಥರನ್ನು ಆರಿಸಿಕೊಂಡು ಮೇಹಬರ್ಬಾನ ಕಪ್ತರಂಟನ
ಸಾಹೇಬರ ಅಧ್ಯಕ್ಷತೆಯಿಂದ ಒಂದು ಚಿಕ್ಕ ಸಭೆಯನ್ನು
ಏರ್ಪಡಿಸಿದ್ದಾರೆ. ನಮ್ಮ ಕರ್ನಾಟಕದಿಂದ ಈ ಮೊದಲು
ಕಾಲೇಜದ ಪ್ರಿನ್ಸಿಪಾಲರಾಗಿದ್ದ ರಾ. ಸಾ ಕರಂದೀಕರರು
ಹೋಗಿರುವರು.

ಆರಂಭದ ಶಿಕ್ಷಣವು ಅತಿ ಮಹತ್ವದ್ದೆಂದು ಒಡೆದು ಹೇ
ಳುವ ಕಾರಣವಿಲ್ಲ. ಹಾದಿಗೆ ಹತ್ತಿದವರನ್ನು ಮುಂದೆ
ನಡಿಸುವದು ಬಿಗಿಯಲ್ಲ. ಆದರೆ ವ್ಯವಹಾರದ ಜ್ಞಾನವೆಂ
ದರೇನೆಂಬದು ಗೊತ್ತುಸಹ ಇಲ್ಲದಂಥ ಚಿಕ್ಕ ಮಕ್ಕಳನ್ನು
ಒಳ್ಳೇ ಹಾದಿಗೆ ಹಚ್ಚುವದು ಎಷ್ಟು ಪ್ರಯಾಸವೆಂಬದೂ,
ಈ ಕಾರ್ಯವು ಎಷ್ಟು ಮಹತ್ವದ್ದೆಂಬದೂ ಶಿಕ್ಷಕರಿಗೆ
ಬಿಚ್ಚಿ ಹೇಳುವ ಅವಶ್ಯಕತೆ ಇಲ್ಲ. ಅದರಿಂದ ಶಿಕ್ಷಕರು
ಈಗ ತಾವು ಹತ್ತಿಪ್ಪತ್ತು ವರುಷಗಳಿಂದ ವಿದ್ಯಾದಾನದ ಕಾ
ರ್ಯದಲ್ಲಿ ಬೊರಕಿಸಿದ ಅನುಭವಗಳನ್ನು ಒಟ್ಟುಗೂಡಿಸಿ,
ಆರಂಭದಿಂದ ಏಳನೆಯ ಇಯತ್ತೆಯ ವರೆಗಿನ ವಿದ್ಯಾರ್ಥಿಗ
ಳಿಗೆ ಅನುರೂಪವೂ, ಅವಶ್ಯಕವೂ, ಆದ ವಿಷಯವನ್ನೂ ಅ
ವುಗಳ ನಿರೂಪಣ ಕ್ರಮವನ್ನೂ ಬಹು ವಿಚಾರದಿಂದ ಗೊ
ತ್ತುಮಾಡಿ ಪೂರ್ಣೆಯ ಕಮಿಟಿಗೆ ಪತ್ರಮುಖದಿಂದ ತಿಳಿಸುವಂ
ತೆ ಮಾಡಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ.
ಈ ವಿಷಯದಲ್ಲಿ ವಿಚಾರಣೀಯ ಅಂಶಗಳನ್ನು ಇದರ ಕೆಳ
ಗೆ ಬರೆದಿದ್ದೇವೆ. ಅವುಗಳನ್ನು ಅಧ್ಯಾಪಕರು ಚೆನ್ನಾಗಿ
ಅರಿತುಕೊಂಡು ತತ್ಸಂಬಂಧದಿಂದ ತಮಗೊದಗಿದ ತೊಂದ
ರೆಗಳನ್ನೂ ಆ ತೊಂದರೆಗಳನ್ನು ಸೋಗಲಾಡಿಸುವದಕ್ಕೆ ತಾ

ವು ಕೈಕೊಂಡ ಉಪಾಯಗಳನ್ನೂ ಸವಿಸ್ತರವಾಗಿ ಬರೆದು ತಳುಹಿಸಬೇಕು.

೧. ಹಿಂದುಸ್ತಾನದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಭಿನ್ನ ಭಿನ್ನ ಮತದವರೂ ಹೋರೆಯವರೂ ಇರುವರು. ಪ್ರತಿಯೊಂದು ವರ್ಗದಲ್ಲಿ ಬೇರೆ ಬೇರೆ ಜಾತಿಯ ಹುಡುಗರಿರುವರು.

ಆರಂಭದ ಮಕ್ಕಳಿಗೆ ಮನೆರಂಜನೆಯು ವಿಶೇಷಬೇಕು. ಏಳನೆಯ ಇಯತ್ತೆಯನ್ನು ಚನ್ನಾಗಿ ಮುಗಿಸಿದಷ್ಟನು ತನ್ನ ಕರ್ತವ್ಯವನ್ನು ಜರಗಿಸಲಿಕ್ಕೂ ತನ್ನ ಪ್ರಪಂಚವನ್ನು ಸಾಗಿಸಿಕೊಳ್ಳಲಿಕ್ಕೂ ತಕ್ಕಮಟ್ಟಿಗಾದರೂ ಯೋಗ್ಯನಾಗಬೇಕು.

ಇದಲ್ಲದೆ ಹೆಣ್ಣುಮಕ್ಕಳ ಶಿಕ್ಷಣಕ್ಕಾದರೂ ಹೆಚ್ಚು ಲಕ್ಷ್ಯ ಕೊಡುವ ಕಾಲವು ಪ್ರಾಪ್ತವಾಗಿದೆ. ಶಿಕ್ಷಣವು ಸರ್ವಪ್ರಾಣಿಗಳಿಗೂ ಅವಶ್ಯವು. ಅಂದಮೇಲೆ ಗಂಡಸರಂತೆ ಹೆಂಗಸರಿಗೂ ಅವಶ್ಯವೆಂಬದು ಸ್ಪಷ್ಟವೇ. ಈ ಸಂಬಂಧದಿಂದ ವಾದವಿಲ್ಲ. ಶಿಕ್ಷಣದಿಂದ ಹಾನಿಯಿಲ್ಲೆಂಬದು ಶಾಸ್ತ್ರಸಮ್ಮತವು. ಆದರೆ ಅದು ಹೆಣ್ಣುಮಕ್ಕಳಿಗೆ ದೊರೆಯುವ ಬಗೆ, ಹಾಗೂ ಅದರ ಪ್ರಕಾರಗಳಲ್ಲಿ ಮಾತ್ರ ಮತಭೇದವುಂಟಾಗಬಹುದು. ಆದರೂ ಅವರು ಸದ್ಗುಣಿಗಳೂ, ಶಾಂತರೂ, ಮನೆತನ ನಡಿಸುವದಕ್ಕೆ ತಕ್ಕಪರೂ, ಉಪಚಾರದಲ್ಲಿ ದಕ್ಷರೂ ಆಗಬೇಕೆಂಬದು ಸರ್ವಸಮ್ಮತವು. ಈ ಬಗ್ಗೆ ಕ್ರಮಿಕ ವಾಚನ ಪುಸ್ತಕಗಳಲ್ಲಿಯೂ ಕವಿತಾಪುಸ್ತಕಗಳಲ್ಲಿಯೂ ಸೇರಿಸಬಹುದಾದ ವಿಷಯಗಳನ್ನು ಯಾವತ್ತು ಅನುಭವಿಕರಾದ ಶಿಕ್ಷಕರು ಚನ್ನಾಗಿ ಆಲೋಚಿಸತಕ್ಕದ್ದು ಅತ್ಯವಶ್ಯವದೆ. ಯಾಕಂದರೆ ಈ ಕಾರ್ಯವು ಸದ್ಯಕ್ಕೆ ನಡೆದದೆ. ಬಹುಮ್ಮ ಈ ಪುಸ್ತಕಗಳು ಸಿದ್ಧವಾಗಿ ಬಳಿಕೆಯಲ್ಲಿ ಬಂಡ ಬಳಿಕ ಇವು ಅನವಶ್ಯಕ ವಾತಗಳು, ಇವು ಬಿಗಿಯಾದ ಮಾತುಗಳು, ಎಂದು ಹಿಂಬಿನಿಂದ ಅನ್ನುತ್ತ ಕೂಡುವಹು ಸರಿಯಲ್ಲ. ಪ್ರಾಥಮಿಕ ಶಿಕ್ಷಣವನ್ನು ನಡಿಸುವ ಪುಸ್ತರನೇರಾ

ಪ್ಪೆದ ಉದ್ಧಾರಕನೆಂದು ಸಾರಿ ಹೇಳಬಹುದು. ಅವನೇ ಚಿಕ್ಕಮಕ್ಕಳ ಮಿದುಳನ್ನು ಹದಗೊಳಿಸಿ ಅದರಲ್ಲಿ ವಿಚಾರದ ಬೀಜಗಳನ್ನು ಬಿತ್ತುವನು. ಅವೇ ವಿಚಾರಗಳೇ ಮುಂದೆ ಬಲವಾಗಲು ಆ ವಿದ್ಯಾರ್ಥಿಯು ರಾಷ್ಟ್ರಭಕ್ತನಾಗವನು. ಆದ್ದರಿಂದ ತಿಕ್ಷಕರು ಮುಂದೆ ತಮ್ಮ ರಾಷ್ಟ್ರವು ಸುಧಾರಣಾ ಶಿಖರಕ್ಕೆ ಮುಟ್ಟಬೇಕೆಂದು ಬಯಸುತ್ತಿದ್ದರೆ, ಆ ಸುಧಾರಣೆಯು ಯಾವದು? ಅದಕ್ಕೆ ಚಿಕ್ಕಂದಿನಿಂದ ಸಾಗಿಸಬಹುವಾದ ಶಿಕ್ಷಣದ ಧೋರಣವು ಹ್ಯಾಗಿರಬೇಕು? ಮುಂತಾದ ಸಂಗತಿಗಳನ್ನು ಚನ್ನಾಗಿ ಮನನಂದಂದು ಯೋಗ್ಯ ಸೂಚನೆಗಳನ್ನು ಮಾಡಿ ಕ್ರಮಿಕ ಪುಸ್ತಕಗಳ ರಚನೆಗೆ ಬಳಿತಾಗಿ ನೆರವಾದ ಶ್ರೇಯಸ್ಸಿಗೆ ಅವರು ಪಾತ್ರರಾದಾರೆಂದು ನಾವು ತುಂಬಾ ನಂಬಿದ್ದೇವೆ.

ಕಾಲೇಜದ ಪ್ರವೇಶ ಪರೀಕ್ಷೆಯು ಮುಗಿಯಿತು. ನಾಲ್ಕೂ ಜಿಲ್ಲೆಯಿಂದ ಕೂಡಿ ಒಟ್ಟು ಒಂದುನೂರಾನಾಲ್ವತ್ತೇಳು ವಿದ್ಯಾರ್ಥಿಗಳು ಬಂದಿದ್ದರು ಇವರಲ್ಲಿ ಎಪ್ಪತ್ತೇಳು ಮಂದಿ ಧಾರವಾಡ ಜಿಲ್ಲೆಯವರೂ ಇಪ್ಪತ್ತುಮೂರು ಮಂದಿ ಕಾರವಾರ ಜಿಲ್ಲೆಯವರೂ ಇಪ್ಪತ್ತೆರಡು ಮಂದಿ ಬೆಳಗಾವಿ ಜಿಲ್ಲೆಯವರೂ ಇಪ್ಪತ್ತೈದು ಮಂದಿ ಬಿಜಾಪೂರ ಜಿಲ್ಲೆಯವರೂ ಉಂಟು. ಒಟ್ಟಿಗೆ ಸುಮಾರು ಐವತ್ತು ಮಂದಿಯನ್ನು ಕಾಲೇಜದಲ್ಲಿ ಸೇರಿಸಿಕೊಳ್ಳುವರೆಂದು ತಿಳಿದದೆ.

ಹೆಣ್ಣು ಮಕ್ಕಳ ಟ್ರೇನಿಂಗ ಸ್ಕೂಲಿನ ಪ್ರವೇಶ ಪರೀಕ್ಷೆಯೂ ಆಯ್ತು. ಬೆಳಗಾವ ಜಿಲ್ಲೆಯಿಂದ ಮೂವರೂ ಕಾರವಾರ ಜಿಲ್ಲೆಯಿಂದ ಒಬ್ಬಳೂ ಧಾರವಾಡ ಜಿಲ್ಲೆಯಿಂದ ಹತ್ತು ಮಂದಿಯೂ ಅಂತೂ ಹದಿನಾಲ್ಕು ಮಂದಿ ಪರೀಕ್ಷೆಗೆ ಕೂತಿರುವರು. ಇವರಲ್ಲಿ ಸುಮಾರು ಹತ್ತು ಮಂದಿಯನ್ನು ತೆಗೆದುಕೊಳ್ಳುವರು. ಬಿಜಾಪೂರ ಜಿಲ್ಲೆಯಿಂದ ಒಬ್ಬರೂ ಬರಲಿಲ್ಲ. ಧಾರವಾರದ ಹೆಣ್ಣು ಮಗಳ ಗಂಡನು ಗಂಡು ಮಕ್ಕಳ ಕಾಲೇಜದಲ್ಲಿ ಕಲಿಯುತ್ತಲಿರುವನು ಇದು ಬಹು ಗಂಭೀರವಾದ ಸುದ್ದಿಯು ಮಾಸ್ತರ ಜನರು ಈ ಬಗೆಯಿಂ

ದ ಆಗಬಹುದಾದ ಲಾಭವೆಷ್ಟು ದೊರಕಿಸಲಿಕ್ಕೆ ಯತ್ನಿಸು ವರೆಂದು ನಮ್ಮ ನಂಬಿಗೆಯುಂಟು.

ಬಡೋದೆಯ ಮಹಾರಾಜರಾದ ಶ್ರೀಮಂತ ಸಯಾಜೀರಾ ವ ಗಾಯಕವಾಡರವರು ಒಳ್ಳೇ ವಿದ್ಯಾಪಕ್ಷಪಾತಿಗಳಾಗಿ ದ್ದಾರೆ. ಇವರು ತಮ್ಮ ರಾಜ್ಯದಲ್ಲಿ ಎಲ್ಲರೂ ವಿದ್ಯಾ ಕಲಿ ಯಲಿಕ್ಕೇಬೇಕೆಂಬ ನಿರ್ಬಂಧವನ್ನು ಮಾಡಿರುವದಲ್ಲದೆ ೫೦೦ ಜನರ ವಸ್ತಿಯುಳ್ಳ ಪ್ರತಿ ಒಂದು ಊರಲ್ಲಿ ಸಾಲಿಗ ಳನ್ನು ಸ್ಥಾಪಿಸಿರುವರು. ಇವರ ಜ್ಯೇಷ್ಠ ಪುತ್ರರೂ ಯುವ ರಾಜರೂ ಆದ ಫತ್ತೇಸಿಂಗ ಮಹಾರಾಜರು ಕೇಂಬ್ರಿಜ್ ಯು ನಿವ್ಹರ್ಸಿಟಿಯಲ್ಲಿ ಕಲಿಯುತ್ತಿದ್ದು. ಈ ಸಾರೆ ಆ ಶಾಲೆ ಯ ಪರೀಕ್ಷೆಯಲ್ಲಿ ಉತ್ತರಿಸಿರುವರು ಇನ್ನೊಂದು ವರ್ಷ ಕಲಿತರೆ ಆ ಶಾಲೆಯಲ್ಲಾಗುವ ಅಭ್ಯಾಸವನ್ನು ತ್ರೀ ರಗಲಿತಂತಾಗುವದು. ಇದು ರಾಜಕುಮಾರರಿಗೆ ಬಹು ಭೂಷಣದ ಸಂಗತಿಯು, ಇಂಥ ಅರಸು ಮಕ್ಕಳೂ ಲಕ್ಷ್ಮಿ ಪುತ್ರರೂ ವಿದ್ಯಾಸಂಪನ್ನರಾಗಲಿಕ್ಕೆ ಅನುಕೂಲವೂ ಇರು ವದು, ಹಾಗೂ ಇವರಿಂದಲೇ ಲೋಕ ಕಲ್ಯಾಣದ ಕೆಲಸ ವಾಗುವವು. ಹೊಟ್ಟೆಗಾಗಿ ಕಲಿಯುವ ಬಡಕಂಗಾಲಿನಿಂ ದೇನಾಗಬಹುದು?

ಬೇರುಗಳು ವೃಕ್ಷಗಳ ಬಾಯಿಗಳೆಂದು ಸರ್ವರೂ ತಿ ಳಿಯುತ್ತಾರಲ್ಲವೇ; ಆದರೆ ಈ ಸಂಬಂಧದಿಂದ ಒಂದು ಸೋಜಿಗವಾದ ಮಾತು ಒಂದು ಗ್ರಂಥದ "ವನಸ್ಪತಿ ಶಾಸ್ತ್ರ" ವೆಂಬ ನಿಬಂಧದಲ್ಲಿ ಬರೆದಿರುವದು. ಹ್ಯಾಗಂದರೆ:—ಒಂದು ಅರಣ್ಯದಲ್ಲಿ ಗುಡ್ಡದ ಅಡಿಯಲ್ಲಿ ಒಂದು ಹೆಮ್ಮರವು ನಿಂತು ಕೊಂಡಿತ್ತು. ಹಲವು ವರ್ಷ ಅವರ್ಷಣದಿಂದ ಜಲಾಭಾವ ವಾಗಲು ಈ ಮರಕ್ಕೆ ಆಹಾರದ ಕೊರತೆಯುಂಟಾಯಿತು. ಈ ಮರದಿಂದ ಸುಮಾರು ೫೦ । ೬೦ ಫೂಟುಗಳಾಚೆಯಲ್ಲಿ ಒಂದು ಪರಿ ಇದ್ದು, ಅದರಲ್ಲಿ ನೀರು ಇತ್ತು. ಹೀಗಿರಲು ಒಂದು ದಿವಸ ಈ ಮರದ ಒಂದು ದೊಡ್ಡ ಬೇರು ಒಮ್ಮಿಂ ದೊಮ್ಮೆ ನೆಲದೊಳಗಿಂದ ಕಿತ್ತಿಕೊಂಡೆದ್ದು, ಆ ಕೊಳ್ಳವ ನ್ನು ಸೇರಿತು. ಬಳಿಕ ಆ ಗಿಡವು ಪುನಃ ಚಿಗುರುಹತ್ತಿತು.

ಸಮುದ್ರದ ಇಳತವೂ ಏರವೂ

ಚಂದ್ರೋದಯದಿಂದ ಚಂದ್ರೋದಯದವರೆಗೆ ಸುಮಾರು ೬೦ ಘಳಿಗೆಗಳು ಹತ್ತುತ್ತವೆ. ಇಷ್ಟು ಅವಧಿಯಲ್ಲಿ ಸಮುದ್ರದ ನೀರು ಎರಡು ಸಾರೆ ಇಳಿಯುತ್ತದೆ. ಮತ್ತು ಏರುತ್ತದೆ. ಈ ಚಮತ್ಕಾರವು ವ್ಯಾಖ್ಯಾನ ರೂಪದಿಂದ ಕನ್ನಡ ೬ನೇ ಪುಸ್ತಕದಲ್ಲಿ ವರ್ಣಿಸಿರುತ್ತದೆ. ಇಲ್ಲಿ ಅದರ ಗಣಿತವನ್ನು ಹೇಳುತ್ತೇವೆ.



ಈ ಆಕೃತಿಯಲ್ಲಿ ಭ = ಭೂಮಿಯ ಮಧ್ಯವು.

ಚ = ಚಂದ್ರನು.

ಸ = ಚಂದ್ರನಿಗೆ ಸವಿಾಪವಾದ ಭೂಪೃಷ್ಠವು.

ಭ ಚ = ಅ = ೯೦ ಚಂದ್ರಕಕ್ಷಾ ತ್ರಿಜ್ಯೆಯು.

ಭ ಸ = ಇ = ೧ ಭೂತ್ರಿಜ್ಯೆಯು.

ಎಂದು ತಿಳಿಕೊಳ್ಳುವ.

ಆಕರ್ಷಣವು ಅಂತರದ ವರ್ಗದ ವ್ಯಸ್ತ ಪ್ರಮಾಣದಂತೆ ಹೆಚ್ಚು ಕಡಿಮೆಯಾಗುತ್ತದೆ. ಆದ್ದರಿಂದ ಚಂದ್ರನ—

$$\frac{\text{ಸ ಮೇಲಿನ ಆಕರ್ಷಣವು}}{\text{ಭ ಮೇಲಿನ ಆಕರ್ಷಣವು}} = \frac{(\text{ಭ ಚ})^2}{(\text{ಸ ಚ})^2} = \frac{\text{ಅ}^2}{(\text{ಅ}-\text{ಇ})^2}.$$

ಭ ಮೇಲಿನ ಆಕರ್ಷಣವು ಅ ರೇಷೆಗೆ ಸರಿ ಎಂದು ಕಲ್ಪಿಸಿದರೆ ಸ ಮೇಲಿನ ಆಕರ್ಷಣವು $= \frac{\text{ಅ}^3}{(\text{ಅ}-\text{ಇ})^2}$ ಆಗುತ್ತದೆ

$$= \text{ಅ} + ೨\,\text{ಇ} + ೩\frac{\text{ಇ}^2}{\text{ಅ}} + ೪\frac{\text{ಇ}^2}{\text{ಅ}^2} + ೫\frac{\text{ಇ}^4}{\text{ಅ}^3} + ೬\frac{\text{ಇ}^4}{\text{ಅ}^4} + \text{ಈ}.$$

ಇದರೊಳಗಿಂದ ಭ ಮೇಲಿನ ಆಕರ್ಷಣವಾದ ಅ ವಜಾ ಮಾಡಿ ಉಳಿದದಕ್ಕೆ ಅ ಇದರಿಂದ ಭಾಗಿಸಿದರೆ ಭ ಮತ್ತು ಸ ಬಿಂದುಗಳ ಮೇಲಿನ ಆಕರ್ಷಣಗಳ ಅಂತರವು ಬರುತ್ತದೆ. ಈ ಅಂತರವು ಏರಿಳತಗಳ ಕಾರಣವು—

$$= ೨\frac{ಳ}{ಅ} + ೩\frac{ಳ^೨}{ಅ^೨} + ೪\frac{ಳ^೩}{ಅ^೩} + ೫\frac{ಳ^೪}{ಅ^೪} + ಕ್.$$

ಇದರಲ್ಲಿ ಅ, ಳ ಗಳ ಬೆಲೆಯನ್ನು ಇಟ್ಟು ಉತ್ತರವನ್ನು ತೆಗೆಯಲಾಗಿ ಏರಿಳತದ ಕಾರಣವಾದ ಆಕರ್ಷಣದ ಪ್ರಮಾಣವು ಕೆಳಗೆ ಬರೆದಂತೆ ಬರುತ್ತದೆ.

$$= \frac{೧}{೩೦} + \frac{೩}{೩೬೦೦} + \frac{೪}{೧೨೯೬೦೦೦} + \frac{೫}{೪೬೬೫೬೦೦೦} + ಕ್.$$

ಈ ಸಾರಣಿಯೊಳಗಿನ ಮೊದಲನೆ ಎರಡು ಪದಗಳನ್ನು ತಕ್ಕೊಂಡರೆ $\frac{೪೧}{೩೬೦೦}$ ಬರುತ್ತದೆ. ಅಥವಾ ಚಂದ್ರನ ಇದೇ ಆಕರ್ಷಣದ ಬಂದು ಮೂವತ್ತನೇ ಅಂಶದಿಂದ ಏರಿಳತಗಳಾಗುತ್ತವೆಂದು ಸಿದ್ಧವಾಯಿತು. ಕ್ ಗ ವ್ಯಾಸದ ಎರಡನೇ ತುದಿಯಾದ ಕ್ ಸ್ಥಳದ ಏರಿಳತದ ಬೆಲೆಯನ್ನು ತೆಗೆಯಬೇಕಾದರೆ

$\frac{ಅ^೩}{(ಅ-ಳ)}$ ಇದರ ಬದಲಾಗಿ $\frac{ಅ^೩}{(ಅ+ಳ)^೨}$

ಇಡಬೇಕು ಅಂದರೆ ಬೆಲೆಯು ಬರುತ್ತದೆ.

$$= -೨\frac{ಳ}{ಅ} + ೩\frac{ಳ^೨}{ಅ^೨} - ೪\frac{ಳ^೩}{ಅ^೩} + ಕ್.$$

ಇದರ ಮೇಲಿಂದ ಕಂಡು ಬರುವದೇನಂದರೆ ಕ್ ಬಿಂದು ಎನಲ್ಲಿ ಗ ದ ವಿರುದ್ಧ ದಿಕ್ಕಿಗೆ ಏರಿಳತಗಳಾಗುತ್ತವೆ. ಅಂದರೆ $\frac{೪೧}{೩೬೦೦} : \frac{೪೧}{೩೬೦೦}$ ಈ ಪ್ರಮಾಣದಲ್ಲಿರುತ್ತದೆ.

(೦) ಈಗ ಭೂಮಿಯಿಂದ ಚಂದ್ರನ ಅಂತರವು ಹೆಚ್ಚು ಕಡಿಮೆಯಾದರೆ ಏರಿಳತಗಳಲ್ಲಿ ಹೆಚ್ಚು ಕಡಿಮೆ ಎಷ್ಟಾಗುತ್ತದೆಂದು ವಿಚಾರಿಸುವ.

ಅ ಅಂತರವಿದ್ದಾಗ ಏರಿಳತೆಗಳ ಮಾನವು ೨ ಳ ಇರುತ್ತದೆಂದು ಮೇಲೆ ಸಿದ್ಧಮಾಡಿದೆ. ಇದರಲ್ಲಿ ೨ ಳ ಇದು

ಭೂವ್ಯಾಸದ್ದಿದ್ದರಿಂದ ಸ್ಥಿರವೆದೆ. ಆದ್ದರಿಂದ ಅ ಬದಲಾ
ಗಿ ಅ + ನ ಇಟ್ಟರೆ ಬಂದದ್ದು ೨ ಕ ಇದು ಅ + ನ ಅಂತರದ
ಅ + ನ
ಮೇಲಿನ ವಿರಿಳತಗಳಾಗುವವು. ಆದರೆ ಅಂತರವು ನ ಪ
ಟ್ಟು ಹೆಚ್ಚು ಕಡಿಮೆಯಾದರೆ ಆಕರ್ಷಣದ ಕಸುವು ೧
ನ೨
ಕೆಚ್ಚು ಕಡಿಗುಯಾಗುತ್ತದೆ. ಆದ್ದರಿಂದ ಅ + ನ ಅಂತರದ
ಲ್ಲಿ ವಿರಿಳತಗಳ ಮಾನವು ವಾಸ್ತವಿಕವಾಗಿ ೨ ಕ ಅಥವಾ
ಅ + ನ೩
೨ ಕ ೩ ನ
—— × ಇರುತ್ತದೆ. ಅಂದರೆ ಅಂತರದ ಘನದ
ಅ
ಪ್ರಮಾಣದಿಂದ ವಿರಿಳತಗಳು ಹೆಚ್ಚು ಕಡಿಮೆಯಾಗುತ್ತವೆ.

(೩) ಇನ್ನು ಸೂರ್ಯನ ಆಕರ್ಷಣದಿಂದಾಗುವ ವಿರಿಳಿ
ತಗಳ ಮಾನವನ್ನು ತೆಗೆಯೋಣ ಭೂಮಿಯ ಕಸುವು ಅಂ
ದರೆ ಪ್ರಕೃತ್ಯಂಶ ಒಂದೆಂದು ತಿಳಿದರೆ ಸೂರ್ಯನ ಕಸುವು
೩೧೪೦೦೦ ಮತ್ತು ಚಂದ್ರನದು ೧/೮೧ ಇರುತ್ತದೆ. ಮತ್ತು
ಭೂಮಿಯಿಂದ ಚಂದ್ರನ ಮಧ್ಯಮ ಅಂತರವು ೧ ಎಂದು
ತಿಳಿದರೆ ಸೂರ್ಯನ ಅಂತರವು ೩೮೪ ಇರುತ್ತದೆ. ಅದ
ರಿಂದ

ಸೂರ್ಯನಿಂದಾಗುವ ವಿರಿಳತವು (೧)³ × ೩೧೪೦೦೦ ಎ
——————————————— = ———
ಚಂದ್ರನಿಂದಾಗುವ ವಿರಿಳತವು (೩೮೪)² × ೧/೮೧ ಸಿ

ಸರಾಸರಿ ಅಂದರೆ ಎಕ್ಕೆ ೩ ಪ್ರಮಾಣದಿಂದ ಇರುವದು.

(ಸಶೇಷ).

KINDER GARTON 3RD GIET.

ಕಿಂಡರಗಾರ್ಟನ್ ೩ನೇ ಇನಾಮು.

(೨೫೯ ಪುಟದಿಂದ ಮುಂದೆ ಸಾಗಿದ್ದು)

(೧೫ನೇ ಆಕೃತಿ) ಅರಸನೂ ರಾಣಿಯೂ ತೋಟದಿಂದ
ಹೊರಬಿದ್ದ ಕೂಡಲೆ ತೋಟಿಗರು ಕದಗಳನ್ನಿಕ್ಕುವರು.

(೧೬ನೇ ಆಕೃತಿ) ಆ ಮೇಲೆ ಆ ಉಭಯತರು ಬಂದದಾರಿಗುಂಟ ನಡೆದು ತಮ್ಮ ಮಹಾಲಿಗೆ ಹೋದರು. (೧೭ನೇ ಆಕೃತಿ) ಇದು ಪುನಃ ಘನವಾಯಿತು.

ಇದೇ ಮೇರೆಗೆ ಘನಗಳ ಸಹಾಯದಿಂದ ಹಲವು ಪ್ರಕಾರದ ಆಟಗಳನ್ನು ಕಲ್ಪಿಸಿ ವ್ಯವಹಾರೋಪಯುಕ್ತ ಆಕೃತಿಗಳನ್ನು ರಚಿಸಬಹುದು.

ಜ್ಞಾನಸಂವರ್ಧಕ ಆಕೃತಿಗಳು

ಈ ಆಕೃತಿಗಳು ಪ್ರತ್ಯಕ್ಷ ವಸ್ತುಗಳನ್ನು ಅಥವಾ ಸೌಂದರ್ಯದ ಮಾದರಿಗಳನ್ನು ತೋರಿಸುವದಿಲ್ಲ. ಆದರೆ ಘನಗಳನ್ನು ಒಂದು ನಿಯಮಿತ ಕ್ರಮಕ್ಕನುಸರಿಸಿ ಇಡುತ್ತ ಹೋಗುವದರಿಂದ ಸಂಖ್ಯೆಗಳ ಪರಸ್ಪರ ಸಂಬಂಧವನ್ನು ತೋರಿಸಲಿಕ್ಕೆ ಅನುಕೂಲವಾಗುವದು. ಮುಖ್ಯವಾಗಿ ಸಂಖ್ಯೆಗಳನ್ನು ಎಣಿಸಲಿಕ್ಕೆ ಬರುವಂತೆ ಆಕೃತಿಗಳನ್ನು ರಚಿಸುವದು ಮೊದಲನೇ ಕೆಲಸವು. ಅದರ ತರುವಾಯ ಕ್ರಮ ಕ್ರಮದಿಂದ ಜೋರೀಜು ಕಲಿಸುವದು. ೨ನೇ ಪೆಟ್ಟು. ೨ ಘನಗಳನ್ನು ಒಂದರಿಂದೊಂದು ಸ್ವಲ್ಪ ಅಂತರದ ಮೇಲೆ ಇಟ್ಟು, ಇವು ಒಂದೊಂದು ಇರುತ್ತವೆ, ಇವುಗಳನ್ನು ಕೂಡಿಸಿದರೆ " ಒಂದು ಒಂದು ಕೂಡಿ ಎರಡು ಆಗುತ್ತವೆ " ಎಂಬದನ್ನು ಶಿಕ್ಷಕರು ಹೇಳಿ ಹುಡುಗರ ಕಯ್ಯಿಂದ ಕೃತಿಯನ್ನು ಮಾಡಿಸುತ್ತ ಹೋಗಬೇಕು. ತರುವಾಯ ಎರಡು ಘನಗಳದೊಂದು ಜೋಡಿಯನ್ನೂ ಒಂದು ಘನವನ್ನೂ ಸ್ವಲ್ಪ ಅಂತರದ ಮೇಲೆ ಇಟ್ಟು, ಎರಡೂ ಒಂದೂ ಕೂಡಿ " ಮೂರು " ಎಂಬದನ್ನು ಕಲಿಸಬೇಕು. ಇದೇ ಮೇರೆಗೆ ಎಂಟರವರೆಗೆ ಜೋರೀಜು ಕಲಿಸತಕ್ಕದ್ದು. ಒಂದೊಂದು ಕೂಡಿಸುವ ಅಭ್ಯಾಸವಾದನಂತರ ಸರತಿಗೆ ಎರಡೆರಡು ಮೂರು ಮೂರು ಘನಗಳನ್ನು ಕೂಡಿಸಿ ಹೇಳುವದಕ್ಕಾದರೂ ಕಲಿಸಬೇಕು.

ಜೋರೀಜು ಬಂದ ಬಳಿಕ ವಜಾಬಾಕಿಯನ್ನಾದರೂ ಘನಗಳ ಸಹಾಯದಿಂದ ಕಲಿಸಬೇಕು. ಸಾ ಸಂದರೆ ಎಂಟರ

ಘನಗಳನ್ನು ಮುಂದ ಇಟ್ಟು, ಅವುಗಳೊಳಗಿಂದ ಒಂದು ಘನವನ್ನು ತೆಗೆದು ಏಳು ಉಳಿದವೆಂಬದನ್ನು ತೋರಿಸಿ ಹೇಳಿ ಕೊಡಬೇಕು ಅದರಂತೆ ಏಳರಲ್ಲಿ ಒಂದು ಕಳೆದರೆ ಆರು, ಆರರಲ್ಲಿ ಒಂದು ಕಳೆದರೆ ೫ ಇತ್ಯಾದಿ. ಆ ಮೇಲೆ ಸರತಿಗೆ ಎರಡೆರಡು, ತೆಗುವಾಯ ಮೂರು ಮೂರು, ಕಳೆದು ವಜಾಬಾಕಿಯನ್ನು ರೂಢೀ ಮಾಡಿಸಬೇಕು. ಹುಡುಗರು ಪ್ರತಿಯೊಂದು ಕೃತಿಯ ಅರ್ಥವನ್ನು ಪೂರ್ಣವಾಕ್ಯದಿಂದ ಅನ್ನುತ್ತ ಹೋಗುವದು ಒಳ್ಳೇದು. ಹುಡುಗರಿಗೆ ಒಂದು ಮೆಟ್ಟು ಪೂರಾ ಅವಗತವಾಗುವ ವರೆಗೆ ಎರಡನೇ ಮೆಟ್ಟನ್ನು ಕಲಿಸಬಾರದು,

ಹೆಚ್ಚಿನ ಯೋಗ್ಯತೆಯ ಹುಡುಗರಿಗೆ ಘನಗಳ ಗುಂಪುಗಳ ಮೇಲಿಂದ ಗುಣಾಕಾರವನ್ನ ಭಾಗಾಕಾರವನ್ನೂ ಕಲಿಸಲಿಕ್ಕೆ ಪ್ರಯತ್ನ ಮಾಡಬಹುದು. ಮತ್ತು ಕೆಳಗೆ ಹೇಳಿದಂತೆ ಪ್ರಶ್ನೋತ್ತರಗಳಿಂದ ಅಪೂರ್ಣ ಭಾಗಗಳ ಜ್ಞಾನವನ್ನಾದರೂ ಮಾಡಿಕೊಡಬಹುದು. ಹ್ಯಾಗಂದರೆ— ಶಿಕ್ಷಕನ ಮುಂದೆಯೂ ಹುಡುಗರ ಮುಂದೆಯೂ ೪ ಸಂಖ್ಯ ಘನಗಳದೊಂದು ದೊಡ್ಡ ಘನವಿರುತ್ತದೆಂದು ಕಲ್ಪಿಸುವ. ಶಿಕ್ಷಕನು ಅದರ ಮೇಲಿನ ಅರ್ಧವನ್ನು ಎತ್ತಿ ಕಯ್ಯಲ್ಲಿ ಹಿಡುಕೊಂಡು, ನಾನು ಪೂರಾ ಘನವನ್ನು ಎತ್ತಿ ಹಿಡಿದಿರುವೆನೋ, ಕೆಲವು ಭಾಗ ಕೆಳಗೆ ಬಿಟ್ಟಿರುವೆನೋ? (ಹುಡುಗರು ಕೆಲವು ಭಾಗವನ್ನು ಬಿಟ್ಟಿರುವಿರಿ.) ಕಯ್ಯಲ್ಲಿ ಹಿಡದಭಾಗವೂ ಕೆಳಗೆ ಬಿಟ್ಟಿರುವ ಭಾಗವೂ ಹೆಚ್ಚು ಕಡಿಮೆ ಇರುತ್ತವೋ, ಅಷ್ಟಷ್ಟೇ ಇರುವವೊ? (ಅಷ್ಟಷ್ಟೇ ಇರುವವು.) ಪದಾರ್ಥಗಳು ಅಷ್ಟಷ್ಟೇ ಇದ್ದರೆ ಅವು ಹ್ಯಾಗೆ ಇರುತ್ತವೆಂದು ಅನ್ನುವರು? (ಸಮ ಇರುತ್ತವೆಂದು ಅನ್ನುವರು.) ನಾನು ಒಂದು ಘನವನ್ನು ಸಮವಾಗಿ ಎರಡು ಭಾಗ ಮಾಡಿದೆನು ಈ ಪ್ರತಿಯೊಂದು ಭಾಗಕ್ಕೆ "ಅರ್ಧ" ಅನ್ನುವರು. ನನ್ನ ಘನದ ಎರಡು ಅರ್ಧಗಳು ಎಲ್ಲಿ ಅವೆ. (ಒಂದು ನಿಮ್ಮ ಕಯ್ಯಲ್ಲಿ, ಮತ್ತೊಂದು ಮೇಜಿನ ಮೇಲೆ.) ನನ್ನ ಕಯ್ಯಾಳ

ಗಿನ ಅರ್ಧವನ್ನು ಪೋಜಿನ ಮೇಲಿನ ಅರ್ಧದ ಮೇಲೆ ಇಡುತ್ತೇನೆ. ಈಗ ಎಷ್ಟಾಯಿತು? (ಪೂರಾ "ಒಂದು,,)

ಪುನಃ ಇಡೀ ಘನದಲ್ಲಿ ಸರಿಯಾಗಿ ಎರಡು ಭಾಗ ಮಾಡಿ ಒಂದು ಅರ್ಧವನ್ನು ಎಡಗಯ್ಯಿಂದ, ಮತ್ತೊಂದರ್ಧವನ್ನು ಬಲಗಯ್ಯಿಂದ ಹಿಡಿದು, ಈಗ ನನ್ನ ಹತ್ತರ ಎಷ್ಟು ಅವೆ? (ಎರಡು ಅರ್ಧಗಳು.) ಇವುಗಳಿಗೆ ಎಡಕಿನ ಅರ್ಧ ಬಲಕಿನ ಅರ್ಧ ಅನ್ನೋಣ; ಮೊದಲಿನ ಅರ್ಧಗಳಿಗೆ ಮೇಲಿನ ಅರ್ಧ ಕೆಳಗಿನ ಅರ್ಧ ಅನ್ನೋಣ. ಈಗಿನ ಅರ್ಧಗಳನ್ನು ಪುನಃ ಕೂಡಿಸಿದೆನು. ಈಗ ಎಷ್ಟು ಆಯಿತು? ಪುನಃ "ಒಂದು,, ಹೀಗೆ ಒಂದರಲ್ಲಿ ಎರಡು ಭಾಗವನ್ನು ಮಾಡುವಾಗಲೂ, ಎರಡು ಭಾಗಗಳನ್ನು ಕೂಡಿಸಿ ಪುನಃ ಒಂದು ಮಾಡುವಾಗಲೂ ಕೆಳಗೆ ಹೇಳಿದಂತೆ ಹುಡುಗರಿಂದ ಅನಿಸುತ್ತ ಹೋಗಬೇಕು.

೧. ಒಂದರದಲ್ಲಿ ಎರಡು ಅರ್ಧಗಳಿರುತ್ತವೆ.

೨. ಎರಡು ಅರ್ಧಗಳು ಕೂಡಿ ಒಂದು ಆಗಿರುತ್ತದೆ.

ಇನ್ನು ಮೇಲೆ ಅರ್ಧಭಾಗದೊಳಗೆ ಪುನಃ ಎರಡು ಸಮಭಾಗಗಳನ್ನು ಮಾಡಿ ಪ್ರತಿಯೊಂದಕ್ಕೆ "ಕಾಲು,, ಅನ್ನುತ್ತಾರೆಂದು ಹೇಳಿರಿ. ಎರಡು ಕಾಲುಗಳನ್ನು ಕೂಡಿಸಿದರೆ "ಅರ್ಧ,,ವಾಗುತ್ತದೆ. ಎರಡು ಅರ್ಧಗಳನ್ನು ಕೂಡಿಸಿದರೆ "ಒಂದು,, ಆಗುತ್ತದೆ. ಪುನಃ ಒಂದರಲ್ಲಿ ಎರಡು ಸಮಭಾಗಗಳನ್ನು ನೂಡಿದರೆ " ಅರ್ಧ ಆಗುತ್ತದೆ. ಅರ್ಧದಲ್ಲಿ ಎರಡು ಭಾಗಗಳನ್ನು ಮಾಡಿದರೆ " ಕಾಲು,, ಆಗುತ್ತದೆ. ಈ ಪ್ರಕಾರ ಏಕೀಕರಣ ಪೃಥಕ್ಕರಣಗಳಿಂದ "ಅರ್ಧ,, "ಕಾಲು,, ಎಂಬ ಪಾರಿಭಾಷಿಕ ಶಬ್ದಗಳ ಜ್ಞಾನವನ್ನು ಪ್ರತ್ಯಕ್ಷ ಉದಾಹರಣೆಯಿಂದ ಮಾಡಿಕೊಡತಕ್ಕದ್ದು.

ಚಿಕ್ಕ ಬಾಲಕರ ಇಂದ್ರಿಯಗಳು ತೀಕ್ಷ್ಣವಾಗಿರುವದರಿಂದ ಅವುಗಳ ಮೂಲಕ ಬೇರೆ ಬೇರೆ ವಿಷಯಗಳ ಜ್ಞಾನವಾಗುವಂತೆ ಉಪಾಯಗಳನ್ನೆಸಗಿ, ಇಂದ್ರಿಯಗಳ ಸಾಮರ್ಥ್ಯವನ್ನೂ ಬುದ್ಧಿ ಸಾಮರ್ಥ್ಯವನ್ನೂ ವೃದ್ಧಿಗೊಳಿಸುವದು ಅವಶ್ಯವೆಂಬ ತತ್ವವನ್ನನುಸರಿಸಿ ಸುಧಾರಿಸಿದ ಪದ್ಧತಿಯಲ್ಲಿ

ಬಾಲೋದ್ಯಾನ ಶಿಕ್ಷಣಕ್ರಮವೂ "ವಸ್ತುಪಾಠ ಶಿಕ್ಷಣ ಕ್ರಮವೂ ಶೇರಿಸಲ್ಪಟ್ಟಿರುತ್ತವೆ. ಈ ಪದ್ಧತಿಗಳಿಂದ ಬಾಲಕರ ಇಂದ್ರಿಯಗಳು ಬಲಪಡುವವಲ್ಲದೆ ಬುದ್ಧಿಯು ಪ್ರಕಸಿತ ವಾಗುವದು. ಹಾಗೂ ಹಸ್ತಶಿಕ್ಷಣಕ್ಕೆ ಅವಕಾಶದ ಉಂಟಾಗುವದು. ಆದರೆ ಎಲ್ಲಕ್ಕೂ ಹೆಚ್ಚಿನ ಲಾಭವೇನೆಂದರೆ ಸೃಷ್ಟಿಕರ್ತನ ಯೋಜಕತ್ವವೂ ಅಗಾಧ ಮಹಿಮೆಗಳೂ ಗೊತ್ತಾಗಿ ಆಸ್ತಿಕ್ಯ ಬುದ್ಧಿಯುಂಟಾಗುವದು. ಶಿಕ್ಷಕಳು ಯಾವದೊಂದು ವಿಷಯವನ್ನು ಕಲಿಸುವಾಗ್ಗೆ ಪ್ರಸಂಗ ದೊರೆತ ಸಮಯದಲ್ಲಿ ಸೃಷ್ಟಿಕರ್ತನ ಮಹಿಮೆಯನ್ನು ಕುರಿತು ಆಲೋಚಿಸುವದಕ್ಕೆ ಅವಕಾಶ ದೊರೆಯುವಂತೆ ಮಾಡುವದೂ ಅವರ ವಿಚಾರಗಳಿಗೆ ತಕ್ಕ ಚಾಲನೆ ಕೊಡುವದೂ ಅವಶ್ಯವದೆ. ಸುಧಾರಿಸಿದ ಎಲ್ಲ ರಾಷ್ಟ್ರಗಳಲ್ಲಿ ಈ ಸೂಚನೆಗಳು ಅನುಸರಿಸಲ್ಪಡುವವೆಂಬದಿಷ್ಟೇ ಅಲ್ಲ; ಶಾಲೆಯ ಅಭ್ಯಾಸವು ಪ್ರಾರಂಭವಾಗುವದಕ್ಕೆ ಮುಂಚೆ, ಎಲ್ಲರೂ ಕೂಡಿ ಆತನನ್ನು ಸ್ತುತಿಸುವರು, ನಮ್ಮ ದೇಶದಲ್ಲಿ ಸಹ ಮುಂಚಿನ ಕಾಲದಲ್ಲಿ ದೇವರ ನಾಮಸ್ಮರಣೆಯನ್ನು ಮಾಡಿ ಪಾಠವನ್ನು ಆರಂಭಿಸುವ ಪರಿಪಾಠವಿತ್ತು. ಆದರೆ ಸಾರ್ವಜನಿಕ ಶಾಲೆಗಳು ಸ್ಥಾಪನೆಯಾದಂದಿನಿಂದ ಈ ಪದ್ಧತಿಯು ಮುಗ್ಗಿತು. ಪುನಃ ಮೊದಲಿನ ಪದ್ಧತಿಯನ್ನು ಅನುಸರಿಸುವದು ತಕ್ಕದ್ದಾಗಿದೆ.

ನಮ್ಮ ದೇಶದಲ್ಲಿ ಹಲವು ಧರ್ಮಗಳು ಪ್ರಚಲಿತವಾಗಿರುವದರಿಂದ ಎಲ್ಲರಿಗೂ ಮಾನ್ಯವಾಗುವಂತೆ ಸಾರ್ವಜನಿಕ ಶಾಲೆಗಳಲ್ಲಿ ಧರ್ಮಶಿಕ್ಷಣವನ್ನು ಕೊಡುವದು ಬಹು ತೊಂದರೆಯುಳ್ಳ ಕೆಲಸವಾಗಿದೆ. ಆದರೆ ದೇವರ ಅಸ್ತಿತ್ವ ಕರ್ತೃತ್ವಶಕ್ತಿ, ನಿಯೋಜಕತ್ವ, ಮಾನವೀ ಪ್ರಾಣಿಯ ಮೇಲಿರುವ ಆತನ ವಿಶೇಷ ದಯೆ, ಮೊದಲಾದ ಸರ್ವಸಾಮಾನ್ಯವಾದ ಮಾತುಗಳನ್ನು ಕುರಿತು ಆಲೋಚಿಸುವ ಚಟವು ಹುಡುಗರಿಗೆ ಹತ್ತುವಂತೆ ಮಾಡುವದಕ್ಕೆ ಯಾರೂ ಅಡ್ಡ ಬರಲಾರರು. ಈ ಚಟವು ಹುಡುಗರಿಗೆ ಹತ್ತಿ ವಿಚಾರದಿಂದ ದೇವರನ್ನೂ

ಆತನ ಕರ್ತೃತ್ವಗಳನ್ನೂ ಅವರೇ ಅರಿತುಕೊಳ್ಳುವ ವರೆಗೆ ಈ ವಿಷಯದಲ್ಲಿ ಕಲಿಸದೆ ಇದ್ದರೆ, ಅಂಥ ಹುಡುಗರು ಆ ಸ್ತಿಕರಾಗುವ ಸಂಭವವಿವೆ ಕಡಿಮೆ. ಆದ ಕಾರಣ ಮನೆಯಲ್ಲಿ ಹಿರಿಯರೂ ಗುರುಗಳೂ ಪೂರ್ವ ಪದ್ಧತಿಗನುಸರಿಸಿ ಬೆಳಿಗ್ಗೆ ದೇವರನ್ನು ನಮಸ್ಕರಿಸುವದಕ್ಕೂ ಆತನ ಗುಣಾನುವಾದ ಮಾಡುವದಕ್ಕೂ ತಮ್ಮ ಸ್ವಂತ ಆಚರಣೆಯಿಂದಲೂ ಉಪದೇಶದಿಂದಲೂ ಕಲಿಸಬೇಕು. ಸಾಲೆಯಲ್ಲಿ ಶಾಲಾಗುರುಗಳು ಸಾಲೆಯ ಕೆಲಸವು ಪ್ರಾರಂಭವಾಗುವದಕ್ಕೆ ಮುಂಚೆ ಎಲ್ಲ ಹುಡುಗರನ್ನು ನಿಲ್ಲಿಸಿ ಎಲ್ಲರಿಗೂ ಸಾಮಾನ್ಯವಾದ ಸ್ತೋತ್ರದ ಪದಗಳಿಂದ ಪರಮಾತ್ಮನ ಗುಣಗಳನ್ನು ಹೊಗಳಲಿಕ್ಕೂ ಆತನಲ್ಲಿ ಭಕ್ತಿಯುಳ್ಳವರಾಗುವಪಕ್ಕೂ ಕಲಿಸತಕ್ಕದ್ದು. ಚಿಕ್ಕಂದಿನಲ್ಲಿ ನೆಲೆಗೊಂಡ ಚಟುಗಳು ಸ್ಥಿರವಾಗಿ ಉಳಿಯುವವು. ಆದಕಾರಣ ಇನ್ನು ಮುಂದೆ ಎಲ್ಲ ಶಿಕ್ಷಕರು ಮೇಲಿನ ಸೂಚನೆಗಳೊಳಗಿನ ಸಾರವನ್ನು ಗ್ರಹಿಸಿ ಧರ್ಮ ಸಂಬಂಧದಿಂದ ನಮ್ಮ ದೇಶದೊಳಗುಂಟಾಗಿರುವ ಉಪೇಕ್ಷೆಯನ್ನು ಹೋಗಲಾಡಿಸಿ ಭಾವೀ ರಾಷ್ಟ್ರವು ಧರ್ಮಾಭಿಮಾನಿಯಾಗುವಂತೆ ಮಾಡುವರೆಂದು ಕೊರುತ್ತೇವೆ.

ಹುಡುಗರು ಪಠಿಸಲಿಕ್ಕೆ ಯೋಗ್ಯವಾದ ಪದಗಳನ್ನು ರಚಿಸಿ ಇದರಡಿಯಲ್ಲಿ ಮುದ್ರಿಸಿದ್ದೇವೆ. ಇವುಗಳನ್ನು ಅಭಿನಯದೊಂದಿಗೆ ತಾಳಕ್ಕನುಸರಿಸಿ ಹಾಡಲಿಕ್ಕೆ ಕಲಿಸುವದಲ್ಲದೆ, ಇದರೊಳಗಿನ ಅಭಿಪ್ರಾಯವನ್ನು ತಿಳಿಸಿ ಕೊಡಬೇಕು.

ಬ್ಯಾಂಡ (ನೋಟು)

ದೇವ ದೇವನೇ ಪಾವನಾತ್ಮನೇ।
ನಾವು ಬಾಲಕರ್ ಕಾವುದೆಮ್ಮನು ॥ ಪಲ್ಲ ॥
ಕರವ ಮುಗಿವೆವೈ ದಯಾಪ ಸಾಗರ।
ಕರುಣದಿಂದನೀ ಭರದೆ*ಬಳಿಯಿಸೈ ॥ ೧ ॥

---

*ಬೆಳೆ" ಧಾತುವನ್ನು ಧಾನ್ಯಾದಿಗಳ ಅಭಿವೃದ್ಧಿಯಲ್ಲಿಯೂ "ಬಳೆ" ಧಾತುವನ್ನು ಮನುಷ್ಯರ ಅಭಿವೃದ್ಧಿಯಲ್ಲಿಯೂ ಉಪಯೋಗಿಸತಕ್ಕದ್ದು. ಶ. ಮ. ಸೂತ್ರ —೨೧೮

ನಿತ್ಯದಲ್ಲಿ ನಾವ್ ಸ್ತೋತ್ರಮಾಳ್ಪೆವು |
ಇತ್ತು ಪೊರೆಯೊ ನೀ ಸತ್ಯಬುದ್ಧಿಯಂ || ೩
ಭಕ್ತಿಯಿಂದ ನಾವ್ ಬೇಡಿಕೊಂಬೆವು |
ಭಕ್ತವತ್ಸಲಾ ನಿತ್ಯ ಪೊರೆವುದು || ೩ ||
ದೀನರಕ್ಷಕಾ ನಿನ್ನ ನಮಿಸೆವು |
ತನಯರಂದದಿಂ ಬಿಡದೆ ರಕ್ಷಿಸೈ || ೪ ||
ಕಾಲ ಕಾಲದೋಳ್ ಮಳೆಯಂಕೊಟ್ಟು ನೀ |
ಸಲಹು ದೇವನೇ ಪ್ರಾಣಿಯಿಲ್ಲವಂ || ೫ ||
ಫ್ಲೇಗಿನಿಂದ ನಾವ್ ಬಳಲುತಿರುವೆವು |
ರೋಗಮೂಲವಂ ತರಿದು ಪೋಷಿಸೈ || ೬ ||
ಸೃಷ್ಟಿ ಕೋಧದ ಮತಿಯನಿತ್ತು ನೀ |
ಕಷ್ಟಬಾಳ್ವೆಯಿಂ ಪೊರೆದು ರಕ್ಷಿಸೈ || ೭ ||
ಶಾಂತ ಮೂರ್ತಿಯಂ ಚಕ್ರವರ್ತಿಯಂ |
ಕಾಂತ ಕಾಯನಂ ಸತತ ಪೊರೆವುದೈ || ೮

---

* ಫ್ಲೇಗಿನ ತ್ರಾಸವಿಲ್ಲದಲ್ಲಿ ಈ ಪದವನ್ನು ಲೋಪ ಮಾಡ ಬಹುದು.

DEPARTMENTAL NOTICES.

ನೋಟೀಸು.

ಮುಲಖೀ ಪರೀಕ್ಷೆಯು.

ದಕ್ಷಿಣಭಾಗ

೧೯೦೪—೧೯೦೫ನೇ ಇಸವಿಯಲ್ಲಾಗುವ ಮುಲಖೀ ಪರೀಕ್ಷೆಗೆ ಕೆಳಗೆ ಬರೆದ ಪುಸ್ತಕಗಳು ಗೊತ್ತು ಮಾಡಲ್ಪಟ್ಟಿವೆ. ಬೆಳಗಾವೆ ಧಾರವಾಡ ವಿಜಾಪೂರ ಕಾರವಾರ ರತ್ನಗಿರಿ ಕುಲಾಬಾ ಎಂಬ ದಕ್ಷಿಣಭಾಗದ ಜಿಲ್ಲೆಗಳಲ್ಲಿಯೂ ಕೊಲ್ಹಾಪೂರ ಮತ್ತು ಬೇರೆ ದೇಶೀಯ ಸಂಸ್ಥಾನಗಳಲ್ಲಿಯೂ ವಾಸಿಸುವಂಥ ದೇಶಭಾಷೆಯಲ್ಲಿ ನಡೆಯುವ ಮುಲಖೀ ಪರೀಕ್ಷೆಗೆ ಕೂಡುವವರು, ೧೯೦೫ನೇ ಇಸವಿಯ ಜುಲ್ಯೆ ೧೬

ನೇ ತಾರೀಖಿನ ಮುಂಬಯಿ ಗವರ್ನಮೆಂಟ ಗ್ಯಾಝಿಟಿನ ನೊದಲನೇ ಭಾಗದ ೪೭೩ ದಿಂದ ೪೭೪ ನೇ ಪುಟಗಳ ವರೆಗೆ ಬರೆದ ಸೂಚನೆಗಳನ್ನು ನೋಡಿಕೊಳ್ಳತಕ್ಕದ್ದು.

೨ ಪರೀಕ್ಷೆಯು ಬೆಳಗಾವಿ ಬಿಜಾಪೂರ, ಕಾರವಾರ ಸೆಂಟರುಗಳಲ್ಲಿ ಕನ್ನಡ ಹಾಗೂ ಮಹಾರಾಷ್ಟ್ರ ಇವೆರಡೂ ಭಾಷೆಗಳಲ್ಲಿಯೂ, ಧಾರವಾಡದಲ್ಲಿ ಬರೇ ಕನ್ನಡ ಭಾಷೆಯಲ್ಲಿಯೂ, ಕೊಲಾಪೂರ ರತ್ನಾಗಿರಿ, ಕೊಲ್ಹಾಪುರಗಳಲ್ಲಿ ಬರೇ ಮಹಾರಾಷ್ಟ್ರ ಭಾಷೆಯಲ್ಲಿಯೂ ನಡೆಯುವದು.

೩. ಧಾರವಾಡ ಜಿಲ್ಲೆಯಲ್ಲಿ ವಾಸಿಸುವಂಥ ಮರಾಠಿಯಲ್ಲಿ ಪರೀಕ್ಷೆಕೂಡಬೇಕೆಂದು ಬಯಸುತ್ತಿರುವಂಥ ಉಮೇದವಾರರು ಮೆ. ಎಜ್ಯುಕೇಶನಲ್ ಇನಸ್ಪೇಕ್ಟರರ ಅಪ್ಪಣೆಯಿಂದ ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬಹುದು.

(1) ಅಂಕಗಣಿತ ಸಂಪೂರ್ಣ, ಜಮಾಖರ್ಚು, ಯುಕ್ಲಿಡಿನ ೧ನೇ ಪುಸ್ತಕ ಸಿದ್ಧಾಂತ.

(2) ಮರಾಠಿ—ವಾಚನ—ಆರನೇ ಪುಸ್ತಕ ಸಂಪೂರ್ಣ. ಕವಿತೆ ೧೯೦೦ನೇ ಇಸವಿಯಲ್ಲಿ ಮುದ್ರಿಸಿದ ಆರನೇ ಪುಸ್ತಕದ ೧೪೯ನೇ ಪುಟದಿಂದ ೩೦೦ನೇ ಪುಟದವರೆಗಿನ ಶ್ಲೋಕಗಳನ್ನು ಬಾಯಿಪಾಠ ಅನ್ನುವದೂ ಅರ್ಥ ಹೇಳುವದೂ.

(3) ಕನ್ನಡ—ವಾಚನ—ಆರನೇ ಪುಸ್ತಕ ಸಂಪೂರ್ಣ. ಕವಿತೆ—ಕವಿತೆಯ ಎರಡನೇ ಪುಸ್ತಕ ದೊಳಗಿನ ೩೦ ರಿಂದ ೩೬ನೇ ಪಾಠಗಳವರೆಗಿನ ಶ್ಲೋಕಗಳನ್ನು ಬಾಯಿಪಾಠ ಅನ್ನುವದೂ ಅರ್ಥತಿಳಿಯುವದೂ.

(4) ಉರ್ದು—ತೌಬಟೂನ್ ನಾಸೂಹ್.

ಧಾರವಾಡ
೨೨-೨೬-೧೯೦೩. | B. R. SAHASRABUDHE,
ಎ. ಇ. ದಕ್ಷಿಣ ಭಾಗ

CORRESPONDENCE.

ಪತ್ರವ್ಯವಹಾರ.

ಮು. ರಾ. ರಾ. ಶಾಲಾಪತ್ರದ ಕರ್ತರಿಗೆ —

ಸಾ ನ ವಿನಂತಿ ಈ ಕೆಳಗಿನ ನಾಲ್ಕು ಪಂಕ್ತಿಗಳಿಗೆ ಪ ಯವಮಾಡಿ ಸ್ಥಳಕೊಡಬೇಕೆಂದು ಬೇಡಿಕೊಳ್ಳುತ್ತೇನೆ.'

ನೀ ಇಯತ್ತೆಯು

ವಿಷಯ — ವ್ಯಾಕರಣ

ಪ್ರಸ್ತಾವನೆ:— ಇಂದು ಈ ಸಭೆಯಲ್ಲಿ ತೋರಿಸುವ ಅ ಥವಾ ಕಲಿಸುವ ವಿಷಯಗಳು ಮಾದರಿಯವಲ್ಲ. ಆ ಕೆಲ ಸವು ನಮ್ಮದಲ್ಲ, ಅಷ್ಟೊಂದು ಯೋಗ್ಯತೆಯೂ ನಮ್ಮಲ್ಲಿ ಇಲ್ಲ. ಉದಾಹರಣ ತೋರಿಸುವ ಕೆಲಸವನ್ನು ನಮ್ಮೆಲ್ಲರ ಮಾತೃಸ್ಥಾನವೂ ಗುರುಸ್ಥಾನವೂ ಆದ ಕಾಲೇಜವು ತಾನೇ ಕೈಕೊಂಡಿರುತ್ತದೆಂಬದು ಸಂತೋಷದ ಸಂಗತಿಯು. ಆದರೆ ಇಲ್ಲಿ ನಾವೆಲ್ಲರು ಕೂಡಿ ಮಾಡುವದೇನೆಂದರೆ ಅವರು ಪ್ರತಿವರ್ಷ ಕಲಿಸುವ ಅಥವಾ ತೋರಿಸುವ ಸಂಗತಿಗಳ ಸಂಬಂಧವಾಗಿ ಯಥಾಮತಿ ಆಲೋಚಿಸಿ ಸುಜ್ಞಾ ನ್ಯವೆ ಸಾಯು ಬಂಧುಗಳಾದ ತಮ್ಮ ಸುವಿಚಾರಗಳ ಸಹಾಯು ದಿಂದ ಮನನ ಮಾಡಿಕೊಳ್ಳಬೇಕೆಂಬದೇ ಸಮ್ಮೇಲನದ ಉದ್ದೇಶವು. ಇರಲಿ.

ಈಗ ನಾನು ಕಲಿಸುವ ವಿಷಯವು ವ್ಯಾಕರಣದ ಮೊದ ಲನೆಯ ಪಾಠವಾಗಿರುತ್ತದೆ. ವ್ಯಾಕರಣವೆಂದರೆ ಭಾಷೆಯ ಒಂದು ಅಂಗ. ಆದರೆ ಅದು ಭಾಷೆಯನ್ನೇ ಅನುಸರಿಸುತ್ತ ದಲ್ಲದೆ ಭಾಷೆಯು ವ್ಯಾಕರಣದ ಆಧೀನವಾಗಿರುವದಿಲ್ಲ. ಭಾಷೆಯು ದೇಶಕಾಲಸ್ಥಿತಿಗೆ ಸರಿಯಾಗಿ ಬದಲಾಗುವಂತೆ ವ್ಯಾಕರಣವು ಸಹ ತನ್ನ ಸ್ಥಿತಿಯನ್ನು ಸಾವರಿಸಿ ಕೊಳ್ಳು ತ್ತದೆ. ಈ ಮಾತಿಗೆ ಹಳೆಗನ್ನಡ ಹೊಸಗನ್ನಡ ವ್ಯಾಕರ ಣಗಳೇ ಪ್ರಮಾಣ.

ಇನ್ನು ಯಾವದೊಂದು ಜನಾಂಗದವರ ಸ್ವಾಭಾವಿಕ ಸ್ಥಿತಿಯನ್ನು ನೋಡಿದರೆ ಅವರು ಬಾಲ್ಯದಲ್ಲಿ ತಮ್ಮ ತಮ್ಮ ಭಾಷೆಯನ್ನೇ ಕಲಿಯುತ್ತಾರಲ್ಲದೆ. ವ್ಯಾಕರಣ ಕಲಿಯುವದಿ ಲ್ಲೆಂಬದು ಸಹಜವು. ಇದರ ಮೇಲಿಂದ ವ್ಯಾಕರಣ ಕಲಿ ಯದೆ ಮಾತಾಡಲಿಕ್ಕೆ ಬರುವದಿಲ್ಲೆಂದು ಹೇಳಲಾಗದು. ಆ ದರೆ ವ್ಯಾಕರಣ ಶಾಸ್ತ್ರವನ್ನು ಕಲಿಯದೆ ತಮ್ಮ ಅಭಿಪ್ರಾ ಯವನ್ನು ಎರಡನೆಯವರ ಮನಸಿನಲ್ಲಿ ಚನ್ನಾಗಿ ಬಿಂಬಿಸು

ವಂತೆ ತಿಳಿಸುವ ಕೌಶಲ್ಯವು ಬರಲಾರದು. ಅಂದರೆ ವ್ಯಾಕರಣ ಕಲಿಯದಿದ್ದರೆ ಭಾಷೆಯು ನಿಜವಾದ ಮರ್ಮವು ಗೊತ್ತಾಗಲಾರದು. (೧) ಈ ಶಾಸ್ತ್ರವು ಕಠಿಣವೂ ಅವಶ್ಯಕವೂ ಆನಂದಕರವೂ ಆಗಿರುತ್ತದೆ. (೨) ಇದು ಶುದ್ಧವಾಗಿ ಮಾತಾಡಲಿಕ್ಕೆ ಕಲಿಸುತ್ತದೆ. (೩) ಸ್ವಲ್ಪರಲ್ಲಿ ಎಲ್ಲ ಅಭಿಪ್ರಾಯವನ್ನು ವ್ಯಕ್ತಮಾಡುವ ಶಕ್ತಿಯನ್ನು ತಂದುಕೊಡುತ್ತದೆ. (೪) ಇದು ಪ್ರಾಥಮಿಕ ಶಾಲೆಗಳ ತರ್ಕಶಾಸ್ತ್ರವು ಅಂದರೆ ವಿದ್ಯಾರ್ಥಿಗಳ ವಿಚಾರ ಶಕ್ತಿಯನ್ನು ಬಲಪಡಿಸುತ್ತದೆ. (೫) ಮನುಷ್ಯಜಾತಿಯ ಇತಿಹಾಸವನ್ನು ಗೊತ್ತುಮಾಡಿಕೊಡುತ್ತದೆ. (೬) ಮುಖ್ಯವಾಗಿ ವ್ಯಾಕರಣವು ಪದಗಳ ಅರ್ಥ–ರಚನೆ ಪರಸ್ಪರ ಸಂಬಂಧ ಮತ್ತು ಅವುಗಳ ಯೋಗ್ಯ ಉಪಯೋಗ ಮೊದಲಾದವುಗಳನ್ನೂ ಗ್ರಂಥಕರ್ತನ ಅಭಿಪ್ರಾಯಗಳನ್ನೂ ವ್ಯಕ್ತಗೊಳಿಸುವಂಥಾದ್ದಾಗಿರುತ್ತದೆ. (೧) ಆದರೆ ವ್ಯಾಕರಣ ಶಾಸ್ತ್ರದ ತೊಂದರೆಗಳು ಎಲ್ಲ ಶಾಸ್ತ್ರಗಳ ತೊಂದರೆಗಳಾಗಿರುತ್ತವೆಂದು ಹೇಳಬಹುದು. (೨) ಈ ವಿಷಯವು ಗಣಿತ ಮೊದಲಾದ ಶಾಸ್ತ್ರಗಳಿಗಿಂತ ಕಠಿಣತರವಾದ್ದೆಂದು ಪ್ರಸಿದ್ಧ ವೈಯಾಕರಣಿಗಳಾದ "ಜೇನ್ ಸಾಹೇಬರು,, ಅಭಿಪ್ರಾಯ ಪಡುತ್ತಾರೆ. ಇಂಥ ಈ ಕಠಿಣತರವಾದ ವಿಷಯವನ್ನು ಚಿಕ್ಕಮಕ್ಕಳಿಗೆ ಸುಭೋದವಾಗುವಂತೆ ಹ್ಯಾಗೆ ಕಲಿಸಬೇಕು? ಮೊದಲು ಯಾವದು? ಬಳಿಕ ಯಾವದು? ಕಡೆಗೆ ಯಾವದು? ಎಂಬಸಂಗತಿಗಳನ್ನು ಕ್ರಮಗೊಳಿಸುವದೂ ಯಾವ ಪದ್ಧತಿಯನ್ನು ಅನುಸರಿಸಬೇಕೆಂಬದೂ ವಿಚಾರ ಮಾಡತಕ್ಕದ್ದಾಗಿರುತ್ತದೆ.

ಭಾಷೆಯೇ ಮೂಲ ಎಂಬ ಸಂಗತಿಯನ್ನು ಮೊದಲೇ ಹೇಳಿಯದೆ ಕಾರಣ ಭಾಷೆಯನ್ನೇ ಹಿಂಬಾಲಿಸಿ ಈ ವಿಷಯ ಕಲಿಸುವದು ಲೇಸು. ಮೊದಲು ಬರೇ ನಿಯಮಗಳನ್ನಷ್ಟು ಪಾಠ ಮಾಡಿದರೆ ವ್ಯಾಕರಣಶಾಸ್ತ್ರಜ್ಞರೆನಿಸುತ್ತಿದ್ದರು. "ಋಕ್ ಕಃ ಕಷಾಂಸರಃ ಶಷಿಭಿಃ" ಎಂಬ ವಾಕ್ಯವು ಆಕಾಲದ ವ್ಯಾಕರಣ ಜ್ಞಾನಕ್ಕೆ ಸಾಕ್ಷಿಯಾಗಿದೆ. ಮುಂದೆ ಆ ಪದ್ಧತಿಯು ಸುಧಾರಣೆ ಹೊಂದಿ ನಿಯಮಗಳನ್ನು ಉದಾಹರಣೆಗಳ ಮೂಲಕ ಕಲಿಸಹತ್ತಿದರು. ಪ್ರಸ್ತುತಕ್ಕೆ ಉದಾಹರಣೆಗಳಿಂದ

ಲೇ ನಿಯಮಗಳನ್ನು ಕಟ್ಟಿಸಹತ್ತಿದ್ದಾರೆ. ಈಗಿನ ಹೊಸ ಸ್ಟ್ಯಾಂಡರ್ಡಿನಲ್ಲಿ ಸಹ ಕನ್ನಡ ಇಯತ್ತೆಗೆ ಸುಲಭ ವಾಕ್ಯಗಳೊಳಗೆ ಇರುವಂಥ ನಾಮ ಮತ್ತು ಕ್ರಿಯಾಪದಗಳ (ಆಖ್ಯೆ ಆಖ್ಯಾತಗಳು) ಸಂಬಂಧವನ್ನು ಹೇಳಿಕೊಡಬೇಕೆಂಬ ನಿಯಮವು ಸೇರಿಸಲ್ಪಟ್ಟಿದೆ.

ಈ ನಿಯಮಕ್ಕೆ ಸರಿಯಾಗಿ ಕಲಿಸುವಡಾದರೆ ಏಕೀಕರಣ ಪದ್ಧತಿಗಿಂತ ಪ್ರಥಕ್ಕರಣ ಪದ್ಧತಿಯೇ ಯೋಗ್ಯವಾದದ್ದೆಂದು ಹೇಳಬಹುದು. ಏಕೀಕರಣ ಪದ್ಧತಿಯನ್ನು ಪರಭಾಷೆ ಕಲಿಸುವಾಗ ಮಾತ್ರ ಉಪಯೋಗಿಸಬಹುದು. ಆದರೆ ಈ ನಮ್ಮ ಬಾಲಕರು ಸ್ವಭಾಷೆಯನ್ನು ಕೆಲಮಟ್ಟಿಗೆ ಅರಿತವರಿರುತ್ತಾರೆ. ಅಂದರೆ ಅವರಿಗೆ ಮಾತಾಡಲಿಕ್ಕೆ ಬರುತ್ತದೆ. ಅದರಿಂದ ಅವರು ಯಾವ ವಸ್ತುಗಳನ್ನು ಪರೀಕ್ಷಿಸುತ್ತಾರೋ ಅಥವಾ ಯಾವ ಸಂಗತಿಗಳ ಅನುಭವ ತೆಗೆದುಕೊಳ್ಳಲಪೇಕ್ಷಿಸುತ್ತಾರೋ ಅಂಥವುಗಳ ಸಹಾಯದಿಂದ ಈ ವಿಷಯವನ್ನು ಕಲಿಸಬೇಕು.

ಇನ್ನು ಯಾವದೊಂದು ಕಠಿಣ ವಿಷಯವನ್ನು ಚಿಕ್ಕ ಮಕ್ಕಳಿಗೆ ತಿಳಿಸಿ ಕೊಡಬೇಕಾದಲ್ಲಿ ವಿಷಯಕ್ಕೆ ಸುಲಭ ರೂಪ ಕೊಟ್ಟು, ಮನೋರಂಜನವಾಗುವಂತೆ ಮಂಡಿಸಬೇಕೆಂಬ ಸಂಗತಿಯು ಶಿಕ್ಷಕರ ಅನುಭವದ ಮಾತಾಗಿರುತ್ತದೆ ಅಂಥ ಸ್ಥಿತಿಯು ಈ ಪಾಠಕ್ಕೆ ಬಾರದೆಂಬ ಸಂಗತಿಯನ್ನು ಆರಂಭಕ್ಕೇ ಸಭಿಕರಿಗೆ ಅರಿಕೆ ಮಾಡಿಕೊಂಡಿರುತ್ತೇನೆ, ಇರಲಿ. ಬಾಲ್ಯದಲ್ಲಿ ವಿದ್ಯಾರ್ಥಿಗಳ ವಿಚಾರಶಕ್ತಿಯೂ ಗ್ರಹಣ ಶಕ್ತಿಯೂ ತೀರ ಬಲಹೀನವಾಗಿರುತ್ತವೆ ಅದರಿಂದ ಅವರ ಶಕ್ತಿಗನುಗುಣವಾಗಿಯೇ ಕಲಿಸತಕ್ಕ ವಿಷಯವನ್ನು ಸ್ಥೂಲವಾರ್ಗದಿಂದ ದಿಗ್ದರ್ಶನ ಮಾಡಿಕೊಡಬೇಕು. ಈ ಉದ್ದೇಶವನ್ನೇ ಅನುಲಕ್ಷಿಸಿ ಇಂಗ್ಲೀ ಭಾಷೆಯಲ್ಲಿ ಬೇರೆ ಬೇರೆ ಇಯತ್ತೆಗಳಿಗಾಗಿ ಬೇರೆ ಬೇರೆ ವ್ಯಾಕರಣ ಪುಸ್ತಕಗಳನ್ನು ಬರೆದಿರುತ್ತಾರೆ. ನಮ್ಮಲ್ಲಿ ಸಹ ಲಘುವ್ಯಾಕರಣ ಶಾಲಾವ್ಯಾಕರಣ– ಶಬ್ದಮಣಿದರ್ಪಣ ಮೊದಲಾದ ಗ್ರಂಥಗಳು ಪ್ರಚಾರದಲ್ಲಿರುತ್ತವೆ. ಈ ಮಾತನ್ನೇ ಆಧಾರವೊಡ್ಡಿಕೊಂಡು ವಿಷಯವನ್ನು ಆರಂಭಿಸುತ್ತೇನೆ.

೩ನೆಯ ಇಯತ್ತೆ.

ವಿಷಯ—ವ್ಯಾಕರಣ. ಮೊದಲನೆಯ ಪಾಠ

ವೇಳೆ— ೩೦ ಮಿನಿಟು.

(೧) ಉದ್ದೇಶ:—ಸರಿಯಾದ ಮಾತನ್ನು (ಭಾಷೆಯನ್ನು) ಕಲಿಸುವದು.

(೨)ಉಪಕರಣ:—ಪಾರಿವಾಳ, ಗಿಳಿ, ಚಂಡು, ಎಲ್ಲರಲ್ಲಿಯೂ ಎರಡನೆಯ ಪುಸ್ತಕ ನೋಟಬುಕ್ಕು ಸೀಸ್ ಪೆನಸೀಲು

(೩) ಉಪೋದ್ಘಾತ:—ವರ್ಗದೊಳಗಿದ್ದ ಮುಸಲ್ಮಾನ ಅಥವಾ ಅಚ್ಚ ಕನ್ನಡಿಗರಲ್ಲದ ಬೇರೆಜಾತಿಯ ಹುಡುಗನಿಂದ ಒಂಬೆರಡು ಮಾತುಗಳನ್ನು ಆಡಿಸಿ ಅವುಗಳನ್ನು ಉಳಿದ ಹುಡುಗರಿಂದ ತಿದ್ದಿಸುವದು ಗಿಳಿಯ ಮೂಗು ತೋರಿಸಿ ಹ್ಯಾಗಿರುತ್ತದೆಂಬದನ್ನು ಅವರಿಂದ ಹೊರಡಿಸಿ ಅದೇ ವಾಕ್ಯವನ್ನು ತಿನೆಯ ಪುಸ್ತಕದೊಳಗಿನ ವಾಕ್ಯಕ್ಕೆ ಸರಿ ಹಚ್ಚಿ ರೂಢಿಯ ಮಾತಿಗಿಂತ ಪುಸ್ತಕದೊಳಗಿನ ಮಾತುಗಳು ಯೋಗ್ಯವಾದ ವುಗಳಿರುತ್ತವೆಂಬದನ್ನೂ ಚಲೋ ಮಾತುಗಳನ್ನು ಆಡಲಿಕ್ಕೆ ಕಲಿಯುವದು ಅವಶ್ಯಕವೆಂಬದನ್ನೂ ಸ್ವಲ್ಪದರಲ್ಲಿ ತಿಳಿಸಿ ವಿಷಯಾರಂಭ ಮಾಡುವದು.

ಪ್ರಯೋಗ ಅಥವಾ ಉದಾಹರಣೆ	ಫಲಿತ	ಸಿದ್ಧಾಂತ ಅಥವಾ ವ್ಯಾಖ್ಯೆ
ರಾಮನು ಬರುತ್ತಾಳೆ. ಸೀತೆಯನು ಹೋದನು. ಎಂಬ ವಾಕ್ಯಗಳನ್ನು ಶಿಕ್ಷಕನು ಬಾಯಿಂದ ನುಡಿದು ಇಲ್ಲವೆ ಫಳಿಯ ಮೇಲೆ ಒರೆದು ವಿದ್ಯಾರ್ಥಿಗಳಿಂದ ತಿದ್ದಿಸಲಿ.	ಹೀಗೆ ಮಾತಾಡುವ ರೂಢಿಯಿಲ್ಲ ಮೊದಲನೆಯ ಸಾಲಿನ ಕಡೆಯ "ಳೆ" ಎಂಬ ಅಕ್ಷರದ ಬದಲು "ನೆ" ಎಂಬ ಅಕ್ಷರವನ್ನೂ ಎರನೆಡಯ ಸಾಲಿನಲ್ಲಿ ಳು ಎಂಬ ಅಕ್ಷರವನ್ನೂ ಸೇರಿಸಿದರೆ ಸರಿಯಾಗುತ್ತದೆ. *	ಶುದ್ಧವಾಗಿ ಮಾತಾಡಲಿಕ್ಕೆ ಅಥವಾ ಬರೆಯಲಿಕ್ಕೆ ಗೊತ್ತು ಮಾಡಿದ ನಿಯಮಗಳಿಗೆ ವ್ಯಾಕರಣವೆನ್ನುತ್ತಾರೆ.

ಸೂಚನೆ:— * ಮನಸಿಗೆ ಬಂದಂತೆ ಮಾತಾಡಿದರೆ ತಪ್ಪಾಗುತ್ತದೆ. ಕೆಲವೊಂದು ನಿಯಮವನ್ನು ಅನುಸರಿಸಿ ಮಾತಾಡಬೇಕೆಂಬದು ಈ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ. ಇಂಥ ನಿಯಮಗಳಿಗೆ ವ್ಯಾಕರಣವೆನ್ನುತ್ತಾರೆಂದು ಹೇಳಿ ವಾಖ್ಯೆ ಕಟ್ಟಿಸಬೇಕು.

(೧) ಒಬ್ಬ ಹುಡುಗನು ಜಿಗಿಯಲಿ (೨) ಮತ್ತೊಬ್ಬನ ಕೂಡ್ರಲಿ (೩) ಪಾರಿವಾಳವನ್ನು ಹಾರಿಸಲಿ	ರಾಮನು ಜಿಗಿಯುತ್ತಾನೆ. ರಂಗನು ಕೂತನು. ಪಾರಿವಾಳವು ಹಾರುತ್ತದೆ.	ಯಾವದೊಂದು ಮಾತಿಗೆ ವಾಕ್ಯವೆನ್ನುತ್ತಾರೆ.

(ಳ) ಚಂಡನ್ನು ಉರುಳಿಸಲಿ	ಚಂಡು ಉರುಳಾಡುತ್ತದೆ.	
(ಶ) I ಗಿಳಿಯನ್ನು ಮಾತಾಡಿಸಲಿ	ಗಿಳಿಯು ಮಾತಾಡಿತು.	

ಟೀಪು:—I ಈ ಪ್ರಕಾರದ ಕೃತಿಗಳನ್ನು ಪ್ರತ್ಯಕ್ಷ ಮಾಡಿಸುತ್ತಿರುವಾಗ ಶಿಕ್ಷಕನು ಅವನು ಏನು ಮಾಡಿದನೆಂದು ಕೇಳ ಬೇಕು; ಬೇರೊಬ್ಬನಿಗೆ ಇವನು ಏನು ನುಡಿದನು? ಎಂದು ಕೇಳಿ ಅದನ್ನೇ ಕರಿಹಲಿಗೆಯ ಮೇಲೆ ಬರಿಸ ಬೇಕು. ಬಳಿಕ ಬರೆದಂಥವು ಅಥವಾ ಬಾಯಿಂದ ಅಂದಂಥವು ಮಾತುಗಳು ಪ್ರತ್ಯಕ್ಷ ಮಾಡಿದಂಥವು ಕೆಲಸಗಳು ಎಂಬದನ್ನು ತಿಳಿಸಿ; ಇಂಥ ಮಾತುಗಳಿಗೆ ಇಂದು ನಾವು ಕಲಿಯುವ ವ್ಯಾಕರಣ ಶಾಸ್ತ್ರದಲ್ಲಿ ವಾಕ್ಯವೆನ್ನುತ್ತಾರೆಂದು ಹೇಳುವದು.

ಮೇಲೆ ಬರೆದ ಪ್ರತಿಯೊಂದು ಕೆಲಸವಾಗ ಬೇಕಾದರೆ ಏನೇನುಬೇಕು. ಎಂಬದನ್ನು ವಿದ್ಯಾರ್ಥಿಗಳು ವಿಚಾರ ಮಾಡಿ ಹೇಳಲಿ	ರಾಮನು ಜಿಗಿಯುತ್ತಾನೆ. ರಂಗನು ಕೂತನು ಪಾರಿವಾಳವು ಹಾರುತ್ತದೆ ಚಂಡು ಉರುಳಾಡುತ್ತದೆ ಗಿಳಿಯು ಮಾತಾಡಿತು	ವಾಕ್ಯದ ಭಾಗಕ್ಕೆ ಪದ ವೆನ್ನುತ್ತಾರೆ.

ಸೂ:— II ಮೊದಲಿನ ಕೆಲಸಕ್ಕೆ ರಾಮುನೊಬ್ಬನು ಇರಬೇಕು, ಹಾಗು ಜಿಗಿಯುವ ಕೆಲಸವನ್ನು ಮಾಡಬೇಕು ಅಂಡ ರೆ ಕೆಲಸವಾಗುತ್ತದೆ. ಅದರಂತೆ ಪ್ರತಿಯೊಂದಕ್ಕೂ ಕೆಲಸ ಮಾಡುವವನೊಬ್ಬ, ಕೆಲಸ ಒಂದು ಹೀಗೆ ಎರಡು ಇರಬೇಕೆಂದು ಗೊತ್ತಾಯಿತು. ಕೆಲಸ ಮಾಡುವದನ್ನು ತೋರಿಸುವಭಾಗ ಹಾಗು ಅದ ಕೆಲಸವನ್ನು ತೋರಿಸುವ ಭಾಗವನ್ನು ಎಂಗಡಿಸ ಹಚಿ ತೋರಿಸಿದಂತೆ ಗುರ್ತು ಮಾಡಿಸಬೇಕು. ಮತ್ತು ಇಂಥ ಭಾಗಕ್ಕೆ ಪದ ವೆನ್ನುತ್ತಾರೆಂದು ಹೇಳುವದು.

ಮೇಲೆ ಹೇಳಿದ ಕೆಲಸಗಳನ್ನು ಮಾಡಿದಪರ ಸ್ಪೆಲ್ಲ ವಿದ್ಯಾರ್ಥಿಗಳು ಒತ್ತಟ್ಟಿಗೆ ಇರಿಸಲಿ ಹಾಗು ಎಲ್ಲರಿಗೂ ಕೂಡಿ ಏನೆನ್ನಬೇಕು ಎಂಬವದನ್ನು ಆಲೋಚಿಸಲಿ	IV ರಾಮನು ರಂಗನು ಪಾರಿವಾಳವು ಚಂಡು ಗಿಳಿಯು	ಒಡವೆಯ ಹೆಸರನ್ನು ಹೇಳುವ ಪದಕ್ಕೆ ನಾಮಪದವೆನ್ನುತ್ತಾರೆ.

ಸೂ:— III ಈ ಪ್ರಕಾರ ಸಾಲಾಗಿ ಇಡಿಸಿ ಇವೆಲ್ಲವುಗಳಿಗೆ ಜೀನಸು ಅಥವಾ ಒಡವೆಯೆನ್ನುತ್ತಾರೆಂದು ಅವರಿಂದಲೇ ಹೊರಡಿಸಬೇಕು. ಬಳಿಕ ಫಳಿಯವೇಲೆ ಬರೆಡಂಥವು ವಸ್ತುಗಳಲ್ಲಃ ಅವುಗಳ ಹೆಸರುಗಳೆಂಬ ಭೇದಕ ಲಕ್ಷಣವನ್ನು ಅವರೇ ಅರಿತುಕೊಳ್ಳುವಂತೆ ಮಾಡಬೇಕು. ಹಾಗೂ ಒಡವೆಯನ್ನೂ ಅದರ ಹೆಸರನ್ನೂ ಒಮ್ಮೆಲೇ

ತೋರಿಸಲಕ್ಕೆ ಹೇಳಿ, ಒಡವೆ ಬೇರೆ ಅದರ ಹೆಸರು ಬೇರೆ ಎಂಬವನ್ನು ದೃಷ್ಟಗೊಳಿಸಿ ಆ ಹೆಸರುಗಳಿಗೆ ವ್ಯಾಕ್ಯ
ಣದಲ್ಲಿ ನಾಮಪದ (ಹೆಸರು) ವೆನ್ನುತ್ತಾರೆಂದು ಹೇಳಿ ವ್ಯಾಖ್ಯೈರಚಿಸುವೆದು.

ನಾಮಪದಗಳನ್ನೆಲ್ಲ ಬದಿಗೆ ತೋರಿಸಿದಂತೆ ಗೆರೆ ಕೊರೆದು ಬೇರೆ ಮಾಡಿ ಅವು ಯಾತರ ಹೆಸರುಗಳಿಂಬದನ್ನು ತಲೆಯಮೇಲೆ ಬರೆಯಲಿ ಅದರಂತೆ ಎಡಗಡೆಗೆ ಇರುವ ಪದಗಳು ಯಾತರ ಹೆಸರು ಎಂಬದನ್ನು ಹೇಳಲಿ V ಪಾಗು ಅದರಂತೆ ಬರೆಯಲಿ	ವಸ್ತುಗಳ ಹೆಸರು ರಾಮನು ರಂಗನು ಪಾರಿವಾಳವು ಚಂಡು ಗಿಳಿಯು	ಕೆಲಸಗಳ ಹೆಸರು ಜಿಗಿಯುತ್ತಾನೆ ಕೂತನು ಹಾರುತ್ತದೆ ಉರುಳಾಡುತ್ತದೆ ಮಾತಾಡಿತು	ಕೆಲಸದ ಹೆಸರನ್ನು ಹೇಳುವದಕ್ಕೆ ಕ್ರಿಯಾಪದವೆನ್ನುತ್ತಾರೆ.

ಟೀಪು – V ಎಡಗಡೆಯ ಪದಗಳಿಗೆ ಗುರ್ತೂ ಹೆಸರೂ ತಿಳಿಸಿಕೊಟ್ಟ ಮೇಲೆ ಬಲಗಡೆಯ ಪದಗಳು ಕೆಲಸಗಳ ಹೆಸರನ್ನು
ಹೇಳುವಂಥ ಪದಗಳು; ಅವಕ್ಕೆ ಅದೇ ಹೆಸರು. ಆದರೆ ಸಂಸ್ಕೃತದಲ್ಲಿ "ಕೆಲಸ" ಈ ಶಬ್ದಕ್ಕೆ "ಕ್ರಿಯಾ"
ಎಂದು ಬನ್ನುತ್ತಾರೆ. ಕಾರಣವಾ ಈ ಪದಗಳಿಗೆ ಕ್ರಿಯಾಪದವೆಂದು ಅನ್ನುವ ರೂಢಿಯುಂಟೆಂದು ಳುವದು.

ಉಪಯೋಗ— ಓದುವ ತಿನೆಯು ಪುಸ್ತಕದೊಳಗಿನ ಯಾವದೊಂದು ಓದಿಸಿ ಅದರೊಳಗಿನ ವಾಕ್ಯಗಳನ್ನೂ, ಪೇಳ್ನ್ನೂ, ನಾಮಪದ ಕ್ರಿಯಾಪದಗಳನ್ನೂ ಹೇಳಿ ಹಚ್ಚುವದು ಹಾಗು ಕಲಿತ ವ್ಯಾಖ್ಯೆಗಳಿಗೆ ಸರಿ ಹಚ್ಚಿಸುವದು (ಉ-ಂ ದು ವಸ್ತುವಿನ ಹೆಸರು ಹೇಳಿ. ಅದರಿಂದಾಗುವ ಯಾವದೊಂದು ಕೆಲಸದ ಹೆಸರನ್ನು ಜೋಡಿಸಿ ವಾಕ್ಯ ರಚಿಸಲಿಕ್ಕೆ ಹಚ್ಚುವದು (೩) ಹುಲಿ, ಕುರಿ, ದೀಪ, ಅಕಳು, ಶಾಮು, ಗಂಗೆ, ಕಾಣು, ಬರದು, ಉರಿ, ಓಡು, ಉಡು, ಮುಲಗು ಎಂಬ ಈ ಪ್ರಕಾರದ ಕೆಲವು ಶಬ್ದಗಳನ್ನು ಅವರ ಮುಂದೆ ಇಟ್ಟು ಇವುಗಳೊಳಗಿನ ಬೇ ಕಾದವೆರಡು ಶಬ್ದಗಳನ್ನು ಜೋಡಿಸಿ ವಾಕ್ಯರಚಿಸಲಿಕ್ಕೆ ಸಹಾಯಮಾಡಬೇಕು. (ಅದರೆ ಈ ಕೆಲಸವನ್ನು ಎ ರಡನೆಯ ದಿವಸ ಮಾಡಿಸಿದರೂ ಆದೀತು)

ಉದ್ದೇಶ— ತಿಳಿಸಿ ಕೊಟ್ಟ ಎಲ್ಲ ಸಂಗತಿಗಳನ್ನು ಒಟ್ಟುಗೂಡಿಸುವದಕ್ಕಾಗಿ ಉದಾಹರಣೆಗಳ ಮುಖಾಲಕ ಎಲ್ಲ ವ್ಯಾ ಖ್ಯೆಗಳನ್ನು ಹೊರಡಿಸಿ ಪಾಠವನ್ನು ಮುಗಿಸುವದು

ಫ. ಭೈ. ಬೆಳಗಾವಕರ.

ಪಾಠಯೋಗ— ಓದುವ ತಿನೆಯ ಪುಸ್ತಕದೊಳಗಿನ ಯಾವದೊಂದು ಓದಿಸಿ ಅದರೊಳಗಿನ ವಾಕ್ಯಗಳನ್ನೂ, ಪದಗಳನ್ನೂ, ನಾಮಪದ ಕ್ರಿಯಾಪದಗಳನ್ನೂ ಹೇಳಿ ಹಚ್ಚುವದು ಹಾಗು ಕಲಿತ ವ್ಯಾಖ್ಯೆಗಳಿಗೆ ಸರಿ ಹಚ್ಚಿಸುವದು (ಉದಾ: ದು ವಸ್ತುವಿನ ಹೆಸರು ಹೇಳಿ. ಅದರಿಂದಾಗುವ ಯಾವದೊಂದು ಕೆಲಸದ ಹೆಸರನ್ನು ಜೋಡಿಸಿ ವಾಕ್ಯ ರಚಿಸಲಿಕ್ಕೆ ಹಚ್ಚುವದು (ಉ) ಹುಲಿ, ಕುರಿ, ದೀಪ, ಅಕಳು, ರಾಮು, ಗಂಗೆ, ಕಾಣು, ಬರದು, ಉರಿ, ಓಡು, ಅಡು, ಮಲಗು ಎಂಬ ಈ ಪ್ರಕಾರದ ಕೆಲವು ಶಬ್ದಗಳನ್ನು ಅವರ ಮುಂದೆ ಇಟ್ಟು ಇವುಗಳೊಳಗಿನ ಬೇ ಕಾದವೆರಡು ಶಬ್ದಗಳನ್ನು ಜೋಡಿಸಿ ವಾಕ್ಯರಚಿಸಲಿಕ್ಕೆ ಸಹಾಯಮಾಡಬೇಕು. (ಆದರೆ ಈ ಕೆಲಸವನ್ನು ಎ ರಡನೆಯ ದಿವಸ ಮಾಡಿಸಿದರೂ ಆದೀತು)

ಉಪಸಂಹಾರ— ತಿಳಿಸಿ ಕೊಟ್ಟ ಎಲ್ಲ ಸಂಗತಿಗಳನ್ನು ಒಟ್ಟುಗೂಡಿಸುವದಕ್ಕಾಗಿ ಉದಾಹರಣೆಗಳ ಮೂಲಕ ಎಲ್ಲ ವ್ಯಾ ಖ್ಯೆಗಳನ್ನು ಹೊರಡಿಸಿ ಪಾಠವನ್ನು ಮುಗಿಸುವದು.

ಫ. ಭೈ. ಬೆಳಗಾವಕರ.